## ಕನ್ನಡ ಭಾಷಾ ಪಠ್ಯ

# ಗಣಕ ಸೌರಭ

ಬಿ.ಸಿ.ಎ.

ಪ್ರಥಮ ಮತ್ತು ದ್ವಿತಿಯ ಸೆಮಿಸ್ಟರ್


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಜೆ. ರಾಜ ಗುಂಡಾಪುರ

ಡಾ. ಸುರೇಶ ಕೆ.ಸಿ.

ಡಾ. ಪ್ರಕಾಶ್ ಜಿ.ಎ.



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - SOUNDARYA SOURABHA : A Prescribed Text Book for B.C.A Degree Course ( First and Second Semester);

Chief Editor: Prof. Prashanth G. Nayak (Professor of Kannada & Director, Kannada Bharathi, Kuvempu University, Shankaraghatta, B.R. Project. Shimoga Dist.)

Edited By: Dr. J Raju Gundapura, Dr. Suresh K.C.,

Dr. Prakash J.A.

Publishd by : Bengaluru City University, BENGALURU

Pp : 000 + ix

© Bengaluru City University,

First print : 2021

ಪ್ರಧಾನ ಸಂಪಾದಕರು

**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:

**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:

**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:

ಬೆಂಗಳೂರು ನಗರ ವಿಶ್ವವಿದ್ಯಾಲಯ

## ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣೆಸುತ್ತಲೆ ಕನ್ನಡಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–21ರ ವರ್ಷವನ್ನು ಕನ್ನಡ ಕಾಯಕವರ್ಷವೆಂದು ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ

ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದು ಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಪ್ರೊ. ಲಿಂಗರಾಜಗಾಂಧಿ
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

## ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯ ವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾ ತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ ಸಂಯೋಜನೆಯ ಕಾರ್ಯ ನಿರ್ವಹಿಸಿದ ಅತ್ಮೀಯರಾದ ಡಾ. ಲಿಂಗರಾಜಯ್ಯ ನವರ ಶ್ರಮವನ್ನು ಸ್ಮರಿಸಲೇ ಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಪ್ರಶಾಂತ ಜಿ. ನಾಯಕ

ಪ್ರಾಧ್ಯಾಪಕರು

# ಬೆಂಗಳೂರು ನಗರ ವಿಶ್ವವಿದ್ಯಾಲಯ
## ಪ್ರಥಮ ಸೆಮಿಸ್ಟರ್ ಬಿ.ಸಿ.ಎ.
# ಕನ್ನಡ ಭಾಷಾ ಪತ್ರ್ಯ


**ಘಟಕ I. ನಾಡು – ನುಡಿ ಚಿಂತನೆ :**

| | | | |
|---|---|---|---|
| 1.1 | ಕಬ್ಬಿಗರ ಕಾವ | –ಆಂಡಯ್ಯ | 003 |
| 1.2 | ಕರ್ನಾಟಕ ಸಂಸ್ಕೃತಿ | –ಡಾ. ಹಂಪ ನಾಗರಾಜಯ್ಯ | 005 |
| 1.3 | ಕನ್ನಡ ಅಭಿವೃದ್ಧಿ ನನ್ನ ದೃಷ್ಟಿಯಲ್ಲಿ | –ಗೊರೂರು ರಾಮಸ್ವಾಮಿ ಅಯ್ಯಂಗಾರ್ | 017 |
| 1.4 | ಓದುಪತ್ಯ: ಕನ್ನಡ ಈ ಶತಮಾನದ ಸವಾಲು | –ಡಾ. ಕೆ.ವಿ. ನಾರಾಯಣ | 025 |

**ಘಟಕ II. ಆಕಾಶ:**

| | | | |
|---|---|---|---|
| 2.1 | ಚಂದ್ರನನ್ನು ಕರೆಯಿರಿ ಭೂಮಿಗೆ | –ಡಾ. ಸವಿತಾ ನಾಗಭೂಷಣ | 033 |
| 2.2 | ಬೆಳುದಿಂಗಳು | –ವಿ. ಸೀತಾರಾಮಯ್ಯ | 035 |
| 2.3 | ನಭೋಮಂಡಲದ ದಾರಿದೀಪಗಳು | –ಮೂಲ: ಬಿಮಾನ್ ಬಸು. ಕನ್ನಡಕ್ಕೆ: ಕೊಳ್ಳೇಗಾಲ ಶರ್ಮ | 045 |
| 2.4 | ಓದು ಪತ್ಯ: ಉಲ್ಕೆಗಳು, ಧೂಮಕೇತುಗಳು | –ಡಾ. ಬಿ.ಎಸ್. ಶೈಲಜ | 050 |

**ಘಟಕ III. ತಾರುಣ್ಯ:**

| | | | |
|---|---|---|---|
| 3.1 | ಮುಪ್ಪುಯೌವನ | –ಮೂಲ: ಶೇಕ್ಸ್‌ಪಿಯರ್, ಕನ್ನಡಕ್ಕೆ: ಬಿ.ಎಂ.ಶ್ರೀ | 060 |
| 3.2 | ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ | –ಕುವೆಂಪು | 061 |
| 3.3 | ಬಾಳು | –ಡಾ. ಮೊಗಳ್ಳಿ ಗಣೇಶ್ | 073 |
| 3.4 | ಓದು ಪತ್ಯ: ಕೆಂಪು ಮುಡಿಯ ಹೆಣ್ಣು | –ಮೂಲ: ಒರ್ಹಾನ್ ಪಮುಕ್, ಕನ್ನಡಕ್ಕೆ: ಓ.ಎಲ್. ನಾಗಭೂಷಣ ಸ್ವಾಮಿ | 081 |

**ಘಟಕ IV. ಸಂಕೀರ್ಣ :**

| | | | |
|---|---|---|---|
| 4.1 | ದಾಂಪತ್ಯ | –ಡಾ. ಪ್ರತಿಭಾ ನಂದಕುಮಾರ್ | 100 |
| 4.2 | ಮೌಸ್ ಬಿಟ್ಟು ಮೊಲ ಹಿಡಿದಾತ | –ಡಿ.ಬಿ. ನಾಗರಾಜು | 101 |
| 4.3 | ಮುಗಿದ ಅಧ್ಯಾಯ | –ಮೂಲ: ಯೆರ್ನ್‌ರಫ್ ಅರ್ನ್, ಕನ್ನಡಕ್ಕೆ: ಅರುಣ್ | 106 |
| 4.4 | ಓದುಪತ್ಯ: ಪೈಪೋಟಿಗೆ ಸಜ್ಜಾಗುತ್ತಿರುವ ದೇಶ | –ಮೂಲ: ಅಬ್ದುಲ್ ಕಲಾಂ ಕನ್ನಡಕ್ಕೆ: ಜಿ.ಕೆ. ಮಧ್ಯಸ್ಥ | 126 |

# 1. ನಾಡು–ನುಡಿ ಚಿಂತನೆ


| | | | |
|---|---|---|---|
| 1.1 | ಕಬ್ಬಿಗರ ಕಾವ | –ಆಂಡಯ್ಯ | 003 |
| 1.2 | ಕರ್ನಾಟಕ ಸಂಸ್ಕೃತಿ | –ಡಾ. ಹಂಪ ನಾಗರಾಜಯ್ಯ | 005 |
| 1.3 | ಕನ್ನಡ ಅಭಿವೃದ್ಧಿ ನನ್ನ ದೃಷ್ಟಿಯಲ್ಲಿ | –ಗೊರೂರು ರಾಮಸ್ವಾಮಿ ಅಯ್ಯಂಗಾರ್ | 017 |
| 1.4 | ಓದುಪತ್ಯ: ಕನ್ನಡ ಈ ಶತಮಾನದ ಸವಾಲು | –ಡಾ. ಕೆ.ವಿ. ನಾರಾಯಣ | 025 |

# 1. ನಾಡು ನುಡಿ ಚಿಂತನೆ

## ಆಶಯ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾ ವಲಯ ವಿಲೀನ ವಿಶದ ವಿಷಯ ವಿಶೇಷಂ

ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣ ನಗರದಾಪುಲಿಗೆಱಿಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆಕನ್ನಡದ ತಿರುಳ್

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯಂ ಕಾವ್ಯಪ್ರಯೋಗ ಪರಿಣತ ಮತಿಗಳ್

*ಆಕರ: ಕವಿರಾಜಮಾರ್ಗ– ಶ್ರೀವಿಜಯ*

## 1.1 ಕಬ್ಬಿಗರ ಕಾವ

**–ಆಂಡಯ್ಯ**

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಳಲಾಱರಿನಿತುಂ ಸಲೆ ಮುನ್ನಿನ, ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದವನಾಟ್ಟಿದರೆ ಬಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳ್

ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೆಂದಚ್ಚಕನ್ನಡಂ ಬಿಗಿ
ವೊಂದಿರೆ ಕಬ್ಬಿಗರ ಕಾವನೊಲವಿಂದೊರೆವೆಂ

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ
ನೆಲವಂ ಮುತ್ತಿನ ಮಾನಿಸರ್ ಪೊಗಟಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಱೆಗಳಿಂ ಕಾಲೂರ್ಗಳಿಂ ಕಯ್ದಳಿಂ

ಇವು ಪಳ್ಳಿಗಳಿವು ಪಟ್ಟಣ
ಮಿವು ಕೆಱೆಗಳಿವೆಱಗಿ ನಿಂದಮುಗಿಲೋಳಿಗಳಿಂ
ತಿವು ಕಾಡಿವು ಪೆಸರ್ವಡೆದೊ
ಪ್ಪುವ ಬನಮೆಂದಱಿದು ಪೇಟ್ಬುವದರಿಂದಾ ನಾಡೊಳ್

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವಚೆಂದೆಂ
ಗಲ್ಲದೆ ಮಾವಲ್ಲದೆ ಕೌಂ
ಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್

ಅಡರ್ದೇಱೆ ಕೋಡಗಂಗಳ್
ಕಡುಪಿಂದೀಡಾಡೆ ಗುಟಿಲನೊಡೆದೆಳಗಾಯಿಂ
ದೆಡೆವಿಡದೊಸರ್ವೇಳನೀರ್ಗಳ್
ಮಡುಗೊಂಡೋವುತ್ತುಮಿರ್ಪುವಲ್ಲಿಯ ಬನಮಂ

ಉಱಿ ಕಾಯ್ವ ಬಿಸಿಲೊಳೆಮ್ಮಂ
ಮಱೆದುಂ ಕೊರಗಿಸದೆ ಪೊರೆದುದೆಂದೊಲವಿಂ ಬಂ
ದೆರಗುವವೋಲ್ ತೆನೆಯಿಂ ಕಾ
ಲ್ಗೆಱಗುವ ಕಱವೆಗಳವೆಲ್ಲಿಯುಂ ಸೊಗಯಿಸುಗುಂ

ನೆಯ್ದಿಲ್ಗೊಳಂಗಳೆಡೆಯೊಳ್
ಕಾಯ್ದೋವದೆ ಪೋರ್ವ ಪಲವು ನೀರ್ವಕ್ಕಿಗಳಿಂ
ದೆಯ್ದುಣ್ಮುವ ಸೀರ್ಪನಿಯೊಳ್
ತೊಯ್ದೊಯ್ಯನೆ ಗಾಳಿ ಕೂಡೆ ತೀಡುತ್ತಿರ್ಕುಂ

*–ಆಕರ: ಕನ್ನಡ ಬಾವುಟ: ಸಂ. ಬಿ.ಎಂ.ಶ್ರೀ*

## 1.2 ಕರ್ನಾಟಕದ ಸಂಸ್ಕೃತಿ

**–ಹಂಪ ನಾಗರಾಜಯ್ಯ**

### ಸಂಸ್ಕೃತಿಯ ಅರ್ಥ

"ಪರಿಸರ, ಪರಂಪರೆ ಹಾಗೂ ಪ್ರತ್ಯಕ್ಷ ಜೀವನದ ಅನೇಕ ಸಂಸ್ಕಾರಗಳ ಮೂಲಕ ಮನುಷ್ಯನ ಅಂತರಂಗ ಪಡೆಯುವ ಪರಿಪಕ್ವತೆ"ಯೆಂಬುದು ಸಂಸ್ಕೃತಿಯ ಸ್ಥೂಲವಾದ ವ್ಯಾಖ್ಯೆ. ಇದು ವ್ಯಕ್ತಿವಾಚಕವಾಗಿದ್ದಂತೆ ದೇಶವಾಚಕವೂ ಆಗಿದೆ. ಒಂದು ನಾಡಿನ ಜನರ ಒಟ್ಟು ಸಂಸ್ಕೃತಿ ಅದರ ವಿವಿಧ ರಂಗಗಳಲ್ಲಿ ವ್ಯಕ್ತವಾಗುತ್ತಲೇ ಇರುತ್ತದೆ. ಈ ದೃಷ್ಟಿಯಿಂದ ಭರತ ಖಂಡಕ್ಕೆಲ್ಲ ಇರುವುದು ಒಂದು ಮಹೋನ್ನತವಾದ ಸಂಕೀರ್ಣ ಸಂಸ್ಕೃತಿ. ಈ ವಿಶಾಲವಾದ ರಾಷ್ಟ್ರದಲ್ಲಿ ಭೌಗೋಳಿಕ ಸ್ಥಿತಿ, ಭಾಷೆ, ಧರ್ಮ ಮುಂತಾದ ಅನೇಕ ಪ್ರಾದೇಶಿಕ ಭೇದಗಳು ಈ ಸಂಸ್ಕೃತಿಯ ಅಭಿವ್ಯಕ್ತಿಗೆ ವೈವಿಧ್ಯವನ್ನು ಒದಗಿಸಿವೆ.

### ಭಾರತೀಯ ಸಂಸ್ಕೃತಿ

ಕರ್ನಾಟಕ ಸಂಸ್ಕೃತಿ ಭಾರತೀಯವೇ ಆಗಿದ್ದರೂ ತನ್ನ ಪ್ರಾದೇಶಿಕ ವೈಶಿಷ್ಟ್ಯಗಳ ಪರಿಣಾಮವಾಗಿ ವಿಶೇಷರೂಪದಿಂದ ವ್ಯಕ್ತವಾಗುತ್ತದೆ. ಕೊಡವರು, ಕರಾವಳಿಯವರು, ಹಳೆಯ ಮೈಸೂರಿನವರು, ಉತ್ತರ ಕರ್ನಾಟಕದವರು ಇವರೆಲ್ಲರ ವೇಷಭೂಷಣಗಳು, ಮತಾಚಾರಗಳು, ಹಬ್ಬಗಳು, ಆಟಪಾಟಗಳು, ಊಟತಿಂಡಿಗಳು, ಆಡುಮಾತಿನ ರೀತಿಗಳು ಒಂದಕ್ಕೊಂದು ಭಿನ್ನವಾಗಿ ಕಾಣುತ್ತವೆ ನಿಜ. ಆದರೆ ವಾಸ್ತವವಾಗಿ ಆಂತರಂಗಿಕವಾದ ಸಂಸ್ಕೃತಿ ಒಂದೇ ಆಗಿದೆ. ಉಳಿದ ನಡೆ ನುಡಿಗಳೆಲ್ಲ ಅದರ ವಿವಿಧ ಅಭಿವ್ಯಕ್ತಿಗಳಾಗಿವೆ. ಈ ಸಂಸ್ಕೃತಿಯ ಮೂಲ ಸ್ವರೂಪವನ್ನು ಗುರುತಿಸಬೇಕಾಗಿದ್ದರೆ ಈ ನಾಡಿನ ರಾಜಕೀಯ, ಧಾರ್ಮಿಕ ಸಾಮಾಜಿಕ ಚರಿತ್ರೆಗಳನ್ನೂ, ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ ಮೊದಲಾದ ಕಲೆಗಳನ್ನೂ ಜನತೆಯ ವಿವಿಧ ವಿನೋದ ಸಾಮಗ್ರಿಗಳನ್ನೂ ಜೀವನದ ಸಮಸ್ತ ರಂಗಗಳನ್ನೂ ಪರಿಶೀಲಿಸಿ, ವಿಶ್ಲೇಷಿಸಿ ಸಮೀಕರಿಸಿ ನೋಡಬೇಕಾಗುತ್ತದೆ. ಈ ಬಗೆಯ ಒಟ್ಟು ಅಭ್ಯಾಸಗಳ ಸಮನ್ವಯದಿಂದ ಕಂಡು ಬರುವ ಪ್ರಮುಖ ಅಂಶಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ.

ಆಂಡಯ್ಯ ಕವಿ, ಕಬ್ಬಿಗರ ಕಾವವೆಂಬ ಕಾವ್ಯದಲ್ಲಿ ಕನ್ನಡ ನಾಡನ್ನು ವರ್ಣಿಸಿರುವುದು ಹೀಗಿದೆ:

ಪಲವುಂ ನಾಲಗೆ ಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ
ನೆಲನಂ ಮುತ್ತಿನ ಮಾನಿಸರ್ ಪೊಗಳಲೇನಂ ಬಲ್ಲರೆಂಬೊಂದು

ಬಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು
ಮೆಲ್ಲೆಲರಿಂ ಪೂತ ಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂಕಯ್ಗಳಿಂ।

(ಆ ಭೂಮಿಯನ್ನು ಹಲವು ನಾಲಗೆಯ ಆದಿಶೇಷನೂ ಬಣ್ಣಿಸಲಾರ, ಅಂದ ಮೇಲೆ ಮನುಷ್ಯ ಮಾತ್ರದವರು ಏನೆಂದು ಹೇಳಬಲ್ಲರು? ಎಂಬ ಹೆಸರುವಾಸಿಯಾದ ಕನ್ನಡನಾಡು ತಂಗಾಳಿಯಿಂದಲೂ ಅರಳಿದ ಹೂಗಳಿಂದಲೂ ಸರೋವರಗಳಿಂದಲೂ ಕರೆಗಳಿಂದಲೂ ಚಿಕ್ಕಚಿಕ್ಕ ಹಳ್ಳಿಗಳಿಂದಲೂ ಹೊಲಗಳಿಂದಲೂ ಚೆಲುವಾಗಿತ್ತು.) ಇಂಥ ಚೆಲುವ ಕನ್ನಡನಾಡು ರೂಢಿಸಿಕೊಂಡು ಬಂದಿರುವ ಸಂಸ್ಕೃತಿಯೂ ಮಹೋನ್ನತವಾದುದು.

**ಸನಾತನ ತತ್ವ**

ಸನಾತನವಾದ ಮಹಾವೃಕ್ಷದಂತೆ ಆಳವಾಗಿ ಬೇರುಬಿಟ್ಟು ಸ್ಥಿರವಾಗಿ ನಿಂತಿರುವುದು ಈ ಸಂಸ್ಕೃತಿಯ ಮುಖ್ಯಲಕ್ಷಣ. ರಾಜ್ಯಸಾಮ್ರಾಜ್ಯಗಳು ಬಂದುಹೋದವು; ನಾಡಿನೊಳಗೆ ಸಾವಿರಾರು ಕಾಳಗಗಳಲ್ಲದೆ, ಹೊರಗಿನಿಂದ ಹಲವಾರು ದಾಳಿಗಳೂ ಒದಗಿದುವು. ಧಾರ್ಮಿಕ ಕ್ರಾಂತಿಗಳಾದವು. ಏನಾದರು ಜನತೆಯ ಮನೋಭಾವ ಹಾಗೂ ಜೀವನದೃಷ್ಟಿ ಬದಲಾಗಲಿಲ್ಲ. ಹಣ್ಣೆಲೆ ಕಳಚಿಕೊಂಡು ಹೊಸ ಚಿಗುರು ತಳೆಯುವಂತೆ ತನ್ನ ಅಂತಸ್ಸತ್ವದಿಂದ ಸಂಸ್ಕೃತಿ ಸದೃಢತೆ ಉಳಿದುಬಂದಿದೆ.

**ಸಮನ್ವಯ ಗುಣ**

ಆದರೆ ಎಲ್ಲದರಿಂದ ಅಲಿಪ್ತವಾಗಿ ಉಳಿಯುವ ಸ್ವಭಾವ ಇದಕ್ಕಿಲ್ಲ. ಹೊಸದು ಬಂದಾಗ ಅದರ ಅಂಶವನ್ನು ಅರಗಿಸಿಕೊಂಡು, ಅದನ್ನೂ ತನ್ನ ಮಡಿಲಲ್ಲಿ ಒಳಗೊಳ್ಳುವ ಔದಾರ್ಯ ಈ ಜನಕ್ಕೆ ಇದೆ. ಹೀಗೆ ಮತಗಳು, ಧರ್ಮಗಳು, ಆಚರಣೆಗಳು ಇಲ್ಲಿ ಬಂದ ಮೇಲೆ ಇಲ್ಲಿಯವೆ ಆಗಿ ಪರಸ್ಪರವಾಗಿ ಹೊಂದಿಕೊಂಡು ನೆಮ್ಮದಿಯಿಂದ ಬಾಳುತ್ತಿವೆ. ಹೀಗೆ ಸಮನ್ವಯ ಸಂಸ್ಕೃತಿಯ ಇನ್ನೊಂದು ಗುಣ.

ಧರ್ಮ ಸಹಿಷ್ಣುತೆ ಕನ್ನಡಿಗರ ಪರಂಪರೆ. ಇದನ್ನು ಬೇಲೂರಿನ ಶಾಸನ ಕೂಗಿ ಹೇಳುತ್ತಿದೆ:

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾನ್ತಿನೋ
ಬೌದ್ಧ ಬುದ್ಧ ಇತಿ ಪ್ರಮಾಣ ಪಟವಃ ಕರ್ಮೇತಿ ನೈಯೂಯಿಕಾಃ
ಅರ್ಹಶ್ಚೇತಿಹ ಜೈನ ಶಾಸನ ಮತಿಃ ಕರ್ಮೇತಿ ಮಿಮೂಂಸಕಾಃ

ಸೋ ಯಂ ಮೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ ।

(ಶೈವರು ಶಿವನೆಂದೂ, ವೇದಾಂತಿಗಳು ಬ್ರಹ್ಮನೆಂದೂ, ಬೌದ್ಧರು ಬುದ್ಧನೆಂದೂ, ಪ್ರಮಾಣಪಟುಗಳು ನೈಯೂಯಿಕರು ಕರ್ತನೆಂದೂ, ಜೈನರು ಅರ್ಹಂತನೆಂದು, ಮೀಮಾಂಸಕರು ಕರ್ಮವೆಂದೂ, ಯಾರನ್ನು ಉದ್ಯಾಪಿಸುವರೋ ಅವನೇ ಆದ ಈ ಶ್ರೀ ಕೇಶವನು ಈತನು ಸದಾ ನಮ್ಮ ಇಷ್ಟಾಫಲಗಳನ್ನು ಕೊಡಲಿ.)

**ಸರ್ವ ಧರ್ಮ ಸಮಾನತೆಯ ದೃಷ್ಟಿ**

ಅನೇಕ ಧರ್ಮಗಳ ವಿಷಯದಲ್ಲಿ ನಮ್ಮ ನಾವು ತೋರುತ್ತ ಬಂದ ಒಂದು ಉದಾತ್ತ ಮನೋಭಾವವನ್ನು ನಾವು ಎತ್ತಿ ಹೇಳಬೇಕಾಗುವುದು. ಒಂದು ಧರ್ಮದಲ್ಲಿಯೆ ದರ್ಶನ ಭೇದದಿಂದ ಉಂಟಾಗುವ ಶಂಕರ, ಮಾಧ್ವ ಹಾಗೂ ರಾಮಾನುಜೀಯದಂತಹ ಪಂಥಗಳೇ ಆಗಲಿ ಅಥವಾ ರೂಢವಾದ ಸನಾತನ ಧರ್ಮವನ್ನು ಪ್ರತಿಭಟಿಸಿ ಬಂದ ಜೈನ ಬೌದ್ಧ ಧರ್ಮಗಳೆ ಆಗಲಿ ಹೊರಗಿನಿಂದ ಪ್ರವೇಶ ಮಾಡಿದ ಇಸ್ಲಾಂ, ಕ್ರೈಸ್ತ ಮೊದಲಾದ ಇತರ ಮತಗಳೇ ಆಗಲಿ, ಇಲ್ಲಿ ಬಂದ ಮೇಲೆ ಬೆಂಬಲಿಗರನ್ನು ಗಳಿಸಿಕೊಂಡರೂ ಜಗಳಕ್ಕೆ ನಿಲ್ಲಲಿಲ್ಲವೆಂಬುದು ಗಮನಾರ್ಹವಾದ ವಿಷಯ. ದುರಂತಮಯವಾದ ಮತೀಯ ಕಲಹ ಭಾರತದಲ್ಲಿ ಇತರತ್ರ ಕಾಣಬಹುದು. ಕರ್ನಾಟಕದಲ್ಲಿ ಅದು ಅಪರೂಪ, ಅವರವರ ಧರ್ಮ ಅವರವರಿಗೆ ಸೇರಿದ್ದು. ಇತರರು ಅದನ್ನು ವಿರೋಧಿಸುವಂತಿಲ್ಲ. ಇಷ್ಟೇ ಅಲ್ಲ, ಪರಸ್ಪರ ಪೋಷಣೆ ಸಹಾಯಗಳನ್ನೂ ಒದಗಿಸುತ್ತಾ ಬಂದಿರುವುದುಂಟು. ನಮ್ಮ ರಾಜಕೀಯ ಚರಿತ್ರೆಯ ಉದ್ದಕ್ಕೂ ಸರ್ವ ಧರ್ಮಗಳನ್ನು ಸಮಾನದೃಷ್ಟಿಯಿಂದ ಪೋಷಿಸಿದ ಉದಾಹರಣೆಗಳು ಸಾಕಷ್ಟು ಸಿಗುತ್ತವೆ. ಈ ಔದಾರ್ಯ ಬಂದದ್ದು ಧರ್ಮದ ಸಾರವನ್ನು ಕಂಡುಕೊಳ್ಳುವ ಅಂತರಂಗದ ದರ್ಶನದಿಂದಲೇ.

ಒಮ್ಮೊಮ್ಮೆ ನಿರಸ ಹೆಡೆಯೂಡಿದೊಡನೆ ಮುಂದಾಳುಗಳು ಒಡೆದ ಮನಸ್ಸುಗಳನ್ನು ಕೂಡಿಸಿ ಧಾರ್ಮಿಕ ಸಮನ್ವಯವನ್ನು ಕಾಪಾಡುತ್ತಿದ್ದುದುಂಟು. 24–8–1368ರಲ್ಲಾದ ವಿಜಯನಗರ ಕಾಲದ ಒಂದು ಘಟನೆ ಸ್ಮರಣೀಯವಾಗಿದೆ. ವೈಷ್ಣವರು ಪ್ರಬಲಗೊಂಡು ಜೈನರಿಗೆ ಕಿರುಕುಳ ಕೊಡತೊಡಗಿದಾಗ ಜೈನ ಮುಖಂಡರು ದೊರೆ ಬುಕ್ಕರಾಯನಲ್ಲಿ ದೂರುಕೊಂಡೊಯ್ದರು. "ವೈಷ್ಣವದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲೆಂದು ರಾಯನು ವೈಷ್ಣವರ ಕೈಯಲ್ಲಿ ಜೈನರ ಕೈವಿಡಿದು ಕೊಟ್ಟು ಈ ಜೈನದರ್ಶನಕ್ಕೆ ಪೂರ್ವ ಮರ್ಯಾದೆಗಳು ಪಂಚ ಮಹಾವಾದ್ಯಗಳೂ ಕಲಶವೂ ಸಲ್ಲುವುದು. ಜೈನದರ್ಶನಕ್ಕೆ ಭಕ್ತರ ಹಾನಿ ವೃದ್ಧಿಯಾದರೂ ವೈಷ್ಣವಹಾನಿ ವೃದ್ಧಿಯಾಗಿ ಪಾಲಿಸುವುದು. ಈ

ಮರ್ಯಾದೆಯಲ್ಲು ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ವೈಷ್ಣವರು ಶಾಸನವನ್ನಿಟ್ಟು ಪಾಲಿಸುವರು. ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವ ರಕ್ಷಿಸಿಕೊಂಡು ಬಹುವು, ವೈಷ್ಣವರೂ ಜೈನರೂ ಒಂದು ಭೇದವಾಗಿ ಕಾಣಲಾಗದು". ಈ ಶಾಸನ ಇಂದಿಗೂ ಶ್ರವಣಬೆಳಗೊಳದ ಭಂಡಾರ ಬಸದಿಯಲ್ಲಿದೆ. (ಸಂಖ್ಯೆ 475.344)

**ಧರ್ಮದ ಆಚರಣೆ**

ಧರ್ಮವೆಂಬುದು ನಮ್ಮ ಜನತೆಯ ಜೀವನವನ್ನು ಸಮಗ್ರವಾಗಿ ತುಂಬಿ ಕೊಂಡಿರುವ ಸತ್ವ. ನಮ್ಮ ಸಾಹಿತ್ಯ, ನೃತ್ಯ, ಸಂಗೀತ, ಶಿಲ್ಪ, ಮೊದಲಾದ ಎಲ್ಲ ಕಲೆಗಳಿಗೂ ಧರ್ಮವೇ ಮೂಲ ಪ್ರೇರಣೆ ಹಾಗೂ ವಸ್ತು. ಧರ್ಮ ಕಲೆಗಳನ್ನು ಬೆಳೆಸಿತು; ಕಲೆಗಳು ಧರ್ಮವನ್ನು ಬೆಳೆಸಿದವು. ಧರ್ಮದ ಅಥ– ರ್ವವನ್ನು ಕೂಡ ಜನ ಬಹು ವಿಶಾಲವಾದ, ಸಾರವತ್ತಾದ ರೀತಿಯಲ್ಲಿ ಮನನ ಮಾಡಿಕೊಂಡಿದೆ. ಈ ವಿಶ್ವಕೆಲ್ಲಾ ಕಾರಣವಾದ ಇದನ್ನು ಕಾಪಾಡಿಕೊಂಡು ಹೋಗುವ ಪರಾತ್ಪರ ಶಕ್ತಿಯಿಂದಿದೆ. ಭಕ್ತಿಯಿಂದ, ಸದ್ವರ್ತನೆಯಿಂದ ಅದನ್ನು ಮೆಚ್ಚಿಸಿ ಸದ್ಗತಿ ಪಡೆಯಬಹುದು, ಅದೇ ದೇವರು. ದಾನ, ಪರೋಪಕಾರ, ಶುಚಿಯಾದ ಶೀಲ,ಸೌಹಾರ್ದ, ಸತ್ಯವಂತಿಕೆ ಮೊದಲಾದ ಸದಾಚಾರಗಳು ಧರ್ಮ ಶ್ರೇಣಿಯ ಮೆಟ್ಟಿಲುಗಳು. ಈ ಬಗ್ಗೆಯಾದ ಅಲಿಖಿತ ಧರ್ಮಸೂತ್ರಗಳನ್ನು ಜನ ಮೈಗೂಡಿಸಿಕೊಂಡು ಬಾಳುತ್ತಾ ಬಂದಿದೆ. ಇದರ ಫಲವಾಗಿ ಊರೂರಿಗೆ ಸಾರ್ವಜನಿಕವಾದ ಭಾವಿ, ಕೆರೆ, ಕಟ್ಟೆ, ಧರ್ಮಛತ್ರ, ಅರವಟ್ಟಿಗೆ, ದೇವಸ್ಥಾನ ಮೊದಲಾದವನ್ನು ರಾಜಮಹಾರಾಜರು ಮಾತ್ರವಲ್ಲ, ಸೆಟ್ಟಿಗಳು, ಅಧಿಕಾರಿಗಳು, ಕಸಬುದಾರರು, ಸಾಮಾನ್ಯರು, ವೇಶ್ಯೆಯರು ಕೂಡ ಕಟ್ಟಿಸುತ್ತ ಬಂದಿದ್ದಾರೆ. ತಾವೆ ಕಟ್ಟಿಸಿದುದಲ್ಲದೆ, ಬೇರೆಯವರು ಕಟ್ಟಿಸಿದ ಇಂತಹ ಕಟ್ಟೆ ಕಟ್ಟಡಗಳಿಗೆ ತಮ್ಮ ಪಾಲಿನ ಕರ್ತವ್ಯವೆಂದು, ದಾನವೆಂದು, ಸೇರಿಸುತ್ತಾ ಬಂದುದುಂಟು. ಕನ್ನಡ ನಾಡಿನ ಶಾಸನಗಳಲ್ಲಿ ಮುಕ್ಕಾಲು ಪಾಲು ಈ ದಾನಗಳ ವಿವರಣೆ ಹಾಗೂ ಪ್ರಶಸ್ತಿಗೆ ಮೀಸಲಾಗಿದೆ. ಕೇವಲ ಭೂಮಿ ಕಾಣಿಕೆಗಳಿಗೆ ಈ ದಾನ ಸೀಮಿತವಾಗಿಲ್ಲ. ಆಹಾರದಾನ, ವಸ್ತ್ರದಾನ, ಭೈಷಜ್ಯ (ಔಷಧಿ) ದಾನ, ಶಾಸ್ತ್ರದಾನ ಮುಂತಾದ ಅನೇಕ ದಾನಗಳು ಎಂದಿನಿಂದಲೂ ಪ್ರಚಾರದಲ್ಲಿವೆ. ಬಡಬಗ್ಗರಿಗೆ ಉಪಕಾರ ಮಾಡುವ ಔದಾರ್ಯ ಇದಕ್ಕೆ ಮೂಲ ಪ್ರೇರಣೆ, ದಾನದಿಂದ ಪುಣ್ಯಲಾಭವೆಂಬ ಧಾರ್ಮಿಕ ನಂಬುಗೆ ಇನ್ನೊಂದು ಕಾರಣವಾಗಿರಬಹುದು. ಆದರೆ ಇವೆರಡಕ್ಕಿಂತ ಮುಖ್ಯವಾಗಿ ವಿರಕ್ತರನ್ನು ಸಾಕುವ ಸಾಮಾಜಿಕ ಹೊಣೆಗಾರಿಕೆಯನ್ನು ಜನ ಹೊತ್ತುಕೊಂಡಿರುವರೆಂಬುದನ್ನು ನಾವು

ಗಮನಿಸಬೇಕು. ಲೋಕದ ರೀತಿ ನೀತಿಗಳ ಲೋಪದೋಷಗಳನ್ನು ಟೀಕಿಸಿ ಧರ್ಮದ ತಿರುಳನ್ನು ಮನೆ ಮನೆಗೆ ತಂದು ಮುಟ್ಟಿಸುವ ನಿಸ್ಪೃಹವಾದ ತಮ್ಮ ಜೀವನದಿಂದ ಜನತೆಗೆ ಒಂದು ಆದರ್ಶವನ್ನು ಒದಗಿಸುವ ಜೋಗಿ, ಜಂಗಮ, ದಾಸಯ್ಯ ಮೊದಲಾದವರನ್ನು ಸಲಹುತ್ತ ಬಂದಿರುವುದು ಈ ದಾನ ಪರಂಪರೆ. 'ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು. ತೃಷೆಯಾದರೆ ಕೆರೆಬಾವಿ ಹಳ್ಳಗಳುಂಟು. ಶಯನಕ್ಕೆ ಹಾಳು ದೇಗುಲಗಳುಂಟು' ಎಂಬ ಅಕ್ಕನ ವಚನ ಈ ಮಾತಿಗೆ ಒಂದು ಉದಾಹರಣೆ. ಹೀಗೆ ಅವರಿಗೆ ಅನ್ನ ವಸತಿಗಳ ಸಮಸ್ಯೆಯನ್ನು ಜನ ತಪ್ಪಿಸಿದ್ದರಿಂದ ಈ ಮಹಾತ್ಮರುಗಳು ಅಧ್ಯಾತ್ಮಕ್ಕೆ, ಲೋಕೋದ್ಧಾರಕ್ಕೆ ತಮ್ಮ ಸರ್ವಸ್ವವನ್ನು ಮುಡಿಪಿಡುವುದು ಸಾಧ್ಯವಾಯಿತು. ಭಿಕ್ಷುಕ ವೃತ್ತಿ ಹೆಚ್ಚಬೇಕೆಂದು ನಮ್ಮಜನ ಎಂದೂ ಬಯಸಲಿಲ್ಲ. ಭಿಕ್ಷುಕರು ಹೆಚ್ಚಾಗಿದ್ದರೆ ಅದಕ್ಕೆ ಕಾರಣಗಳು ಬೇರೆ.

**ವೀರ ಜೀವನ**

ಇಡೀ ಭಾರತದ ಇತಿಹಾಸದಲ್ಲಿರುವಂತೆ ಕರ್ನಾಟಕ ರಾಜಕೀಯ ಚರಿತ್ರೆಯಲ್ಲಿಯೂ ಕಂಡುಬರುವ ಮುಖ್ಯವಾದ ಅಂಶವೆಂದರೆ ಅಪರಿಮಿತವಾದ ಯುದ್ಧಗಳು, ರಾಜ್ಯರಕ್ಷಣೆ ಮತ್ತು ಸಾಹಸಮ ನೋವೃತ್ತಿ– ಈ ಎರಡೂ ಕಾರಣಗಳಿಂದ ಮೇಲಿಂದ ಮೇಲೆ ರಾಜರಾಜರಲ್ಲಿ ನಡೆಯುತ್ತಿದ್ದುವು. ಯುದ್ಧ ಕೌಶಲ ಹಾಗು ಶೌರ್ಯಗಳಲ್ಲಿ ಕರ್ನಾಟಕ ವೀರರು ಅಖಿಲ ಭಾರತ ವ್ಯಾಪ್ತಿಯ ಮನ್ನಣೆಯನ್ನು ಪಡೆದುದುಂಟು. ಇಮ್ಮಡಿ ಪುಲಕೇಶಿ, ರಾಷ್ಟ್ರಕೂಟ, ಧ್ರುವಧಾರವರ್ಷ, ಮೂರನೆಯ ಗೋವಿಂದ, ಚಾಲುಕ್ಯ ವಂಶದ ಆರನೆಯ ವಿಕ್ರಮ ಮತ್ತು ವಿಜಯನಗರದ ಕೃಷ್ಣದೇವರಾಯ ಇಂತಹ ಹಲವು ಹೆಸರು ಚಾರಿತ್ರಿಕವಾಗಿವೆ. ಗಂಗಾ ನದಿಯಲ್ಲಿ ತಮ್ಮ ಕುದುರೆಗಳನ್ನು ಮೀಯಿಸಿ, ನೇಪಾಳದ ತಪ್ಪಲಲ್ಲಿ ಮೇಯಿಸಿದೆವೆಂದು ನಮ್ಮ ಭೂಪತಿಗಳು ಹೇಳಿಕೊಂಡುದು ಅತಿಶಯೋಕ್ತಿಯಲ್ಲ. ನೇಪಾಳ, ಬಂಗಾಳ, ಜೋಧಪುರ, ಒರಿಸ್ಸ ಮತ್ತು ಗುಜರಾತ್‌ಗಳಲ್ಲಿ ಕನ್ನಡ ರಾಜವಂಶಗಳು ತಮ್ಮ ಶಾಖೆಗಳನ್ನು ಹರಡಿದುದ್ದಕ್ಕೆ ಚಾರಿತ್ರಿಕ ಆಧಾರಗಳಿವೆ.

**ಔದಾರ್ಯ**

ಈ ಪರಾಕ್ರಮ ಅಸುರೀವೃತ್ತಿಯವಾಗಿರಲಿಲ್ಲ. ಕನ್ನಡಿಗರು ದಿಗ್ವಿಜಯಗಳು ಧರ್ಮ ವಿಜಯಿಗಳಾಗಿದ್ದರು. ಧರ್ಮಯುದ್ಧ ಮತ್ತು ಕ್ಷಮೆ ಅವರ ಗುಣಗಳಾಗಿದ್ದವು. ಗೆದ್ದ ರಾಜ್ಯಗಳನ್ನು ಆಯಾ ರಾಜರಿಗೆ ಪುನಃ ಒಪ್ಪಿಸಿ ತಮ್ಮ ಅಧಿಕಾರವನ್ನು ಮಾತ್ರ ಅವರ ಮೇಲೆ ಹೊರಿಸುವುದು ಅವರ ದೃಷ್ಟಿಯಾಗಿತ್ತು.

ತಮ್ಮರಾಜ್ಯದ ಸರಹದ್ದುಗಳನ್ನು ವಿಸ್ತರಿಸಿ ಇತರರ ಭೂಮಿಯನ್ನು ಕಿತ್ತುಕೊಳ್ಳುವ ಬುದ್ಧಿ ಎಂದೂ ಬರಲಿಲ್ಲ. ಈ ಔದಾರ್ಯ ಅತಿಯಾಗಿ ಕರ್ನಾಟಕ ತನ್ನದಾದ ಭೂಮಿಯನ್ನು ಕೂಡ ನೆರೆಹೊರೆಯ ರಾಜ್ಯಗಳಿಗೆ ಬಿಟ್ಟು ಕೊಟ್ಟಿದೆಯೆಂಬ ಆರೋಪ ಕೂಡ ಇದೆ. ವಾದಗ್ರಸ್ತ ಈ ವಿಷಯ ಇಲ್ಲಿ ಅಪ್ರಸ್ತುತ.

ರಾಜರಿಗೆ ಅಥವಾ ಕೆಲವರು ಸೇನಾ ನಾಯಕರಿಗೆ ಮಾತ್ರ ಈ ಪರಾಕ್ರಮ ಮೀಸಲಾಗಿದ್ದಿಲ್ಲ. ಶೌರ್ಯವನ್ನು ಜೀವನದ ಒಂದು ಪ್ರಮುಖ ಮೌಲ್ಯವಾಗಿ ಎಣಿಸುವ ಜನತೆ ಅವರ ಬೆಂಬಲಕ್ಕಿತ್ತು. ವೀರಜೀವನ ಅಖಿಲ ಕರ್ನಾಟಕದ ಎಲ್ಲರನ್ನೂ ಒಳಗೊಂಡದ್ದು. ರಾಜರ ಯುದ್ಧಗಳಲ್ಲಿ ದಂಡಾಳುಗಳಾಗಿ ಹೋಗಿ ಹಗೆಗಳನ್ನು ಹೊಡೆಯುವವರು ಮಾತ್ರ ವೀರರಲ್ಲ. ಕಾಳಗವೆನ್ನುವುದು ನಮ್ಮ ಜನತೆಗೆ ಉಸಿರಾಟದಷ್ಟು ಸಹಜವಾಗಿತ್ತು. ಊರೂರಲ್ಲಿ ಸಾವಿರಾರು ಸಂಖ್ಯೆಯಲ್ಲಿ ದೊರೆಯುವ ವೀರಗಲ್ಲುಗಳು ಆ ವೀರಜೀವನದ ಸ್ಮಾರಕಗಳಾಗಿ ಇಂದಿಗೂ ನಿಂತಿವೆ. ತುರುಗೋಳು (ಗೋಗ್ರಹಣ), ಊರಳಿವು, ಪೆಣ್ಬುಯ್ಯಲ್ ಮುಂತಾದ ಪ್ರಸಂಗಗಳಲ್ಲಿ ಹೊಡೆದಾಡಿ ಸತ್ತು ಸ್ವರ್ಗವನ್ನು ಸೂರೆಗೊಳ್ಳುವುದು ಯುವಕರಿಗೊಂದು ಅಭಿಮಾನದ ವಿಷಯವಾಗಿತ್ತು. ದರೋಡೆಕೋರರು ಒಂದು ಊರ ದನಗಳನ್ನೆಲ್ಲ ಅಪಹರಿಸುವುದು ತುರುಗೋಳು; ಸ್ತ್ರೀಯರನ್ನು ಅವಮಾನಗೊಳಿಸುವುದು ಅಥವಾ ಅಪಹರಿಸುವುದು ಪೆಣ್ಬುಯ್ಯಲ್; ಊರನ್ನು ಲೂಟಿ ಮಾಡುವುದು ಊರಳಿವು. ಈ ಎಲ್ಲ ಪ್ರಸಂಗಗಳಲ್ಲಿ ಊರಿನ ಹಿರಿಯರು ಶೂರನಾದವನಿಗೆ ವೀಳ್ಯ ಕೊಟ್ಟು ಊರಿನ ಮಾನರಕ್ಷಣೆಗೆ ಕಳಿಸುತ್ತಿದ್ದರು. ಆತ ಏಕಾಕಿಯಾಗಿ ಶತ್ರುಗಳನ್ನು ಎದುರಿಸಿ ಹೋರಾಡುತ್ತಿದ್ದರು. ಆ ಕಾಳಗದಲ್ಲಿ ಆತ ಸತ್ತರೆ ಅವನ ಸ್ಥಾನದಲ್ಲಿ ಇನ್ನೊಬ್ಬ ಬಂದು ನಿಲ್ಲುತ್ತಿದ್ದ. ಹೀಗೆ ಎಕ್ಕಟಿಗಲಿಯಾಗಿ ಶತ್ರು ಸಮೂಹವನ್ನು ಎದುರಿಸುವ ಎದೆಗಾರಿಕೆ ಹಾಗೂ ಅವರನ್ನು ಹೊಡೆದೋಡಿಸುವ ಸಾಮರ್ಥ್ಯ ಅವನಿಗೆ ಎಲ್ಲಿಂದ ಬರುತ್ತಿತ್ತು? ತತ್ವನಿಷ್ಠೆಗಾಗಿ, ಊರ ಅಭಿಮಾನ ರಕ್ಷಣೆಗಾಗಿ ತನ್ನ ಪ್ರಾಣವನ್ನು ಪಣವಾಗಿಟ್ಟವನಿಗೆ ಸಾವಿನ ಅಥವಾ ಸೋಲಿನ ಭಯವಿರುವುದಿಲ್ಲ. ಗೆದ್ದು ಬಂದರೆ ಕೀರ್ತಿ, ಸತ್ತರೆ ಸ್ವರ್ಗ; (ಸೋತು ಬದುಕುವ ಮಾತೇ ಇಲ್ಲ) ಎಂದಿದ್ದರೂ ಬಿಟ್ಟು ಹೋಗುವ ದೇಹ ಇದು. ಸತ್ಕಾರ್ಯಕ್ಕಾಗಿ ಸಂದರೆ ಶ್ರೇಯ. ಆದುದರಿಂದ ಮರಣಕ್ಕಾಗಲಿ ರಣ-ಕ್ಕಾಗಲಿ ಭಯಪಡುವುದೇಕೆ? ವೀರಗಲ್ಲುಗಳಲ್ಲಿ ಪುನಃ ಪುನಃ ಉಕ್ತವಾದ ಈ ಬಗೆಯ ಆದರ್ಶ ವಾಕ್ಯಗಳು ಆ ವೀರರ ಮನೋಧರ್ಮವನ್ನು ಉಗ್ಗಡಿಸುತ್ತವೆ. ದೇಶಕ್ಕಾಗಿ, ರಾಜನಿಗಾಗಿ, ಊರಿನ ಗೌರವಕ್ಕಾಗಿ ತೋರುವ ಈ ಪ್ರಾಣತ್ಯಾಗ ಯುದ್ಧವಲ್ಲದೆ ಪ್ರಸಂಗಗಳಲ್ಲಿಯೂ ವ್ಯಕ್ತವಾದ ಉಲ್ಲೇಖಗಳಿವೆ.

### ಬಲಿದಾನ

ಅರಸನಿಗೆ ಗಂಡು ಮಗುವಾದರೆ "ಸಿಡತಲೆ"ಕೊಟ್ಟು ಒಬ್ಬ ಪ್ರಾಣ ಬಿಟ್ಟಿದ್ದುಂಟು. ತನ್ನ ಒಡೆಯನೊಡನೆ ತಾನೂ ಸಾಯುವೆನೆಂದು ಪ್ರಮಾಣ ಮಾಡಿ (ವೇಳಿವಾಳಿ) ಆತ್ಮಹತ್ಯೆ ಮಾಡಿಕೊಂಡವರೂ ಉಂಟು. ಇಂತಹವರಿಗೆ ವೇಳವಡಿಚರೆಂದು ಹೆಸರು. ಒಡೆಯನ ಹಣದ ಕೆಳಗೆ ತನ್ನನ್ನು ಹುಗಿಸಿಕೊಂಡು "ಕೋಳ್ಗಂಟೆ"ಯಾದವರ ಉಲ್ಲೇಖಗಳಿವೆ. ಗರುಡರೆಂದು ಸ್ವಾಮಿಭಕ್ತಿಯ ಪ್ರಮಾಣ ತೆಗೆದುಕೊಂಡವರು ಒಡೆಯನ ಮರಣವಾದೊಡನೆ ಬೆಂಕಿಗೆ ಬಿದ್ದು ಪ್ರಾಣತ್ಯಾಗ ಮಾಡುತ್ತಿದ್ದರು. ಇಂತಹ ಅನೇಕ ಆತ್ಮಬಲಿಗಳ ಉಲ್ಲೇಖ ಶಾಸನಗಳಲ್ಲಿ ದೊರೆಯುತ್ತವೆ. ಸ್ವಾಮಿ ಭಕ್ತಿಯ ಎದುರಲ್ಲಿ ಇವರಿಗೆ ತಮ್ಮ ಪ್ರಾಣ ತುಚ್ಛವಾದದ್ದು. ಸಹಗಮನ ಮಾಡುವ ಸ್ತ್ರೀಯರು ನಮ್ಮಲ್ಲಿ 'ಮಾಸ್ತಿ' (ಮಹಾಸತಿ)ಯರೆಂದು ಪ್ರಸಿದ್ಧರಾಗಿ ತಮ್ಮ ಸ್ಮಾರಕಗಳನ್ನು ನಿಲ್ಲಿಸಿ ಹೋಗಿದ್ದಾರೆ. ಸ್ವಾಮಿಭಕ್ತಿ ಮತ್ತು ಅದಕ್ಕೆ ತಮ್ಮ ಜೀವನವನ್ನು ಸಮರ್ಪಿಸುವ ಪರಂಪರೆ ನಮ್ಮ ಜನತೆಯಲ್ಲಿ ಇಂದಿಗೂ ಜೀವಂತವಾಗಿದೆ. ರಾಜಮಹಾರಾಜರು ಈಗ ಇಲ್ಲ. ಆದರೆ ಪ್ರಮುಖವಾದ ರಾಜಕೀಯ ಪಕ್ಷಗಳು ಉಳಿದಿರುವುದು ಇಂತಹ ನಿಷ್ಠೆಯ ಜನರಿಂದಲೇ ಎಂಬುದನ್ನು ನಾವು ಅರಿಯಬೇಕು. ನಾಯಕ ವ್ಯಕ್ತಿದೇವರಂತೆ ಕಂಡು ಆ ವ್ಯಕ್ತಿಗಾಗಿ ತಮ್ಮ ಸರ್ವಸ್ವವನ್ನು ಬಲಿ ಕೊಡುವುದಕ್ಕೆ ಇವರು ಸದಾ ಸಿದ್ಧರಾಗಿರುತ್ತಾರೆ.

ವೀರಜೀವನವೆಂದರೆ ಆಯುಧವನ್ನು ಹಿಡಿದು ಹೋರಾಡುವುದೆಂದಷ್ಟೆ ಅಲ್ಲ, ಒಂದು ತತ್ವಕ್ಕಾಗಿ, ಒಬ್ಬ ನಾಯಕನಿಗಾಗಿ, ಒಂದು ದೇಶಕ್ಕಾಗಿ ನಿಷ್ಠೆಯಿಂದ ಹೆಣಗುವುದೂ ವೀರಜೀವನವೆ. ಇಂತಹ ಜನ ಬೆಂಬಲಕ್ಕೆ ಇರುವಾಗ ನಾಯಕರು ಮಹತ್ಕಾರ್ಯಗಳನ್ನು ಸಾಧಿಸಬಲ್ಲರು. ನಾಡಿನ ಬಿಡುಗಡೆಯ (ಅಹಿಂಸಾತ್ಮಕ) ಹೋರಾಟದಲ್ಲಿ ಕರ್ನಾಟಕದ ಪಾಲು ಸಂಸ್ಮರಣೀಯವಾಗಿದೆ. ಅಖಿಲ ಭಾರತ ಮಟ್ಟದ ಮುಂದಾಳುಗಳನ್ನು ಕರ್ನಾಟಕ ಭಾರತಕ್ಕೆ ಒದಗಿಸುತ್ತಾ ಬಂದಿದೆ. ತಾನು ಒಪ್ಪಿಕೊಂಡ ಪಕ್ಷಕ್ಕೆ ಅಚಲವಾದ ನಿಷ್ಠೆಯನ್ನು ಸಲ್ಲಿಸುತ್ತಲು ಇದೆ. ಇದು ಈ ನೆಲದ ಗುಣ, ಈ ಜನದ ಸಾಂಸ್ಕೃತಿಕ ಪರಂಪರೆ.

ಒಂಭತ್ತನೆಯ ಶತಮಾನದ ಕವಿರಾಜಮಾರ್ಗದಲ್ಲಿ ಹೇಳಿರುವ ಕನ್ನಡಿಗರ ಸ್ವಭಾವವನ್ನು ಕುರಿತ ಪದ್ಯಗಳು ಇಂದಿಗೂ ಗಮನಾರ್ಹವೆನಿಸುತ್ತವೆ. ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿ ನದಿಯವರೆಗೆ ಹಬ್ಬಿರುವ ಪ್ರದೇಶದೊಳಗಿನ ಕನ್ನಡ ಜನಪದರು

ಪದನರಿದು ನುಡಿಯಲುಂ ನುಡಿ

ದುದನರಿದಾರಯಲು ಮೂರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋ
ದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ॥
ಕುರಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
ಕಿರುವಕ್ಕಳುಮಾ ಮೂಗರು
ಮರಿಪಲ್ಕರಿವರ್ ವಿವೇಕಮಂ ಮಾತುಗಳಂ ॥
ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚಲ್ವರ್ಕಳಭಿಜನರ್ಕಳ್ ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಂಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥

(ಹದವರಿತು ಮಾತಾಡುತ್ತಾರೆ. ನುಡಿದುದನ್ನು ಅರಿತು ವಿಚಾರ ಕೂಡ ಮಾಡಬಲ್ಲರು. ಕನ್ನಡ ನಾಡಿನ ಜನ ಚತುರರು, ಕಾವ್ಯಗಳ ಪ್ರಯೋಗಗಳನ್ನು ಸಾಮಾನ್ಯರೂ ಉದಾಹರಿಸುವರು. ಎಲ್ಲರೂ ತಮ್ಮ ಮಾತುಗಳಲ್ಲಿ ಜಾಣರು. ಚಿಕ್ಕ ಮಕ್ಕಳೂ ಮೂಗರೂ ಕೂಡ ವಿವೇಕದ ಮಾತುಗಳಲ್ಲಿ ಹೇಳಬಲ್ಲರು. ಇಷ್ಟು ವಿವೇಕಿಗಳಾದ ಆ ಕನ್ನಡ ನಾಡಿನ ಜನತೆ ಸಾಮಾನ್ಯರಲ್ಲ. ಸುಭಟರು ಕವಿಗಳು, ಸುಪ್ರಭುಗಳು, ಚೆಲುವರು, ಕೀರ್ತಿವಂತರು, ಗುಣಶಾಲಿಗಳು, ಸ್ವಾಭಿಮಾನಿಗಳು, ಅತ್ಯುಗ್ರರು ಅಷ್ಟೆ ಗಂಭೀರ ಸ್ವಭಾವದವರು),

**ಜೀವನದ ಮೌಲ್ಯಗಳು**

ಶಾಸನಗಳಲ್ಲಿಯೂ ಸಾಹಿತ್ಯದಲ್ಲಿಯೂ ಪುನಃ ಪುನಃ ಎತ್ತಿ ಹಿಡಿದ ಜೀವನ ಮೌಲ್ಯಗಳು ನಾಲ್ಕು : ಸತ್ಯ, ಶೌರ್ಯ, ವೀರ ಮತ್ತು ದಾನ. ಕರ್ಣನನ್ನು ಕುರಿತು ಪಂಪ ಹೇಳಿ ಈ ಮಾತುಗಳನ್ನು ಗಮನಿಸಬೇಕು: ನೆನೆಯದಿರಣ್ಣ ಭಾರತದೊಳಿಂ ಪೆರಾರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ದೊರೆ ಕರ್ಣನೇರು ಕರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕರ್ಣನ ಪಡೆ ಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ" ಭಾರತವೀರರಲ್ಲಿ ಅವನು ಮೆಚ್ಚಿ ಹೇಳುವ ಗುಣಗಳು ಚಲ, ನನ್ನಿ, ಗಂಡು, ಸಾಹಸ, ಧರ್ಮ, ಎಲ್ಲಕ್ಕೂ ಹೆಚ್ಚಾಗಿ ಅತ್ಯುನ್ನತಿ. ಇವುಗಳ ಹಿಂದೆ ಇರುವುದು ಮಹೋನ್ನತ ಜೀವನದ ಆದರ್ಶ. ಚೆನ್ನಾಗಿ ಬದುಕಬೇಕುಜೀವನದ ಸುಖವನ್ನು ಸಂಪೂರ್ಣವಾಗಿ ಪಡೆಯಬೇಕು. ಆದರೆ ಪರಲೋಕದ

ಸಾಧನೆಯನ್ನೂ ಮರೆಯಬಾರದು. ಇದು ನಮ್ಮ ಜನತೆಯ ಬಾಳಿನ ಹದ. ಸಂಸಾರದ ಅಸಾರತೆಯನ್ನು ಬೋಧಿಸಿ, ವಿರಕ್ತರು ನಮ್ಮ ಜನತೆಯನ್ನು ಐಹಿಕ ಪ್ರಗತಿಗೆ ವಿಮುಖರಾಗುವಂತೆ ಮಾಡಿದ್ದಾರೆಂಬ ವಾದಕ್ಕೆ ಪ್ರತ್ಯಕ್ಷ ಆಧಾರ ದೊರೆಯುವುದಿಲ್ಲ. ಕರ್ಮ ತತ್ವಕ್ಕೆ ಅಂಟಿಕೊಂಡು ನಮ್ಮ ಜನ ಇನ್ನೂ ಪೌರುಷವನ್ನು ಕಡೆಗಣಿಸಿದರೆಂಬ ವಾದವೂ ಅಷ್ಟೇ ದುರ್ಬಲವಾಗಿದೆ. ನಮ್ಮ ಜನ ಈ ಲೋಕದಲ್ಲಿ ಆಸಕ್ತಿಯಿಲ್ಲದವರಾಗಿದ್ದಾರೆ. ದೇವಾಲಯಗಳಲ್ಲಿಯೂ ಕುಸುರಿಗೆಲಸ, ನಯನ ಮನೋಹರವಾದ ಮೂರ್ತಿ, ಶಿಲ್ಪ ಆಕರ್ಷಕವಾಗಿ ಕೊರೆದಿಟ್ಟ ಸಂಸಾರದ ಚಿತ್ರಗಳು, ವಸ್ತ್ರಗಳಲ್ಲಿ ಕಸೂತಿ, ಪಾತ್ರೆ ಪಡಗಗಳಲ್ಲಿ ಅಲಂಕಾರ, ಆಭರಣಗಳ ವೈವಿಧ್ಯ, ಜಾನಪದ ಮಟ್ಟುಗಳಿಂದ ಹಿಡಿದು ಶಾಸ್ತ್ರೀಯ ಕಲಾ ಪರಿಣತಿಯವರೆಗಿನ ಸಂಗೀತ ನೃತ್ಯಗಳು, ಆಟಪಾಟಗಳು, ಕಲೆ, ಒಗಟು, ಗಾದೆ–ಇವೆಲ್ಲ ನಮ್ಮ ಜೀವನದ ರಸಿಕತೆಗೆ ಸೌಂದರ್ಯೋಪಾಸನೆಗೆ ನಿರಂತರ ಸಾಕ್ಷಿಗಳಾಗಿ ನಿಂತಿವೆ.

**ಜೀವನ ದೃಷ್ಟಿ**

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಿಂಪಿನಿಂ ಪುಗಳ್ಗೆ ಆಗರವಾದ ಮಾನಸರ್" ಎಂದು ಜೀವನ ರಸಿಕತೆಯ ಆದರ್ಶವನ್ನು ಸಾವಿರ ವರ್ಷಗಳ ಹಿಂದೆ ನಮ್ಮ ಆದಿಕವಿ ಪಂಪ ಹೇಳಿದ್ದಾನೆ. ತ್ಯಾಗ ಭೋಗಗಳ ಸಮತೋಲನ ಕನ್ನಡ ಸಂಸ್ಕೃತಿಯ ಮುಖ್ಯ ಲಕ್ಷಣವಾಗಿದೆ. ತಾನು ಸುಖ ಪಡಬೇಕು; ಹಾಗಾಗಬೇಕಾದರೆ ತನ್ನ ಸುತ್ತಲಿನವರೆಲ್ಲ ಸುಖವಾಗಿರಬೇಕು, ಅದಕ್ಕೆ ತ್ಯಾಗ ಬೇಕೆಂಬುದು. ಗೇಯ ಗೋಷ್ಠಿಗಳು ಸಾಧ್ಯವಾಗುವುದು ಕೂಡ ಹೀಗೆ ಎಲ್ಲರಿಗೂ ನೆಮ್ಮದಿ ದೊರೆತಾಗಲೇ.

**ಸಂಸ್ಕೃತಿ ಪ್ರಸಾರ**

ಅಕ್ಕರದ ಸುಖ ಎಷ್ಟು ಜನಕ್ಕೆ ಸಾಧ್ಯವೆಂದು ಆಕ್ಷೇಪವೇಳಬಹುದು. ತಾನೇ ಓದಿ ತಿಳಿಯುವನೆಂಬುದು ಈಗಿನವರ ಮಾತು. ಹಿಂದಿನಿಂದ ನಡೆದುಬಂದ ಪರಂಪರೆಯೆಂದರೆ ಒಬ್ಬನು ಓದಿ, ಹಲವರು ಕೇಳುವುದು. ನಮ್ಮ ಕವಿಗಳಲ್ಲಿ ಒಬ್ಬನಾದರೂ ಕಾವ್ಯವನ್ನು 'ಬರೆದೆ' ಎಂದು ಹೇಳಿಕೊಂಡಿಲ್ಲ. 'ಓದಿ' ಎಂದೂ ಹೇಳಿಲ್ಲ. ಬಲ್ಲವರು 'ಹೇಳಿಸಿ'ದರು. ನಾನು 'ಹೇಳಿದೆನು' ಎಂದೇ ಪ್ರತಿಯೊಬ್ಬ ಕವಿ ನುಡಿಯುತ್ತಾನೆ. ತನ್ನ ಕಾವ್ಯ 'ಸಕಲ ಜನ ಸುಶ್ರಾವ್ಯ'ವಾಗಲೆಂದು ಹಾರೈಸುತ್ತಾನೆ. ಓದಿ ಹೇಳಿದವನಿಗೆ ಕೇಳಿದವರಿಗೆ ಫಲಶ್ರುತಿಯನ್ನು ಹೇಳಲಾಗುತ್ತದೆ. ಇದು 'ಅಕ್ಕರ'ದ ಅಲಂಪು. ಕಾವ್ಯವಾಗಲೀ ಪುರಾಣವಾಗಲೀ ತತ್ವಬೋಧೆಯಾಗಲಿ ನಮ್ಮ ಜನಕ್ಕೆ ಒದಗುತ್ತಿದ್ದ ರೀತಿ ಇದು. ಹೀಗಾಗಿ ಓದದವರು ಕೂಡ ಈ

ಎಲ್ಲದರ ಸಾರಾಂಶವನ್ನು ಗ್ರಹಿಸಿ ಅರಗಿಸಿಕೊಳ್ಳುವುದು ಸಾಧ್ಯವಾಯಿತು. ಜೈಮಿನಿ ಭಾರತ, ರಾಜಶೇಖರ ವಿಳಾಸ, ಗದುಗಿನ ಭಾರತ ಹಾಗೂ ಪ್ರಭುಲಿಂಗಲೀಲೆಯ ಪದ್ಯಗಳನ್ನು ಶುದ್ಧವಾಗಿ ಹೇಳಿ ಅರ್ಥ ವಿವರಣೆ ಮಾಡಬಲ್ಲ ನಿರಕ್ಷರ ಪಂಡಿತರು ಹಳ್ಳಿಗಳಲ್ಲಿ ಇಂದಿಗೂ ಕೆಲವೆಡೆ ಸಿಕ್ಕುತ್ತಾರೆ. ನಿಜಲಿಂಗ ಶತಕ, ಸೋಮೇಶ್ವರ ಶತಕ, ರತ್ನಾಕರವರ್ಣಿಯ ಶತಕಗಳು, ಸರ್ವಜ್ಞ ಪದಗಳು, ದಾಸರ, ಶರಣರ ಉಕ್ತಿಗಳು ಇವೆಲ್ಲವನ್ನು ಸಮಯೋಚಿತವಾಗಿ ಲೀಲಾಜಾಲವಾಗಿ ಉದಾಹರಿಸಬಲ್ಲವರು ಎಲ್ಲಾ ಕಡೆಗೆ ಇನ್ನೂ ಉಂಟು. ಮಹೋನ್ನತ ಸತ್ವಗಳಿಂದ ಹರಿದುಬಂದ ತಿಳಿವು ಈ ರೀತಿಯಾಗಿ ಸಮಾಜದ ಕೆಳಗಿನ ಸ್ತರಗಳವರೆಗೆ ಸೋಸಿ ಬರುತ್ತದೆ. ನಮ್ಮ ಸಂಸ್ಕೃತಿ ಪ್ರಸಾರವಾದದ್ದು ಹೀಗೆ. ಪರಂಪರೆಯಾಗಿ ಉಳಿದು ಬಂದದ್ದೂ ಹೀಗೆ. ಇಂದಿಗೂ ಗಮಕಿಗಳು, ಕೀರ್ತನಕಾರರು ಕರ್ನಾಟಕ ಸಂಸ್ಕೃತಿಯ ಸಾರವನ್ನು ಜನತೆಯ ಬಳಿಗೆ ಕೊಂಡೊಯ್ಯುವ ಹರಿಕಾರರಾಗಿದ್ದಾರೆ.

ಇದಲ್ಲದೆ ಆಗಾಗ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಸಾಮಾನ್ಯವಾಗಿ ನಡೆಯುವ ಪೂಜೆ, ಭಜನೆ, ಪುರಾಣ ಪ್ರವಚನ, ಹಾಡು, ಕುಣಿತ, ಕೋಲಾಟ, ಮೇಲಾಟ, ಮುಂತಾದ ಕಾರ್ಯಕ್ರಮಗಳಿಂದ ಮನೋರಂಜನೆಯೊಂದಿಗೆ ಧರ್ಮಜಾಗೃತಿ ಹಲವು ಜನರಲ್ಲಿ ಪರಸ್ಪರ ಸಂಪರ್ಕ, ಲಲಿತಕಲೆ ಹಾಗೂ ಜೀವನೋಪಯುಕ್ತ ಕಲೆಗಳಿಗೆ ಪ್ರೋತ್ಸಾಹಗಳೂ ದೊರೆಯುತ್ತಿದ್ದವು. ಸಂಸ್ಕೃತಿ ಪ್ರಸಾರದ ಇನ್ನೊಂದು ಮಾಧ್ಯಮ ಇದು. ಊರೊಟ್ಟಿನ ಕಾರ್ಯಕ್ರಮಗಳಲ್ಲಿ ಜನತೆ ವಹಿಸುವ ಆಸಕ್ತಿ ಹಾಗೂ ಗ್ರಾಮ ಜೀವನದಲ್ಲಿ ಊರಿನ 'ದೈವದವ'ರು ವಹಿಸುವ ಪಾತ್ರ–ಇವೆರಡೂ ನಮ್ಮ ಸಾಮಾಜಿಕ ಮುಖ್ಯ ಅಂಶಗಳಾಗಿವೆ. ರಾಷ್ಟ್ರೀಯತೆಯೆಂಬುದು ನಮ್ಮ ಜನಕ್ಕೆ ಹೊಸತು. ಅದು ಬೇರು ಬಿಡುವುದಕ್ಕೆ ಇನ್ನೂ ಅವಕಾಶ ಬೇಕು.

**ಸಾಕಾರ ಸಂಸ್ಕೃತಿ**

ಮನುಷ್ಯತ್ವದ ಮಹೋನ್ನತಿಯೇನು, ಸುಸಂಸ್ಕೃತರ ಲಕ್ಷಣಗಳೇನು, ಜೀವನದ ಪರಮಾದರ್ಶ ಯಾವುದು ಎಂಬ ವಿಷಯವಾಗಿ ಹಲವಾರು ಸೂತ್ರಗಳು, ವಚನಗಳು, ಪದಗಳು, ಗಾದೆಗಳು ಉಂಟು. ಇವೆಲ್ಲವುಗಳಿಗಿಂತ ಮಿಗಿಲಾಗಿ, ಈ ಸಂಸ್ಕೃತಿಯನ್ನು ಅಳವಡಿಸಿಕೊಂಡ ವ್ಯಕ್ತಿಗಳ ಚಿತ್ರಣ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಕಥಾ ಪ್ರಧಾನವಾದ ಸಾಹಿತ್ಯ ಈ ರೀತಿಯಾಗಿ ಉದಾತ್ತ ವ್ಯಕ್ತಿಗಳನ್ನು ಚಿತ್ರಿಸುವ ಮೂಲಕ ಜನಮನದ ಎದುರಿಗೆ ಸಂಸ್ಕೃತಿಯನ್ನು ಸಾಕಾರವಾಗಿ ನಿಲ್ಲಿಸುತ್ತದೆ. ಇಂತಹ ಅನೇಕ ಆದರ್ಶಚಿತ್ರಗಳಲ್ಲಿ

ರತ್ನಾಕರವರ್ಣಿಯ ಭರತೇಶನ ಚಿತ್ರ ತುಂಬ ಸಮಗ್ರವೂ, ಮನೋಹರವೂ ಆಗಿದೆ. ಭರತೇಶ ವೈಭವವೊಂದು ಸುಸಂಸ್ಕೃತ ಸಂಸಾರದ ವಿಶಾಲ ಚಿತ್ರವಾಗಿದೆ. ಸಂಸ್ಕೃತಿ ಸಂಪನ್ನನ ಲಕ್ಷಣವೇನೆಂಬುದನ್ನು ಈ ಕೆಳಗಿನ ಪದ್ಯಗಳಲ್ಲಿ ಆ ಕವಿ ಸಂಗ್ರಹವಾಗಿ ಸೂಚಿಸುತ್ತಾನೆ:

ಲೌಕಿಕ ಜಯವಂತೆರುಂಟು ಪಲಂಬರಾ ಲೌಕಿಕ
ಪರಮಾರ್ಥವೆರಡಾ ।
ಭೂಕಾಂತರಲ್ಲಿ ಪಡೆವುದು ದುರ್ಲಭ ಸುವಿವೇಕ
ಜೀವದತ್ ಚಕ್ರೇಶ॥
ಭೋಗ ವಿಚಾರವು ಬೇಕು ನೃಪಗಾತ್ಮ ಯೋಗ
ವಿಚಾರವೂ ಬೇಕು ।
ರಾಗ ರಸಿಕನಾಗಬೇಕು ಭಾವಿಸೆ ಮೀತರಾಗ
ರಸಿಕನಾಗಬೇಕು ॥
ಶೃಂಗಾರ ಕೋವಿದನಾಗಬೇಕಾತ್ಮ ಸುಸಂಘ
ಸುಮುಖನಾಗಬೇಕು ।
ಸಂಗರ ಸಂಮುಖನಾಗಬೇಕಾತ್ಮ ಯೋಗಾಂಗ
ಕೋವಿದನಾಗಬೇಕು ॥
ಇಹಲೋಕ ಸುಖವ ಭೋಗಿಸಬೇಕು ನೃಪತಿ
ಯುತ್ಸಹವಾ ಬೇಕು ಧರ್ಮದೊಳು।
ಬಹುಕಾಂಕ್ಷೆಯೊಳು ಸಿಕ್ಕದಂತಿರಬೇಕು
ನಿಸ್ಪೃಹನಾಗಬೇಕೆದೆಯೊಳಗೆ ॥
ಕೊಡಬೇಕು ಕೊಡುವಲ್ಲಿ ಪಾತ್ರವರಿಯಬೇಕು
ಮೌನವೂ ಬೇಕು ।
ಬಡವರಂತಿರಬೇಕು ಪ್ರಭುವಂತಿರಬೇಕು ನಡೆಯಿಂತು
ಜಾತಿ ಕ್ಷತ್ರಿಯರ ।
ಪ್ರಜೆ ಪರಿವಾರಕ್ಕೆ ಹಿತನಂತೆ ವೈರಿ ಭೂಭುಜರಿಗೆ
ಭುಜಗೇಂದ್ರನಂತೆ ।
ನಿಜಗುರುವಿಗೆ ಭೃತ್ಯನಂತೆ ಧಾರ್ಮಿಕರಿಗೆ ನಿಜ
ಬಂಧುವಾಗಿರಬೇಕು ॥
ಪರವೆಂಗಳಿಗೆ ಹೇಡಿ ಕದನಕ್ಕೆ ಕಡುಗಲಿ
ಪರಮತಕ್ಕೊಡಂಬಡೆ ಮೂರ್ಖ ।

ಅರುಹಕಾಗಮದೊಳ ತೀಶನಾತ್ಮ ಕಲೆಯೊಳಂ
ತರಸನಾಗಿರಬೇಕು ನೃಪತಿ।
ಹವಣಿಸಿಕೊಳ್ಳಬೇಕಿಂದ್ರಿಯ ವರ್ಗವನವಿಚಳವಾಗಿರ
ಬೇಕು ॥
ಭುವನಕಿಂದಿನರಾಯ ಸ್ವರ್ಗಕೆ ನಾಳಿನ ದಿವಿಜೇಂದ್ರ
ನೆನೆಸಿರಬೇಕು ॥

ಇಲ್ಲಿ 'ಜಾತಿಕ್ಷತ್ರಿಯ' 'ನೃಪತಿ' ಮೊದಲಾದ ಶಬ್ದಗಳು ಕಾವ್ಯದಲ್ಲಿಯ ಪ್ರಸಂಗಕ್ಕೆ ಉಚಿತವಾಗಿ ಬಂದಿದೆ. ಆದರೆ ಈ ಆದರ್ಶ ಅರಸನಿಗೆ ಹೇಳಿದ್ದಾದರೂ, ಎಲ್ಲ–ರಿಗೂ ಅನ್ವಯಿಸುವಂತಹುದು. ಕನ್ನಡದ ಜನ ಮೆಚ್ಚಿಕೊಂಡುದು ಈ ಸಂಸ್ಕೃತಿ.

*–ಆಕರ: ಪುನರಾವಲೋಕನ*

## 1.3 ಕನ್ನಡದ ಅಭಿವೃದ್ಧಿ ನನ್ನದೃಷ್ಟಿಯಲ್ಲಿ

**–ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಮಾನವನ ಬಾಳಿನಲ್ಲಿ ಭಾಷೆಗೆ ಪ್ರಮುಖಸ್ಥಾನ. ಇಂದು ಭಾಷೆ ಇಲ್ಲದ ಪ್ರಪಂಚವನ್ನು ಊಹಿಸಿಕೊಳ್ಳುವುದೂ ಕಷ್ಟ. ಜಗತ್ತಿನ ಸೃಷ್ಟಿಯಲ್ಲಿ ಮಾನವನಿಗಿಂತ ಮುಂಚೆ ಪರ್ವತ, ಗ್ರಹಗಳು, ಸೂರ್ಯ, ಚಂದ್ರ, ಸಮುದ್ರ, ಕಾಡು, ಭೂಸಮುದ್ರಗಳ ಬೃಹತ್ ಪ್ರಾಣಿಗಳು ಡೈನಾಸರಸ್ ಮುಂತಾದುವೆಲ್ಲ ಸೃಷ್ಟಿಯಾಗಿದ್ದಿರಬೇಕು. ಎಷ್ಟು ಲಕ್ಷ ವರ್ಷಗಳೋ ಬಲ್ಲವರಾರು! ಮಾನವನು ಇತ್ತೀಚಿನ ಸೃಷ್ಟಿ. ಮಾನವನು ಸೃಷ್ಟಿಯಾಗಿಯೇ ಅನೇಕ ದಶಲಕ್ಷ ವರುಷಗಳಾದುವೆಂದು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಪ್ರಕೃತಿ ಮನುಷ್ಯನ ದೇಹ ರಚನೆ ಬುದ್ಧಿಯ ಬೆಳವಣಿಗೆ ಮುಂತಾದುವುಗಳಿಗೆ ಅನೇಕ ಲಕ್ಷ ವರುಷಗಳನ್ನು ತೆಗೆದುಕೊಂಡಿರಬೇಕು. ಒಂದು ಲೆಕ್ಕಾಚಾರದಂತೆ ಭೂಮಿಯ ಮೇಲೆ ಪ್ರಾಣಿಗಳು ಸೃಷ್ಟಿಯಾಗಿ ಮುವ್ವತ್ತೆರಡು ದಶಲಕ್ಷ ವರ್ಷಗಳು ಎಂದು ವಿಜ್ಞಾನಿಗಳು ಹೇಳುತ್ತಾರೆ. ಅಂತು ದೇವರು ಅಥವಾ ಪ್ರಕೃತಿ – ಮಾನವನ ಸೃಷ್ಟಿಯಿಂದ ಒಂದು ಅಪೂರ್ವ ವಸ್ತುವನ್ನು ಅಥವಾ ಚಮತ್ಕಾರವನ್ನು ಸಾಧಿಸಿದನೆಂದು ಹೇಳಬಹುದು. ಒಂದು ಕಾಲದಲ್ಲಿ ಮನುಷ್ಯನೂ ಸಹ ಪ್ರಾಣಿಗಳಂತೆ ಭೂಮಿಗೆ ಸಮವಾಗಿ ಅಡ್ಡವಾಗಿ ಇದ್ದಿರಬೇಕು. ಅವರ ಸ್ವಭಾವಗಳೂ ಕಾರ್ಯಗಳೂ ಪ್ರಾಣಿಗಳದರಂತೆಯೇ ಇದ್ದಿರಬೇಕು. ನಾಲ್ಕು ಕಾಲುಗಳನ್ನು ಬಿಟ್ಟು ಮನುಷ್ಯ ಎರಡು ಕೈಗಳನ್ನು ಮೇಲಕ್ಕೆ ಹೊಂದಿದುದು ಅವನ ಮತ್ತು ಕ್ರಾಂತಿಕಾರಿ ಪರಿವರ್ತನೆಗೆ ನಾಂದಿಯಾಯಿತು. ಪ್ರಾಣಿಗಳಿಂದ ಮನುಷ್ಯನನ್ನು ಬೇರೆಯಾಗಿ–ಉನ್ನತನನ್ನಾಗಿ – ಮಾಡಿರುವ ಬುದ್ಧಿ, ಮೆದುಳು, ಹೃದಯವಂತಿಕೆ ಬೆಳೆಯಲು ಶತಸಂಖ್ಯೆಯ ಶತಮಾನಗಳೇ ಕಳೆದಿರಬೇಕು.

ಮಾನವನಿಗೆ ಭಾಷೆ ಯಾವಾಗ ದತ್ತವಾಯಿತು ಎಂಬುದು ಸದಾ ಕುತೂಹಲಕಾರಿಯಾದ ಪ್ರಶ್ನೆ. ಕೈಬುದ್ಧಿ ಇವು ಮನುಷ್ಯನನ್ನು ಪ್ರಾಣಿಗಳಿಂದ ಬೇರೆಯಾಗಿ ಮಾಡಿರುವಂತೆ ಭಾಷೆಯೂ ಮಾಡಿದೆ. ಭಾಷೆ ಮನುಷ್ಯನಿಗೆ ಅದ್ಭುತವಾದ ವರ ಮತ್ತು ಸಾಧನ. ಭಾಷೆ ಇಲ್ಲದಿದ್ದರೆ ಏನನ್ನೂ ಮಾಡಲು ಸಾಧ್ಯವಿಲ್ಲ. ಭಾಷೆಯ ಜೊತೆಯಲ್ಲಿಯೇ ಬುದ್ಧಿಯೂ ಬೆಳೆಯುತ್ತದೆ. ಭಾಷೆ ತಿಳಿಯುವುದಕ್ಕೆ ಮೊದಲು ಮನುಷ್ಯ ಸಮಾಜ ಜೀವಿಯಾದಾಗ ಬರಿ

ಸನ್ನೆಗಳಿಂದಲೇ ವ್ಯವಹಾರವನ್ನು ನಡೆಸಿರಬೇಕು. ಕೈಯಿನ ಉಪಯೋಗ ಮನುಷ್ಯನಿಗೆ ಬಂದುದು ಹೇಗೆ ವರವೋ ಹಾಗೇ ಭಾಷೆಯೂ ವರವೆ. ಭಾಷೆಯನ್ನು ಹೊಂದಿದುದು ಮಾನವನ ಒಂದು ಅದ್ಭುತ ಸಾಧನೆ. ಅವನು ಅದರಿಂದ ಬಹುಮಟ್ಟಿಗೆ ಪ್ರಾಣಿಗಳಿಂದ ವಿಶೇಷನಾಗಿದ್ದಾನೆ. ಭಾಷೆಯಿಲ್ಲದ ಪ್ರಪಂಚವನ್ನು ಇಂದು ಊಹಿಸುವುದೂ ಕಷ್ಟ. ಜಗತ್ತನ್ನೆಲ್ಲ ಒಂದುಗೂಡಿಸಲು ಕೆಲವು ವೇಳೆ ಹೋರಾಟಕ್ಕೆ ಹಚ್ಚಲು ಭಾಷೆ ಕಾರಣವಾಗಬಹುದು. ಆದರೆ ಭಾಷೆ ಸೇತುವೆಯಂತೆ ಮಾನವತೆಯನ್ನು ಒಂದುಗೂಡಿಸಲು ಸಹಾಯಕವಾಗಬಲ್ಲದು.

ಭಾಷೆ, ಮಾನವತೆಗೆ ಇಂತಹ ಅಮೌಲ್ಯ ವರವಾದುದರಿಂದ ಇದನ್ನು ದೇವಾನುದೇವತೆಗಳೇ ಅನುಗ್ರಹಿಸಿರಬೇಕೆಂದು ಪ್ರಾಜ್ಞರು ಸಹ ಭಾವಿಸಿದರು. "ವಿಶ್ವರೂಪಿಯಾದ ಭಾಷೆಯನ್ನು ದೇವತೆಗಳು ತಲೆಯ ಮೇಲೆ ಇಟ್ಟುಕೊಂಡು ಮೆರೆದಾಡಿದರು. ಅದನ್ನೇ ರಾಷ್ಟ್ರ ದೇವತೆಯನ್ನಾಗಿ ಮಾಡಿಕೊಂಡರು. ಭಾಷೆಯ ಮಹಿಮೆಯನ್ನು ಯಾರುತಾನೇ ಪೂರ್ಣವಾಗಿ ಅರಿಯಬಲ್ಲರು! ದೇವತೆಗಳು ಭಾಷೆಯನ್ನು ಗೋವು ಆಗಿ ಮಾಡಿಕೊಂಡು ಬೇಕುಬೇಕಾದವರಗಳನ್ನೆಲ್ಲ ಹಾಲಿನಂತೆ ಕರೆದರು. ಭಾಷೆಯ ಮುಕ್ಕಾಲು ಪಾಲು ಇತರ ಕಡೆ ಹಂಚಿ ಹೋಯಿತು. ಮನುಷ್ಯನಿಗೆ ದೊರಕಿದುದು ಕಾಲು ಭಾಗ ಮಾತ್ರ. ಈಶ್ವರನನ್ನು ತಾಂಡವ ನೃತ್ಯದಲ್ಲಿ ಡಮರುಗವನ್ನು ಹದಿನಾಲ್ಕು ಬಾರಿ ಆಡಿಸಿದನು. ಅದು ಹದಿನಾಲ್ಕು ಭಾಷೆಗಳಾದವು. ವ್ಯಾಕರಣ ಸೂತ್ರಗಳಾದವು. ಸನಕಾದಿ ಋಷಿಗಳೆಲ್ಲ ತಮಗೆ ತೋರಿದಂತೆ ಅವುಗಳಿಗೆ ವ್ಯಾಖ್ಯಾನ ಮಾಡಿದರು. ಭಾಷೆಯೇ ಮುಖ್ಯ. ಭಾಷೆಯೇ ಸರ್ವಸ್ವ, ಭಾಷೆಯಿಲ್ಲದಿದ್ದರೆ ಧರ್ಮವೂ ಇಲ್ಲ, ಅಧರ್ಮವೂ ಇಲ್ಲ. ಹೃದ್ಯವೂ ಇಲ್ಲ ಅಹೃದ್ಯವೂ ಇಲ್ಲ. ಸಾಧುವಾದುದೂ ಇಲ್ಲ. ಅಸಾಧ್ಯವಾದುದೂ ಇಲ್ಲ. ಸತ್ಯವೂ ಇಲ್ಲ ಅಸತ್ಯವೂ ಇಲ್ಲ. ಸಮಸ್ತವೂ ಭಾಷೆಯೇ ಆದುದರಿಂದ ಭಾಷೆಯನ್ನು ಉಪಾಸನೆ ಮಾಡೋಣ".

ಭರತ ಖಂಡವು ವಿಶಾಲವಾದ ದೇಶ. ಇಲ್ಲಿ ಅನೇಕ ಭಾಷೆಗಳ ಜನ ಇದ್ದಾರೆ. ಭಾಷೆಗಳು ಪ್ರಕೃತಿ ಸ್ವರೂಪ ಭೂಲಕ್ಷಣ ಜನಜೀವನ ಪ್ರಕಾರಗಳು ಆಚಾರ ವಿಚಾರಗಳು ಇವುಗಳಂತೆ ಬೇರೆಬೇರೆಯಾಗಿವೆ. ಈ ದೇಶದಲ್ಲಿ ಅನೇಕ ರಾಜ್ಯಗಳು ಚಕ್ರಾಧಿಪತ್ಯಗಳು ಆಗಿ ಹೋಗಿವೆ. ಒಂದು ಕಾಲದಲ್ಲಿ ದೇಶ ಛಿದ್ರವಾಗಿ ಐವತ್ತಾರು ರಾಜ್ಯಗಳಾಗಿದ್ದವು ಬ್ರಿಟಿಷರ ಕಾಲದಲ್ಲಿ ಐದುನೂರ ಐವತ್ತು ರಾಜ್ಯಗಳಿದ್ದವು. ಅಶೋಕ, ಔರಂಗಜೇಬರ ಕಾಲದಲ್ಲಿ ದೇಶಕ್ಕೆ ಒಬ್ಬ ಸಾಮ್ರಾಟರಾಗುವ ಪ್ರಯತ್ನಗಳು ನಡೆದವು. ಆದರೂ ಅದಾವುದ-ರಿಂದಲೂ ಜನಜೀವನದಲ್ಲಿ ಹೆಚ್ಚು ಬದಲಾವಣೆಗಳು ಆಗಲಿಲ್ಲ. ಜನತೆ

ಅಸಂಖ್ಯಾತ ಹಳ್ಳಿಗಳಲ್ಲಿ ವಾಸಿಸುತ್ತಿದ್ದು, ತಮ್ಮ ಜೀವನ ಕ್ರಮ ಪದ್ಧತಿಗಳು ಭಾಷೆ ಸಂಸ್ಕೃತಿಗಳನ್ನು ಉಳಿಸಿಕೊಂಡು ಬಂದರು. ಆಳ್ವಿಕೆಗಳ ಬದಲಾವಣೆಯ ಪರಿಣಾಮ ರಾಜಕೀಯವಾಗಿ ಗ್ರಾಮಾಂತರಗಳ ಮೇಲೆ ಅಲ್ಪ ಸ್ವಲ್ಪ ಮಾತ್ರ ಆಯಿತು. ರಾಷ್ಟ್ರಮಟ್ಟದಲ್ಲಿ ಸಂಸ್ಕೃತ, ಉರ್ದು, ಪರ್ಶಿಯನ್ ಈಚೆಗೆ ಇಂಗ್ಲಿಷ್ ಬಂದರೂ ಅಸಂಖ್ಯಾತ ಪ್ರಾಂತೀಯ ಜನತೆ ತಮ್ಮ ತಾಯಿ ನುಡಿ ಪ್ರಾಂತ ನುಡಿಗಳಲ್ಲಿ ತಮ್ಮ ಎಲ್ಲ ವ್ಯವಹಾರಗಳನ್ನೂ ಶಿಕ್ಷಣವನ್ನೂ ಪಡೆಯುತ್ತಿದ್ದರು. ಎಲ್ಲ ಜ್ಞಾನವೂ ಸಂಸ್ಕೃತದಲ್ಲಿದ್ದ ಮಟ್ಟದಲ್ಲಿಯೇ ದೇಶ ಭಾಷೆಗಳಲ್ಲಿಯೂ ಬೆಳೆಯಿತು, ದೇಶ ಭಾಷೆಗಳು ಅಪಭ್ರಂಶ, ಪಾಳಿ, ಪ್ರಾಕೃತ, ಅರ್ಧಮಾಗಧಿ, ದೀರ್ಘಕಾಲದಿಂದ ಬಹುಸಂಖ್ಯಾತರಾದ ಜನತೆಯಲ್ಲಿ ದೇಶೀಯ ಸೊಗಡು ನಾಣ್ಣುಡಿ ನುಡಿಗಟ್ಟುಗಳಲ್ಲಿ ತಮ್ಮ ಅನೂಚಾನ ಸೊಬಗು ಕಾಕು ಬಂಧಗಳೊಡನೆ ಬೆಳೆದವು. ಆದರೆ ಬ್ರಿಟಿಷರು ಈ ದೇಶವನ್ನು ಆಕ್ರಮಿಸಿಕೊಂಡ ನಂತರ ನಮ್ಮದೆನ್ನುವ ಸಮಸ್ತವೂ ನಾಶವಾದಂತೆ ನಮ್ಮ ಭಾಷೆ ಸಂಸ್ಕೃತಿ ಪೂರ್ಣವಾಗಿ ಕುಂಠಿತಗೊಂಡಿತು. ನಮ್ಮ ದೇವರುಗಳಿಗೂ ಹ್ಯಾಟ್ ಹಾಕಿ ಬಾಯಿಗೆ ಸಿಗಾರ್ ಕೊಟ್ಟು ಬಿಟ್ಟೆವು. ಆಂಗ್ಲ ಸಂಸ್ಕೃತಿಯ ಆಘಾತ ನಮ್ಮ ಮೇಲೆ ಪೂರ್ಣವಾಗಿ ಆಯಿತು. ಬ್ರಿಟಿಷರ ನಡೆನುಡಿ, ವೇಷಭೂಷಣ, ಆಹಾರ, ಉಡುಪು ಎಲ್ಲವನ್ನೂ ನಾವು ಸ್ವಾಭಿಮಾನ ರಹಿತರಾಗಿ ಅನುಸರಿಸಿದೆವು. ಬ್ರಿಟಿಷ್ ಸಂಸ್ಕೃತಿ ಪಾಥ–ೇನಿಯಂ ಕಳೆಯಂತೆ ನಮ್ಮನ್ನು ಅದುಮಿತು. ಬ್ರಿಟಿಷರು ಇಲ್ಲಿ ನೂರ ಐವತ್ತು ವರುಷಗಳು ಆಳಿದರೂ ತಮ್ಮ ವೇಷಭೂಷಣ ಸಂಸ್ಕೃತಿ ಭಾಷೆ ಪದ್ಧತಿ ಏನನ್ನೂ ಬಿಡಲಿಲ್ಲ. ನಾವು ಮಾತ್ರ ನಮ್ಮ ಸರ್ವಸ್ವವನ್ನೂ ಬಲಿಕೊಟ್ಟೆವು. ಭಾರತದ ಆತ್ಮ ಆಂಗ್ಲ ಸಂಸ್ಕೃತಿಗೆ ಬಲಿಯಾದುದನ್ನು ಗಾಂಧೀಜಿ ತೀವ್ರ ದುಃಖದಿಂದ ಗಮನಿಸಿದರು. "ಬ್ರಿಟಿಷ್ ಸಾಮ್ರಾಜ್ಯ ಇಲ್ಲಿಂದ ನಿರ್ಗಮಿಸುವುದು ಖಂಡಿತ. ಆದರೆ ಬ್ರಿಟಿಷ್ ಸಂಸ್ಕೃತಿ ಇಲ್ಲಿ ಅಜರಾಮರವಾಗಿ ಇರುತ್ತದೆ. ಪ್ರತಿ ಊರಿನಲ್ಲಿಯೂ ಪ್ರತಿ ಮನೆಯಲ್ಲಿಯೂ ಬ್ರಿಟಿಷ್ ದ್ವೀಪಗಳು ಉಳಿಯುತ್ತವೆ"ಎಂದು ಹೇಳಿದರು.

ಆಂಗ್ಲ ಸರ್ಕಾರದ ಪಾಶವೀ ಕರಾಳ ಪದಘಾತದ ಒಂದೂವರೆ ಶತಮಾನದಲ್ಲಿ ಭಾರತೀಯ ಸಂಸ್ಕೃತಿ, ಸಾಹಿತ್ಯ, ಆರ್ಥಿಕ ಸಾಮರ್ಥ್ಯ ಎಲ್ಲವೂ ಪೂರ್ಣವಾಗಿ ನಾಶವಾದುವು. ಮಹಾನ್ ಚಕ್ರವರ್ತಿಗಳು ಆಳಿದ ಪ್ರಾಚೀನ ಬೃಹತ್ ರಾಷ್ಟ್ರ, ಬ್ರಿಟನ್ನಿಗೆ ಕೂಲಿಗಳನ್ನೂ ಕಚ್ಚಾ ಮಾಲನ್ನೂ ಒದಗಿಸುವ ಉಗ್ರಾಣವಾಯಿತು. ನಾವು ಅತ್ಯಂತ ಹೆಚ್ಚಾದ ಅಪಘಾತವನ್ನು ಅನುಭವಿಸಿದುದು ಶಿಕ್ಷಣ ಕ್ಷೇತ್ರದಲ್ಲಿ ಮತ್ತು ನಮ್ಮ ರಾಷ್ಟ್ರದ ಜೀವನಾಡಿಗಳಾದ ಸತ್ವಶಾಲಿಯಾದ ನಮ್ಮ ದೇಶ ಭಾಷೆಗಳ ಅವನತಿಯಲ್ಲಿ. ಸರ್ಕಾರವನ್ನು ನಡೆಸುವ ಸಲುವಾಗಿ ಕಾರಕೂನರನ್ನು ತಯಾರಿಸಲು ಪ್ರಾಥಮಿಕ ಮತ್ತು ಪ್ರಾಥಮಿಕ ಪೂರ್ವಹಂತದಿಂದಲೇ ನಮ್ಮ

ಎಳೆ ಮಕ್ಕಳ ಮೇಲೆ – ಇಂಗ್ಲಿಷ್ ಭಾಷೆಯ ಹೊರೆಯನ್ನು ಹೇರಿ ಬಿಟ್ಟೆವು. "ಜಗತ್ತಿನ ಜ್ಞಾನವೆಲ್ಲ ಇಂಗ್ಲಿಷ್‌ನಲ್ಲಿಯೇ ಇದೆ" ಎಂಬ ಕುರುಡು ನಂಬಿಕೆಯನ್ನು ತೀವ್ರವಾಗಿ ಬೆಳೆಸಿದವು ಅದೇ ಪರಿಸ್ಥಿತಿ ಇನ್ನೂ ದೀರ್ಘಕಾಲ ಬೆಳೆದಿದ್ದರೆ, ಭಾರತ ದೇಶ ಬಹುಶಃ ತನ್ನ ಸರ್ವಸ್ವವನ್ನು ಕಳೆದುಕೊಂಡು ಆಂಗ್ಲರ ವಸಾಹತು ಆಗುತ್ತಿದ್ದಿತೇನೋ. ದೇಶದ ಜನತೆ ಕಾಂಗ್ರೆಸ್ಸು ಸಂಸ್ಥೆ, ಗಾಂಧೀಜಿ ಸ್ವಾತಂತ್ರ್ಯ ಪ್ರೇಮಿಗಳು ಎಚ್ಚೆತ್ತು ದೀರ್ಘ ಕಾಲ ಭಾರತೀಯ ಮಾರ್ಗದಿಂದಲೇ ಹೋರಾಡಿ ದೇಶದ ಸಂಕೋಲೆಯನ್ನು ಬಿಡಿಸಿದರು.

ಸ್ವಾತಂತ್ರ್ಯವು ದೊರೆತು, ನಮ್ಮ ನಾಡನ್ನು ನಾವು ಮೂವತ್ತೈದು ವರುಷಗಳಿಗಿಂತಲೂ ಹೆಚ್ಚು ಕಾಲ ಆಳುತ್ತಿದ್ದರೂ ಮಾನಸಿಕವಾಗಿ ನಾವು ಅಂಗ್ಲ ದಾಸರೇ ಆಗಿದ್ದೇವೆ. ನಮ್ಮ ಶಿಕ್ಷಣ ನ್ಯಾಯ ಪದ್ಧತಿ ಶಿಕ್ಷಣ ಮಾಧ್ಯಮ ಮಾತೃಭಾಷೆಗಳ ತಿರಸ್ಕಾರ ಕೇಂದ್ರೀಕೃತ ಉದ್ಯಮಗಳು ಎಲ್ಲದರಲ್ಲಿಯೂ ನಾವು ಆಂಗ್ಲರು ಬಿಟ್ಟುಹೋದ ಜಾಡನ್ನೇ ಅನುಸರಿಸುತ್ತಿದ್ದೇವೆ. ಆಂಗ್ಲರು ಇಲ್ಲಿ ಚಕ್ರಾಧಿಪತ್ಯವನ್ನು ನಡೆಸುತ್ತಿದ್ದಾಗಲೇ ಗಾಂಧೀಜಿ, ಸ್ವಾತಂತ್ರ್ಯ ಹೋರಾಟದಲ್ಲಿ ಸಹ ರಾಷ್ಟ್ರೀಯತ್ವ ಸ್ವದೇಶಿಗಳನ್ನು ಪ್ರಮುಖವಾಗಿ ಪ್ರತಿಪಾದಿಸಿದ್ದರು. ರವೀಂದ್ರನಾಥ ಠಾಕೂರರು ಬಹಳ ಹಿಂದಿನಿಂದಲೇ ಬಂಗಾಳಿ ಭಾಷೆಯ ಸಾರ್ವತ್ರಿಕ ಬಳಕೆ ಶಿಕ್ಷಣದಲ್ಲಿ ಪ್ರಾಧಾನ್ಯಗಳಿಗಾಗಿ ಹೋರಾಡಿದ್ದರು. ಭಾರತದಲ್ಲಿ ಆಂಗ್ಲರ ಅತ್ಯುಚ್ಛ್ರಾಯ ಕಾಲದಲ್ಲಿಯೂ ಅನೇಕ ಶಿಕ್ಷಣವೇತ್ತರೂ ಭಾಷಾಪ್ರೇಮಿಗಳೂ ದೇಶಭಾಷೆಗಳಲ್ಲಿ ಪ್ರಯೋಗಗಳನ್ನು ನಡೆಸಿದ್ದರು. ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಬಂಗಾಳಿ ಭಾಷೆಗೆ ಪ್ರಮುಖ ಸ್ಥಾನವಿತ್ತು. ಈಗ ಕೆಲವು ವರುಷಗಳ ಕೆಳಗೆ ಆಂಗ್ಲರ ಪ್ರಭುತ್ವ ಇಲ್ಲಿ ನಡೆಯುತ್ತಿದ್ದಾಗಲೂ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಉಸ್ಮಾನಿಯಾ ತೀವ್ರಗತಿಯಲ್ಲಿ ಪಠ್ಯಪುಸ್ತಕಗಳನ್ನೆಲ್ಲ ಉರ್ದು ಭಾಷೆಗೆ ತರ್ಜುಮೆ ಮಾಡಿಸಿ ಶಿಕ್ಷಣ ಮಾಧ್ಯಮವನ್ನೆ ದೇಶ ಭಾಷೆಗೆ ಬದಲಾಯಿಸಿದ್ದರು. ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ ಭಾಷಾವಾರು ಪ್ರಾಂತರಚನೆಯ ತತ್ವವನ್ನು ಒಪ್ಪಿ 1924ರಲ್ಲಿಯೇ ಕರ್ನಾಟಕಕ್ಕೆ ಪ್ರಾಂತದ ಸ್ಥಾನವನ್ನು ಕೊಟ್ಟಿತು. "ಗಾಂಧೀಜಿ ತಮ್ಮ ರಚನಾತ್ಮಕ ಕಾರ್ಯಕ್ರಮದ"ಪಟ್ಟಿಯಲ್ಲಿ ಮಾತೃಭಾಷೆ ಮತ್ತು ಪ್ರಾಂತ ಭಾಷೆಯ ಅಭಿವೃದ್ಧಿಗೆ ಪ್ರಮುಖ ಸ್ಥಾನವನ್ನು ಕೊಟ್ಟಿದ್ದಾರೆ.

ಸ್ವಭಾಷಾ ಪ್ರೇಮ ಮನುಷ್ಯನ ಸ್ವಭಾವದಲ್ಲಿ ಸೇರಿಕೊಂಡಿರುವ ಗುಣ ಇದು. ಭಾವೋದ್ರೇಕವನ್ನು ಉಂಟು ಮಾಡುವ ಪ್ರಸಂಗ ಅದನ್ನು ಬುದ್ಧಿವಂತಿಕೆಯಿಂದ ಸರಿಯಾದ ಮಾರ್ಗದಲ್ಲಿ ಒಯ್ದರೆ ದೇಶಕ್ಕೂ ಸಮಾಜಕ್ಕೂ ಒಳ್ಳೆಯದಾಗುವುದು. ದೇಶದ ಎಲ್ಲ ವ್ಯವಹಾರವೂ–ರಾಜಕೀಯ ಸಾಮಾಜಿಕ ಶೈಕ್ಷಣಿಕ–ದೇಶ

ಭಾಷೆಯಲ್ಲಿಯೇ ನಡೆಯಬೇಕು. ಜನತೆಗೆಲ್ಲ ಅದು ತಿಳಿದು ಜನತೆ, ಅದರಲ್ಲಿ ಭಾಗಿಯಾಗಬೇಕು. ಇದು ರಾಷ್ಟ್ರ ಕಾರ್ಯದಲ್ಲಿ ಒಂದು ಮುಖ್ಯ ಅಂಶ. ಈ ತತ್ವಕ್ಕೆ ಅನುಗುಣವಾಗಿ ಭಾಷಾವಾರು ಪ್ರಾಂತರಚನೆ 1956ನೆ ನವಂಬರ್ ಒಂದನೆಯ ತಾರೀಖು ನಡೆಯಿತು. ಅದರಂತೆ ಕರ್ನಾಟಕ ಪ್ರಾಂತವು ಅಂದು ಅಸ್ತಿತ್ವಕ್ಕೆ ಬಂದಿತು. ತಮಿಳುನಾಡು, ಆಂಧ್ರ ಪ್ರದೇಶ, ಕೇರಳ, ಮಹಾರಾಷ್ಟ್ರ ಎಲ್ಲವೂ ಅಂದೇ ಸ್ಥಾಪನೆ ಯಾದವು. ಆ ಪ್ರಾಂತಗಳಲ್ಲಿ ಅಂದಿನಿಂದಲೇ ಆಡಳಿತದ ಸರ್ವಾಂಗದಲ್ಲಿಯೂ ಶಿಕ್ಷಣದಲ್ಲಿಯೂ ತಮ್ಮ ನಾಡನುಡಿಯನ್ನೇ ಬಳಸಲು ಪ್ರಾರಂಭಿಸಿದರು. ಪ್ರಾಂತವಾದ ಮರುದಿನವೇ, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಎಲ್ಲ ಫೈಲುಗಳೂ ಮರಾಠಿ ಭಾಷೆಯಲ್ಲಿಯೇ ಇರಬೇಕೆಂದು ಅಪ್ಪಣೆ ಮಾಡಿದರು.  ಉಳಿದ ಎಲ್ಲ ಪ್ರಾಂತಗಳಲ್ಲಿಯೂ ಹೀಗೆಯೇ ಆಗಿದೆ. ಇತರ ಪ್ರಾಂತಗಳಲ್ಲಿ ಭಾಷೆಯ ಪ್ರಶ್ನೆ ಬಂದಾಗ ಎಲ್ಲ ಪಕ್ಷಗಳವರೂ ಒಂದಾಗಿ ಸೇರುತ್ತಾರೆ.  ಆದರೆ ಕರ್ನಾಟಕದಲ್ಲಿ ಅದು ಕಾಣುತ್ತಿಲ್ಲ. ಇಂಗ್ಲೀಷಿನ ವ್ಯಾಮೋಹ; ಉದ್ಯೋಗ ಅವಕಾಶದಲ್ಲಿ ಇಂಗ್ಲಿಷ್ ಬಲ್ಲವರಿಗೆ ಪ್ರಧಾನ –ಇಂಗ್ಲಿಷ್ ವಿಷಯದಲ್ಲಿ ಕೇಂದ್ರದ ನೀತಿ ಇವೆಲ್ಲ ಇದಕ್ಕೆ ಕಾರಣ. ಸ್ವಾತಂತ್ರ್ಯ ಪೂರ್ವದಲ್ಲಿಯೇ ಸಿ. ಎಫ್. ಆಂಡ್ರೂಸ್‌ರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಘಟಿಕೋತ್ಸವ ಭಾಷಣ ಮಾಡುತ್ತಾ "ಒಂದು ಪರಭಾಷೆಯ ಮಾಧ್ಯಮದಲ್ಲಿ, ಭರತ ಖಂಡದಂತಹ ವಿಶಾಲ ಜನ ಸ್ತೋಮಕ್ಕೆ ಶಿಕ್ಷಣವನ್ನು ಕೊಡುವ ವಿಚಿತ್ರ ಪರಿಸ್ಥಿತಿ, ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲ. ಅದರಲ್ಲಿಯೂ ಪೂರ್ಣವಾಗಿ ಬೆಳೆದು ತಮ್ಮದೇ ಆದ ವಿಸ್ತಾರವಾದ ಸಾಹಿತ್ಯ ಪರಂಪರೆಯಿರುವ ಅನೇಕ ಭಾಷೆಗಳು ಇರುವ ಭಾರತದಲ್ಲಿ ಇದು ತೀರ ಅಸಂಗತ"ಎಂದರು. ಇಸ್ರೇಲ್ ಜನಾಂಗ ಚದುರಿ ಹೋಗಿದ್ದ ತಮ್ಮ ಜನತೆಯನ್ನೆಲ್ಲ ಒಟ್ಟಾಗಿ ಸೇರಿಸಿ ಹೊಸ ರಾಜ್ಯವನ್ನು ಕಟ್ಟಿ, ಹೀಬ್ರೂ ಭಾಷೆಯನ್ನು ಪುನರ್ ಸ್ಥಾಪಿಸಿ ವೈಜ್ಞಾನಿಕವಾಗಿ ಮುಂದೆ ನಡೆದಿರುವ ಉದಾಹರಣೆ ನಮ್ಮ ಕಣ್ಣ ಎದುರಿಗಿದೆ.

ಸರ್ಕಾರದವರೂ ಪ್ರಜೆಗಳೂ ಇನ್ನೂ ಹೆಚ್ಚು ದಕ್ಷತೆಯಿಂದ ಕಾರ್ಯತತ್ಪರರಾಗಬೇಕು. ತತ್ವಶಃ ಸರ್ಕಾರ ಕನ್ನಡ ಭಾಷೆಯ ಸಾರ್ವಭೌಮತ್ವವನ್ನು ಒಪ್ಪಿದೆ. ಭಾಷೆಯ ಬೆಳವಣಿಗೆಗೆ ಸಾಧ್ಯವಾದ ಎಲ್ಲ ಪ್ರೋತ್ಸಾಹಗಳನ್ನೂ ಕೊಡುತ್ತಿದೆ. ಸರ್ಕಾರ ತಾನೇ ಅಂಗೀಕರಿಸಿ ಒಪ್ಪಿದ ನಿರ್ಣಯಗಳನ್ನು ಇನ್ನೂ ಹೆಚ್ಚು ಚುರುಕಾಗಿಯೂ ದಕ್ಷತೆಯಿಂದಲೂ ಕಾರ್ಯಗತಗೊಳಿಸಬೇಕು. ಸರ್ಕಾರಿ ಮಟ್ಟದಲ್ಲಿ ಎಲ್ಲ ಕಾರ್ಯಕಲಾಪಗಳೂ– ಕೇಂದ್ರ ಮತ್ತು ಇತರ ಪ್ರಾಂತಗಳೊಡನೆ ಬಿಟ್ಟು– ಕನ್ನಡದಲ್ಲಿಯೇ ಆಗಬೇಕು. ಕನ್ನಡ ಶಾಲೆಗಳನ್ನು ವಿಶಾಲವಾದ ಸ್ವಚ್ಛವಾದ ಸ್ಥಳದಲ್ಲಿ ಆಕರ್ಷಣೀಯವಾಗಿ

ಮಾಡಬೇಕು. ಇಂಗ್ಲೀಷ್ ಭಾಷೆಯನ್ನು ಮಾತ್ರ ಇಂಗ್ಲಿಷಿನಲ್ಲಿ ಕಲಿಸಬೇಕು. ಇತರ ಎಲ್ಲ ವಿಷಯಗಳನ್ನೂ ಕನ್ನಡದಲ್ಲಿಯೇ ಬೋಧಿಸಬೇಕು. ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಎಲ್ಲ ವ್ಯವಹಾರಗಳೂ ಜನತೆಯೊಂದಿಗೆ ಸಂಪರ್ಕವೂ ದೇಶಭಾಷೆಯಲ್ಲಿಯೇ ಇರಬೇಕು. ಸರ್ಕಾರ ನಾನಾ ವಿಧಗಳಿಂದ ಅರ್ಜಿಗಳು, ನಮೂನೆಗಳು, ಪ್ರಕಟಣೆಗಳು, ಪಾವತಿ ಚೀಟಿಗಳು ಎಲ್ಲವನ್ನೂ ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿಯೇ ಮಾಡಿಸಬೇಕು. ನಮ್ಮ ಸರ್ಕಾರಿ ಅಧಿಕಾರಿಗಳೆಲ್ಲ ಕನ್ನಡದಲ್ಲಿ ವ್ಯವಹರಿಸುವುದು, ಬರೆಯುವುದು ತಮ್ಮ ಭಾಷೆಗೂ ತಮ್ಮ ಹುದ್ದೆಗೂ ಗೌರವವೆಂದು ಭಾವಿಸಬೇಕು. 1830 ರಿಂದ 80ರವರೆಗೆ ಹಳೆ ಮೈಸೂರು ರಾಜ್ಯ ಈಸ್ಟ್ ಇಂಡಿಯಾ ಕಂಪನಿಯ ಸ್ವಾಧೀನದಲ್ಲಿ ಇದ್ದಿತು. ಆಗ ಕಂಪನಿ ಸರ್ಕಾರ ರಾಜ್ಯದ ಕಾರುಬಾರನ್ನು ಅಚ್ಚ ಕನ್ನಡದಲ್ಲಿಯೇ ನಡೆಸಿತು. ಕನ್ನಡ ತಿಳಿಯದ ಅಧಿಕಾರಿಗಳಿಗೆ ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡಿತು. ಆಗ ಏಳುವಾರ ಎಂಟುವಾರಗಳಲ್ಲಿ ಕನ್ನಡವನ್ನು ಅಧಿಕಾರಿಗಳು ಕಲಿತ ಉದಾಹರಣೆಗಳು ಇವೆ. ಒಬ್ಬ ತೆಲುಗು ಬಲ್ಲ ಶಿರಸ್ತೆದಾರರು ಇದ್ದರು. ಅವರಿಗೆ ಅನೇಕ ವರುಷಗಳ ಸರ್ಕಾರಿ ನೌಕರಿ ಆಗಿತ್ತು. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಅವರು ಕೆಳನೌಕರರು ಬರೆದ ಕಾಗದಗಳಿಗೆ– ಟಿಪ್ಪಣಿಗಳಿಗೆ –ಓದದಯೇ ಹಸ್ತಾಕ್ಷರ ಹಾಕುತ್ತಿದ್ದರು. ಒಂದು ಸಲ ಅವರ ಮೇಲೆ ಅಧಿಕಾರ ದುರುಪಯೋಗದ ಆಪಾದನೆ ಬಂದಿತು. ಸರ್ಕಾರ ಅವರನ್ನು ವಿಚಾರಣೆಗೆ ಒಳಪಡಿಸಿತು. ವಿಚಾರಣೆಯಲ್ಲಿ ಅವರು ನಿರಪರಾಧಿಗಳೆಂದು ನಿರ್ಣಯವಾಯಿತು. ಸರ್ಕಾರ ಕೊಟ್ಟ ಕಾರಣ, "ನೀವು ಕನ್ನಡ ನಾಡಿನ ಸರ್ಕಾರದಲ್ಲಿ ಉದ್ಯೋಗದಲ್ಲಿ ಇದ್ದರೂ ಕನ್ನಡ ಕಲಿಯಲಿಲ್ಲ. ನಿಮ್ಮ ಕೆಳ ಗುಮಾಸ್ತರು ಬರೆದ ಕನ್ನಡ ಟಿಪ್ಪಣಿಗಳಿಗೆ ನೀವು ರುಜು ಹಾಕಿ ಕಳುಹಿಸುತ್ತಿದ್ದಿರಿ. ಕನ್ನಡವನ್ನು ಕಲಿಯದ ಕಾರಣದಿಂದ ನಿಮ್ಮನ್ನು ನಿವೃತ್ತಿ ಮಾಡಲಾಗಿದೆ".

ಇದು ಆಂಗ್ಲರು ಕನ್ನಡ ನಾಡನ್ನು ಆಳಿದಾಗ ನಡೆದ ಸಂಗತಿ ಎಂಬುದನ್ನು ನೆನೆದರೆ ನಾವು ನಾಚಿಕೆ ಪಡಬೇಕಾಗುತ್ತದೆ. "ಒಂದು ಕಾಲದಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಸದಸ್ಯರು ಭಾಷಣದಲ್ಲಿ, ಇಂಗ್ಲೀಷ್ ಅಲ್ಲದ ಬೇರೆ ಪದವನ್ನು ಉಪಯೋಗಿಸಿದರೆ ಐವತ್ತು ಪೌಂಡು ದಂಡವನ್ನು ಕೊಡಬೇಕಾಗುತ್ತಿದ್ದಿತು. ರೈಸ್, ಕಿಟ್ಟಲ್, ಜೀಗ್ಲರ್ ಮುಂತಾದವರೆಲ್ಲ ಕನ್ನಡವನ್ನು ಕಲಿತು ಕನ್ನಡದಲ್ಲಿ ಶಾಸ್ತ್ರ ಗ್ರಂಥಗಳು, ಪರಿಶೋಧನೆ, ನಿಘಂಟು, ಗ್ರಂಥ ಸಂಪಾದನೆ ಇವನ್ನೆಲ್ಲ ಮಾಡಿದ್ದಾರೆ. ಅವರು ಬೈಬಲನ್ನು ಕನ್ನಡಕ್ಕೆ ಅನುವಾದಿಸಿದರು. ಇದನ್ನೆಲ್ಲ ಅವರು ಮಾಡಿದುದು ತಾವು ಯಾವ ಜನತೆಯ ಸಂಪರ್ಕದಲ್ಲಿ ಬರುತ್ತಾರೆಯೋ ಆ ಜನತೆಯೊಂದಿಗೆ ಅವರ ಭಾಷೆಯಲ್ಲಿಯೇ ಮಾತನಾಡಬೇಕು, ಅವರೊಂದಿಗೆ

ಹೆಚ್ಚು ಸ್ನೇಹ –ಆತ್ಮೀಯತೆ ಬೆಳೆಸಬೇಕು" ಎಂಬ ಕಾರಣಕ್ಕಾಗಿ ಆಂಗ್ಲೇಯರು ನಮ್ಮ ಜನಸಂಪರ್ಕವನ್ನು ಹೆಚ್ಚು ಹೆಚ್ಚಾಗಿ ಹೊಂದುವುದರಿಂದ ಆಡಳಿತ ಮಾಡಲು ಸೌಕರ್ಯವಾಗುವುದೆಂಬುದನ್ನು ಅರಿತರು. ನಮ್ಮ ಅಧಿಕಾರಿಗಳೂ ಅದನ್ನು ಅರಿಯಬೇಕು. ಇದರಿಂದ ನಮ್ಮ ಅಧಿಕಾರಿಗಳು ಹೆಚ್ಚು ಜನಪ್ರಿಯರಾಗುವರು. ಕರ್ನಾಟಕ ಸರ್ಕಾರ ಹೊರನಾಡಿನಲ್ಲಿರುವ ಗಡಿಯಲ್ಲಿರುವ ಕನ್ನಡಿಗರ ಹಿತಚಿಂತನೆ ಯೋಗಕ್ಷೇಮ, ಅವರು ತಮ್ಮ ಸಂಸ್ಕೃತಿ ಮತ್ತು ಕನ್ನಡ ತನವನ್ನು ಬೆಳೆಸಿಕೊಳ್ಳಲು ಎಲ್ಲ ಸಹಾಯಗಳನ್ನೂ ಒದಗಿಸಬೇಕು. ಅವರು ಕನ್ನಡದ ಸಂಸಾರಕ್ಕೆ ಸೇರಿದವರು ಎಂಬುದನ್ನು ಮರೆಯಬಾರದು.

ದೂರದರ್ಶನ ಮತ್ತು ಆಕಾಶವಾಣಿಗಳು ತಾವು ಇರುವಲ್ಲಿನ ಪ್ರಾಂತ ಭಾಷೆಗೆ ಪ್ರಾಂತ ಸಮಸ್ಯೆ ವಿಪಯಗಳಿಗೆ ಹೆಚ್ಚು ಗಮನವನ್ನೂ ವೇಳೆಯನ್ನೂ ವಿನಿಯೋಗಿಸಬಾರದು. ಕೇಂದ್ರದೊಂದಿಗೆ ಸಂಪರ್ಕಕ್ಕೆ ಮಾತ್ರ ಹಿಂದಿಯನ್ನು ಬಳಸಬೇಕು. ಹಿಂದಿಯ ಬಳಕೆ ಮತ್ತು ಇಂಗ್ಲೀಷಿನ ಬಳಕ್ಕೆ ಸೀಮಿತವಾಗಿರಬೇಕು. ಕರ್ನಾಟಕದಲ್ಲಿರುವ ಕೇಂದ್ರ ಸಂಸ್ಥೆಗಳು, ಬ್ಯಾಂಕು, ಉದ್ಯಮಗಳಲ್ಲಿ ಕನ್ನಡ ನೌಕರರಿಗೆ ತಕ್ಕ ಪ್ರಮಾಣದ ಉದ್ಯೋಗ ದೊರಕಬೇಕು. ರಾಜ್ಯದ ಆಡಳಿತ ಎಲ್ಲ ಮಟ್ಟಗಳಲ್ಲಿಯೂ ಕನ್ನಡದಲ್ಲಿಯೇ ನಡೆಯಬೇಕು. ನ್ಯಾಯಾಂಗದ ಕಾರ್ಯಗಳೂ ಜನರ ಭಾಷೆಯಲ್ಲಿಯೇ ನಡೆಯಬೇಕು. ಶಾಸನಸಭೆಗಳ ಕಾರ್ಯಕಲಾಪಗಳೆಲ್ಲ ಕನ್ನಡದಲ್ಲಿಯೇ ನಡೆಯಬೇಕು. ಮಸೂದೆಗಳನ್ನೂ, ವಿಧೇಯಕಗಳನ್ನೂ ಕನ್ನಡದಲ್ಲಿಯೇ ರಚಿಸಬೇಕು. ಮಂತ್ರಿಮಂಡಲದ ಸಭೆಗಳಲ್ಲಿ ನಡವಳಿಕೆಗಳು ಕನ್ನಡದಲ್ಲಿ ಆಗಿ ನಮೂದಾಗಬೇಕು. ಜವಹರ ಲಾಲ್ ನೆಹರುರವರಿಗೆ–ಸತ್ಯೇಂದ್ರ ಬೋಸ್ ಎಂಬ ಪ್ರಸಿದ್ಧ ವಿಜ್ಞಾನಿ ಬರೆದ ಪತ್ರದಲ್ಲಿ "ವೈಜ್ಞಾನಿಕ ವಿಷಯಗಳನ್ನು ದೇಶ ಭಾಷೆಯಲ್ಲಿ ಸುಲಭವಾಗಿ ಕಲಿಸಬಹುದು ಎಂದು ಹೇಳಿದ್ದಾರೆ. ಗಾಂಧೀಜಿ ಪ್ರೌಢಶಾಲೆಗಳಲ್ಲಿ ಸಹ ಇಂಗ್ಲೀಷ್ ಶಿಕ್ಷಣ ಬೇಡವೆಂದರು, ಶೇಕ್ಸ್‌ಪಿಯರ್ ನಾಟಕಗಳನ್ನು ನಾವು ತಿಳಿಯಲು ಇಂಗ್ಲೀಷನ್ನು ಕಲಿಯಬೇಕಾಗಿಲ್ಲ. ಟಾಲಸ್ಟಾಯ್‌ರವರ ಕೃತಿಗಳನ್ನು ಅರಿಯಲು ರಷ್ಯ ಭಾಷೆಯನ್ನು ಕಲಿಯ ಬೇಕಾದುದಿಲ್ಲ. ಕೆಲವರು ಕಲಿತು ಅನುವಾದ ಮಾಡಿಕೊಟ್ಟರೆ ಸಾಕು"ಎಂದಿದ್ದಾರೆ.

ನಾಡು ನುಡಿಗಳ ವಿಷಯದಲ್ಲಿ ಕನ್ನಡ ಜನತೆಯ ನಿರಭಿಮಾನ ತೀರ ನಿರಾಶಾಜನಕವಾಗಿದೆ. ನಮ್ಮ ತಾಯ್ನುಡಿ ನಮಗೆ ಅತ್ಯಂತ ಪ್ರಿಯವಾಗಬೇಕು. ಅದರ ವಿಷಯದಲ್ಲಿ ನಮಗೆ ಹೆಮ್ಮೆಯೂ ಆದರವೂ ಇರಬೇಕು. ತಾಯಿನುಡಿ

ತಾಯಿಯಷ್ಟೇ ಮತ್ತು ಅದಕ್ಕಿಂತ ಹೆಚ್ಚು ಪ್ರಿಯವಾದದ್ದು. ಇತರ ಭಾಷೆಗಳವರು ತಮ್ಮ ನುಡಿಯನ್ನು ಬೆಳೆಸಿದಷ್ಟು ಅಭಿಮಾನದಿಂದ ನಾವು ನಮ್ಮ ನುಡಿಯನ್ನು ಬೆಳೆಸಲಿಲ್ಲ. ಜಗತ್ತಿನ ಶ್ರೇಷ್ಠ ಸಾಹಿತಿಗಳ ಪಂಕ್ತಿಗೆ ಸೇರಬಲ್ಲ ಕಾವ್ಯಕರ್ತರು, ರಸಋಷಿಗಳು ನಮ್ಮ ನಾಡಿನಲ್ಲಿ ಆಗಿದ್ದಾರೆ. ನಮಗೆ ಸ್ವಾಭಿಮಾನವಿಲ್ಲ. ಬಹಳ ಹಿಂದೆಯೇ ತೀ.ನಂ.ಶ್ರೀಯವರು "ಅಕ್ಕ ತಂಗಿಯರೆಲ್ಲ ಮುಂದುಮುಂದಾಗಿರಲು ನಮ್ಮ ತಾಯಿ ಒಬ್ಬಳೇ ಸೊರಗಿರುವಳಲ್ಲ. ಅಮ್ಮನನ್ನು ಕೈಹಿಡಿದು ನಡೆಸುವುವೆ?" ಎಂದು ಕೊರಗಿದರು. ನಮ್ಮ ನೆರೆಹೊರೆಯ ಭಾಷೆಗಳೆಲ್ಲ ಪುಷ್ಟವಾಗಿ ಬೆಳೆದು ಭೋರ್ಗರೆಯುತ್ತಿವೆ. ಕನ್ನಡಿಗರು ಮಾತ್ರ ಕ್ಷಯರೋಗ ಪೀಡಿತರಾಗಿದ್ದಾರೆ. ಸರ್ಕಾರವೇ ಎಲ್ಲವನ್ನೂ ಮಾಡಬೇಕೆಂದು ನಿರೀಕ್ಷಿಸಬಾರದು. "ದೇಶ ಪ್ರೇಮವಿಲ್ಲದ ಮನುಷ್ಯನೇ ಇಲ್ಲ" ಎಂಬ ನುಡಿಯುಂಟು ಹಾಗೆಯೇ, ಭಾಷಾ ಪ್ರೇಮವಿಲ್ಲದ ಮನುಷ್ಯನೂ ಇಲ್ಲ".

ನಮ್ಮ ನಾಡಿನಜನತೆ–ಮುಖ್ಯವಾಗಿ ಮಹಿಳೆಯರು ಸಹ–ಮಕ್ಕಳಲ್ಲಿ ಕನ್ನಡ ನಾಡುನುಡಿಯ ಪ್ರೇಮವನ್ನು ಬೆಳೆಸುವರೆಂದು ಹಾರೈಸೋಣ.

*–ಆಕರ : ಕನ್ನಡ ಅಳಿವು ಉಳಿವು : ಪ್ರ.ಸಂ. ಎಲ್.ಎಸ್.ಶೇಷಗಿರಿರಾವ್*

## 1.4 ಓದು ಪಠ್ಯ: ಕನ್ನಡ – ಈ ಶತಮಾನದ ಹೊಸ ಸವಾಲುಗಳು

–ಡಾ. ಕೆ.ವಿ. ನಾರಾಯಣ

ಇಪ್ಪತ್ತನೇ ಶತಮಾನದ ಆರಂಭ ಕಾಲದಲ್ಲಿ ವಸಾಹತು ಆಡಳಿತಕ್ಕೆ ಒಳಗಾಗಿದ್ದ ಚಿಕ್ಕಪುಟ್ಟ ದೇಶಗಳಲ್ಲಿ ದೇಶೀಯ ಭಾಷೆಗಳು ವಸಾಹತುಗಾರರ ಭಾಷೆಯ ಪ್ರಭಾವಗಳಿಂದ ಬಿಡುಗಡೆ ಪಡೆದು ತಮ್ಮ ಸ್ವಂತಿಕೆಯನ್ನು ಹೇಗೆ ಕಾಯ್ದುಕೊಳ್ಳಬೇಕೆಂದು ಅರಿತುಕೊಳ್ಳುವ ವ್ಯವಸ್ಥಿತ ಪ್ರಯತ್ನಗಳು ಜರುಗಿದ್ದನ್ನು ನೋಡುತ್ತೇವೆ. ಈ ಇಕ್ಕಟ್ಟನ್ನು ಅನುಭವಿಸುತ್ತಿದ್ದ ಬಹುಪಾಲು ಭಾಷಾ ಸಮುದಾಯಗಳು ತಮ್ಮತಮ್ಮ ಭಾಷೆಗಳನ್ನಾಡುವ ಜನರ ಮೊದಲ ಸಮ್ಮೇಳನಗಳನ್ನು ಆ ಸಂದರ್ಭದಲ್ಲಿ ಆಯೋಜಿಸಿದ್ದಕ್ಕೆ ದಾಖಲೆಗಳಿವೆ. ಭಾರತದಲ್ಲೂ ಪ್ರಾಂತೀಯ ಭಾಷೆಗಳನ್ನು ಮುಂದಿರಿಸಿಕೊಂಡು ಈ ಬಗೆಯ ಸಮ್ಮೇಳನಗಳು ನಡೆದವು. ಇಂತಹ ಸಮ್ಮೇಳನಗಳು ನಡೆಯುವ ಮೊದಲಿಗೆ ಹಲವು ವರ್ಷಗಳ ಕಾಲ ಭಾಷಾ ಸಮುದಾಯಗಳಲ್ಲಿ ಈ ಕುರಿತ ಚರ್ಚೆಗಳು ವಿವಿಧ ವೇದಿಕೆಗಳಲ್ಲಿ ನಡೆದಿರುವುದನ್ನು ಕಾಣುತ್ತೇವೆ. ಕನ್ನಡದ ಮಟ್ಟಿಗೆ ಈ ಎಚ್ಚರ 19ನೇ ಶತಮಾನದ ಕೊನೆಕೊನೆಗೆ ಕಂಡು ಬಂದಿತು. ನಾಡಿನ ಹಲವು ಕಡೆಗಳಲ್ಲಿ ಭಾಷೆಯ ಒಳಿತಿಗಾಗಿ ಶ್ರಮಿಸುವ ಸಂಸ್ಥೆಗಳು ರೂಪುಗೊಂಡವು. ಮೈಸೂರಿನ ಭಾಷೋಜ್ಜೀವಿನಿ ಸಭಾ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಸ್ಥೆಗಳು ಇದಕ್ಕೆ ನಿದರ್ಶನಗಳು. ಈ ಸಂಸ್ಥೆಗಳು ಕನ್ನಡದ ಸ್ಥಿತಿಗತಿಗಳನ್ನು ಕುರಿತು ವಿವಿಧ ಸ್ತರದ ಚರ್ಚೆಗಳನ್ನು ಹುಟ್ಟು ಹಾಕಿದವು. ಮೈಸೂರಿನ ಸಂಸ್ಥೆ 1896ರಲ್ಲಿ, ಧಾರವಾಡದ ಸಂಸ್ಥೆ 1911ರಲ್ಲಿ ಸಮ್ಮೇಳನಗಳನ್ನು ನಡೆಸಿದವು. ಇವೆಲ್ಲ ಪ್ರಯತ್ನಗಳು ಹುರಿಗಟ್ಟಿಕೊಂಡು ಫಲಕೊಟ್ಟಂತೆ ಕರ್ನಾಟಕ ಸಾಹಿತ್ಯ ಪರಿಷತ್ತು (ಈಗ ಕನ್ನಡ ಸಾಹಿತ್ಯಪರಿಷತ್ತು) ಸ್ಥಾಪನೆಯಾಗಿ ಕನ್ನಡ ಸಾಹಿತ್ಯ ಸಮ್ಮೇಳನಗಳು 1916ರಿಂದ ಮೊದಲಾದವು. ಈ ಎಲ್ಲ ವಿವರಗಳನ್ನು ನೀಡಿದ್ದರ ಹಿಂದಿನ ಉದ್ದೇಶವಿಷ್ಟೆ : ಸರಿಸುಮಾರು ಒಂದು ನೂರು ವರ್ಷಗಳು ಕಳೆಯುವ ಹೊತ್ತಿಗೆ ಕನ್ನಡ ಈಗ ಬೇರೊಂದು ಬಗೆಯ ಇಕ್ಕಟ್ಟನ್ನು ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕನ್ನಡದ ಅಳಿವು ಉಳಿವಿನ ಪ್ರಶ್ನೆಗಳನ್ನೆತ್ತಿಕೊಂಡು ವಿವಿಧ ವಲಯಗಳಲ್ಲಿ ಚರ್ಚೆಗಳು ವಾದವಿವಾದಗಳು ಮೊದಲಾಗಿವೆ. ಈ ಸಂದರ್ಭದ ಹೊಸ ಸವಾಲುಗಳು ಈ ಹಿಂದಿನ ಶತಮಾನದ ಸಾಲುಗಳಿಗಿಂತ ಹೇಗೆ ಭಿನ್ನ ಮತ್ತು ಆ ಕಾರಣದಿಂದ ಆಗ ನಾವು ಕಂಡುಕೊಂಡ ಉತ್ತರಗಳಿಗಿಂತ ಭಿನ್ನವಾದ ಉತ್ತರಗಳನ್ನು ಕಂಡುಕೊಂಡು ಜಾರಿಗೆ ಅನುವು ಮಾಡಿ ಕೊಡುವುದು ಎಷ್ಟು ಅಗತ್ಯ ಎನ್ನುವುದನ್ನು ನಾವು

ಅರಿತುಕೊಳ್ಳಬೇಕಾಗಿದೆ. 1911ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಸ್ಥೆಯಲ್ಲಿ ನಡೆದ ಸಭೆಯಲ್ಲಿ ಪ್ರೊ.ಬಿ.ಎಂ.ಶ್ರೀಕಂಠಯ್ಯನವರು ಕನ್ನಡ ಮಾತು ತಲೆ ಎತ್ತುವ ಬಗೆ ಎನ್ನುವ ವಿಷಯ ಕುರಿತು ಉಪನ್ಯಾಸ ಮಾಡಿದ್ದಾರೆ. ಅಲ್ಲಿ ಅವರು ನಿರೂಪಿಸಿದ ಸಮಸ್ಯೆಗಳು ಮತ್ತು ಮಂಡಿಸಿದ ಪರಿಹಾರಗಳು ಹೀಗಿವೆ.

ಕನ್ನಡದ ಆಡುಮಾತಿನ ವೈವಿಧ್ಯಗಳು ಅದರ ಬೆಳವಣಿಗೆಗೆ ಅಡ್ಡಿಯಾಗಬಾರದು. ಪ್ರಮಾಣ ಕನ್ನಡವೊಂದನ್ನು ಬರೆಹದ ಭಾಷಾ ರೂಪವಾಗಿ ಬೆಳೆಸುವ ಅಗತ್ಯವಿದೆ. ಹೀಗೆ ಮಾಡುವ ಮೂಲಕ ಸದ್ಯ ಕನ್ನಡದ ಬೆಳವಣಿಗೆಗೆ ಇರುವ ತೊಡಕುಗಳನ್ನು ಬಿಡಿಸಿಕೊಳ್ಳಬಹುದು. ಕನ್ನಡದೊಡನೆ ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳು ಹೊಂದಿರುವ ಸಂಬಂಧವನ್ನು ನಾವು ಯೋಗ್ಯ ರೀತಿಯಲ್ಲಿ ನಿರ್ವಹಿಸಬೇಕಾಗಿದೆ. ಸಂಸ್ಕೃತದ ಪೆಡಸು ಶೈಲಿಯಿಂದ ಕನ್ನಡವನ್ನು ಬಿಡುಗಡೆಗೊಳಿಸಬೇಕು. ಇಂಗ್ಲೀಷ್ ಭಾಷಾ ಸಾಹಿತ್ಯದ ಅಧ್ಯಯನ ಮೂಲಕ ಕನ್ನಡದ ಹೊಸ ಶೈಲಿಗೆ ಅಗತ್ಯವಾದ ವಿನ್ಯಾಸಗಳನ್ನು ರೂಪಿಸಿಕೊಳ್ಳುವ ಅವಕಾಶವಿದೆ. ಈ ಚಾರಿತ್ರಿಕ ಸನ್ನಿವೇಶದ ಸಾಧ್ಯತೆಗಳನ್ನು ನಾವು ಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕಾಗಿದೆ.

ಬಿ.ಎಂ.ಶ್ರೀಯವರು ಹೀಗೆ ಚಿಂತಿಸಿದ್ದು ಮಾತ್ರವಲ್ಲ; ಇದೇ ಹುನ್ನಾರಗಳನ್ನು ತಮ್ಮ ಸಾಹಿತ್ಯ ರಚನೆಯಲ್ಲಿ ಬಳಸಿದರು. ಕನ್ನಡ ಭಾಷೆಗೆ ಆಗ ಅಗತ್ಯವಿದ್ದ ಎಲ್ಲ ನಮನಶೀಲ ಮುಂಗಾಣ್ಕೆಯನ್ನು ಒದಗಿಸಿದರು. ಶ್ರೀಯವರ ಚಿಂತನೆ ಮತ್ತು ಕ್ರಿಯಾಶೀಲತೆಗಳ ಗುಣಾವಗುಣಗಳ ಚರ್ಚೆಗೆ ಇಲ್ಲಿ ಅವಕಾಶವಿಲ್ಲ. ಆದರೆ ಸುಮಾರು ಒಂದು ಶತಮಾನದ ಅನಂತರ ಕನ್ನಡ ಬೇರೆ ಬೇರೆ ಕಾರಣಗಳಿಂದಾಗಿ ಮತ್ತೊಂದು ಪರಿವರ್ತನೆಯ ಅಪೇಕ್ಷೆಯಲ್ಲಿದೆ ಎಂಬುದನ್ನು ಗಮನಿಸಲು ಶ್ರೀಯವರ ಉಲ್ಲೇಖ ಅಗತ್ಯವಾಯಿತು. ಕನ್ನಡ ಹಾಗೂ ಕನ್ನಡದಂತಹ ಭಾಷೆಗಳು ತಂತಮ್ಮ ಸಮುದಾಯಗಳ ಚಹರೆಯಾಗಿ ಉಳಿದುಕೊಳ್ಳಬಲ್ಲವೇ? ಈ ಭಾಷೆಗಳು ಈಗ ಎದುರಿಸುತ್ತಿರುವ ಸವಾಲುಗಳಲ್ಲಿ ಕೆಲವು ಭಾಷಿಕ ನೆಲೆಯಲ್ಲಿದ್ದರೆ ಮತ್ತೆ ಕೆಲವು ರಾಜಕಾರಣದ ಫಲಿತಗಳಾಗಿವೆ; ಮೇಲಾಗಿ ತಂತ್ರಜ್ಞಾನದ ಪರಿಣಾಮಗಳೂ ಇಲ್ಲಿ ಕಾಣತೊಡಗಿವೆ. ಈ ಹಿನ್ನಲೆಯಲ್ಲಿ ಕೆಲವು ಸಂಗತಿಗಳನ್ನು ನಾವು ಪರಿಶೀಲಿಸುವ ಅಗತ್ಯವಿದೆ.

**ಯಜಮಾನ ಭಾಷೆಯಾಗಿ ಕನ್ನಡ**

ನಾವೀಗ ಭಾಷೆಗಳ ಅಸ್ಮಿತೆಯನ್ನು ಕುರಿತು ಮಾತನಾಡುತ್ತಿದ್ದೇವೆ, ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಸಹಜವಾಗಿಯೇ ಭಾರತದಲ್ಲಿರುವ ಎಲ್ಲ ಭಾಷಾ ಸಮುದಾಯಗಳಿಗೂ ಒಂದೊಂದು ಆಡಳಿತ ಪ್ರದೇಶವನ್ನು ನೀಡುವುದು

ಅಸಾಧ್ಯವೆಂಬುದು ಗೊತ್ತಾಗುವಂತಿತ್ತು. ಅಂದರೆ ಕೆಲವು ಆಯ್ದಭಾಷೆಗಳನ್ನು ಗಮನಿಸಿ ಅವುಗಳನ್ನು ಪ್ರಧಾನವಾಗಿಸಿ ಪ್ರಾಂತ್ಯಗಳನ್ನು ರಚಿಸಲಾಗಿದೆ. ಚಾ–ರಿತ್ರಿಕವಾಗಿ ಕೆಲವು ಸೌಲಭ್ಯವನ್ನು ಪಡೆದಿದ್ದ ಭಾಷೆಗಳು, ಲಿಪಿಯಿದ್ದ ಭಾಷೆಗಳು ಈ ಅವಕಾಶವನ್ನು ಸಹಜವಾಗಿಯೇ ಪಡೆದುಕೊಂಡವು. ಆವರೆಗಿನ ಭಾರತದ ರಾಜಕೀಯ ಚರಿತೆಯ ಪ್ರಾಂತ್ಯ ವಿಭಜನ ಕ್ರಮ ಕೂಡ ಈ ಪ್ರಾಂತ್ಯಗಳ ರಚನೆಗೆ ಅಗತ್ಯವಾದ ಪರಾಮರ್ಶನ ಬಿಂದುವನ್ನು ಒದಗಿಸಿದೆ. ಹೀಗೆ ಭಾಷಾವಾರು ಪ್ರಾಂತ್ಯಗಳ ರಚನೆಯಾದ ಮೇಲೆ ಪ್ರತಿ ಪ್ರಾಂತ್ಯದಲ್ಲೂ ಪ್ರಧಾನ ಭಾಷೆಯೊಂದನ್ನು ಬಿಟ್ಟು ಬೇರೆ ಭಾಷೆಗಳನ್ನಾಡುವ ಹಲವು ಸಮುದಾಯಗಳು ಸೇರಿ ಹೋಗಿದ್ದವು. ಈ ಭಾಷಾ ಸಮುದಾಯಗಳಲ್ಲಿ ಮುಖ್ಯವಾಗಿ ಎರಡು ಬಗೆಗಳಿವೆ. ಒಂದು : ಈ ಗುಂಪಿಗೆ ಸೇರಿದ ಸಮುದಾಯಗಳು ಆಡುತ್ತಿದ್ದ ಭಾಷೆಗಳಿಗೆ ಪ್ರತ್ಯೇಕವಾದ ಭಾಷಾವಾರು ಪ್ರಾಂತ್ಯಗಳು ಭಾರತದಲ್ಲಿ ಇದ್ದವು. ತಮಿಳು, ತೆಲುಗು, ಮರಾಠಿ, ಹಿಂದಿ ಮುಂತಾದವು ಈ ಬಗೆಯ ಭಾಷೆಗಳು. ಅಂದರೆ ಈ ಭಾಷೆಗಳಿಗೆ ಮೀಸಲಾದ ಪ್ರಾಂತ್ಯಗಳಿದ್ದವು ಆದರೆ ಈ ಭಾಷೆಗಳನ್ನಾಡುವ ಜನರು ಬೇರೆ ಪ್ರಾಂತ್ಯಗಳಲ್ಲೂ ಹರಡಿ ಹೋಗಿದ್ದರು. ಎರಡು : ಈ ಗುಂಪಿನ ಭಾಷೆಗಳನ್ನು ಆಡುವ ಜನರು ಬಹುಮಟ್ಟಿಗೆ ಒಂದು ಪ್ರಾಂತ್ಯಕ್ಕೆ ಮಾತ್ರ ಸೀಮಿತರಾಗಿದ್ದರು. ಕೆಲವು ಭಾಷಾ ಸಮುದಾಯಗಳು ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳಲ್ಲಿ ಇದ್ದುದಕ್ಕೂ ನಿದರ್ಶನಗಳಿವೆ. ಕೊಡಗು, ತುಳು ಮೊದಲ ಬಗೆಯ ಭಾಷೆಗಳಾದರೆ ಕೊಂಕಣಿ, ಲಂಬಾಣಿ ಎರಡನೆಯ ಬಗೆಯ ಭಾಷೆಗಳು. ಈ ನಿದರ್ಶನಗಳು ಕರ್ನಾಟಕಕ್ಕೆ ಸೇರಿವೆಯಾದರೂ ಈ ಮಾದರಿಯ ನಿದರ್ಶನಗಳು ಎಲ್ಲ ಭಾಷಾ ಪ್ರಾಂತ್ಯಗಳಲ್ಲೂ ಭಿನ್ನಪ್ರಮಾಣದಲ್ಲಿ ಕಾಣಸಿಗುತ್ತವೆ.

ಭಾಷಾವಾರು ಪ್ರಾಂತ್ಯ ರಚನೆಯ ಮೊದಲ ಹಂತದಲ್ಲಿ ನಿರೀಕ್ಷಿಸಲು ಸಾಧ್ಯವಾಗದಿದ್ದ ಕೆಲವು ವೈರುದ್ಯಗಳು ಈಗ ಈ ಭಾಷೆಗಳ ನಡುವಣ ಸಂಬಂಧದಲ್ಲಿ ಮುಂಚೂಣಿಗೆ ಬರತೊಡಗಿವೆ. ಒಂದೇ ಪ್ರಾಂತ್ಯದಲ್ಲಿ ಆ ಪ್ರಾಂತ್ಯ ಭಾಷೆಯು ಅಲ್ಲಿಯ ಜನ ಸಮುದಾಯದ ಇತರ ಭಾಷೆಗಳಿಗೆ ಯಜಮಾನ ಭಾಷೆಯಾಗಿ ಸ್ಥಾಪಿತವಾಗಿರುವುದೇ ಈ ವೈರುದ್ಯ. ಕರ್ನಾಟಕದಲ್ಲಿ ಕನ್ನಡ ಈ ಪಾತ್ರವನ್ನು ನಿರ್ವಹಿಸುತ್ತಿದೆ. ತುಳು, ಕೊಡಗು, ಕೊಂಕಣಿ, ಕೊರಗ, ಲಂಬಾಣಿ ಮೊದಲಾದ ಭಾಷೆಗಳು ಈಗ ಕನ್ನಡದ ಯಾಜಮಾನ್ಯವನ್ನು ಅನುಭವಿಸತೊಡಗಿವೆ. ತಮ್ಮ ಪ್ರತ್ಯೇಕ ಅಸ್ತಿತ್ವಕ್ಕಾಗಿ ಕೆಲವು ಭಾಷಾ ಸಮುದಾಯಗಳು ಹೋರಾಟದ ಹಾದಿಯನ್ನು ತುಳಿದಿವೆ. ಶಿಕ್ಷಣ, ಆಡಳಿತ, ಸಮೂಹ ಮಾಧ್ಯಮಗಳಲ್ಲಿ ಕನ್ನಡದ ಜೊತೆಗೆ ಈ ಭಾಷೆಗಳು ತಮ್ಮ

ಇರುವಿಕೆಗಾಗಿ ಹುಡುಕಾಟ ನಡೆಸಬೇಕಾಗಿದೆ. ಮಾತೃ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವುದು ಎಲ್ಲ ರೀತಿಯಲ್ಲೂ ವಿದ್ಯಾರ್ಥಿಗಳಿಗೆ ಆರೋಗ್ಯಕರ ಎಂಬ ತತ್ವವನ್ನು ಕನ್ನಡದ ಮಟ್ಟಿಗೆ ಪಾಲಿಸಲು ಸಿದ್ಧವಿದ್ದೇವಾದರು ಅಲ್ಪಸಂಖ್ಯಾತ ಭಾಷೆಗಳ ವಿಷಯದಲ್ಲಿ ಈ ತರ್ಕವನ್ನು ಒಪ್ಪಲು ನಾವು ಸಿದ್ಧರಿರುವುದಿಲ್ಲ. ಇನ್ನೊಂದು ರಾಜ್ಯದ ಭಾಷೆಯನ್ನು ಆಡುವ ಸಮುದಾಯಗಳು ತಮ್ಮ ರಾಜ್ಯದಲ್ಲಿರುವಾಗ ಆ ಸಮುದಾಯಗಳ ಭಾಷಾ ಹಕ್ಕನ್ನು ಕಾಯ್ದುಕೊಳ್ಳಲು ನಾವು ಒತ್ತಾಸೆಯನ್ನು ನೀಡುತ್ತೇವೆ. ಹಾಗಿಲ್ಲದ ಭಾಷೆಗಳಿಗೆ ಆ ಸೌಲಭ್ಯವನ್ನು ಒದಗಿಸುವುದು ಈಗಂತೂ ಸಾಧ್ಯವಾಗಿಲ್ಲ. ಬರಲಿರುವ ದಶಕಗಳಲ್ಲಿ ಪ್ರಾಂತೀಯ ಭಾಷೆಗಳ ಈ ಯಾಜಮಾನ್ಯಕ್ಕೆ ಹಾಕಿದ ಸವಾಲುಗಳು ಮುಂಚೂಣಿಗೆ ಬರುವುದು ಅನಿವಾರ್ಯವಾಗಿದೆ. ಕನ್ನಡದ ಎದುರಿಸಬೇಕಾಗಿರುವ ಹೊಸ ಸವಾಲುಗಳಲ್ಲಿ ಇದೂ ಒಂದಾಗಿದೆ.

ರಾಜ್ಯಾಂಗ ಕರ್ತೃಗಳಿಗೆ ಈ ಸಮಸ್ಯೆಯ ಸುಳಿವು ಇರಲಿಲ್ಲವೆಂದಲ್ಲ. ಪ್ರತಿ ರಾಜ್ಯವೂ ತನ್ನ ಭೌಗೋಳಿಕ ಪ್ರದೇಶದಲ್ಲಿರುವ ಜನಸಮುದಾಯದ ಭಾಷೆಗಳ ಕಲಿಕೆ ಮತ್ತು ಬಳಕೆಗೆ ಅಗತ್ಯವಾದ ಪರಿಸರವನ್ನು, ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂಬ ಶರತ್ತನ್ನು ವಿಧಿಸಲಾಗಿದೆ. ಆದರೆ ಈ ಶರತ್ತಿನ ಪಾಲನೆ ಆಗುತ್ತಿದೆಯೇ ಎಂಬುದನ್ನು ಪರಿಶೀಲಿಸಿ ಸೂಚನೆ ನೀಡುವ ವ್ಯವಸ್ಥೆಯೊಂದು ಈಗ ಇಲ್ಲವಾಗಿದೆ. ಸಾಂಸ್ಕೃತಿಕವಾಗಿ ಈ ಭಾಷೆಗಳಿಗೆ ಆಯಾ ರಾಜ್ಯದಲ್ಲಿ ಪ್ರಾತಿನಿಧ್ಯವನ್ನು ಒದಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆಕಾಶವಾಣಿ, ದೂರದರ್ಶನಗಳಲ್ಲಿ ಈ ಅಲ್ಪಸಂಖ್ಯಾತ ಭಾಷೆಗಳ ಕಾರ್ಯಕ್ರಮಗಳನ್ನು ರಾಜ್ಯಸರ್ಕಾರ ಹಮ್ಮಿಕೊಂಡಿದೆ. ಆದರೆ ಇವು ಒಟ್ಟಾರೆಯಾಗಿ ಆಯಾ ಭಾಷಾ ಸಮುದಾಯಗಳ ಸಾಮಾನ್ಯ ಜನರ ಪ್ರಾತಿನಿಧ್ಯವನ್ನು ಒದಗಿಸಿ ಕೊಟ್ಟಿಲ್ಲವೆಂದೇ ಹೇಳಬಹುದು.

ಲಿಪಿಗಳೇ ಇಲ್ಲದ ಹತ್ತಾರು ಭಾಷೆಗಳನ್ನು ಆಧುನಿಕ ಜೀವನ ಕ್ರಮಕ್ಕೆ ಸನ್ನದ್ಧಗೊಳಿಸುವ ಉದ್ದೇಶದಿಂದ ಈ ಅಲ್ಪಸಂಖ್ಯಾತ ಭಾಷೆಗಳಿಗೆ ಅಗತ್ಯವಾದ ಮೂಲಸೌಲಭ್ಯ ರೂಪಿಸಿಕೊಡುವುದು ರಾಜ್ಯಗಳಿಗೆ ಸಾಧ್ಯವಾಗಿಲ್ಲ. ಇದರಿಂದ ಕನ್ನಡದ ಯಾಜಮಾನ್ಯವನ್ನು ಅಲ್ಪಸಂಖ್ಯಾತ ಭಾಷೆಗಳು ಅನುಭವಿಸುತ್ತಿವೆ. ಮುಂಬರುವ ದಶಕಗಳು ಪ್ರಾಂತೀಯ ಭಾಷೆಯಾಗಿ ಕನ್ನಡ ಈ ಅಧೀನ ಭಾಷೆಗಳ ಹಕ್ಕೊತ್ತಾಯಗಳನ್ನು ಈಡೇರಿಸಲು ಯಾವ ಪ್ರಯತ್ನಗಳನ್ನು ಕೈಗೊಳ್ಳಬೇಕೆಂಬುದನ್ನು ಯೋಚಿಸಬೇಕಾಗುತ್ತದೆ. "ಒಳಗೊಳ್ಳುವ" ವಿಧಾನವನ್ನು ಕನ್ನಡದಂತಹ ಭಾಷೆಗಳು ಪಾಲಿಸುವುದು ಅನಿವಾರ್ಯ.

ಹತ್ತಿಕ್ಕುವ "ಹೊರಗಿಡುವ" ವಿಧಾನವನ್ನು ಅನುಸರಿಸಿದರೆ ಈ ಭಾಷೆಗಳು ತೀವ್ರ ಕನ್ನಡ ವಿರೋಧವನ್ನು ಪಾಲಿಸಿದರೆ ಅಚ್ಚರಿಯಿಲ್ಲ. ಕನ್ನಡವನ್ನು ಎಚ್ಚರಿಕೆಯಿಂದ ಯೋಜಿಸಿದರೆ ಮಾತ್ರ ಅದರ ವ್ಯಾಪಕ ಬಳಕೆಗೆ ಅವಕಾಶಗಳು ದೊರಕುತ್ತವೆ. ಇಲ್ಲದಿದ್ದರೆ ಕನ್ನಡ ತನ್ನ ಅಸ್ತಿತ್ವಕ್ಕಾಗಿ ಹೋರಾಟ ಮುಂದುವರೆಸುವಾಗ ಇನ್ನಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

**ದ್ವಿಭಾಷಿಕತೆ, ಬಹುಭಾಷಿಕತೆ**

ಕನ್ನಡವೀಗ ಕರ್ನಾಟಕವೆಂಬ ಭೌಗೋಳಿಕ ಪ್ರದೇಶದಲ್ಲಿ ಸಾರ್ವಭೌಮ ಭಾಷೆಯಾಗಿಲ್ಲ. ಕನ್ನಡ ಮಾತನಾಡುವವರು ಇನ್ನೊಂದು ಭಾಷೆಯಲ್ಲಿ ಪರಿಣತಿಯನ್ನು ಪಡೆಯುವರು, ಅನ್ಯ ಭಾಷಿಕರು ಕನ್ನಡವನ್ನು ಕಲಿತು ದ್ವಿಭಾಷಿಕರಾಗುವುದು ಹೆಚ್ಚಾಗುತ್ತಿದೆ. ಕರ್ನಾಟಕ ಭೌಗೋಳಿಕವಾಗಿ ತಮಿಳು, ತೆಲುಗು, ಮರಾಠಿ, ಮಲಯಾಳಂ, ಕೊಂಕಣಿ ಭಾಷೆಗಳನ್ನಾಡುವ ರಾಜ್ಯಗಳಿಗೆ ತೆರೆದುಕೊಂಡಿದೆ. ಅಲ್ಲದೆ ಈಗಾಗಲೇ ಹೇಳಿದಂತೆ ಹಿಂದಿ, ಉರ್ದು, ಪಂಜಾಬಿ, ಕಾಶ್ಮೀರಿ ಮುಂತಾದ ರಾಜ್ಯಾಂಗದ ಮಾನ್ಯತೆ ಪಡೆದ ಭಾಷೆಗಳನ್ನಾಡುವ ಜನರು ಬಹುಕಾಲದಿಂದಲೂ ಇಲ್ಲಿ ವಾಸಿಸುತ್ತಿದ್ದಾರೆ. ತುಳು, ಕೊಡಗು ಮುಂತಾದ ಈ ಭೌಗೋಳಿಕ ಪ್ರದೇಶಕ್ಕೆ ಸೀಮಿತವಾದ ಭಾಷೆಗಳನ್ನಾಡುವ ಜನರು ಇಲ್ಲಿದ್ದಾರೆ. ಇದೆಲ್ಲವೂ ಕಾರಣವಾಗಿ ಈ ರಾಜ್ಯದಲ್ಲಿ ದ್ವಿಭಾಷಿಕ ಮತ್ತು ಬಹುಭಾಷಿಕ ಸಮುದಾಯಗಳು ಅಧಿಕ ಪ್ರಮಾಣದಲ್ಲಿವೆ. ಈ ಸಮುದಾಯಗಳ ಪ್ರಮಾಣ– ಕೂಡ ಹೆಚ್ಚಾಗುತ್ತಿದೆ. ಶೈಕ್ಷಣಿಕ ಕಾರಣಗಳಿಂದ ಇಂಗ್ಲೀಷ್‌ನ್ನು ಕಲಿಯುವವರ ಸಂಖ್ಯೆಯೂ ಹೆಚ್ಚಾಗುವುದು ಅನಿವಾರ್ಯವಾಗಿದೆ. ಇದರಿಂದಲೂ ಹೊಸ ಬಗೆಯ ದ್ವಿಭಾಷಿಕರು ರೂಪುಗೊಳ್ಳುತ್ತಿದ್ದಾರೆ. ಈ ದ್ವಿಭಾಷಿಕ, ಬಹುಭಾಷಿಕರಲ್ಲಿ ಕನ್ನಡ ಮೊದಲ ಭಾಷೆಯಾಗಿರುವವರು ಮತ್ತು ಕನ್ನಡ ಎರಡನೆಯ ಅಥವಾ ಅನಂತರದ ಭಾಷೆಯಾಗಿರುವವರು ಎಂದು ಎರಡು ಗುಂಪು ಮಾಡಬಹುದು. ಈ ಎರಡು ಗುಂಪುಗಳ ಕನ್ನಡದ ಬಳಕೆಯ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಈ ವ್ಯತ್ಯಾಸ ಕೇವಲ ತೋರಿಕೆಯದ್ದು ಮಾತ್ರವಲ್ಲ; ಗುಣಾತ್ಮಕವಾದ ವ್ಯತ್ಯಾಸಗಳು ಇಲ್ಲಿವೆ. ಇದರಿಂದಾಗಿಯೂ ಕನ್ನಡದ ಎದುರಿಗೆ ಹೊಸ ಸಮಸ್ಯೆಗಳು ಬಂದು ನಿಲ್ಲತೊಡಗಿವೆ.

ಯಾವುದೇ ದ್ವಿಭಾಷಿಕರಲ್ಲಿ ಕನ್ನಡ ಒಂದು ಭಾಷೆಯಾಗಿದ್ದರೆ ಅವರು ಅದನ್ನು ಬಳಸುವವರು ಎಂದು ತಿಳಿಯಬಹುದು. ಪ್ರತಿಯೊಬ್ಬರ ಬಳಕೆಯ ಸ್ವರೂಪ ಮತ್ತು ಪ್ರಮಾಣಗಳಲ್ಲಿ ವ್ಯತ್ಯಾಸವಿರಬಹುದು. ಆದರೆ ಕನ್ನಡ ಒಂದಿಲ್ಲೊಂದು ಬಗೆಯಲ್ಲಿ ಈ ದ್ವಿಭಾಷಿಕತೆಯ ಪ್ರಯೋಜನವನ್ನು ಪಡೆಯುವ

ಭಾಷೆಯಾಗಿರುತ್ತದೆ. ಆದರೆ ಹೊಸ ಸಾಧ್ಯತೆಗಳು ಈಗ ಮೈದಳೆಯುತ್ತಿವೆ. ಪ್ರಬಲ ಭಾಷೆಗಳನ್ನಾಡುವವರು ಕನ್ನಡವನ್ನು ಬೈಪಾಸ್ ಮಾಡಿ ತಮ್ಮ ಭಾಷೆ ಮತ್ತು ಇಂಗ್ಲೀಷ್‌ನಲ್ಲಿ ದ್ವಿಭಾಷಿಕರಾಗುವ ದಾರಿಯನ್ನು ಹಿಡಿದಿದ್ದಾರೆ. ಇದ–ರಿಂದಾಗಿ ಶಿಕ್ಷಿತರ ಒಂದು ವಲಯ ಈಗ ಕನ್ನಡದ ಯಾವ ಕೌಶಲವನ್ನೂ ಪಡೆಯದಿರುವುದು ಸಾಧ್ಯವಾಗಿದೆ. ಒಂದು ವೇಳೆ ಅಂತಹ ಸಾಮರ್ಥ್ಯವನ್ನು, ಕೌಶಲವನ್ನು 'ಪಡೆದುಕೊಳ್ಳುವ' ಒತ್ತಾಯಕ್ಕೆ ಒಳಗಾಗಿದ್ದರೂ ಆ ಕೌಶಲದ 'ಬಳಕೆಯ' ಸನ್ನಿವೇಶಗಳು ಈಗ ಇಲ್ಲವಾಗುತ್ತಿವೆ. ಹೀಗೆ ಕನ್ನಡವನ್ನು ಮೀರಿ ನಿಭಾಯಿಸುವವರು ನಗರಗಳಿಗೆ ಸೀಮಿತವಾಗಿದ್ದರೆಂದು ಅನ್ನಿಸುತ್ತದೆಯಾದರೂ ಬರಲಿರುವ ದಿನಗಳಲ್ಲಿ ಈ ಬಗೆಯ ಜನರ ಸಂಖ್ಯೆ ಮತ್ತು ವ್ಯಾಪ್ತಿ ಅಧಿಕಗೊಳ್ಳುವ ಸಾಧ್ಯತೆ ಇದೆ. ಕನ್ನಡವನ್ನು ಮೊದಲ ಭಾಷೆಯಾಗಿ ಹೊಂದಿರುವ ಆದರೆ ಇಂಗ್ಲೀಷ್ ಭಾಷೆಯನ್ನು ಕಲಿತು ದ್ವಿಭಾಷಿಕರಾಗಿರುವವರು ಕನ್ನಡದ ಬಳಕೆಯನ್ನು ಕೇವಲ ಮೌಖಿಕ ನೆಲೆಗೆ ಸೀಮಿತಗೊಳಿಸಿಕೊಳ್ಳುವುದು ಹೆಚ್ಚಾಗುತ್ತಿದೆ. ಅಂದರೆ ಕನ್ನಡವನ್ನು ಮಾತನಾಡಿದರೂ ಅದನ್ನು ತಮ್ಮ ಬರವಣಿಗೆಯ ನೆಲೆಗೆ ತರುವುದು ನಿಧಾನವಾಗಿ ಕಡಿಮೆಯಾಗುತ್ತಿದೆ. ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಕನ್ನಡ–ಇಂಗ್ಲೀಷ್ ದ್ವಿಭಾಷಿಕರು ಮತ್ತು ಕನ್ನಡೇತರ ಭಾಷೆ ಇಂಗ್ಲೀಷ್ ದ್ವಿಭಾಷಿಕರು ಜತೆಯಾಗಿಯೇ ಕನ್ನಡದ ಬಳಕೆಯ ವಲಯವನ್ನು ಸೀಮಿತಗೊಳಿಸುತ್ತಿದ್ದಾರೆ. ಈ ವಲಯದಲ್ಲಿ ಕನ್ನಡದ ಬಳಕೆ ಹೆಚ್ಚಲು ಯಾವ ಕ್ರಮ ಕೈಗೊಳ್ಳಬೇಕು ಎಂಬುದು ಮುಂದಿನ ದಶಕಗಳಲ್ಲಿ ಒಂದು ಸವಾಲಾಗಲಿದೆ.

*–ಆಕರ: ನಮ್ಮೊಡನೆ ನಮ್ಮ ನುಡಿ–ಡಾ. ಕೆ.ವಿ.ನಾರಾಯಣ*

# 2. ಆಕಾಶ


| | | | |
|---|---|---|---|
| 2.1 | ಚಂದ್ರನನ್ನು ಕರೆಯಿರಿ ಭೂಮಿಗೆ | –ಡಾ. ಸವಿತಾ ನಾಗಭೂಷಣ | 033 |
| 2.2 | ಬೆಳುದಿಂಗಳು | –ವಿ. ಸೀತಾರಾಮಯ್ಯ | 035 |
| 2.3 | ನಭೋಮಂಡಲದ ದಾರಿದೀಪಗಳು | –ಮೂಲ: ಬಿಮಾನ್ ಬಸು. ಕನ್ನಡಕ್ಕೆ: ಕೊಳ್ಳೇಗಾಲ ಶರ್ಮ | 045 |
| 2.4 | ಓದು ಪಠ್ಯ: ಉಲ್ಕೆಗಳು, ಧೂಮಕೇತುಗಳು | –ಡಾ. ಬಿ.ಎಸ್. ಶೈಲಜ | 050 |

# 2. ಆಕಾಶ

**ಆಶಯ**

ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅನಂತ ವಿಚಿತ್ರ ಭುವನಂಗಳಡಗಿಪ್ಪವಯ್ಯಾ,
'ಆಲಯಂ ಸರ್ವ ಭೂತಾನಾಂ ಲಯನಾಂಗಮುಚ್ಛತೆ'ಎಂಬುದಾಗಿ
ಅನಂತಕೋಟಿ ಬ್ರಹ್ಮಾಂಡಗಳು ನಿಮ್ಮ ರೋಮಕೂಪದೊಳಗೆ ಅಡಗಿಪ್ಪವೆಂದಡೆ
ಬ್ರಹ್ಮ ವಿಷ್ಣು ರುದ್ರ ಇವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು
ಇವರೆತ್ತ ಬಲ್ಲರೋ ಲಿಂಗದ ನಿಜವ? ಅಪ್ರಮಾಣವಗೋಚರ ಮಹಾಂತ
ನಿಮ್ಮ ನಿಜದೊಳಗನಾರು ಬಲ್ಲರಯ್ಯಾ ಸೌರಾಷ್ಟ್ರ ಸೋಮೇಶ್ವರಾ?

–ಆದಯ್ಯನ ವಚನ

## 2.1 ಚಂದ್ರನನ್ನು ಕರೆಯಿರಿ ಭೂಮಿಗೆ

**–ಸವಿತಾ ನಾಗಭೂಷಣ**

1
ಪುಟ್ಟ ಮಕ್ಕಳು ಚಂದ್ರನನ್ನು
ಕರೆಯುತ್ತಿದ್ದಾರೆ ಭೂಮಿಗೆ.

ನಾನೂ ಮಗುವಾಗಿದ್ದಾಗ
ಮೊಗ್ಗಿನಂತಹ ಬೆರಳುಗಳನ್ನು
ಮಡಿಸಿ ಅರಳಿಸಿ
ಚಂದ್ರನನ್ನು ಕರೆದಿದ್ದೆ ಭೂಮಿಗೆ.
ನನ್ನ ತಮ್ಮಂದಿರು, ತಂಗಿ
ಗೆಳೆಯ ಗೆಳತಿಯರು
ಯಾರೆಲ್ಲ ಕರೆದಿದ್ದರು.
ಭೂಮಿಗೆ.

ಗೂಡಲ್ಲಿ ಕಣ್ಣರಳಿಸಿ
ಕೂತಿರುವ ಮರಿಹಕ್ಕಿ
ನದಿಯೊಳಗೆ ಈಸುತ್ತಿರುವ
ಮರಿ ಮೀನು, ಯಾರೆಲ್ಲ
ಕರೆದಿದ್ದರು ಚಂದ್ರನನ್ನು ಭೂಮಿಗೆ.

2
ಅಂದು ತೊದಲು ನುಡಿಯುತ್ತಿದ್ದ
ಮರಿಕೋಗಿಲೆ ಇಂದು
ಪಂಚಮದಲ್ಲಿ ಹಾಡಿದೆ.
ಅಂದು ನದಿಯೊಳಗೆ ಈಸುತ್ತಿದ್ದ
ಮರಿ ಮೀನು ಇಂದು
ಸಮುದ್ರವ ಸೇರಿದೆ.

ಅಂದು ಚಂದ್ರನನ್ನು ಕರೆಯುತ್ತಿದ್ದ
ನನ್ನ ಬೆರಳುಗಳು ಇಂದು
ಭೂಗೋಳ, ವಿಜ್ಞಾನ ಪುಸ್ತಕಗಳ
ಪುಟ ತಿರುವಿ ಒರಟಾಗಿವೆ.

3

ಮುಗಿಲು ಮಟ್ಟ ನಿಂತಿರುವ ಹೆಮ್ಮರ
ಮೊಳಕೆಯೊಡೆದ ದಿನಗಳನ್ನು
ಮೆಲುಕು ಹಾಕುವ ಹಾಗೆ
ನಾನೊಮ್ಮೆ ಹಿಂದಿರುಗಿ ನೋಡಲೆ?

ಆಸೆ, ದುಃಖ, ಹರ್ಷ, ವಿಷಾದದ
ಎಲೆಗಳನ್ನು ಕಳಚಿಕೊಂಡು
ಧ್ಯಾನದಲ್ಲಿರುವಂತಿದೆ ಮರ
ನೋಡಿಯೂ ಸುಮ್ಮನಿರಲೆ?

ಕಂದಮ್ಮಗಳೆ...
ಕೇಕೆ ಹಾಕಿ ಕುಣಿಕುಣಿದು
ಕರೆಯಿರಿ ಚಂದ್ರನನ್ನು ಭೂಮಿಗೆ.
ಹೂವಿನ ಹಾಗೆ ಬೆರಳುಗಳನ್ನು
ಅರಳಿಸಿ ನೀವೇ
ಕರೆಯಿರಿ ಚಂದ್ರನನ್ನು ಭೂಮಿಗೆ.

ನಾನು ನಾನಿರುವಂತೆಯೇ
ನೋಡುವೆ ಒಂದು ಘಳಿಗೆ.

*ಆಕರ – ಶತಮಾನದ ಕಾವ್ಯ*

## 2.2 ಬೆಳುದಿಂಗಳು

**–ವಿ. ಸೀತಾರಾಮಯ್ಯ**

ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು ಎಂದರು ರಾಯರು. ಅಲ್ಲ, ಹಿಟ್ಟು ಚೆಲ್ಲಿದ ಹಾಗಿದೆ ಎಂದರು ಪಾಟೀಲರು. ಜಗಳವೇಕೆ? ಎರಡೂ ಸರಿ, ಎರಡೂ ಸರಿಯಲ್ಲ ಎಂದರು ಅಯ್ಯನವರು. ಮೂವರೂ ಬುದ್ಧಿವಂತರೇ ಹಾಲು ಚೆಲ್ಲಿದರೆ ಇಂಗಿ ಹೋಗದೆ ನೆಲದ ಮೇಲೆ ನಿಲ್ಲುತ್ತದೆಯೆ –ನಮ್ಮಕಾಲದ ಹಾಲು? ಹಿಟ್ಟು ಚೆಲ್ಲಿದರೆ ನಿಲ್ಲಬಹುದಲ್ಲ? ಆದರೆ ಎಷ್ಟು ಹಿಟ್ಟು ಚೆಲ್ಲಬೇಕು ಬೆಳದಿಂಗಳಂತೆ ನೆಲಸು ಕಾಣಬೇಕಾದರೆ? ಹಾಲೊ ಹಿಟ್ಟೊ ಚೆಲ್ಲಿದಂತೆ ಎಂದಾಯಿತು. ನಮಗೆ ಬೇಕಾದುದು ಬೆಳ್ಳಗಿನ ಕವಿದ ಕಾಂತಿ. ಹಾಲು ಹಿಟ್ಟು ಎರಡೂ ಬಿಳುಪು. ಇದು ಎಲ್ಲರಿಗೂ ಕಂಡದ್ದು; ಅರ್ಥವಾಗುವುದು. ಆದ್ದರಿಂದ ಹಾಗೆ ಹೇಳುತ್ತಾರೇನೊ. ನೀವು ಬೇಕಾದರೆ ಬೇರೆ ರೀತಿ ಹೇಳಿ. ಚೆನ್ನಾಗಿದ್ದರೆ ಅದೂ ಸರಿಯಾಗುವುದು. ಅಲ್ಲದೆ ಆಡುವ ಪ್ರತಿಯೊಂದು ಮಾತನ್ನು ಅಳೆದು, ತೂಗಿ, ತರ್ಕಬದ್ಧವಾಗಿ, ಯುಕ್ತವಾಗಿ ನುಡಿಯಬೇಕೆಂದರೆ ಸಾಗುತ್ತದೆಯೆ? ಯಾಕೆ ನಿರ್ಬಂಧ ಮಾಡುತ್ತೀರಿ? ಅದು ಪಂಡಿತ ಬುದ್ಧಿಯೇ ಹೊರತು ಸಾಮಾನ್ಯರದ್ದಲ್ಲ. ನಮ್ಮ ಬದುಕನ್ನು ಕಷ್ಟಮಾಡಬೇಕು ಎಂಬುದು ವಿದ್ವಾಂಸರಾದ ಅವರ ಚಟ. ನಮ್ಮಂಥ ಸಾಮಾನ್ಯರ ಕಣ್ಣಿಗೆ ಕಟ್ಟಿದಂತೆ ಯಾವುದೋ ಚಿತ್ರಬೇಕು. ಚಿತ್ರ ಚೆಲುವಾಗಿದ್ದರೆ ಸಾಕು. ಉಳಿದುದನ್ನು ಹೇಗೊ ಕಲ್ಪಿಸಿಕೊಳ್ಳುತ್ತೇವೆ. ಬೆಳುದಿಂಗಳ ಗುಣ ಎಲ್ಲೆಲ್ಲೂ ಚೆಲ್ಲಿದ ಬಿಳುಪು. ಹಾಲಿನದಾದರೇನು? ಹಿಟ್ಟಿನದಾದರೇನು? ಹತ್ತಿಯದಾದರೇನು? ಅದರಲ್ಲಿಯೂ ಶುಕ್ಲ ಚತುರ್ದಶಿ, ಹುಣ್ಣಿಮೆ, ಬಹುಳ ಪಾಡ್ಯಮಿ ಮುಂತಾದ ದಿನ ರಾತ್ರಿಯ ಬೆಳುದಿಂಗಳ ಬಿಳುಪೇ ಬಿಳುಪು. ಆ ನುಣುಪು, ಅಲ್ಲಿಯ ತಂಪು ಕಾಂತಿ ಎಷ್ಟು ಸೊಗಸಿನದು!

ಬೆಳುದಿಂಗಳು ಒಂದೊಂದು ಋತುವಿನಲ್ಲಿ ಒಂದೊಂದು ಬಗೆಯ ಚೆನ್ನು. ಒಂದು ವಸಂತದಲ್ಲಿ ನೋಡಿ : ಹಗಲೆಲ್ಲ ನೆಲದಿಂದ ಜಿಗಿದೆದ್ದು ಕಾಣುವ ಹಸುರು ನೆಲಸು. ಗಿಡಗಳ ಬಣ್ಣ ಬಣ್ಣದ ಚಿಗುರು. ಜೊಂಪೆ ಹೂವಿನ ಹುಚ್ಚು. ಮರಗಳ ಮೇಲಿದ್ದು ಕೂಗುವ ಕೋಗಿಲೆಯ ರಂಪು ಕುಕಿಲು. ಇವುಗಳ ಸಂಗ ರಾತ್ರಿ ಕಣ್ಣಿಗೆ ಕಾಣಿಸದು. ಕೋಗಿಲೆಯೂ ದಣಿದು ರಾತ್ರಿಗೆ ನಿದ್ರೆ ಹೋಗಿರುತ್ತದೆ. ಆ ಸೊಗಸೆಲ್ಲ ನಮಗೆ ಹಗಲ ನೆನಪಿನೊಡನೆ ಹೆಣೆದುಕೊಂಡದ್ದು, ಚಂದ್ರನಿಗೆ ಅಂಥ ನೆನಪಿದೆಯೋ ಇಲ್ಲವೋ ನಾನು ಹೇಗೆ ಹೇಳಲಿ? ಇದ್ದೀತು. ತನ್ನ ಆಳಿಕೆಯ ರಾತ್ರಿಯಲ್ಲಿ ಅದಕ್ಕೆ ಸಮನಾದ ಶಾಂತಿ, ಸುಖ, ಚೆಲುವು, ಸವಿಗಳನ್ನು ನಾನು ಕೊಡುತ್ತೇನೆ. ನೋಡಿ ಎಂಬಂತೆ ಬೆಳುದಿಂಗಳ ಹುರುಡು ಹಬ್ಬಿಸುತ್ತಾನೆ,

ಲೋಕದ ಮೇಲೆ ಕಾಮನ ಹಬ್ಬ ಆಗತಾನೆ ಮುಗಿದಿರುತ್ತದೆ. ಮುಂದೆ, ಚಿತ್ರಾಪೂರ್ಣಿಮೆಯಲ್ಲಿ ಹೊಲಮನೆ, ಗದ್ದೆತೋಟ, ಕೆರೆ ಕಾಲುವೆ, ಬೆಟ್ಟ ಎಲ್ಲದರ ಮೇಲೆಯೂ ಬೆಳುದಿಂಗಳು ಒಡ್ಡಿದ ಉತ್ಸವ, ಆಗಲೇ ಎಲ್ಲ ರಥೋತ್ಸವ, ಜಾತ್ರೆ, ಬಿಳಿ ಎತ್ತುಗಳ ಪರಿಷೆ ಮೊಸರನ್ನದ ಊಟ, ನಮ್ಮೂರ ಕರಗ, ಬೆಳ್ಳಗಿನ ದುಂಡುಮಲ್ಲಿಗೆಯ ತೇರು ಕಟ್ಟಿದ ಹಾಗೆ ಕಳಸದ ಸುತ್ತ ಶಿಲ್ಪವನ್ನು ಬುಟ್ಟಿ ಕಟ್ಟಿ, ಸುನೇರಿ ಕೆತ್ತಿ, ತಲೆಯ ಮೇಲೆ ಹೊತ್ತು ಹುಣ್ಣಿಮೆಯ ರಾತ್ರಿ ಕರಗದ ಪೂಜಾರಿ ಧರ್ಮರಾಯನ ಗುಡಿಯಿಂದ ಹೊರಟು ಬೆಂಗಳೂರಲ್ಲಿ ಒಂಬತ್ತು ಬಾಗಿಲಲ್ಲೂ ತಿರುಗಾಡಿದರೆ ಬಾನಲ್ಲಿ ಸುಳಿದಾಡುವ ಚಂದ್ರನ ಸಂಚಾರಕ್ಕೆ ಇಂಬುಕೊಟ್ಟು ನಡೆಯುವ ಹೂವಿನ ತೇರು ನಕ್ಷತ್ರಗಳದೇ ಈ ಮೆರೆತ. ಬಾನು ಇನ್ನಾವ ಹೆಚ್ಚಳದ ಉತ್ಸವ ತೋರೀತು?

ಯಾವ ನಿಯಮವನ್ನೊ ಹೊತ್ತು ನಕ್ಷತ್ರಗಳು ಸರದಿ ಸುತ್ತುತ್ತಿರುತ್ತವೆ ತಮ್ಮ ತಮ್ಮ ಅಕ್ಷರಗಳ ಮೇಲೆ; ತಮ್ಮ ಮಾಂಡಲಿಕ ಗ್ರಹಗಳ ತಾರೆಗಳ ದಿಬ್ಬಣದಲ್ಲಿ, ಆ ಪಥವನ್ನು ದಾಟಿ ಪ್ರತಿ ಬೆಳುದಿಂಗಳ ದಿನವೂ ಚಂದ್ರ ತನ್ನ ಸವ್ವಾರಿ ನಡೆಸಿ ಆಕಾಶದಲ್ಲಿ ಬೆಳಗುವಂತೆ ಕಾಣುತ್ತದೆ. ಜನರ ಕಣ್ಣಿಗೆ ಕಾಣುವುದು ಆತನ ಮೆರವಣಿಗೆ. ನಕ್ಷತ್ರಗಳು ಆತನ ಪರಿವಾರ, ಅವನು ರಾಜ, ಅವನ ಮಂದಹಾಸದಿಂದ ನಲಿವ ಸಭಾಸದರಂತೆ ತಾರೆಗಳು ನಡೆದುಕೊಳ್ಳುತ್ತವೆ. ನಿಜ ಏನೇ ಇರಲಿ ಚಂದ್ರಗ್ರಹವೆಲ್ಲಿ? ನಕ್ಷತ್ರಗಳೆಲ್ಲಿ? ಕೋಟಿಕೋಟಿ ಮೈಲಿಗಳ ದೂರದಲ್ಲಿ ನಮ್ಮ ಸೂರ್ಯಮಂಡಲದ ನೂರಾರಷ್ಟು ಪ್ರಭಾವದಿಂದ ಉರಿವ ಮೇಲಿನ ತೇಜೋರಾಶಿಗಳು ಅವು. ಆ ಸಂಪರ್ಕದಲ್ಲಿ ಬಡಗ್ರಹವಾದ ಚಂದ್ರಮಂಡಲ ನಿಜವಾಗಿ ಕ್ಷಾಮದೇವತೆಯಾದೀತು. ಚಂದ್ರನೊ : ನಮ್ಮ ಸೂರ್ಯಮಂಡಲದ ಸುತ್ತ ತಿರುಗುವ ಭೂಮಿಯ ಸುತ್ತ ಪ್ರದಕ್ಷಿಣೆ ಮಾಡಿ ಹೊರಳುವ, ಸೂರ್ಯತೇಜದಿಂದ ಕಳೆಗೊಂಡ ಬೆಂಡುಕಾಂತಿಯ ಪ್ರಾಣಿ. ಲೋಕದ ಕಣ್ಣಿಗೂ; ಚಂದ್ರಮೂರ್ತಿ ರಾತ್ರಿಯ ಕತ್ತಲೆಯನ್ನು ನಗಿಸಿ ಅರಳಿಸುವ ಮಹಾ ಸತ್ವ. ಚಂದ್ರನಿಗೆ ಊಳಿಗವನ್ನು ಮಾಡುವ ಕಿರಿಮಿರುಗು ಚಿಕ್ಕೆಗಳದು, ಅಥವಾ ದೂರದ ಚುಕ್ಕಿಗಳ ಹಿನ್ನೆಲೆಗೆ ಅದು ತುಂಬಿದ ಮಂಡಲದಂತೆಯೂ ಒಂದೊಂದು ಶುಕ್ಲಪಕ್ಷದ ದಿನ ಒಂದೊಂದು ವಿಶೇಷ ಆಕೃತಿಯನ್ನು ರೂಪಿಸಿ ದಿನದಿನಕ್ಕೂ ತುಂಬುವ ಬಿಂಬವನ್ನು ನೇಯುವ ಪೆರೆ.

ತಿಂಗಳ ಮಾವನನ್ನು ಕರೆಯದ ಮಗುವಿಲ್ಲ. ಆ ಮೃದುಕಿರಣದ ಅಮೃತ ಸೇಚನವನ್ನು ಸವಿಯಲು ಆಶಿಸದವರಿಲ್ಲ. ಶಾಂತ, ಶುಭ್ರ, ಹಿತ, ಸ್ನೇಹಪೂರ್ಣತೆ ಚಂದ್ರನದು, ಆತನನ್ನು ನೋಡದ ಕಣ್ಣಿಲ್ಲ. ನೋಡಿ ಸಂತೋಷ ಪಡದ

ಹೃದಯವಿಲ್ಲ. ಅದರ ಒಡಲ ಮೇಲಿನ ಮಚ್ಚೆ ಶಾಸ್ತ್ರಜ್ಞರ ಎಣಿಕೆಯಲ್ಲಿ ಹೇಗೇ ಬಂದುದಾಗಿರಲಿ ಅದರ ಜಿಂಕೆ ಮೈ ನಯನ ಮನೋಹರವಾದದ್ದು. ಚಂದ್ರನ ಚೆಲುವಿಗೆ ಅದು ಹೆಚ್ಚಿಕೆಯನ್ನು ತಂದಿತೇ ವಿನಾ ದೋಷವಲ್ಲ. ಖಂಡಿತ, ಪ್ರಿಯಳ ಮುಖದ ಮೇಲಿನ ಕಪ್ಪು ಮಚ್ಚೆಯಂತೆ – ಮೆಚ್ಚು, ಇರಾನಿನ ಒಬ್ಬ ಕವಿ ಹೇಳಿದನಂತೆ: ತನ್ನ ಪ್ರಿಯೆಯ ಕೆನ್ನೆಯ ಮೇಲಿನ ಮಚ್ಚೆಯ ಚೆಲುವಿಗೆ ಬೊಖಾರ, ಸಮರ್‌ಖಂಡ, ಖಿವಾಗಳನ್ನು ಕೊಟ್ಟೆನೆಂದು. ಅವೆಲ್ಲ ಚೆಲುವಿಗೂ ಮಾತೃಕೆಯಂತಿರುವ ಚಂದ್ರ ಬಿಂಬದ ಈ ಮಚ್ಚೆಗೆ ಇನ್ನಾವುದು ಸರಿಸಾಟಿಯಾದೀತು!......ಎಂಬುದು ಲೋಕಮತ.

ಎಷ್ಟು ಕತೆಗಳು ಚಂದ್ರನನ್ನು ಕುರಿತವು? ಆತನ ಮುಗಿಲಯಾನವನ್ನು ಬಣ್ಣಿಸಿ ಹಿಗ್ಗಿದ ಲೋಕದ ಕವಿಯೇ ಇಲ್ಲ. ಆತನೇ ಸಸ್ಯಗಳ ಪೋಷಕ. ದ್ರಾಕ್ಷೆಯೋ ಕಿತ್ತಳೆಯೋ ರಸವಿಡುವುದೂ ಸವಿಗೂಡುವುದೂ ಆತನಿಂದೆಂಬಂತೆ ಜನ ಆತನನ್ನು ಆರಾಧಿಸುತ್ತಾರೆ. ಅವೆಲ್ಲ ಹೇಗೂ ಇರಲಿ, ತುಂಬು ಬೆಳುದಿಂಗಳ ವೈಭವದ ಮುಂದೆ ಲೋಕ ಇನ್ನಾವ ಸಿಂಗಾರವನ್ನು ಹಿಡಿದು ನಿಲ್ಲಿಸೀತು?

ಬಸವನ ಗುಡಿಯ ನೆರೆ, ಮೈದಾನದ ಬ್ಯೂಗಲ್‌ರಾಕಿನ ಶಿಖರದಲ್ಲಿ, ಚಂದ್ರಿಕಾ ಧವಳತೆಯಲ್ಲಿ, ಬೆಳುದಿಂಗಳ ಸೇವನೆ ತುಂಬಾ ಹಿತ, ಮೇಲೆ ಆಕಾಶದಲ್ಲಿ ಕೆಳಗೆ ಭೂಮಿಯಲ್ಲಿ; ನಮ್ಮೂರಲ್ಲಿ, ಆ ಹಳೆಯ ನಕ್ಷತ್ರ ಕಾಂತಿಯದು ಏನು ಮಹಾಕಾಂತಿ? ಅವುಗಳ ಮಿರುಗು ಬಿರು ಮಿರುಗು, ಸೂಜಿಯ ಚುಚ್ಚಿನಂತಿ–ರುವುದು. ಕಣ್ಣನ್ನು ಚುಚ್ಚುವುದು. ಆ ಮೊನೆ ಎಲ್ಲಿಯವೊ ಎಷ್ಟು ಕೋಟಿ ದೀಪವತ್ಸರಗಳ ದೂರದವೋ ಯಾರು ಬಲ್ಲರು? ಅವು ಬೆಳಕಿನ ಚುಕ್ಕೆಗಳು ಮಾತ್ರ. ಅವುಗಳ ನಡುವೆಯೂ ಚಂದ್ರನ ನೋಟ ಚೆಲುವೇ. ನಮಗೆ ಹತ್ತಿರದ ಬಂಧು ಚಂದ್ರ, ಇವುಗಳೊಡನೆಲ್ಲ ಸ್ಪರ್ಧೆಹೂಡಿ ಈ ನಮ್ಮ ಬೀದಿಯ ಸಾಲು ಮನೆಗಳಲ್ಲಿ, ಪಕ್ಕದ ರಸ್ತೆಯ ರಾಮದೇವರ ದೇವಸ್ಥಾನದಲ್ಲಿ, ಆಚೆ ಪೇಟೆಯ ಲಕ್ಷ ದೀಪಗಳಲ್ಲಿ, ಬೇರೆ ಊರ, ನದಿಗಳ ಮೇಲೆ ನಡೆಯುವ ಸೊಡರ ಡೋಣಿಯ ಮೆರೆವಣಿಗೆಗಳಲ್ಲಿ ಅವನು ಏನು ಸಂತೋಷ ಸಂಭ್ರಮಗಳ ಹೊಳೆ ಹರಿಸುತ್ತಾನೆ! ಎಷ್ಟು ಜನರ ಹೃದಯ ತೆರವ ಹಬ್ಬ ಕೃತ್ತಿಕೋತ್ಸವ! ಅಲ್ಲಿಂದ ಮುಂದೆ ಮೊದಲು ಓಡಿಬರುವುದು ನವರಾತ್ರಿಯ ಪೂಜೆ ಪುರಸ್ಕಾರ. ಅದೂ ಮುಗಿದರೆ ವಿಜಯದಶಮಿಯ ಕೋಲಾಹಲ ಮೆರೆದು ಸೀಮೋಲ್ಲಂಘನ ಮಾಡುವ ವಿದ್ಯಾರ್ಥಿಗಳ, ವೀರರ, ಅನ್ವೇಷಕರ ಪ್ರಗತಿ ದಾಳಿ. ಹಿಂದಿನ ಕಾಲದಲ್ಲಂತೂ ನಡೆಯುತ್ತಿದ್ದವು. ನೆಲದಲ್ಲಿ ಈ ಉತ್ಕರ್ಷ ಚಿಮ್ಮುತ್ತಿರುವಾಗ ಗಂಗಾನಾಂಗಣದಲ್ಲಿ ತಾರಾಖಚಿತ ನಭದ ಕಾಶೀನೀಲಾಂಬರ ಚಂದ್ರನ ದರ್ಬಾ–

ರಿಗೆ ಮೇಲ್ಕಟ್ಟು ಕಟ್ಟಿದಂತಿರುವ ವೈಭವ, ನವೆಂಬರ್–ಡಿಸೆಂಬರ್ ಬಂದವು ಬನ್ನಿ. ನಕ್ಷತ್ರ ವಿಥಿಯಲ್ಲ ದಿಟ್ಟೈಸಿ ಹುಣ್ಣಿಮೆ ಬೆರಗುಗೊಳಿಸುತ್ತದೆ. ಅದನ್ನು ವರ್ಣಿಸಿ ಹೇಗೆ ಮುಗಿಸುವುದು? ಬೆಳದಿಂಗಳ ಆ ರಸಸ್ರೋತವನ್ನು ಕಣ್ಣಾರೆ ನೋಡುವವನಿಗೆ, ಎದೆತುಂಬಿ ನಲಿಯುವವನಿಗೆ ಅದು ಒಂದು ಅಮೃತಧಾರೆ. ಧಾರೆ ಏನು ಬಂತು ಬೆಳಕು ಸೂಸುವ ಅಮೃತಾವರಣ, ಅಮೃತದ ತೆರೆತೆರೆಯ ಬೆಳಕು ಬಯಲಾದಂತೆ ಎಂದರೆ ಸರಿಯಾಗುತ್ತದೆ.

ಅಮೃತವೆ? ಹೌದು. ಚಂದ್ರನಿಗೂ ಅಮೃತಕ್ಕೂ ನಿತ್ಯಸಂಬಂಧ. ಅವನ ಮೈಯಲ್ಲ ಅಮೃತವಂತೆ. ಅಷ್ಟನ್ನೂ ಹಂಚಿಕೊಡುತ್ತಾನಂತೆ. ತನ್ನ ಹದಿನಾರು ಕಲೆಗಳ ಅಮೃತಸಾರವನ್ನೂ ದೇವತೆಗಳಿಗೆ ಕೊಟ್ಟು ಕೊಟ್ಟು ತಾನು ಬಡವನಾಗುತ್ತಾನಂತೆ. ಕೊಟ್ಟವನಿಗೆ ಏನುಳಿಯಿತು? ಅಮಾವಾಸ್ಯೆಗೆ ಬೆಳೆಯುವ ಕತ್ತಲು! ಮಣ್ಣು ಹುಯಿದುಕೊಳ್ಳಲಿ; ಬುದ್ಧಿ ಬೇಡವೆ ಇವನಿಗೆ; ದಾನವಂತೆ ದಾನ! ದಾನದ ಫಲ ನೋಡಿದಿರೊ ಇಲ್ಲವೂ ಎಂದೀರೇನೊ? ಸ್ವಲ್ಪ ತಡೆಯಿರಿ, ನಾಳೆ ನೋಡುವಿರಂತೆ, ಅಗೋ–ಆ ಕಂಡೂ ಕಾಣದ ಹಾಗೆ ಮಿನುಗುವ ರೇಖೆಯನ್ನು ನೋಡಿದಿರಾ? ಎಳೆಯ ಚಂದ್ರನ ಬೆಳಕಿನ ಎಳೆ ಅದು. ಇನ್ನು ಹದಿನಾಲ್ಕು ದಿನ,–ದಿನದಿನಕ್ಕೂ ಮೈತುಂಬ ಪೂರ್ಣ ಕುಂಭದಂತಾಗುತ್ತದೆ. ಪುನಃ ಅದೇ ಕಂದದ ಬೆಳಕು. ಪುನಃ ಬಿಳುಪು, ಬೆಳಕು. ಅಮೃತ ಕೊಟ್ಟವನಿಗೆ ಚ್ಯುತಿಯಿಲ್ಲ ಕಾಣಿರೋ. ಕೊಡಿ, ಕೊಟ್ಟವರ ಕೈಗೆ ಪುನಃ ಬಂದು ಸೇರುತ್ತದೆ–ಭಾಗ್ಯ. ಬರಿದೆಲ್ಲ ತುಂಬುತ್ತದೆ. ಒಂದು ಕಡೆ ಬರಿದಾದರೆ ಇನ್ನೊಂದು ಕಡೆ ತುಂಬುತ್ತದೆ. ಇದು ತ್ಯಾಗದ ತತ್ವ. ದಾನದ ಮಹತ್ವ. ನಿಮ್ಮ ಹಂಗೇನು ದೇವ–ರಿಗೆ ಒಂದಕ್ಕೆ ಹತ್ತು ಕೊಟ್ಟು ನಿಮ್ಮ ದಾನದ ಹೊರೆ ಇಳಿಸಿಕೊಳ್ಳುತ್ತಾನೆ.

ಚಂದ್ರನ ದಾನದ ಬೆಳದಿಂಗಳಷ್ಟು ಉಪಕಾರ ಇನ್ನಾವುದಕ್ಕಿದೆ ಎನ್ನಲು ಹೋದೆ. ಸೂರ್ಯನಿಗೆ ಇದೆಯೇನು ಈ ಹಿರಿಮೆ? ಅವರದು ಪ್ರಚಂಡತೆ, ಅವನ ದಬ್ಬಾಳಿಕೆಯ ಎದುರು ಯಾರದೇನು ನಡೆದೀತು? ನೀರಿನಲ್ಲಿ ಪ್ರತಿಫಲಿಸಿದ ಆತನ ಬಿಂಬವನ್ನು ದಿಟ್ಟಿಸಲಾದೀತೆ? ಅವನನ್ನು ಕಾಣಬಯಸಿದ ಕಣ್ಣು ಕುರುಡಾಗುತ್ತದೆ! ಅವನದು ಉರಿವ ತೇಜಸ್ಸು; ಚಂದ್ರನದು ಸೌಮ್ಯಾಧಿಕಾರ. ಮೃದು ನಯ. ಚಂದ್ರನು ಎಲ್ಲರ ಪ್ರಿಯ ಬಂಧು. ಸೂರ್ಯನ ತಾಪವೋ ಅವನಿಡುವ ಬೇಗೆಯೊ ತರುವ ಬೆವರೊ ಉಬ್ಬಸವೊ ತಡೆಯುವುದು ಕಷ್ಟ. ಅವನ ಹಂಗಿನದು ಚಂದ್ರಕಾಂತಿ ಎನ್ನುವಿರಿ ಬಲ್ಲೆ. ಇರಬಹುದು. ಯಾರ ಹಂಗು ಯಾರದಾದರೆ ನಮಗೇನು? ಇನ್ನೊಬ್ಬರ ಹಂಗಿಲ್ಲದೆ ಯಾವ ಮಾನವ ಬಾಳು ಬದುಕೀತು? ನಾವು ಹಿಂದಿನ ಕಾಲದ ಕಲೆಗಾರರು,

ಕವಿಗಳು, ನಾಟಕಕಾರರು, ಸಂಗೀತಗಾರರು, ನರ್ತಕರು, ಪ್ರಣಯಿಗಳು, ಸಂಸಾರಿಗಳು ಲೋಕದ ಸಾಮಾನ್ಯ ಹರ್ಷ ಪಡುವ ಜನ. ನಮಗೆ ಚಂದ್ರನ ಬೆಳುದಿಂಗಳು ಸುಖವನ್ನೂ ನೆಮ್ಮದಿಯನ್ನೂ ಸ್ಫೂರ್ತಿಯನ್ನೂ ಕೊಡುವ ಹಾಗೆ ಸೂರ್ಯನೇನು ಕೊಟ್ಟಾನು? ನಮ್ಮ ಸತ್ವವನ್ನು ಹೀರಿ ಒಣಗಿಸುವ ದಾರುಣ ಶಕ್ತಿ ಅವನದು. ಪರಮಪುರುಷನಿಗೆ ಒಂದು ಕಣ್ಣು ಅವನಾದರೆ ಇನ್ನೊಂದು ಕಣ್ಣು ಚಂದ್ರನೆಂಬುದನ್ನು ಮರೆಯಬೇಡಿ. ಉರಿ, ತಂಪು ಎರಡು ನೋಟಗಳೂ ಬ್ರಹ್ಮದ್ದೇ ಅಲ್ಲವೇ ಮತ್ತೆ?

ಯಾವ ಕವಿ ಸೂರ್ಯನ ತಾಪಕ್ಕೆ ಒಲಿದಿದ್ದಾನೆ ? ವಾಲ್ಮೀಕಿಗೆ ಕೂಡ ಗ್ರೀಷ್ಮ ತಾಪ ಗಾಸಿಯನ್ನೇ ಕೊಟ್ಟಿದೆ. ಆದರೆ ಯಾವ ಚಿತ್ರಗಾರ ಚಂದ್ರನ ಚಿತ್ರವನ್ನು ಬಿಡಿಸಿಲ್ಲ? ಯಾವಜೊತೆ ಪ್ರಣಯಿಗಳಿಗೆ ಚಂದ್ರಕಾಂತಿ ಪ್ರೀತಿಯದಲ್ಲ? ಬದುಕಿಗೆ ತಂಪು, ಸಂತೋಷ ಉಂಟಾಗುವುದೂ ಪ್ರೇಮ ಊರುವುದೂ ಉಸಿರುವುದೂ ಮನಸ್ಸನ್ನು ಒಲಿಸುವುದೂ ಬೆಳುದಿಂಗಳ ರಾಗರಂಜನೆಯಲ್ಲಿಯೇ ಅಲ್ಲವೆ? ನಮ್ಮ ತಾಯಿ ನಮ್ಮನ್ನೆಲ್ಲ ಸುತ್ತ ಕೂಡಿಸಿಕೊಂಡು ಕೈತುತ್ತು ಹಾಕುತ್ತಿದ್ದುದು ಬೆಳುದಿಂಗಳಲ್ಲಿ. ಪಕ್ಕದ ಮನೆಯಲ್ಲಿ ಸಂಗೀತ ಕಚೇರಿ ನಡೆಯುವುದು ಇಂಥ ರಾತ್ರಿಗಳಲ್ಲಿ, ನಾವು ನೀವು ಅಕ್ಕಿ ಹೆಬ್ಬಾಳದ ಹತ್ತಿರ ಹೇಮಾವತಿಯ ತಿರುವಿನ ಮೇಲೆ, ಬಾರಕೂರಲ್ಲಿ ಸೀತಾ ನದಿಯ ಮೇಲೆ, ಕಾಶಿಯ ಗಂಗಾಲಹರಿಯಲ್ಲಿ, ಈ ದಡದಿಂದ ಆ ದಡಕ್ಕೊ ಉದ್ದಕ್ಕೊ ಸಂಚಾರ ಮಾಡಿದ್ದಾವಾಗ? ಬೆಳುದಿಂಗಳ ರಾತ್ರಿಯಲ್ಲಿ. ತಾಜಮಹಲಿನ ಅಮೃತಶಿಲ್ಪವನ್ನು ಕಂಡದ್ದು ಯಾವಾಗ? ಅಂಥ ಒಂದು ರಾತ್ರಿಯೇ. ಕರ್ಮ ಅವನನ್ನು ತಿನ್ನುತ್ತಿತ್ತು ನಿಜ; ಆದರೆ, ಅಯ್ಯೋ ಪಾಪ, ಮಗನ ನಿಷ್ಠುರನಿರ್ಬಂಧದಲ್ಲಿ ಸೆರೆಬಿದ್ದ ಷಾಹಜಹಾನನು ಬೆಳುದಿಂಗಳ ಇರುಳಲ್ಲಿ ಆ ತಾಜಮಹಲನ್ನು ನದಿಯ ಮೇಲೆ ಬೇರೆ ದಡದಲ್ಲಿ ಕುಳಿತು ಹೇಗೆ ನೋಡಿ ನಿಟ್ಟುಸಿರು ಬಿಡುತ್ತಿದ್ದನೋ!

ವಿರಹದಲ್ಲಿಯೇ ಶೃಂಗಾರ ಹೆಚ್ಚೆನ್ನುತ್ತಾರೆ. ಅಗಲಿದ ನಲ್ಲರ ಪಾಲಿಗೆ ಬೆಳುದಿಂಗಳು ಬಿರುಸು; ನೆರವಾಗದು. ವಿರಹದ ಮೊನೆಗೆ ತಿಂಗಳ ಸರಸ ದುಸ್ಸಹ. ಬೆಳುದಿಂಗಳಲ್ಲಿ ಯಾರು ಜೊತೆಯಾಗಿರಬೇಕೊ ಅಂಥವರು ಎಲ್ಲೋ ಬೇರೆ ಇದ್ದು ತಪ್ಪಿಸಬೇಕಾಗುವ ಅಗತ್ಯ ನಿಟ್ಟುಸಿರ ಅವುಗೆಯನ್ನೇ ಹೊತ್ತಿಸುತ್ತದೆ. ಇದು ಲೋಕದ ಅನುಭವದ ಮಾತು. ಬೇಟ ಫಲಿಸುವಾಗ, ಪ್ರಿಯ ಪ್ರೇಯಸಿಯರ ಸಂಗದಲ್ಲಿ, ವನದಲ್ಲಿ, ಸರದಲ್ಲಿ, ಸರಸದಲ್ಲಿ, ಸಲ್ಲಾಪದಲ್ಲಿ Heart-handfast In heart ಎಂದು ಕವಿ ಬರೆದಂತೆ, ಹಸ್ತಲಾಘವದಲ್ಲಿಯಂತೆ ಹೃದಯವನ್ನು ಹೃದಯ ಹಿಡಿದಾಗ– ಕಡೆಗಣಿಸತಕ್ಕದ್ದೇನು? ಆಗ–ವಿರಹದ ಬೇನೆ ಮುಗಿದು

ಮೊನ್ನೆಯ ಮರೆತ ಬೇಸರವಾಗುತ್ತದೆ. ಅಗಲಿಕೆಯ ಗಾಯ ಮಾಯ್ದು ಹಾಯೆನ್ನಿಸುತ್ತಿರುತ್ತದೆ. ಚಂದ್ರನ ಅಮೃತ ಸಾರದಿಂದ, ಕಣ್ಣು, ಹಣೆ, ಕೆನ್ನೆ ಮೃದುವಾಗಿ ಮಿನುಗುತ್ತಿರಲು ತಕ್ಕೆಯ ಮೈ ಕಾಯುತ್ತಿರುತ್ತದೆ. ಆ ಮುಖ, ಆ ಸ್ಪರ್ಶ, ಓ–

ಇನ್‌ಪೆರತಾವುದು ಸಂಸಾರ ಸರ್ವಸ್ವ ಫಲಂ।

ಬೆಳುದಿಂಗಳ ಚೆಲುವನ್ನು ಮಾತ್ರ ವರ್ಣಿಸುತ್ತಿದ್ದೀರೆ ಹೊರತು ಅದರ ಅನ್ಯಾಯಗಳು ನಿಮ್ಮ ಎಣಿಕೆಗೆ ಬರುವುದೇ ಇಲ್ಲವೆ? ಬೆಳುದಿಂಗಳ ಬೆಳಕು ಅರೆಬೆಳಕು, ಭ್ರಾಂತಿ ಉಂಟುಮಾಡುವುದು; ಹಳ್ಳ ತಿಟ್ಟು, ಎಲ್ಲ ಒಂದೇ ಸಮನೆಲವಾಗಿ ಕಾಣುತ್ತದೆ; ತಾಯಿನೆಲವನ್ನು ನಂಬಿ ನಡೆಯುವುದಕ್ಕಾಗದು. ಚೆಲುವಲ್ಲದ ಎಷ್ಟೋ ಮುಖ, ಬಣ್ಣ ಚೆಲುವಾಗಿ ಕಂಡು ಮೋಸಗೊಳಿಸುವುದು ಎನ್ನುವಿರೇನೋ? ನಿಜ. ಆದರೆ ಏನು ನಿರ್ಭಾಗ್ಯರು ನೀವು! ಅನಂತ ಭೋಗವುಳ್ಳ ಕ್ಷೀರಸಮುದ್ರದ ನೆಲಸಿನಂತಿರುವ ಚಂದ್ರಿಕಾವಿಲಾಸದಲ್ಲಿ ನಿಮಗೆ ಚಂದ್ರನಕರೆ, ಕಲೆ, ದೋಷ, ಅಸಮತೆ ಮಾತ್ರ ಕಾಣಿಸುತ್ತದೆಯೆ? ನಾನೊಂದು ಪ್ರಶ್ನೆ ಕೇಳುತ್ತೇನೆ: ಎಲ್ಲ ಗಂಡಸರೂ ಮನ್ಮಥರೆ? ಇಲ್ಲ ಎಲ್ಲ ಹೆಂಡತಿಯರು ರತಿಯರೋ? ಆದರೆ ಅವರ ಪ್ರೀತಿ ಪ್ರೀತಿಯಲ್ಲವೊ? ಅವರ ಬಾಳು ಸೊಗಸು ಸೊಗಸು, ಸುಖ ಸುಖ ಅಲ್ಲವೊ? ಅವರು ಒಲಿದ ಒಲವು ಒಲವೇ ಅಲ್ಲವೆ? ಪ್ರೇಮಕ್ಕೆ ರಾತ್ರಿ ಒಗ್ಗಿದುದು. ಅದರಲ್ಲಿ ಬೆಳುದಿಂಗಳ ಸೂಸಲು ಪ್ರೇಮದ ಹೂರಣ. ಅದರ ಸವಿ ಹೂರಣದ ಸವಿ, ಲೋಪ, ದೋಷ, ಅನ್ಯಾಯ ಯಾವುದೇ ಇರಲಿ ಬೆಳುದಿಂಗಳು ನಿಮಗೆ ಬೇಡವೆನಿಸಿದರೆ ಮುಖ ಮುಚ್ಚಿಕೊಳ್ಳಿ. ಬೀದಿಯಲ್ಲಿ, ಬಯಲಲ್ಲಿ, ಉಪವನದಲ್ಲಿ ಸಂಚರಿಸಬೇಡಿ. ಬಾಗಿಲು, ಕಿಡಕಿ ಮುಚ್ಚಿಕೊಂಡು ಕೃತಕವಾಗಿ ಇನ್ನಷ್ಟು ಕತ್ತಲು ಮಾಡಿಕೊಳ್ಳಿ. ನಾವು ತಿಕ್ಕಲು ಜನವೆಂದು ಅಣಿಕಿಸಿ; ತೆಗಳಿ. ಆದರೆ ನಿಮ್ಮಂಥವರ ದೃಷ್ಟಿಯನ್ನು ಕುರಿತು ಹಿಂದೆ ಶಕುಂತಲೆಯ ಸಖಿಯರು ಅವಳಿಗೆ ಹೇಳಿದ ಮಾತುಗಳನ್ನು ಹೇಳಿ ನಿಮ್ಮ ಬಾಯಿ ಕಟ್ಟಬೇಕೆನಿಸುತ್ತದೆ.

'ಕ ಇದಾನೀಂ ಶರೀರಂ ನಿರ್ವಾಪಯಿತ್ರೀಂ ಶಾರದಿಂ ಜ್ಯೋತ್ಸ್ನಾಂ ಪಟಾಂತೇನ ವಾರಯತಿ' ಎಂದ ಅವರ ಮಾತು ನಿಜದ ತಿರುಳು. ಬೆಳುದಿಂಗಳು ಸೂಸಿ ಬರಲು ಅದು ಬೇಡವೆಂದು ಬಟ್ಟೆಯಿಂದ ಮುಖ ಮುಚ್ಚಿಕೊಂಡು ಅದನ್ನು ನಿವಾರಿಸುವ ಮೂರ್ಖರನ್ನು ಏನೆನ್ನೋಣ! ಐಶ್ವರ್ಯ ಸುರಿದಿದೆ ಹೊರಗೆ, ಅದನ್ನು ಸಹಿಸದ, ಒಲ್ಲದ ದರಿದ್ರರನ್ನು, ಅರಸರನ್ನು, ವಿರಸರನ್ನು ದೇವರು ಏಕೆ ಸೃಷ್ಟಿಸುವನೋ!

ನೀವು ಹೇಳಬಹುದು: ಇದೆಲ್ಲ Moonshine ಎಂದು. ನೀವು ಅರೆಕಲಾಗಿ ಇಂಗ್ಲಿಷ್ ಓದಿದವರು. ನಮ್ಮ ಸಂಪ್ರದಾಯಕ್ಕೆ ನಿಮ್ಮದು ವಿರೋಧ. Moonshine ಅಂತೆ! ನಿಮ್ಮ ತಲೆಯಲ್ಲಿ ಚಂದ್ರಹೊಕ್ಕು ನಿಮಗೆ ಹಾಗೆ ತೋರುತ್ತಿರಬೇಕು. ಇಂಥ ಚಂದ್ರ ಹತರನ್ನು ಆಸ್ಪತ್ರೆಗೆ ಕಳಿಸಿ ಚಿಕಿತ್ಸೆ ಮಾಡುವುದು ಒಳಿತು. ಆದರೆ ಆಸ್ಪತ್ರೆಗಳೂ ಪಾಶ್ಚಿಮಾತ್ಯವೇ ಆದ್ದರಿಂದ ಚಂದ್ರಹತರಿಗೆ ತಕ್ಕ ಚಿಕಿತ್ಸೆ ಅಲ್ಲಿ ನಡೆಯುವುದೊ ಇಲ್ಲವೂ. ನಮ್ಮ ಪಂಡಿತರಲ್ಲಿಗೆ ಬನ್ನಿ ಮಾಡಿಸುತ್ತೇನೆ. ಈ ಪಾಶ್ಚಿಮಾತ್ಯ ಪ್ರಜ್ಞಾವಾದಕ್ಕೆ ಹೇಗೆ ಬೆಲೆಗಟ್ಟೋಣ? ಗಂಡನ್ನು ಹೆಣ್ಣು ಮಾಡಿ ಚಂದ್ರನನ್ನು ಅವಳು ಎನ್ನುವ ಗರಿಮೆ ನಿಮ್ಮದು, ನಮ್ಮದಲ್ಲ. ಚಂದ್ರ, ವಸಂತ, ಮನ್ಮಥ ಈ ತ್ರಿಮೂರ್ತಿಗಳ ಕೆಳೆತನದ ಸುಗ್ಗಿಯನ್ನೂ ತುಂಬು ಯೌವನದ ಮೆರೆತವನ್ನೂ ಯೋಗ್ಯತೆ, ಕಲ್ಪನಾಶಕ್ತಿಗಳಿಲ್ಲದ ಜನ ಒಂದು ಹೆಣ್ಣು, ಒಂದು ವಿವೇಕ, ಇನ್ನೊಂದು ಕಾಟಕೊಡದ, ಕುಚೇಷ್ಟೆಯ ಕುರುಡು ಹುಡುಗ ಎಂದು ಭಾವಿಸುವ ಸತ್ಯಾಪಚಾರ ಭಾರತೀಯರ ರುಚಿಗೆ ರುಚಿಸದು. ನಮ್ಮ ಚಂದ್ರ ಅತ್ರಿ ಋಷಿಯ ಮಗ. ನಿಮ್ಮ ಭಾಗಕ್ಕೆ ಋಷಿಗಳಿದ್ದರೆ ತಾನೇ ಈ ಸಂಗತಿ ತಿಳಿದೀತು? ಹೌದು; ಚಂದ್ರ, ರಾಜ ರೋಹಿಣಿ ಅವನ ಹೆಂಡತಿ. ರಾತ್ರಿಯಲ್ಲಿ ಅವರ ದಿಬ್ಬಣ ನೋಡಿ. ಆ ದೌಲತ್ತು ಯಾವ ದಿಲ್ಲಿ ದೀಪಾಂತರದ, ಯಾವ ಬಾಗ್ದಾದ್ ಕಲೀಫನ ದೌಲತ್ತಿಗೆ ಕಡಿಮೆ? ಬೇಕಾದರೆ ಮಹಾಕವಿ ಬಾಣಭಟ್ಟನನ್ನು ಕೇಳಿ. ಅವನ ಕಾದಂಬರಿಯನ್ನು ಓದಿದ್ದೀರಾ? ಪತ್ರಲೇಖೆಯ ಒಡೆಯ, ಕಾದಂಬರಿಯ ಹೃದಯೇಶ್ವರ, ರಮಣ ಚಂದ್ರಾಪೀಡ ಯಾರು ಬಲ್ಲಿರ? ಚಂದ್ರ. ಅವನೇ ಆ ಕಾವ್ಯದ ಹೃದಯದಲ್ಲಿ ಕುಳಿತು ಹಲವರ ಭಾಗ್ಯವನ್ನು ನಡೆಸುವ ಮಹಾದೈವ.

ಇನ್ನು ವಸಂತದ ಉತ್ಸವಗಳೊ! ಭರತಖಂಡದಲ್ಲಿ ವಸಂತದ ಸಿಹಿ, ನಗೆ, ಉಲ್ಲಾಸ, ಚೆಲುವು, ರಂಗುರಂಜನೆ ಚಿಗುರುವ ಅರಳುವ ಚೈತನ್ಯ, ಅದರ ಹೊಸತನ, ಕೋಮಲ ಮೃದುತೆ ಇನ್ನಾವುದಕ್ಕಿವೆ? ನವದಂಪತಿಗಳ ಓಕುಳಿಯ ಆಟ. ವಸಂತದ ಆಟ. ಶುಭ ಸಂಭ್ರಮ, ವಸಂತಕನ ಹಾಸ್ಯ ಇವೆಲ್ಲ ಚಂದ್ರನಿಗೆ ಗೆಳೆಯ ವರ್ಗ. ಅವನ ಪರಮ ಸಖನಾದ ನಮ್ಮ ಮನ್ಮಥನ ದರ್ಬಾರು ಲೋಕದ ಕಣ್ಣ ಹಬ್ಬ, ಸೌಂದರ್ಯದ ಪಾರದರ್ಶನವಾದೀತು. ಅಲ್ಲಿರುವುದು ಎಲ್ಲವೂ ಹದವಾಗಿ ಬಲಿತದ್ದು. ಅದರ ಪಾರುಪತ್ಯ. ಪರಿಣತಗಂಡು ಪಾರುಪತ್ಯ ಬೆಳೆದ ಮನ್ಮಥನ ಹಸುರುಡಿಗೆ, ಗಿಳಿಯ ರಥ, ಕಬ್ಬುಬಿಲ್ಲು, ಪುಷ್ಪಾಸ್ತ್ರ, ದುಂಬಿಗಳ ಓಲಗ ಮಧುರಭೋಗದ ಚರಮಸೀಮೆ. ಕುರುಡುಗಣ್ಣಿನ, ಪಡುವಲ ಆ ಕಿರುಕುಳದ ಚಿಳ್ಳೆಯ ಬೇಜವಾಬ್ದಾರಿಯೆಲ್ಲಿ? ರಾಜ ಚಂದ್ರನ ಜೊತೆಯಲ್ಲಿ ಲೋಕವನ್ನು ದಾಳಿ ಮಾಡಿ ಗೆಲ್ಲುವ ನಮ್ಮ ಮನ್ಮಥನ ಲಲಿತ ಸಾಹಸಗಳೆಲ್ಲಿ? ಸಾವಿರಾರು

ವರ್ಷ ಬೆಳೆದ ಸಂಸ್ಕೃತಿಯ ಫಲವಾದ ಈ ಪಕ್ವತೆಗೂ ಆ ಎಳಸು ಅಪಕ್ವತೆಗೂ ಎಲ್ಲಿಯ ಹೋಲಿಕೆ? ತೆಗೆತೆಗೆ. ನಮ್ಮ ನಿಮ್ಮ ರುಚಿಭೇದ ಧ್ರುವಗಳಷ್ಟು ದೂರ. ನಮ್ಮ ನಾಡಿನ ಮಕ್ಕಳಾದರೆ ನಮ್ಮ ಸಂಪ್ರದಾಯಕ್ಕೆ ಓಲಿ. ಇಲ್ಲಿನ ಸುಖವನ್ನು ನಮ್ಮ ಹಾಗೆ ಅನುಭವಿಸಿ ಚಂದ್ರಯೋಗದ ಸಂತೋಷ ನಿಮಗೆ ದೊರೆಯುತ್ತದೆ. ಇಲ್ಲವಾದರೆ ನಿಮ್ಮ ಕರ್ಮ. ನಿಮ್ಮ ಅದೃಷ್ಟ ಪರದೇಶಿ.

ಚಂದ್ರ ಅಂದೆ; ಬೆಳದಿಂಗಳು ಅಂದೆ. ಚಂದ್ರಲೋಕಕ್ಕೆ ಹೋಗಿ ಅಲ್ಲಿ ವಯ್ಯಾಳಿ ನಡೆಸೋಣವೆಂದು ಈಚೆಗೆ ಆಸೆಯಾಗುತ್ತದೆ. ಅಲ್ಲಿಗೆ ಹೋಗಿ ಬರಬಹುದಂತೆ. ತಾರಾ ಪಥದಲ್ಲಿ ಈಚೆಗೆ ಒಂದು ನಾಯಿ ಕೂಡ ಪ್ರಯಾಣ ಮಾಡಿತಂತೆ. ಅದರ ಚಿತ್ರಗಳನ್ನೂ ನೋಡಿದ್ದೇನೆ. ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಗ್ರಹಯಾನ, ನಕ್ಷತ್ರಯಾನ, ಮಾಡಲು ಅನುಕೂಲಿಸುವಂತೆ ಕಂಪನಿಗಳು ಹುಟ್ಟಿಕೊಳ್ಳುತ್ತವೆ. ಅಂಥವರ ವಿಮಾನ ಹತ್ತಿ ಆಕಾಶಗಂಗೆಯಲ್ಲಿ ಮಿಂದು–ಅದು ನನಗೆ ಬರಿಯ ತಾರಾ ಪುಂಜದಲ್ಲಿ– ಆ ಲೋಕದ ಪ್ರವಾಸ ಮಾಡುವ ಏರ್ಪಾಡು ಬೇಗ ಆಗುತ್ತದೆ. ರಷ್ಯನ್‌ರು ಮಾಡುತ್ತಾರೆ. ಅಮೇರಿಕನ್‌ರು ಆಗುವುದೆಂದಿದ್ದಾರೆ. ಇಂಗ್ಲೀಷರು ಒಪ್ಪಿದ್ದಾರೆ. ಮೂರು ಮಹಾರಾಷ್ಟ್ರಗಳು ಒಪ್ಪಿರುವುದು ಈ ಒಂದು ಸಂಗತಿಯನ್ನೇ. ಅಂತಾರಾಷ್ಟ್ರೀಯ ರಾಜತಂತ್ರದಲ್ಲಿ ಒಮ್ಮತ ಈ ಸಂಗತಿಯಲ್ಲಿ ಸದ್ಯಃ ಸಾಧ್ಯವಾಗಿದೆ. ಅಂಥವರ ತಲೆಯಲ್ಲಿ Moonshine ಇದೆ ಎನ್ನಲು ನಾವು ನೀವು ಎಷ್ಟರವರು? ಅಥವಾ ವಿಜ್ಞಾನಿಗಳು ಅವಿವೇಕಿಗಳು, ಅವರ ತಲೆಯ ತುಂಬ ಬೆಳುದಿಂಗಳಿದೆ ಎನ್ನಲು ನಿಮಗೆ ಧೈರ್ಯ ಉಂಟೇನು? ನಾಲ್ಕು ವರ್ಷ ತಾಳಿ. ಸಾಧನಗಳನ್ನು ಯಂತ್ರಶಿಲ್ಪಿಗಳು ತಯಾರು ಮಾಡುತ್ತಿದ್ದಾರೆ. ನಿಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲಿಗೇ ಹೋಗಿ ನೆಲಸಬಹುದು. ಅಲ್ಲಿ ಹೊಟೇಲುಗಳೂ, ವಿಶ್ರಾಂತಿ ಗೃಹಗಳೂ ವಸಹಾತುಗಳೊ ಆವರೆಗೆ ಏರ್ಪಟ್ಟಿರುತ್ತವೆ. ಈಗಾಗಲೇ ಆ ಸುತ್ತ ಬಾವುಟಗಳು ನೆಟ್ಟು ಹಾರಾಡುತ್ತಿವೆ. ಮುಗಿಯದ ಮುಗಿಲ ಯುದ್ಧಗಳನ್ನು ಹೂಡುವವರು ಚಂದ್ರಗ್ರಹದ ಕಾವಲುಗಳಿಗಾಗಿ ಕಾದಾಡುತ್ತಾರೆ. ರಾಷ್ಟ್ರಗಳ ಬದುಕು ಈಗಾಗಲೇ ಭಯಗಳಿಗೆ ಬಂದಿಯಾಗಿದೆ.

ನಮಗೆ ಅಂಥ ಭಯವಿಲ್ಲ. ನಮಗೆ ಆಕ್ರಮಣ ಬುದ್ಧಿಯಿಲ್ಲ; ಸೊಕ್ಕಿಲ್ಲ. ಲೋಕದ ಸೌಖ್ಯವೆಲ್ಲ ನಮಗೆ ಮಾತ್ರವೇ ದೊರಕಲಿ, ದಕ್ಕಲಿ, ಇನ್ನೊಬ್ಬರಿಗೆ ಬೇಡ ಎಂಬ ದುರಾಸೆಯಿಲ್ಲ. ನಮಗೆ ಬೇಕಾದ್ದು ಬೆಳುದಿಂಗಳು ದೂರದಿಂದ ಸವಿಯುವುದಕ್ಕಿಂತ ಸನ್ನಿಧಿಗೆ ಹೋದರಾಗದೆ ಎಂಬ ಸಣ್ಣ ಚಪಲದಿಂದ ಈ ಎರಡು ಮಾತಾಡಿದ್ದು. ಅದನ್ನು ಯಾರೂ ಕಸಿದುಕೊಳ್ಳಲಾರರು. ನಿಮಗೂ

ಬೇಕಾದರೆ ಹೇಳಿ. ನಮ್ಮಷ್ಟೇ ನಿಮಗೂ ಅದು ದೊರಕುತ್ತದೆ. ಲೋಕದ 300 ಕೋಟಿ ಜನ ಅನುಭವಿಸಿದರೂ ಸಾಕಾಗುವಷ್ಟು ಆಗಿ ಮಿಗುವಷ್ಟು ಹರ್ಷ ದೊರಕುತ್ತದೆ. ಸಾವಿರಾರು ವರ್ಷಗಳಿಂದ ಕೋಟಿಕೋಟಿ ಜನಕ್ಕೆ ದೊರಕಿದೆ. ಭೂಮಿ, ಆಕಾಶ ನಿಲ್ಲುವವರೆಗೂ ಎಲ್ಲರ ಪಾಲಿಗೂ ದೊರಕುತ್ತಿರುತ್ತದೆ. ಈ ಹರ್ಷದಲ್ಲಿ ಎಲ್ಲರೂ ಪಾಲುಗಾರರಾಗಬಲ್ಲರು. ಆ ಭೋಗದಲ್ಲಿ ಯಾರಿಗೂ ಅಸಹನೆಯಿಲ್ಲ; ಈರ್ಷೆ ಇಲ್ಲ. ಸರ್ವತ್ರ ಸಮತೆಯನ್ನು ಸಾಧಿಸುವ ಸಂತೋಷಗಳು ತಾನೇ ದಿವ್ಯ ಸಂತೋಷಗಳು? ಒಬ್ಬರಿಗೆ ಮಾತ್ರ ಲಭಿಸೀತು. ಹೆರರಿಗೆ ಸಲ್ಲದು ಎಂಬ ತತ್ವ ಕಿರಕುಳರ ತತ್ವ. ನಮ್ಮ ಬೆಳದಿಂಗಳನ್ನು ಬಯಸುವವರನ್ನು ಕತ್ತರಿಸಿ ಹಾಕಿಯೇವು ಎಂಬ ಸ್ವಾರ್ಥ ಯಾವ ಕಾಲಕ್ಕೆ ಸರಿಹೋದೀತು? ಎಲ್ಲರಿಗೂ ಹಂಚಿ ಬೆಳಗುವುದು ಈ ಬೆಳುದಿಂಗಳ ಭಾಗ್ಯ. ಇಲ್ಲಿದೆ ಧರ್ಮ ಸ್ವರೂಪ.

ಬನ್ನಿ ಮದರಾಸಿಗೆ; ಪುದುಚೇರಿಗೆ; ಪುರಿ ಜಗನ್ನಾಥಕ್ಕೆ. ಮೂಡಲಿಗೆ ತಿರುಗಿ, ಉದ್ದಕ್ಕೆ ಕಡಲ ಕರೆಯಲ್ಲಿ ಹಾಸಿದೆ ಹೊಯಿದೆ, ಮೈಲಿ ಮೈಲಿ. ನೀವು ನಿಮ್ಮ ಪ್ರಿಯೆ, ನಿಮ್ಮ ಮಗು. ಅಗೋ ಹಗಲ ಕಾಂತಿ ಕಾಂತಿ ಬಂತು. ಇರುಳು ಕವಿದೀತೆಂಬ ಭಯ ಮೂಡುವುದಕ್ಕೆ ಮುಂಚೆಯೇದೂರದ ದಿಗಂತದಲ್ಲಿ ಸಂಜೆಯ ಸಾವಿರ ರಂಗುಗಳ ಮೋಹಕಪರದೆ ಸರಿದು ಕತ್ತಲೆಯ ಯವನಿಕೆ ಲೋಕದ ಮೇಲೆ ಕವಿದಂತೆ ಸರಿಸಿ, ಬೆಳ್ಗಾಂತಿ ಹರಡಿದೆ. ಮುಗಿಲನ್ನು ತೂರಿ ಸುರಿಯುತ್ತಿದ್ದ ಬೆಳ್ಳನೆಯ ಬೆಳಕು. ತುಂಬು ಶಾಂತಿಯದು. ಕಡೆದ ಮಜ್ಜಿಗೆಯ ಬೆಣ್ಣೆಯಂತೆ, ಬೆಣ್ಣೆಯುಂಡೆಯಂತೆ, ಉಕ್ಕಿ ಬರುತ್ತಿದೆ. ಎಲ್ಲ ಮುಗಿಲ ಮುಖವೂ ಬೆಳಗುವಂತೆ. ಇನ್ನೇನು ಆವರಿಸಿತು. ಮುಂದೆ, ಬಲ, ಎಡ, ಹಿಂದೆ ಮೊದಲು ಒಂದು ರೇಖೆ; ಆಮೇಲೆ ಬೋರಲು ಬಾಣಲೆಯಂತೆ ಹೊಂಬೆಳಕಿನ ಒಂದು ಕಾಂತಿಯ ಹಸರ; ಎರಡು ನಿಮಿಷಗಳಲ್ಲಿ ಒಪ್ಪವಿಟ್ಟ ಜಂತದ ದುಂಡುಬಿಂಬ, ಪೂರ್ಣಚಂದ್ರ ಮಂಡಲ ಆಚೆಯ ಆಳದಿಂದ ಎದ್ದು ರೋದೊಂತವನ್ನು ಅವರಿಸಿ ನಿಂತಿದೆ. ಅಲೆ ಆಡಿದ ದಿಗಂತವನ್ನು ಸದ್ದಿಲ್ಲದೆ ಹತ್ತಿ ನಿಮ್ಮೆಡೆಗೆ ಬರುತ್ತಿದೆ ಆ ಮಂಡಲ. ಆಲೆ ಆಡುತ್ತಿದೆಯೊ ಇಲ್ಲವೊ ಯಾರು ಬಲ್ಲರು? ಆಡಿದರೆ ಕಾಣಿಸದು! ಉಳಿದೆಲ್ಲವನ್ನೂ ಮರೆಸುತ್ತದೆ. ಮಗನನ್ನು ಕಂಡು ಕಡಲ ತಾಯಿಗೆ ಏನು ಆನಂದವೊ, ಬಿಂಬ ತನ್ನ ಕಡೆಯಿಂದ ನಮ್ಮ ಕಣ್ಣಿಗೆ ಬೆಳಕಿನ ತಂತಿ ಕಳಿಸುತ್ತಿದೆಯೇನೊ. ಉಹುಂ....ತಂತಿಯಲ್ಲ.ಒಂದು ದೀವಿಗೆಯ ಕಂಬವನ್ನು ಹೊತ್ತಿಸಿ ನಮ್ಮ ಕಡೆಗೆಸೆದಿದೆ. ಕಣ್ಣೆದುರಿಗೆ ಏರುವ, ಇಳಿವ, ಸುಳಿವ, ಉಬ್ಬುವ, ಮೊರೆವ, ನೊರೆವ, ಅಲೆಮಾಲೆ ಕಾಲತಲದಲ್ಲಿ ಅಡಗಿ ಮುದು–ರಿಕೊಳ್ಳುತ್ತದೆ; ಹಿಮ್ಮೆಟ್ಟುತ್ತದೆ. ದಿಗಂತದಿಂದ ನಿಮ್ಮವರೆಗೂ ನಿಲುಕಿ ಉದ್ದ ಉರಿವ ಈ ಬೆಳಕಿನ ಕಂಬ ನೀವಿರುವೆಡೆಗೆ ಚಂದ್ರಬಿಂಬ ಕಟ್ಟಿರುವ ಸೇತುವೆ.

ಸೇತುವೆ ಕಟ್ಟಿಯಾಯಿತು. ಏರಿತು ಕಾಂತಿ. ಸೇತುವೆಯ ಮೇಲೆ ಆಕಾಶದಲ್ಲಿ, ಭೂಮಿಯಲ್ಲಿ, ನೀರಲ್ಲಿ, ನಿಮ್ಮ ಹೊರಗೆ, ಒಳಗೆ ಚೆಲ್ಲಿತು ಇದೇನು ಬೆಳುದಿಂಗಳು!

ಇತ್ತ ನೋಡು ಪ್ರಿಯೆ, ನಮ್ಮ ಪ್ರೀತಿಯ ಕೆಳೆಯನಲ್ಲಾ ಈ ಚಂದ್ರ? ಹೊಸತರಲ್ಲಿ ಅಂದು ನಾವು ಬೆಳುದಿಂಗಳಲ್ಲಿ ರಾತ್ರಿಯನ್ನು ದಣಿಸಿದುದು ನೆನಪಿದೆಯ ನಿನಗೆ? ಚಂದಮಾಮನನ್ನು ನೋಡು ಮಗು. ಮಗುವಿಗೆ ನಿದ್ದೆ ಬಂದಿದೆ ಪಾಪ ನೋಡು. ಈ ಒತ್ತಿಗೆ ಬಾ. ಹಾಲು ಚೆಲ್ಲಿದಂತಿಲ್ಲವೆ ಕಡಲ ನೆಲಸು. ಹಿಟ್ಟು ಚೆಲ್ಲಿದಂತೆ ನೆಲದ ಹರವು!

ಇದು ಹಾಲಗಡಲಿನಾ ಸೀಮಿ
ಚಂದ್ರಮನೆ ಸ್ವಾಮಿ!
ಚಂದ್ರಿಕೀ ಚಂದ್ರವರ ಜೋಢ
ಬೆಳುದಿಂಗಳ ನೋಡ!

ಕೆರೆ, ನಾಡು, ಮನೆ, ಮಾಡು, ಬೀದಿ, ಅಂಗಡಿ ಎಂದೋ ಅಳಿಸಿತು. ಸುತ್ತಲ ಸಾವಿರ ನಮ್ಮಂತಹ ಜೊತೆ ಜನರ ಅರಿವು ಒಬ್ಬರದು ಇನ್ನೊಬ್ಬರಿಗಿಲ್ಲ. ಅವರ ಸೆಲೆಯಿಲ್ಲ. ಸದ್ದಿಲ್ಲ. ಎಲ್ಲರ ಹೃದಯವನ್ನೂ ತುಂಬುತ್ತಿದೆ ಬೆಳುದಿಂಗಳು. ಅದರ ಹಾಸ ಇಂದುಹಾಸ. ಅದರ ಮೌನ, ಅದರ ಸಿಂಗಾರ, ನಾವು, ಅದು ಇಷ್ಟು ಮಾತ್ರ ಸತ್ಯ. ಉಳಿದದ್ದು ಯಾವುದಿದೆಯೋ ಇಲ್ಲವೋ! ಯಾವುದಿದ್ದರೆ ಏನು? ಇಲ್ಲದಿದ್ದರೇನು? ಬೆಳುದಿಂಗಳ ಒಸಗೆ ಭೂಲೋಕಕ್ಕೆ ಚಂದ್ರ ನೆರೆದ ದಾನ. ಸಕಲ ಸೌಭಾಗ್ಯ.

ನೊಳ್ಪಂ ಬೆಲೆಗೊಟ್ಟು ತಾರ ಕೌಮುದಿಯಂ.

*– ಆಕರ: ಶತಮಾನದ*
*ಲಲಿತ ಪ್ರಬಂಧ–ಸಂ. ಗುರುಲಿಂಗ ಕಾಪಸೆ*

## 2.3 ನಭೋಮಂಡಲದ ದಾರಿದೀಪಗಳು

**–ಮೂಲ: ಬಿಮಾನ್ ಬಸು.**
**ಕನ್ನಡಕ್ಕೆ: ಕೊಳ್ಳೇಗಾಲ ಶರ್ಮ**

ಮಿನುಗಲೆ ಮಿನುಗಲೆ ನಕ್ಷತ್ರ!
ನನಗಿದು ಚೋದ್ಯವು ಬಹುಚಿತ್ರ!
ಘನ ಗಗನದಿ ಬಲು ದೂರದಲಿ
ಮಿನುಗುವ ವಜ್ರಾಕಾರದಲಿ

ಈ ಚಿರಪರಿಚಿತ ಪದ್ಯ ಯುಗಯುಗಗಳ ಕಾಲ ತಾರೆಗಳನ್ನು ಕಂಡು ಮಾನವ ಬೆರಗಾಗಿದ್ದಕ್ಕೊಂದು ಉದಾಹರಣೆಯಷ್ಟೆ. ನಿಜವಾಗಿಯೂ, ತಾರೆಗಳು ತುಂಬಿದ ರಾತ್ರಿಯಾಕಾಶದಂತಹ ಬೆರಗಿನ ನೋಟ ನಿಸರ್ಗದಲ್ಲಿ ಮತ್ತೊಂದಿಲ್ಲ. ರಾತ್ರಿಯಾಕಾಶದ ತಾರೆಗಳು ಕಪ್ಪುಹಾಸಿನ ಮೇಲೆ ಚದು–ರಿಬಿದ್ದ ಹೊಳೆವ ಚುಕ್ಕೆಗಳಂತೆ ನಮಗೆ ತೋರಿ ಬರುತ್ತವೆ. ನಮ್ಮ ಪೂರ್ವಜರು ಅವುಗಳನ್ನು ಕಂಡು ಮೊದಮೊದಲಿಗೆ ಅಂದುಕೊಂಡದ್ದೂ ಹಾಗೆಯೇ. ಆದರೆ ಶತಶತಮಾನಗಳ ಕಾಲ ಅದೇ ತಾರೆಗಳನ್ನೇ ನೋಡುತ್ತ ಬಂದವ–ರಿಗೆ ಚೆಲ್ಲಾಪಿಲ್ಲಿಯಾಗಿ ಹರಡಿದ್ದ ತಾರೆಗಳಲ್ಲೂ ಕೆಲವು ವಿನ್ಯಾಸ ತೋ–ರಿಬಂತು. ಮಕ್ಕಳು ಚುಕ್ಕಿಗಳನ್ನು ಕೂಡಿಸಿ ಗೆರೆಯೆಳೆದು ಚಿತ್ರಬರೆದಂತೆ ನಮ್ಮ ಪೂರ್ವಜರೂ ಎದ್ದು ಕಾಣುವ ನಕ್ಷತ್ರಗಳನ್ನು ಅಂಚಿಗಿಟ್ಟು, ಕೆಲವು ಪರಿಚಿತ ವಸ್ತುಗಳನ್ನು ಆಗಸದಲ್ಲಿ ಕಲ್ಪಿಸಿ ಕೊಂಡರು. ಈ ನಕ್ಷತ್ರ ವಿನ್ಯಾಸಗಳನ್ನು – ಇವನ್ನು ನಕ್ಷತ್ರ ಪುಂಜ ಎನ್ನುತ್ತಾರೆ– ನೆನಪಿಡುವುದೂ, ಗುರುತಿಸುವುದೂ ಸುಲಭವಾಗುವಂತೆ ತಮಗೆ ಗೊತ್ತಿದ್ದ ಪ್ರಾಣಿ, ವಸ್ತುಗಳ ಹೆಸರನ್ನೇ ಆ ಕಾಲದ ಜನರು ಅವಕ್ಕಿಟ್ಟರು. ಮೇಷ (ಆಡು–ARIES), ವೃಷಭ(ಎತ್ತು–TAURUS), ಸಿಂಹ (LEO), ವೃಶ್ಚಿಕ(ಚೇಳು–SCORPIO), ಮೀನ(ಮೀನು–PISCES), ಕುಂಭ(ಮಡಕೆ–AQUARIUS), ತುಲಾ(ತಕ್ಕಡಿ–LIBRA) ಇತ್ಯಾದಿ ಹೆಸರುಗಳು ಹುಟ್ಟಿಕೊಂಡದ್ದು ಹೀಗೆ. ಕೆಲವು ನಕ್ಷತ್ರಪುಂಜಗಳಿಗೆ ಸಪ್ತರ್ಷಿಮಂಡಲ, ಆಂಡ್ರಮೆಡಾ, ಸಿಫಿಯಸ್, ಹರ್ಕುಲಸ್ ಇತ್ಯಾದಿ ಪೌರಾಣಿಕ ವ್ಯಕ್ತಿಗಳ ಹೆಸರೂ ಸಿಕ್ಕವು. ತಾರೆಗಳನ್ನು ಹೀಗೆ ನಕ್ಷತ್ರಪುಂಜಗಳಾಗಿ ಗುಂಪಾಗಿಸಿದ್ದು ಅವನ್ನು ಗುರುತಿಸಲು ನಮ್ಮ ಪೂರ್ವಜರಿಗೆ ನೆರವಾಗಿರಬಹುದು. ಹಾಗಂತ ನೀವೆಲ್ಲಿಯಾದರೂ ಈ ನಕ್ಷತ್ರಪುಂಜಗಳಲ್ಲಿ ಆಯಾ ವಸ್ತು–ಪ್ರಾಣಿಗಳ ಆಕಾರ ಹುಡುಕ ಹೋದೀರಿ, ನಿರಾಶರಾಗಬೇಕಾಗುತ್ತದೆ. ಸಿಂಹ, ವೃಶ್ಚಿಕದಂತಹ ಕೆಲವು ಪುಂಜಗಳ ಹೊರತಾಗಿ ಇನ್ಯಾವುದರ ಹೆಸರಿಗೂ, ಅವುಗಳ ವಿನ್ಯಾಸಕ್ಕೂ ಹೋಲಿಕೆಯೇ ಇಲ್ಲ.

ಅದೇನೇ ಇರಲಿ, ಬೇರೆ ಬೇರೆ ಋತುಗಳಲ್ಲಿ ಬೇರೆ ಬೇರೆ ಪುಂಜಗಳಷ್ಟೆ

ಆಕಾಶದಲ್ಲಿ ಕಾಣಿಸುತ್ತಿದ್ದದ್ದು ನಮ್ಮ ಪೂರ್ವಜರಿಗೆ ಕಾಲದ ಹರಿವನ್ನು ಗುರುತಿಡಲು ನೆರವಾಯಿತು. ಬೇಸಾಯ ಇತ್ಯಾದಿ ಕಾರ್ಯಗಳನ್ನು ತಕ್ಕಕಾಲದಲ್ಲಿ ನಡೆಸಲೂ ಅನುಕೂಲವಾಯಿತು. ಸೂರ್ಯೋದಯಕ್ಕೆ ಮೊದಲು ಮೂಡಣದಲ್ಲಿ ಅತಿ ಹೊಳಪಿನ ಸಿರಿಯಸ್ (ಲುಬ್ಧಕ) ಕಾಣಿಸಿದಾಗ ನಾಟಿಗೆ ಸಮಯವಾಯಿತೆಂದು ಈಜಿಪ್ಟಿನ ಜನ ತಿಳಿಯುತ್ತಿದ್ದರು. ಏಕೆಂದರೆ ಅವರ ಬಯಲುಗಳಿಗೆ ಫಲವತ್ತಾದ ಮೆಕ್ಕಲು ಮಣ್ಣು ಹೊತ್ತು ತರುತ್ತಿದ್ದ ನೈಲ್ ನದಿ ಅದರ ನಂತರವಷ್ಟೆ ತುಂಬಿ ಹರಿಯುತ್ತದೆಂದು ಅವರಿಗೆ ತಿಳಿದಿತ್ತು.

ಅಲ್ಲದೇ ನಾವಿಕರಿಗೂ ಇತರೇ ದೂರಪ್ರಯಾಣಿಕರಿಗೂ ಆಗಸದಲ್ಲಿ ಕೈಕಂಭಗಳಾಗಿ ನಕ್ಷತ್ರಪುಂಜಗಳು ನೆರವಾದವು. ಚುಂಬಕ–ದಿಕ್ಸೂಚಿ ಹಾಗೂ ಇತರೆ ನಾವಿಕ ಉಪಕರಣಗಳನ್ನು ಕಂಡು ಹಿಡಿಯುವುದಕ್ಕೂ ಮೊದಲು ದೂರ ಪ್ರಯಾಣಿಕರು ನಕ್ಷತ್ರಗಳಿಂದಲೇ ಹಾದಿ ಗುರುತಿಸುತ್ತಿದ್ದರು. ಇವರಿಗೆ ಧ್ರುವತಾರೆ(THE POLARS) ಉತ್ತರ ದಿಕ್ಕಿನ ಆಕಾಶದಲ್ಲಿ ಎಂದೂ ಕದಲದ ದಾರಿದೀಪವಾಗಿ ನಿಂತಿತ್ತು, ವರ್ಷದ ಬೇರೆಬೇರೆ ಋತುಗಳಲ್ಲಿ ಇತರೇ ತಾರೆಗಳೂ ಪ್ರಯಾಣಿಕರಿಗೆ ದಾರಿತೋರುವ ಕೈಕಂಭಗಳಾಗಿದ್ದವು.

ದಿಕ್ಕುಗುರುತಿಸಲು ತಾರೆಗಳನ್ನೇ ಮಾನವ ಬಳಸಿಕೊಂಡದ್ದೇಕೆ, ಎಂದಿರಾ? ಈ ಪ್ರಶ್ನೆಗೆ ಉತ್ತರ ಕಠಿಣವೇನಲ್ಲ. ತಾರೆಗಳು ಹಾಗೂ ಅವು ರೂಪಿಸಿದ ವಿನ್ಯಾಸ ಎಂದಿಗೂ ಬದಲಾಗದೆ ಒಂದೇ ರೀತಿ ತೋರುತ್ತದೆ. ಆಕಾಶದಲ್ಲಿರುವ ಇತರೇ ಕಾಯಗಳು ಹಾಗಲ್ಲ ನಕ್ಷತ್ರ ಪುಂಜಗಳು ಆಕಾಶದಲ್ಲಿ ಪ್ರತೀ ವರ್ಷವೂ ಅದೇ ಸ್ಥಳದಲ್ಲಿ ಅದೇ ಸಮಯಕ್ಕೆ ಕಾಣಿಸುತ್ತವೆ. ಅದೇ ಚಂದ್ರನನ್ನೇ ಗಮನಿಸಿ, ಪಕ್ಷಕ್ಕೊಮ್ಮೆ ಚಂದ್ರ ಕ್ಷೀಣಿಸಿ, ಬೆಳೆಯುವುದಷ್ಟೇ ಅಲ್ಲ ತಾರೆಗಳ ಹಿನ್ನೆಲೆಯಲ್ಲಿ ಅದು ರಾತ್ರಿಯಿಂದ ರಾತ್ರಿಗೆ ಕ್ಷಿಪ್ರವಾಗಿ ಜಾಗ ಬದಲಿಸುತ್ತದೆ. ಆಕಾಶದಲ್ಲಿ ಹೊಳೆವ ಇತರೇ ಕಾಯಗಳಾದ ಗ್ರಹಗಳೂ ಅಷ್ಟೆ! ನೋಡಲು ತಾರೆಗಳಂತೆಯೇ ಸ್ಥಿರವಾಗಿರುವಂತೆ ಕಂಡರೂ ಈ ಮಿನುಗುವ ಚುಕ್ಕೆಗಳೂ ನಕ್ಷತ್ರಗಳ ಹಾಸಿನ ಮೇಲೆ ದಿಕ್ಕುದೆಸೆಯಿಲ್ಲದೆ ಚಲಿಸುವ ಅಲೆಮಾರಿಗಳು. ಹೀಗಿದ್ದರೂ ನಮ್ಮ ಪೂರ್ವಜರು ಚಂದ್ರ, ಗ್ರಹಗಳ ಚಲನೆಯನ್ನು ವಿವರಿಸುವ ಯತ್ನ ಮಾಡಿದ್ದರು. ಈ ಅರಿವನ್ನೇ ಪೂಜೆ, ಪುನಸ್ಕಾರಗಳಂತಹ ಧಾರ್ಮಿಕ ವಿಧಿಗಳ ಮುಹೂರ್ತ ನಿಶ್ಚಯಿಸಲೂ ಬಳಸಿದ್ದರು. ಚಂದ್ರನ ಪಾಕ್ಷಿಕ ಬದಲಾವಣೆ ಹಾಗೂ ತಾರೆಗಳ ನಡುವೆ ಅದು ಚಲಿಸುವುದೇ ಮೊದಮೊದಲು ಚಲಾವಣೆಗೆ ಕ್ಯಾಲೆಂಡರು (ಪಂಚಾಂಗ)ಗಳಿಗೆ ಮೂಲವಾಯಿತು. ಇಂತಹ ಪಂಚಾಂಗಗಳಲ್ಲಿ ಕೆಲವು ಇನ್ನೂ ಬಳಕೆಯಲ್ಲಿವೆ. ಉದಾಹರಣೆಗೆ ಭಾರತೀಯ ಪಂಚಾಂಗ. ಇದರಲ್ಲಿರುವ ಮಾಸಗಳ ಅಂದರೆ ನಕ್ಷತ್ರ–ರಾಶಿಯ ಹೆಸರು ಆಯಾಯಾ ತಿಂಗಳು ಚಂದ್ರನ ಬಳಿ ಕಾಣುವ ನಕ್ಷತ್ರಗಳ ಹೆಸರಾಗಿದೆ.

ಹೀಗೆ ಮಾನವ ನಾಗರೀಕತೆಯ ಅವಿಚ್ಛಿನ ಭಾಗವಾಗಿ ತಾರೆಗಳಿರುವುದನ್ನು ನಾವು ಕಾಣುತ್ತೇವೆ. ಹಾಗಂದ ಮಾತ್ರಕ್ಕೆ ನಮ್ಮ ಪೂರ್ವಜರಿಗೆ ಈ ಆಕಾಶಕಾಯಗಳ ನೈಜ ಪರಿಚಯವಿತ್ತು ಎನ್ನಲಾಗದು. ಅವರಿಗೆ ರಾತ್ರಿಯಾಕಾಶ ಒಂದು ಅನಂತ ಚಪ್ಪರ, ತಾರೆಗಳು ಅದರಲ್ಲಿ ಹುದುಗಿದ ಮಿಣುಕುವ ದೀಪಗಳಾಗಿದ್ದಷ್ಟೆ. ಆಕಾಶವನ್ನು ನಮ್ಮ ಪೂರ್ವಜರೂ ಈ ರೀತಿ ತಪ್ಪಾಗಿ ಕಲ್ಪಿಸಿಕೊಂಡದ್ದಕ್ಕೆ ದೂರುವುದೂ ಸರಿಯಲ್ಲ. ಭೂಮಿಯಿಂದ ದಿಟ್ಟಿಸಿದಾಗ ತಾರೆಗಳು ಹುದುಗಿದ ಚಪ್ಪರದಂತೆಯೇ ಆಕಾಶ ಕಾಣುತ್ತದೆ. ಬರಿಗಣ್ಣಿಗೆ ಇದಕ್ಕಿಂತ ಹೆಚ್ಚಿಗೆ ಬೇರೇನೂ ತೋರುವುದೂ ಇಲ್ಲ.

ನಿರಭ್ರ ರಾತ್ರಿಯಲ್ಲಿ ಆಕಾಶವನ್ನು ನೋಡಿದಾಗ ನಮಗೆ ಅಲ್ಲಿ ಲೆಕ್ಕವಿಡಲಾಗದಷ್ಟು ತಾರೆಗಳಿರುವಂತೆ ತೋರುತ್ತದಷ್ಟೆ. ಆದರೆ ಖಗೋಳ ಶಾಸ್ತ್ರಿಗಳ ಪ್ರಕಾರ ಎಂತಹ ಚುರುಕು ದೃಷ್ಟಿಯಿರುವವನೂ ಚಂದ್ರನಿಲ್ಲದ ನಿಚ್ಚಳ ರಾತ್ರಿಯಲ್ಲಿ 2500ಕ್ಕಿಂತ ಹೆಚ್ಚಿನ ತಾರೆಗಳನ್ನು ನೋಡಲಾರನಂತೆ! ಇನ್ನು ಧೂಳು, ಹೊಗೆ ಮುಸುಕಿದ ನಗರಗಳಲ್ಲಿ ನೂರಿನ್ನೂರರಷ್ಟು ತಾರೆಗಳು ನಮಗೆ ಕಂಡರೆ ಅದೇ ಹೆಚ್ಚು! ದೂರದರ್ಶಕಗಳು ನಮಗೆ ಗೋಚರಿಸುವ ತಾರೆಗಳ ಸಂಖ್ಯೆಯನ್ನು ಹಲವಾರು ಮಡಿ ಹೆಚ್ಚಿಸಿದ್ದಾನೆ. ತಮಿಳುನಾಡಿನ ಕಾವಲೂರಿನಲ್ಲಿರುವ 230 ಸೆಂಟಿಮೀಟರು ವ್ಯಾಸದ ಬೃಹತ್ ವೈಣುಬಾಪು ದೂರದರ್ಶಕದ ಮೂಲಕ ಸುಮಾರು 50 ಕೋಟಿ ತಾರೆಗಳನ್ನು ನಾವು ಕಾಣಬಹುದಂತೆ!

ಮನುಷ್ಯರಿಗಿರುವಂತೆಯೇ ತಾರೆಗಳಿಗೂ ಹೆಸರಿವೆ, ಮನುಷ್ಯರೇ ಇಟ್ಟ ಹೆಸರುಗಳು. ತಾರೆಗಳ ನಾಮಕರಣಕ್ಕೂ ಮೂರು ವಿಧಿಗಳಿವೆ. ಪ್ರಕಾರ ಹೊಳಪಿನ ಕೆಲವು ತಾರೆಗಳಿಗೆ ಅವುಗಳದೇ ವಿಶೇಷ ಹೆಸರುಗಳಿವೆ. ಇಂತಹ ವಿಶೇಷ ಹೆಸರಿರುವ ನಕ್ಷತ್ರಗಳು ಸುಮಾರು ಐವತ್ತಿವೆ. ಬಹುಪಾಲು ಇವುಗಳ ಹೆಸರು ಅರಬೀ, ಗ್ರೀಕ್ ಅಥವಾ ಲ್ಯಾಟಿನ್ ಭಾಷೆಯವು .ಉದಾಹರಣೆ: ಸಿರಿಯಸ್, ಕಾನೋಪಸ್, ಕಾಪೆಲ್ಲ, ಬೆಟಲ್ಗೀಸ್, ಆಲ್ಡೆಬಾರನ್, ರೀಗೆಲ್. ಇವುಗಳಲ್ಲಿ ಕೆಲವಕ್ಕೆ ಭಾರತೀಯ ಹೆಸರುಗಳೂ ಇವೆ. ಆಕಾಶದಲ್ಲಿ ಎಲ್ಲಕ್ಕಿಂತ ಪ್ರಕಾಶಮಾನವಾಗಿ ಹೊಳೆವ ತಾರೆ ಸಿರಿಯಸ್‌ನ ಭಾರತೀಯ ಹೆಸರು ಲುಬ್ಧಕ; ಕಾನೋಪಸ್‌ನದು ಅಗಸ್ತ್ಯ; ಬೆಟಲ್ಗೀಸ್‌ನದು ಆರ್ದ್ರ, ಅಲ್ಡೆಬಾರನ್‌ನ ಹೆಸರು ರೋಹಿಣಿ.

ನಮ್ಮ ಹೆಸರುಗಳಲ್ಲಿ ಹೇಗೆ ವಂಶದ ಅಥವಾ ಗೋತ್ರದ ಹೆಸರು ಇರುತ್ತದೋ ಹಾಗೆಯೇ ತಾರೆಗಳ ಹೆಸರಲ್ಲೂ ಅವು ಇರುವ ನಕ್ಷತ್ರಪುಂಜದ ಹೆಸರಿರ ಬಹುದು. ಈ ರೀತಿಯ ನಾಮಕರಣ ಮಾಡುವಾಗ ಆ ನಕ್ಷತ್ರಪುಂಜದಲ್ಲೇ ಅತೀ ಹೊಳಪಿನ ನಕ್ಷತ್ರಕ್ಕೆ ಗ್ರೀಕ್ ಅಕ್ಷರ ಮಾಲೆಯ ಮೊದಲಕ್ಷರ ಆಲ್ಫ(α)ದ ಮುಂದೆ ಆ ನಕ್ಷತ್ರಪುಂಜದ ಲ್ಯಾಟಿನ್ ಹೆಸರು ಕೂಡಿಸಿ ಹುಟ್ಟಿದ ಹೆಸರಿಡುತ್ತಾರೆ. ಉದಾಹರಣೆಗೆ

ಸಿಂಹರಾಶಿಯಲ್ಲಿರುವ ಅತಿ ಹೊಳಪಿನ ರೆಗುಲಸ್ ನಕ್ಷತ್ರಕ್ಕೆ ಆಲ್ಫ–ಲಿಯೊಲಿಸ್ ಎಂಬ ಹೆಸರೂ ಇದೆ. ಆ ಪುಂಜದಲ್ಲಿರುವ ಹೊಳಪಿನಲ್ಲಿ ಎರಡನೆಯದಾದ ನಕ್ಷತ್ರದ ಹೆಸರು 'ಬೀಟ ಲಿಯೊನಿಸ್' – ಬೀಟ ಗ್ರೀಕ್ ಅಕ್ಷರಮಾಲೆಯ ಎರಡನೆ ಅಕ್ಷರ. ಹೀಗೆ ಉಳಿದ ತಾರೆಗಳಿಗೂ ನಾಮಕರಣವಾಗುತ್ತದೆ.

ಈ ರೀತಿ ಅಕ್ಷರಮಾಲೆ ಬಳಸಿ ಹೆಸರಿಡುವುದಕ್ಕೂ ಒಂದು ಮಿತಿಯಿದೆ. ಏಕೆಂದರೆ ಗ್ರೀಕ್ ಮಾಲೆಯಲ್ಲಿ ಕೇವಲ 24 ಅಕ್ಷರಗಳಷ್ಟೇ ಇವೆ. ಅದಕ್ಕೇ ಜಾನ್ ಫ್ಲಾಮ್‌ಸ್ಟೀಡ್ (1646–1719) ಎಂಬ ಬ್ರಿಟಿಷ್ ಖಗೋಳ ಶಾಸ್ತ್ರಿ ತಾರೆಗಳ ನಾಮಕರಣಕ್ಕೆ ಮತ್ತೊಂದು ವಿಧಾನ ರೂಪಿಸಿದ. ಆತ ನಕ್ಷತ್ರಪುಂಜವೊಂದರ ಪಶ್ಚಿಮದಿಂದ ಆರಂಭಿಸಿ ಪೂರ್ವದವರೆಗೆ ಅಂಕೆಗಳಿತ್ತು ತಾರೆಗಳನ್ನು ಗುರುತಿಸಿದ. ಉದಾಹರಣೆಗೆ ನೀವು 61–ಸಿಗ್ನಿ ಎಂಬ ತಾರೆಯನ್ನು ಹುಡುಕುತ್ತಿದ್ದೀರೆನ್ನಿ, ಆಗ ನೀವು ಸಿಗ್ನಸ್ (ಹಂಸ) ನಕ್ಷತ್ರಪುಂಜದ ಪಶ್ಚಿಮ ತುದಿಯಿಂದ ನಕ್ಷತ್ರಗಳನ್ನು ಎಣಿಸಲು ಪ್ರಾರಂಭಿಸಿ, 61ನೆಯದಾಗಿ ಸಿಗುವದೇ 61–ಸಿಗ್ನಿ. ಈ ಬಗೆಯ ತಾರಾನಾಮದ ಅಂಕೆಯನ್ನು ಫ್ಲಾಮ್ ಸ್ಟೀಡ್ ಅಂಕೆ ಎಂದೂ ಕರೆಯುತ್ತಾರೆ.

ನೋಡುಗರಿಗೆ ಬರಿಗಣ್ಣಿಗೂ ನಿಚ್ಚಳವಾಗಿ ತೋರುವಂತೆ ತಾರೆಗಳ ಕೆಲವು ಗುಣಗಳಿವೆ. ಗಮನಿಸಿ ಎಲ್ಲ ತಾರೆಗಳ ಕಾಂತಿಯೂ ಒಂದೇ ತರವಿಲ್ಲ. ಸಿರಿಯಸ್ ಮತ್ತು ಕಾನೋಪಸ್‌ನಂತಹ ಕೆಲವು ತಾರೆಗಳು ಉಳಿದವುಗಳಿಗಿಂತ ಹಲವು ಪಟ್ಟು ಹೆಚ್ಚು ಕಾಂತಿಯುತವಾಗಿವೆ. ಕೆಲವು ತಾರೆಗಳ ಪ್ರಕಾಶ ಎಷ್ಟು ಮಂಕಾಗಿದೆ ಎಂದರೆ ಚಂದ್ರನಿಲ್ಲದ ಕರಾಳರಾತ್ರಿಯಲ್ಲೂ ಅವನ್ನು ದೂರದರ್ಶಕದ ನೆರವಿನಿಂದಷ್ಟೇ ಕಾಣಬಹುದು. ಇನ್ನು ಕೆಲವು ತಾರೆಗಳ ಕಾಂತಿ ಗಂಟೆ, ದಿನ ತಿಂಗಳುಗಳವಧಿಯಲ್ಲಿ ಬದಲಾಗುವುದನ್ನೂ ಕಾಣಬಹುದು.

ಅಲೆಕ್ಸಾಂಡ್ರಿಯದ ಕ್ಲಾಡಿಯಸ್ ಟೋಲೆಮಿ (ಸುಮಾರು 100–170) ಯಂತಹ ಪುರಾತನ ಖಗೋಳ ವಿಜ್ಞಾನಿಗಳು ತಾರೆಗಳ ಕಾಂತಿಯನ್ನು ಅಳೆಯಲು ಆರು ವರ್ಗಗಳನ್ನು ಮಾಡಿಕೊಂಡಿದ್ದರು. ಇವನ್ನೇ ಕಾಂತಿಮಾನ ಎನ್ನುತ್ತಾರೆ. ಅತಿ ಕಾಂತಿಯುಳ್ಳ ತಾರೆಗಳ ಕಾಂತಿಮಾನ 1 ಎಂದೂ, ಅತಿ ಮಂಕು ತಾರೆಗಳ ಕಾಂತಿಮಾನ 6 ಎಂದೂ ಪರಿಗಣಿಸುತ್ತಾರೆ. ಸೂರ್ಯ ಮುಳುಗಿದ ಕೂಡಲೇ ಮುಸ್ಸಂಜೆ ಬೆಳಕಿನ್ನೂ ಇರುವಾಗಲೇ ತೋರಿ ಬರುವ ನಕ್ಷತ್ರಗಳನ್ನು ಅತ್ಯಂತ ಕಾಂತಿಯುತ ನಕ್ಷತ್ರವೆನ್ನುತ್ತಾರೆ. ಅಮಾವಾಸ್ಯೆಯ ಕರಾಳ ರಾತ್ರಿಯಲ್ಲೂ ಬರಿಗಣ್ಣಿಗೆ ಕಾಣದಂತಹ ನಕ್ಷತ್ರಗಳು ಮಂಕು ತಾರೆಗಳು. ಟೋಲೆಮಿಯ ಕಾಲದಲ್ಲಿ ತಾರೆಗಳ ವರ್ಣಕಾಂತಿಯನ್ನು ಅಳೆಯಲು ಇದ್ದ ಉಪಕರಣ ಬರಿಗಣ್ಣಷ್ಟೆ! ಅದಕ್ಕೇ ಈ ಬಗೆಯ ಕಾಂತಿಮಾನದ ವರ್ಗೀಕರಣ ಅಂತಹ ನಿಖರವಾಗೇನಿಲ್ಲ. ಇಂದು ಇದಕ್ಕಿಂತಲೂ ಉತ್ತಮ ಹಾಗೂ ನಿಖರ ಅಳತೆಗಳಿಂದ ತಾರೆಗಳ ಕಾಂತಿಯನ್ನು ನಿಶ್ಚಯಿಸಬಹುದು. ನವೀನ ಮಾನದ

ಪ್ರಕಾರ ಕಾಂತಿಮಾನ 1 ಇರುವ ತಾರೆ ಕಾಂತಿಮಾನ 2 ಇರುವ ತಾರೆಗಿಂತ 2.512 ಪಟ್ಟು ಹೆಚ್ಚು ಕಾಂತಿಯುತವಾಗಿದೆ. ಕಾಂತಿಮಾನ 2 ಇರುವ ತಾರೆಯ ಪ್ರಕಾಶ ಕಾಂತಿಮಾನ 3 ಇರುವ ತಾರೆಯದಕ್ಕಿಂತ 2.512 ಪಟ್ಟು ಮಿಗಿಲಾಗಿದೆ. ಈ ಅಳತೆಯ ಪ್ರಕಾರ ಅತ್ಯಂತ ಕಾಂತಿಯುತ ತಾರೆಗಳ ಕಾಂತಿಮಾನ ಋಣಚಿಹ್ನೆಯಿರುವ ಅಂಕೆಯೂ ಇರಬಹುದು. ಅದರಂತೆ ಆಗಸದಲ್ಲಿ ಅತ್ಯಂತ ಕಾಂತಿಯಿರುವ ಸಿರಿಯಸ್ ತಾರೆಯ ಕಾಂತಿಮಾನ –1.6.

ಕಾಂತಿಯಷ್ಟೇ ದೃಷ್ಟಿಗೋಚರವಾಗುವ ತಾರೆಗಳ ಗುಣವಲ್ಲ. ಇನ್ನೂ ಕೆಲವು ತಾರಾವಿಶೇಷಗಳು ನೋಡಿದ ತಕ್ಷಣ ಗುರುತಿಸುವಂತಿವೆ. ಕೆಲವು ತಾರೆಗಳು ಒಟ್ಟಾಗಿ ಒಂದೇ ಕಡೆ ಗುಂಪುಗಟ್ಟಿದ್ದರೆ, ಕೆಲವಾರು ತಾರೆಗಳು ಬಯಲಲ್ಲಿ ಆಟಕ್ಕಿಳಿದ ಕ್ರಿಕೆಟ್ ಆಟಗಾರರಂತೆ ಚದುರಿಕೊಂಡಿವೆ. ತಾರೆಗಳ ಬಣ್ಣವೂ ಅಷ್ಟೇ, ಒಂದೇ ರೀತಿಯದಲ್ಲ. ಸಿರಿಯಸ್, ಕಾನೋಪಸ್‌ನಂತಹ ತಾರೆಗಳು ಬಿಳೀ ಮಿಶ್ರಿತ ನೀಲಿಯವಾಗಿ ಕಾಣುತ್ತವೆ. ಅದೇ ಬೀಟಲ್ಗೀಸ್ ಹಾಗೂ ಆಂಟಾರೆ ಕೆಂಚಾಗಿವೆ. ಉಳಿದವುಗಳೆಲ್ಲ ಬಹುಪಾಲು ಬಿಳಿಮಿಶ್ರಿತ ಹಳದಿ ಬಣ್ಣದವು.

ಬರಿಗಣ್ಣಿಗೆ ತಾರೆಗಳಲ್ಲಿ ಇಷ್ಟೊಂದು ವೈವಿಧ್ಯ ಕಂಡ ನಮ್ಮ ಪೂರ್ವಜರು ಇದಕ್ಕೇನು ಕಾರಣ ಎಂದು ಪ್ರಶ್ನಿಸಿದ್ದಿರಬೇಕು. ತಾರೆಗಳ, ಕಾಂತಿಯೇಕೆ ಒಂದೇ ರೀತಿಯಿಲ್ಲ ? ಕೆಲವು ತಾರೆಗಳು ಬಿಳಿ ಏಕೆ, ಕೆಲವು ಕೆಂಪೇಕೆ? ಕಾಲಕಾಲಕ್ಕೆ ಕೆಲವು ತಾರೆಗಳ ಕಾಂತಿಯೂ ಬದಲಾಗುತ್ತದಲ್ಲ, ಅದೇಕೆ? ಹೀಗೇ ಹಲವು ಪ್ರಶ್ನೆಗಳು ಅವರ ಮನಸ್ಸಲ್ಲೂ ಎದ್ದಿರಬೇಕು. ಆದರೆ ತಾರೆಗಳೆಂದರೆ ಏನು ಎಂಬುದನ್ನು ತಿಳಿಯದೆ ಇವುಗಳಿಗೆ ಉತ್ತರಿಸುವುದು ಕಷ್ಟ. ಇದೆಲ್ಲಕ್ಕಿಂತ ಮೊದಲು ತಾರೆಗಳು ನಮ್ಮಿಂದ ಎಷ್ಟು ದೂರದಲ್ಲಿವೆ ಎನ್ನುವುದನ್ನು ತಿಳಿಯಬೇಕು. ಆಮೇಲಷ್ಟೆ ಅವೇನು ದೊಡ್ಡವೋ ಚಿಕ್ಕವೋ, ಅವುಗಳಲ್ಲೇನಿದೆ ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕಲಾದೀತು.

*ಆಕರ: ಮೂಲ–ಬಿಮಾಸ್ ಬಸು*
*ಕನ್ನಡಕ್ಕೆ: ಕೊಳ್ಳೇಗಾಲ ಶರ್ಮ*

## 2.4 ಉಲ್ಕೆಗಳು, ಧೂಮಕೇತುಗಳು

**–ಡಾ. ಬಿ ಎಸ್ ಶೈಲಜಾ**

ಕಾರ್ಗಿಲ್‌ನಲ್ಲಿ ಯುದ್ಧಾರಂಭವಾಗಿ ನಿಲುಗಡೆಯೂ ದೊರೆತ ಮೇಲೆ ಪತ್ರಿಕಾ ವರದಿಗಾರರ ದೃಷ್ಟಿ ಅಲ್ಲಿದ್ದ ಸೈನಿಕರತ್ತ ಹೊರಳಿತು. ಆಗ ಅಲ್ಲಿ ಕಾರ್ಯನಿರತರಾಗಿದ್ದವರು ಭಾರತದ ವಿವಿಧ ಮೂಲೆಗಳಿಂದ ಬಂದಿದ್ದ ಯುವಕರು, ಅವರೊಡನೆ ಸಂದರ್ಶನಗಳು ಪತ್ರಿಕೆಗಳಲ್ಲಿ ಪ್ರಕಟವಾದವು. ನನ್ನನ್ನು ಆಕರ್ಷಿಸಿದ ವರದಿಯೊಂದು ಹೀಗಿತ್ತು – "ನವೆಂಬರ್ 16ರಂದು ರಾತ್ರಿಯ ಪಾಳಿಯಲ್ಲಿದ್ದವರು ದಾಳಿ ಆರಂಭವೇ ಆಗಿ ಹೋಯಿತು ಎಂದುಕೊಂಡರು. ಎಲ್ಲೆಲ್ಲೂ ಫಳಫಳನೆ ಕಣ್ಣು ಕೊರೈಸುವ ಮಿಂಚುಗಳು. ಆದರೆ ನಿಶಬ್ದ, ಎಲ್ಲರೂ ಬಂದೂಕು ಹಿಡಿದು ಸಜ್ಜಾಗಿ ನಿಂತರು. ಎಲ್ಲೆಂದರಲ್ಲಿ ಬಾಣಬಿರುಸುಗಳು ಕಾಣತೊಡಗಿದಾಗ ಹಳ್ಳಿಗಾಡಿನಿಂದ ಬಂದ ಯುವಕರು ಬಂದೂಕು ಕೆಳಗಿಟ್ಟರು. ನಗರದಿಂದ ಬಂದವರು ಕಕ್ಕಾಬಿಕ್ಕಿಯಾಗಿ ನೋಡುತ್ತಾ ನಿಂತರು ಆಮೇಲೆ ಇದು ಉಲ್ಕಾವೃಷ್ಟಿ ಎಂದು ಅರಿವಾಗಿ ಆನಂದಿಸಿದರು."

ಬೆಂಗಳೂರು ನಗರದಲ್ಲಿ ನಡೆದದ್ದು ಹೀಗೆ – ಆ ರಾತ್ರಿ ಮಹಡಿ ಹತ್ತಿ ನಿಂತವರು 30–40 ಕಿ.ಮೀ.ಗಳಿಗಿಂತಲೂ ದೂರದಿಂದ ಕಾಣುತ್ತಿದ್ದ ಮಿಂಚನ್ನೇ ಉಲ್ಕಾವೃಷ್ಟಿ ಎಂದು ಭ್ರಮಿಸಿದರು. ಮಹಡಿಯ ದೀಪ ಹಾಕಿ ಅದರ ಕೆಳಗೆ ಕುಳಿತು ಆಕಾಶ ವೀಕ್ಷಿಸಿದರು. ಆಧುನಿಕ ಬಚ್ಚಲು ಮನೆಗಳಲ್ಲಿಯ 'ಶವರ್'ನಂತೆಯೇ 'ಮೀಟಿಯರ್ ಶವರ್'ಬೀಳುವುದೆಂದು ಕಾದೇಕಾದರು. ನಿಟ್ಟುಸಿರಿನ ಸಮೇತ ಕಾಣಲೇಇಲ್ಲ ಎಂದು ಪರಿತಾಪಪಟ್ಟರು.

ಹಳ್ಳಿಯಿಂದ ಬಂದಿದ್ದ ಉಪಾಧ್ಯಾಯರೊಬ್ಬರು "ಭಾಳ ಬಿದ್ದವು. ಎಣಿಸ್ತಾನೇ ಇದ್ದೆ. ಆ ಮೇಲೆ ಲೆಕ್ಕ ತಪ್ಪಿಹೋಯ್ತು" ಎಂದರು. ಹಾಗಾದರೆ ನಗರವಾಸಿಗಳು ಲೆಕ್ಕತಪ್ಪಿದ್ದೆಲ್ಲಿ? ಯೋಚಿಸಿ.

ಸೌರಮಂಡಲದುದ್ದಕ್ಕೂ ಸೂಕ್ಷ್ಮ ಕಣಗಳು ಸ್ವೇಚ್ಛೆಯಾಗಿ ಓಡಾಡಿಕೊಂಡಿವೆ. ಇವುಗಳ ಸ್ವಾತಂತ್ರ್ಯಕ್ಕೆ ಭಂಗ ಒದಗುವುದು ಯಾವುದಾದರೂ ಗ್ರಹದ ಸಮೀಪ ಬಂದಾಗ. ಉಪಗ್ರಹವೂ ಆಗಬಹುದು. ಚಂದ್ರನ ಮೇಲೆ ಇವು ಅಪ್ಪಳಿಸಿದರೆ ದೂಳಿಗೊಂದಷ್ಟು ಸೇರ್ಪಡೆಯಾಗುವುದಷ್ಟೇ. ಆದರೆ ಬೀಳುವುದು ಭೂಮಿಯ ಮೇಲೆ ಬೀಳುವುದು ನಮಗೆ ವಿಶೇಷ. ಭೂಮಿಯ ಮೇಲೆ ನಾವಿದ್ದೇವೆ ಎಂಬ ಅಂಶಕ್ಕಿಂತ ಭೂಮಿಯ ವಾತಾವರಣದಲ್ಲಿ ಆಮ್ಲಜನಕ ಇದೆ ಎಂಬುದೇ ಮುಖ್ಯ ಅಂಶ. ಈ ಸಣ್ಣ ಕಣಗಳ ವೇಗ ಸೆಕೆಂಡಿಗೆ 70–75 ಕಿ.ಮೀ.ಗಳು – ಆದ್ದರಿಂದ

ಭೂವಾತಾವರದೊಳಕ್ಕೆ ನುಗ್ಗಿದ ಕೂಡಲೇ ಘರ್ಷಣೆ ಆರಂಭವಾಗುವುದು. ತತ್ಪರಿಣಾಮ ಬಿಸಿಯಾಗುವುವು. ಆಮ್ಲಜನಕ ದೊರೆತ ಕೂಡಲೇ ಹೊತ್ತಿ ಉರಿಯುವುವು. ಕೆಲವೇ ಸೆಕೆಂಡ್ಗಳಲ್ಲಿ ಬೂದಿಯಾಗಿ ಬಿಡುವುವು.

ಈ ಘಟನೆಯೇ ಉಲ್ಕೆ. ಇದಕ್ಕೆ ಮೂಲ ಕಾರಣವಾದ ವಸ್ತುವೇ ಉಲ್ಕಾಶಿಲೆ. ಹೀಗದು ಉರಿಯುತ್ತಾ ಬೀಳುವಾಗ 'ನಕ್ಷತ್ರ ಬಿತ್ತು' ಎಂದು ಭ್ರಮೆ ಉಂಟುಮಾಡುತ್ತದೆ.

ಹೀಗೆ ಆಕಾಶದಲ್ಲಿ ಹೊತ್ತಿ ಉರಿಯುವ ಬೆಳಕಿನ ರೇಖೆ ಒದಗಿಸುವ ಮಾಹಿತಿ ಅನೇಕ. ಕಣದ ಗಾತ್ರ ದೊಡ್ಡದಿದ್ದರೆ ಗೆರೆ ವರ್ಣರಂಜಿತವಾಗಿದ್ದು ಐದಾರು ಸೆಕೆಂಡುಗಳವರೆಗೂ ಕಾಣುವುದು. ಕಣ ಸಣ್ಣದಿದ್ದರೆ ಕ್ಷೀಣವಾಗಿರುವುದು. ಉಲ್ಕೆಗಳನ್ನು ವ್ಯವಸ್ಥಿತವಾಗಿ ಅಭ್ಯಸಿಸಲು ಹೊರಟವರಿಗೆ ಅನೇಕ ರಹಸ್ಯಗಳು ಬಯಲಾಗುತ್ತವೆ. ಚಂದ್ರನಿಲ್ಲದ ಶುಭ್ರ ಆಕಾಶದಲ್ಲಿ ಗಂಟೆಗೆ ಐದು–ಹತ್ತು ಉಲ್ಕೆಗಳು ಕಾಣುವುದು ಸರ್ವೇಸಾಮಾನ್ಯ. ಆದರೆ ಕೆಲವೊಮ್ಮೆ ಒಂದೇ ದಿಕ್ಕಿನಲ್ಲಿ 100–200ಉಲ್ಕೆಗಳು ಕಾಣುತ್ತವೆ. ಹೀಗೇಕೆ ?

ಈ ಪ್ರಶ್ನೆ ಇಂದು ನಿನ್ನೆಯದಲ್ಲ. 1799ರ ನವೆಂಬರ್‌ನಲ್ಲಿ ಅಲೆಕ್ಸಾಂಡರ್ ಫನ್ ಹಮ್‌ಬೋಲ್ಡ್ ಮತ್ತು ಏಮ್ ಜೋನ್ ಪ್ಲಾಂಡ್ ಎಂಬ ಸಸ್ಯವಿಜ್ಞಾನಿಗಳಿಬ್ಬರು ಬೆಳಗಿನ ಹವಾ ಸೇವನೆಗೆ ಹೊರಟರು. ಅವರು ತಂಗಿದ್ದುದು ದಕ್ಷಿಣ ಅಮೆರಿಕಾದಲ್ಲಿ. ದಡಬಡನೆ ಬಿದ್ದ ಉಲ್ಕೆಗಳನ್ನು ಕಂಡು ಚಕಿತರಾದರು. ಈ ಬಗ್ಗೆ ಸ್ಥಳೀಯರನ್ನು ವಿಚಾರಿಸಿದಾಗ ಪ್ರತಿವರ್ಷವೂ ಅದೇ ತಾರೀಖಿಗೆ ಹೀಗೆ ಉಲ್ಕೆಗಳು ಬೀಳುತ್ತವೆ ಎಂದು ತಿಳಿಯಿತು. ಅಲ್ಲದೆ ಸುಮಾರು 30 ವರ್ಷಗಳಿಗೊಮ್ಮೆ ಅತಿ ಹೆಚ್ಚು ಉಲ್ಕೆಗಳು ಬೀಳುತ್ತವೆ ಎಂದೂ ತಿಳಿಯಿತು. ಈ ವರದಿ ಅಂದಿನ ಜನಪ್ರಿಯ ಪತ್ರಿಕೆ 'ಜಂಟಲ್ಮ್ಯಾನ್ಸ್ ಮ್ಯಾಗಝೀನ್'ನಲ್ಲಿ ಪ್ರಕಟವಾಯಿತು. ಖಗೋಳಜ್ಞರಿಗೆ ಈ ಹೊಸ ವಿಷಯದ ಬಗ್ಗೆ ಆಸಕ್ತಿಮೂಡಿತು. ಪ್ರತಿದಿನವೂ ಉಲ್ಕೆಗಳ ವಿವರಗಳನ್ನು ದಾಖಲಿಸಿದರು. 1833ರ ನವೆಂಬರ್ 12ರಂದು ಕೇವಲ ಆರೇಳು ಗಂಟೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಉಲ್ಕೆಗಳು ಬಿದ್ದವು. ಪ್ರಪಂಚದ ಎಲ್ಲೆಡೆಯಿಂದ ಇಂತಹ ವರದಿಗಳು ಬಂದವು.

ಹೀಗೆ ದಕ್ಷಿಣ ಅಮೆರಿಕದ ಮೂಲನಿವಾಸಿಗಳಿಂದ ದೊರೆತ ಸುಳಿವು ಹೊಸ ವಿಜ್ಞಾನ ಶಾಖೆಯಾಗಿ ಬೆಳೆಯಿತು. ಅಧ್ಯಯನ ಮುಂದುವರೆಯಿತು. ವೃಷ್ಟಿಯ ಉಲ್ಕೆಗಳೆಲ್ಲಾ ಆಕಾಶದ ಒಂದು ಬಿಂದುವಿನಿಂದ ಹೊರಟು ಬರುವಂತೆ ಕಾಣುತ್ತವೆ ಎಂದು ಗುರುತಿಸಿ ಆ ಬಿಂದುವಿಗೆ ರೇಡಿಯಂಟ್ ಎಂದು ಹೆಸ–

ರಿಸಿದರು. ಈ ಬಿಂದುವೂ ಇತರ ನಕ್ಷತ್ರಗಳಂತೆ ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಕಂತುತ್ತದೆ ಎಂದು ತಿಳಿಯಿತು. ವರ್ಷದ ಬೇರೆ ಬೇರೆ ದಿನಗಳಲ್ಲಿ ಬೇರೆ ಬೇರೆ ರೇಡಿಯಂಟ್ಗಳಿಂದ ಉಲ್ಕಾವೃಷ್ಟಿಗಳು ಹೊರಟಂತೆ ಕಾಣುತ್ತವೆ. ಆ ದಿಕ್ಕಿಗೆ ಅನುಗುಣವಾಗಿ ವೃಷ್ಟಿಗಳಿಗೆ ಹೆಸರುಗಳಿವೆ. ಲಿಯೋನಿಡ್ಸ್, ಅಕ್ವಾರಿಡ್ಸ್ – ಹೀಗೆ, 1839ರ ಹೊತ್ತಿಗೆ ಇಂತಹ ವೃಷ್ಟಿಗಳ ದೊಡ್ಡ ಪಟ್ಟಿಯೇ ಸಿದ್ಧವಾಗಿತ್ತು.

ಈ ಉಲ್ಕೆಗಳನ್ನು ಎಸೆಯುವ ಕಾಯ ಯಾವುದು ಎಂಬ ಪತ್ತೇದಾರಿ ಕೆಲಸಕ್ಕೆ ಆನೇಕ ವರ್ಷಗಳ ನಂತರ ಉತ್ತರ ಸಿಕ್ಕಿತು. ಈ ರೇಡಿಯಂಟ್ ಬಿಂದುಗಳು ಧೂಮಕೇತುಗಳ ಕಕ್ಷೆಗಳ ಮೇಲಿವೆ ಎಂಬ ಸುಳಿವು ಒದಗಿಸಿದವರು ಇಟಲಿಯ ಷಿಯಾಪರೇಲಿ ಮತ್ತು ಸೇಖಿ. ಇವರ ಸಿದ್ಧಾಂತಕ್ಕೆ ಪೂರಕವಾಗಿ ಇನ್ನೊಂದು ಧೂಮಕೇತು ವಿಶೇಷ ಸನ್ನಿವೇಶ ಒದಗಿಸಿತು. 1772, 1805ರಲ್ಲಿ ಬಂದುಹೋದ ಈ ಧೂಮಕೇತು 1826ರಲ್ಲಿ ಮರಳಿದಾಗ ಬೈಲಾ ಎಂಬ ವಿಜ್ಞಾನಿ ಅದರ ಕಕ್ಷೆಯನ್ನು ಲೆಕ್ಕಹಾಕಿದ. 1845–46ರಲ್ಲಿ ಮತ್ತೆ ಬಂದಾಗ ಅದು ಎರಡು ತುಂಡಾಗಿತ್ತು. 1852ರಲ್ಲಿ ಜೋಡಿ ಧೂಮಕೇತುಗಳು ಬಂದುಹೋದವು. 1872ರಲ್ಲಿ ಬರಲಿಲ್ಲ. ಆದರೆ ಆ ನವೆಂಬರ್‌ನಲ್ಲಿ ಸುಮಾರು ಆರು ಸಾವಿರ ಉಲ್ಕೆಗಳು ಕಂಡವು.

ವರ್ಷದ ನಿರ್ದಿಷ್ಟ ದಿನಗಳಲ್ಲಿ ಕಾಣುವ ಉಲ್ಕಾವೃಷ್ಟಿಗಳಿಗೂ ಧೂಮಕೇತುಗಳಿಗೂ ಸಂಬಂಧ ಕಂಡುಕೊಂಡದ್ದು ಹೀಗೆ. ಆಗಾಗ್ಗೆ ಬಂದು ಹೋಗುವ ಧೂಮಕೇತುಗಳು ತಮ್ಮ ಕಕ್ಷೆಯುದ್ದಕ್ಕೂ ದೂಳನ್ನು ಸಿಂಪಡಿಸಿ ಹೋಗುತ್ತವೆ. ವರ್ಷದ ನಿರ್ದಿಷ್ಟ ದಿನದಂದು ಭೂಮಿ ದೂಳನ್ನು ಸಮೀಪಿಸಿದಾಗ ಅವು ಭೂಮಿಯ ಮೇಲೆ ಬಂದು ಬೀಳುತ್ತವೆ. ಆಗಸದಲ್ಲಿ ಉರಿದು ಬೂದಿಯಾಗುತ್ತವೆ. ಹೀಗೆ 'ಬೆಂಕಿಮಳೆ' ಆಗುತ್ತಿದ್ದುದನ್ನು ಕಂಡವರು ಅದರ ಉಗಮ ಆಕಾಶದ ನಿರ್ದಿಷ್ಟ ಬಿಂದು ಎಂದು ಗುರುತಿಸಿದರು (ರೇಡಿಯಂಟ್). ಆ ಬಿಂದು ಯಾವ ನಕ್ಷತ್ರಪುಂಜದಲ್ಲಿದೆಯೋ ಅದರ ಹೆಸರು ಆ ಉಲ್ಕಾವೃಷ್ಟಿಗೆ ಲಗತ್ತಿಸಿಕೊಂಡಿತು.

ಸಿಂಹರಾಶಿಗೂ ನವೆಂಬರ್‌ಗೂ ನಂಟು ತಂದಿಟ್ಟಿರುವುದು ಲಿಯೋನಿಡ್ಸ್ ಉಲ್ಕಾವೃಷ್ಟಿ (ಲಿಯೋ ಎಂದರೆ ಸಿಂಹರಾಶಿ). ಪ್ರತಿ ನವೆಂಬರ್ 17–18ಕ್ಕೆ ಉಲ್ಕೆಗಳ ಸುರಿಮಳೆಯಾಗುವುದು. ಕಳೆದ ಆರೇಳು ವರ್ಷಗಳಿಂದ ಈ ಸುರಿ ಮಳೆ ಸುದ್ದಿಯಲ್ಲಿದೆ. ಈಗ ಸುರಿಮಳೆ ಇಲ್ಲ; ಆದರೆ ಎಂದಿನಂತೆ ವೃಷ್ಟಿ ಇದೆ ಎಂದು ಲೆಕ್ಕಾಚಾರ ತಿಳಿಸುತ್ತದೆ. ಲಿಯೋನಿಡ್ಸ್ ಹೆಸರೇಕೆ? ಈ ವೃಷ್ಟಿಯ ಉಲ್ಕೆಗಳೆಲ್ಲವೂ ಸಿಂಹರಾಶಿಯಿಂದ ಹೊರಟಂತೆ ಕಾಣುತ್ತವೆ. ಆದ್ದ ರಿಂದ ಈ

ಹೆಸರಿದೆ. ಧೂಮಕೇತು ಸ್ವಿಫ್ಟ್–ಟಟಲ್ ಬಿಟ್ಟು ಹೋದ ದೂಳು ಸೃಷ್ಟಿಸಿರುವ ಬೆಂಕಿಮಳೆ ಇದು. ಬರಿಗಣ್ಣಿಗೆ ಕಾಣದ ದೂಳಿನ ಕಣಗಳು ಕಿಡಿಯಂತೆ ಉರಿದು ಭಸ್ಮವಾಗುವುದನ್ನು ನೋಡಲು ಬರಿಗಣ್ಣೇ ಬೇಕು. ದೂರದರ್ಶಕ ಇಲ್ಲಿ ಅಪ್ರಯೋಜಕ. ಅನೇಕ ವರ್ಷಗಳ (ಬರಿಗಣ್ಣಿನ) ತಾಳ್ಮೆಯ ವೀಕ್ಷಣೆಗಳು ಒದಗಿಸಿರುವ ಮಾಹಿತಿ ವೈಶಿಷ್ಟ್ಯಪೂರ್ಣವಾಗಿದೆ. ಕಿಡಿಗಳನ್ನು ಕಂಡು ಅವು ಹೊರಟಿರಬಹುದಾದ ಬಿಂದುವನ್ನು ಗುರುತಿಸುವುದು ಚಮತ್ಕಾರ ಎನ್ನಿಸುವುದಾದರೆ, ಇಂತಹ ಬಿಂದುಗಳು (ಅಂದರೆ ದೂಳಿನ ಗುಂಪುಗಳು) ಅನೇಕವಿವೆ ಎಂದು ಗುರುತಿಸಿದ್ದು ಅದ್ಭುತವೇ ಎನ್ನಬಹುದು. ಧೂಮಕೇತು ಪ್ರತಿಬಾರಿ ಬಂದಾಗಲೂ ಬಿಟ್ಟುಹೋದ ದೂಳಿನ ಗುಂಪುಗಳನ್ನು ಈಗ ಪ್ರತ್ಯೇಕವಾಗಿ ಗುರುತಿಸುವುದು ಸಾಧ್ಯವಾಗಿದೆ. ಇಂತಹ ಎರಡು ಗುಂಪುಗಳಿಗೆ ಅತಿ ಸಮೀಪವಾಗಿ 2003ರಲ್ಲಿ ಭೂಮಿ ಹಾದುಹೋಯಿತು. ಆದ್ದರಿಂದ ಉಲ್ಕಾವೃಷ್ಟಿಯಲ್ಲಿ ಎರಡು ಬಾರಿ (ಒಂದೇ ದಿನದಲ್ಲಿ) ಗರಿಷ್ಠ ಉಂಟಾಗಲಿವೆ ಎಂದು ಲೆಕ್ಕ ತಿಳಿಸಿತು. ಇವುಗಳ ವೀಕ್ಷಣೆ ನಮಗೆ ಅನುಕೂಲಕರವಾಗಿರಲಿಲ್ಲ. ಆದರೂ 16, 17, 18, 19 ಈ ತಾರೀಖುಗಳಂದು ಬೆಳಗಿನ ಜಾವ ಲಿಯೋ ಅಂದರೆ ಸಿಂಹರಾಶಿಯತ್ತ ದೃಷ್ಟಿ ಹರಿಸಿದಲ್ಲಿ ಗಂಟೆಗೆ 20–25 ಉಲ್ಕೆಗಳು ಕಾಣುವ ಸಾಧ್ಯತೆ ಇದೆ.

ಆಗಸ್ಟ್ ಎಂದ ಕೂಡಲೆ ಹವ್ಯಾಸಿ ವೀಕ್ಷಕರು ಚುರುಕಾಗುತ್ತಾರೆ. ಜಗತ್ತಿನಾದ್ಯಂತ ಎಲ್ಲೆಲ್ಲೂ ಅಷ್ಟೇ, ಇದಕ್ಕೆ ಕಾರಣ ಪರ್ಸಿಯ್ಡೈಡ್ ಉಲ್ಕಾವೃಷ್ಟಿ. ಇದರ ನಿಯತಕಾಲಿಕ ಪ್ರದರ್ಶನ ಸಾವಿರಾರು ವರ್ಷಗಳಿಂದ ಅವ್ಯಾಹತವಾಗಿ ನಡೆದುಬಂದಿದೆ. ಕ್ರಿ.ಪೂ. 36ರಲ್ಲಿ ಚೀನೀಯರು ಈ ಉಲ್ಕಾವೃಷ್ಟಿಯನ್ನು ಕಂಡು ಆನಂದಿಸಿದ್ದರು. ಪ್ರತಿವರ್ಷ ಆಗಸ್ಟ್ 12 ರಂದು ಈ ಉಲ್ಕಾವೃಷ್ಟಿಯದು ಗರಿಷ್ಠ ಚಟುವಟಿಕೆ, ಗಂಟೆಗೆ 60ರಿಂದ 100 ಉಲ್ಕೆಗಳು ಬೀಳುವುವು.

ಈ ಉಲ್ಕಾವೃಷ್ಟಿ ಎಲ್ಲಿಂದ ಬರುತ್ತಿದೆ ಎಂಬುದನ್ನು ಕಂಡು ಹಿಡಿಯಲು ಹೊಂಚು ಹಾಕಿದ ವಿಜ್ಞಾನಿ ಇಟಲಿಯ ಜಿಯಾವನಿ ಷಿಯಾಪರೇಲಿ. ನೂರೈವತ್ತು ವರ್ಷಗಳ ಹಿಂದೆ ಆತ ಪ್ರತಿ ಆಗಸ್ಟ್ 12ರ ರಾತ್ರಿ ಇಡೀ ಉಲ್ಕೆಗಳನ್ನು ಗಮನಿಸಿ, ಅವುಗಳ ಚಲನೆಯ ನಕ್ಷೆ ತಯಾರಿಸಿದ. ಈ ಗೆರೆಗಳನ್ನು ಹಿಂದುವರಿಸಿದಾಗ (ಅಂದರೆ ಹಿಂದಕ್ಕೆ ಬೆಳೆಸಿದಾಗ) ಅವೆಲ್ಲವೂ ಆಕಾಶದಲ್ಲಿ ಬಿಂದುವೊಂದ ರಿಂದ ಹೊರಟಂತೆ ಕಾಣುತ್ತಿತ್ತು. ಈ ಬಿಂದುವಿಗೆ ರೇಡಿಯಂಟ್ ಪರ್ಸಿಯುಸ್ (ಪಾರ್ಥ) ನಕ್ಷತ್ರಪುಂಜದಲ್ಲಿ ಇರುವುದರಿಂದ ಈ ಉಲ್ಕಾವೃಷ್ಟಿಗೆ ಪರ್ಸಿಯೆಡ್ ಎಂಬ ಹೆಸರಿದೆ. ಆದರೆ ಈ ಬಿಂದುವಿನ ವೈಶಿಷ್ಟ್ಯ ಏನೆಂಬುದನ್ನು ಪತ್ತೆ

ಮಾಡಿದವ ಷಿಯಾಪರೇಲಿ. ದಿನದಿನಕ್ಕೆ ಈ ಬಿಂದುವಿನ ಸ್ಥಾನ ಸ್ವಲ್ಪ ಸ್ವಲ್ಪವಾಗಿ ವ್ಯತ್ಯಾಸವಾಗುತ್ತಿದ್ದುದನ್ನು ಆತ ಗಮನಿಸಿದ. ಅಂದರೆ ಉಲ್ಕೆಗಳನ್ನು ಸೃಷ್ಟಿಸುತ್ತಿರುವ ಉಗ್ರಾಣ ನಕ್ಷತ್ರಗಳಷ್ಟು ದೂರದಲ್ಲಿಲ್ಲ. ಚಂದ್ರ ಮತ್ತು ಗ್ರಹಗಳಷ್ಟು ಸಮೀಪವಾಗಿರಬೇಕೆಂದು ಆತ ತರ್ಕಿಸಿದ.

ಈ ಮಧ್ಯೆ ಸ್ವಿಫ್ಟ್ ಮತ್ತು ಟಟಲ್ ಎಂಬ ಇಬ್ಬರು ವೀಕ್ಷಕರು ಧೂಮಕೇತುವೊಂದನ್ನು ಗುರುತಿಸಿದರು (ಈಗ ಅದಕ್ಕೆ 1862 III ಎಂಬ ಸಂಖ್ಯೆಯನ್ನು ಕೊಡಲಾಗಿದೆ. ಅದರ ಕಕ್ಷೆಯನ್ನು ಲೆಕ್ಕಹಾಕಿದಾಗ ಷಿಯಾಪರೇಲಿಗೆ ರಹಸ್ಯವೊಂದು ತಿಳಿಯಿತು. ಭೂಮಿಯ ಕಕ್ಷೆಯ ತಲವನ್ನು ಅದು ದಾಟುವ ಬಿಂದುವೇ ರೇಡಿಯಂಟ್ ಆಗಿತ್ತು. ಅಂದರೆ ಉಲ್ಕಾವೃಷ್ಟಿಗೂ ಧೂಮಕೇತುವಿಗೂ ಸಂಬಂಧ ಇದೆ ಎಂದಾಯಿತು. ಸೂರ್ಯನನ್ನು ಧೂಮಕೇತು ಸಮೀಪಿಸುವಾಗ ಅದರ ಮೇಲ್ಮೈಯಲ್ಲಿರುವ ಅನಿಲ ಮತ್ತು ಅಣುಗಳು, ದೂಳು ಇವೆಲ್ಲವೂ ಆವಿಯಾಗಿ ಬಾಲದಂತೆ ಹರಡಿಕೊಳ್ಳುತ್ತವೆಯಷ್ಟೇ. ಧೂಮಕೇತು ಹಿಂದಿರುಗಿ ಹೋದ ಮೇಲೂ ಅದರ ಕಕ್ಷೆಯುದ್ದಕ್ಕೂ ಆ ದೂಳು ಮತ್ತು ಕಣಗಳು ಉಳಿದುಕೊಳ್ಳುತ್ತವೆ. ಭೂಮಿ ವರ್ಷಕ್ಕೊಮ್ಮೆ ಕಕ್ಷೆಯನ್ನು ಸಮೀಪಿಸಿದಾಗ ಇವು ಭೂಮಿಯತ್ತ ಧಾವಿಸುತ್ತವೆ. ವಾತಾವರಣದೊಡನೆ ಘರ್ಷಣೆ ನಡೆಸಿ ಬಿಸಿಯಾಗುತ್ತವೆ. ನೆಲದತ್ತ ಸಾಗಿದಂತೆ ಅವುಗಳಿಗೆ ಆಮ್ಲಜನಕ ದೊರಕುತ್ತದೆ. ತತ್‌ಕ್ಷಣವೇ ಉರಿದು ಬೂದಿಯಾಗುತ್ತವೆ. ಹೀಗೆ ಇವು ಪಟಾಕಿಗಳಂತೆ ನಮ್ಮ ಆಕಾಶವನ್ನು ಬೆಳಗುತ್ತವೆ.

ಇದೇ ಅಂಶವನ್ನು ಉಳಿದ ಉಲ್ಕಾವೃಷ್ಟಿಗಳಿಂದಲೂ ಖಚಿತ ಪಡಿಸಿಕೊಳ್ಳಲಾಗಿದೆ. ನಿಯತಕಾಲಿಕವಾಗಿ ಬರುವ ಧೂಮಕೇತುಗಳು ಪ್ರತಿಯೊಂದು ಪ್ರದಕ್ಷಿಣೆಯಲ್ಲೂ ಉಗ್ರಾಣಕ್ಕೆ ಸರಕನ್ನು ತುಂಬಿ ಹೋಗುವುದರಿಂದ ವೃಷ್ಟಿಯಲ್ಲಿ ಹೆಚ್ಚಿನ ಉಲ್ಕೆಗಳು ಬೀಳುವುದನ್ನು ಗಮನಿಸಲಾಗಿದೆ.

ಸ್ವಿಫ್ಟ್–ಟಟಲ್ ಧೂಮಕೇತುವಿನ ಪ್ರದಕ್ಷಿಣಾವಧಿ ಸುಮಾರು 120 ವರ್ಷಗಳು ಎಂದು ಲೆಕ್ಕಹಾಕಲಾಗಿತ್ತು. ಅದರ ಪ್ರಕಾರ 1982ರಲ್ಲಿ ಬರಬೇಕಾಗಿದ್ದ ಅದು ಹತ್ತು ವರ್ಷ ತಡವಾಗಿ 1992ರಲ್ಲಿ ಬಂದು ಹೋಯಿತು. ಆದ್ದರಿಂದ ಕಳೆದ ಹತ್ತು ವರ್ಷಗಳಿಂದ ಪರ್ಸಿಯೆಡ್ ಉಲ್ಕಾವೃಷ್ಟಿಯಲ್ಲಿ ಹೆಚ್ಚಳ ಕಂಡುಬಂದಿದೆ. ಧೂಮಕೇತುವಿನ ಕಣಗಳು ವಿರಳವಾಗಿ ಹರಡಿ ಕೊಂಡಿರುವುದರಿಂದ ಉಲ್ಕಾವೃಷ್ಟಿ ಸುಮಾರು ಒಂದು ತಿಂಗಳು ನಡೆಯುತ್ತದೆ. ಜುಲೈ 17ರಿಂದ ಗಂಟೆಗೆ 4–5ರಂತೆ ಆರಂಭವಾಗುವ ವೃಷ್ಟಿ ಕ್ರಮೇಣ ಆಗಸ್ಟ್ 12ರ ಹೊತ್ತಿಗೆ ಗಂಟೆಗೆ 60ರಿಂದ 100 ಸಂಖ್ಯೆ ಮುಟ್ಟುತ್ತದೆ. ಕ್ರಮೇಣ ಕಡಿಮೆಯಾಗಿ ಆಗಸ್ಟ್

24ರವರೆಗೂ ನಡೆಯುತ್ತದೆ. ಕಣಗಳ ಗುಂಪನ್ನು ನಾವು ಕಾಣಲಾರೆವು. ಆದರೆ ವೃಷ್ಟಿಯಿಂದ ಅವುಗಳ ಹಂಚಿಕೆಯನ್ನು ಪರೋಕ್ಷವಾಗಿ ತಿಳಿಯಬಲ್ಲೆವು.

ಕೆಲವು ಪ್ರಖ್ಯಾತ ಉಲ್ಕಾವೃಷ್ಟಿಗಳ ತಾರೀಖುಗಳು ಹೀಗಿವೆ :

| ವೃಷ್ಟಿಯ ಹೆಸರು | ಅವಧಿ | ಗಂಟೆಗೆ ಎಷ್ಟು ಕಾಣಬಹುದು | ಮೂಲ ಧೂಮಕೇತು |
|---|---|---|---|
| ಲಿರಿಡ್ಸ್ | ಏಪ್ರಿಲ್ 19–24 | 8 | 1861 –1 |
| ಈಟಾ ಅಕ್ವಾರಿಡ್ಸ್ | ಮೇ 1–8 | 10 | ಹ್ಯಾಲಿ |
| ಡೆಲ್ಟಾ ಅಕ್ವಾರಿಡ್ಸ್ | ಜುಲೈ 15 –ಆಗಸ್ಟ್ 15 | 15 | ? |
| ಪರ್ಸಿಯ್ಯೈಡ್ಸ್ | ಜುಲೈ 25 –ಆಗಸ್ಟ್ 18 | 40 | 1862–3 ಟೆಂಪೆಲ್–ಟಟಲ್ |
| ಓರಿಯನಿಡ್ಸ್ | ಅಕ್ಟೋಬರ್ 16–27 | 15 | ಹ್ಯಾಲಿ |
| ಟಾರಿಡ್ಸ್ | ಅಕ್ಟೋಬರ್ 10–ಡಿಸೆಂಬರ್ 3 | 8 | ಎನ್‌ಕೆ |
| ಲಿಯೋನಿಡ್ಸ್ | ನವೆಂಬರ್ 15–19 | | 1866–1 ಸ್ವಿಫ್ಟ್–ಟಟಲ್ |
| ಜೆಮಿನಿಡ್ಸ್ | ಡಿಸೆಂಬರ್ 7–15 | 20–30 | ಕ್ಷುದ್ರಗ್ರಹ |

ಉಲ್ಕಾವೃಷ್ಟಿಗಳನ್ನು ಬರಿಗಣ್ಣಿಂದ ನೋಡಿ ಆನಂದಿಸಬೇಕು. ಹಿಂದೊಮ್ಮೆ ಟಿವಿಯಲ್ಲಿ ತೋರಿಸುತ್ತೇವೆ ಎಂದು ಹೇಳಿಕೊಂಡು ಇಡೀ ರಾತ್ರಿ ಇಬ್ಬರು ವ್ಯಕ್ತಿಗಳ ಸಂವಾದವನ್ನು, ಫೋನ್–ಇನ್ ಅನ್ನಾಗಿ ಪರಿವರ್ತಿಸಿ, ಆ ಚಾನಲ್ ಮರ್ಯಾದೆ ಉಳಿಸಿಕೊಂಡಿತು.

ಜನಸಾಮಾನ್ಯರ ಕುತೂಹಲವನ್ನು ಕೆರಳಿಸುವ ವೈಶಿಷ್ಟಪೂರ್ಣ ಆಕಾಶಕಾಯಗಳೇ ಧೂಮಕೇತುಗಳು, ಇದ್ದಕ್ಕಿದ್ದಂತೆ ಆಕಾಶದಲ್ಲಿ ಕಾಣುತ್ತಿದ್ದ

ಇವು ಸತ್ತವರನ್ನು ನರಕಕ್ಕೆ ಕರೆದೊಯ್ಯುವ ವಾಹನಗಳು ಎಂದು ಹಿಂದೆ ನಂಬಿದ್ದರಂತೆ. ಆದರೆ ಜೂಲಿಯಸ್ ಸೀಸರ್ ಸತ್ತಾಗಲೂ ಒಂದು ಧೂಮಕೇತು ಕಾಣಿಸಿಕೊಂಡದ್ದಾದ್ದರಿಂದ ಈ ನಂಬಿಕೆಯನ್ನು ಬುಡಮೇಲು ಮಾಡುವಂಥ ಇನ್ನೊಂದು ಸಿದ್ಧಾಂತ ಹೊರಬಿತ್ತು. ಇವು ಮಹಾನುಭಾವರ ಆತ್ಮಗಳು ಎಂದು ಈ ಬಗೆಯ ಪ್ರಚಾರದ ಕಾರಣ ಯುರೋಪಿನ ದೊರೆಯೊಬ್ಬ ಸತ್ತಾಗ ಜನ ಧೂಮಕೇತುವಿಗಾಗಿ ಹುಡುಕಾಡಿದರು. ಯಾವುದೂ ಸಿಗಲೇ ಇಲ್ಲ. ಹಲವಾರು ತಿಂಗಳ ನಂತರ ಒಂದು ಕಾಣಿಸಿಕೊಂಡಿತು. ಇತಿಹಾಸಕಾರರು ರಾಜನು ಸತ್ತ ದಿನಾಂಕವನ್ನೇ ಬದಲಿಸಿ, ಧೂಮಕೇತುವಿಗೆ ಅವನ ಆತ್ಮದ ಜವಾಬ್ದಾರಿ ಹೊರೆಸಿ ಕೃತಾರ್ಥರಾದರು! ಬರಬರುತ್ತಾ ರಾಜರುಗಳ ಸಿಂಹಾಸನಗಳು ಅಲ್ಲಾಡ ತೊಡಗಿದಾಗಲೆಲ್ಲಾ ಅದನ್ನು ಧೂಮಕೇತುಗಳಿಗೆ ಅಂಟಿಸುವ ಪರಿಪಾಠ ಅಂಟಿಕೊಂಡಿತು. ಅಷ್ಟೇ ಏಕೆ! 1970ರಲ್ಲಿ ಸುಂದರವಾದ ಕಾಮೆಟ್ ಬೆನೆಟ್ ಆಕಾಶವನ್ನು ಬೆಳಗಿದಾಗ ಇಸ್ರೇಲಿಯರ ಹೊಸ ಮಾರಕಾಸ್ತ್ರ ಎಂದು ಅನೇಕರು ದೃಢವಾಗಿ ನಂಬಿದ್ದರು. 1977ರಲ್ಲಿ ಇಂದಿರಾಗಾಂಧಿ ಪ್ರಧಾನಿಯ ಕುರ್ಚಿಯಿಂದ ಉರುಳಿದಾಗ ಒಂದು ವರ್ಷದ ಹಿಂದೆ ಬಂದು ಹೋಗಿದ್ದ ವೆಸ್ಟ್ ಎಂಬ ಧೂಮಕೇತುವಿನ ಮೇಲೆ ಆಪಾದನೆ ಹೊರಿಸಿದ್ದವರೂ ಉಂಟು (ಈಗಲೂ ಇದ್ದಾರೆ!).

ವರ್ಷಕ್ಕೆ ಸುಮಾರು 20–25 ಧೂಮಕೇತುಗಳು ಬಂದು ಹೋಗುತ್ತವೆ. ಎಲ್ಲವೂ ಬರಿಗಣ್ಣಿಗೆ ಕಾಣುವಷ್ಟು ಪ್ರಕಾಶ ಪಡೆಯುವುದಿಲ್ಲ. ಒಂದು ಅಥವಾ ಎರಡು ದುರ್ಬೀನುಗಳಿಗೆ ನಿಲುಕಬಹುದು. 1996ರ ಹಯಾಕುಟಾಕೆ, 1997ರ ಹೇಲ್‌ಬಾಪ್ ನಂತರ 2004ರಲ್ಲಿ ನಾಲ್ಕು ಧೂಮಕೇತುಗಳು ಬರಿಗಣ್ಣಿಗೆ ಕಾಣುವಷ್ಟು ಪ್ರಕಾಶ ಪಡೆದವು. ಆದರೆ ಕೇವಲ ಚುಕ್ಕೆಗಳಂತೆ ಮಾತ್ರ ಕಾಣುತ್ತಿದ್ದವು. ನಗರವಾಸಿಗಳು ಎಂದಿನಂತೆ ಗುರುತಿಸಲಾಗದೆ ಪರಿತಪಿಸಿದ್ದರು. ಹಳ್ಳಿಯ ಜನ ಅವು ಧೂಮಕೇತುಗಳು ಎಂಬುದನ್ನು ಕಂಡುಕೊಳ್ಳಲು ಏನೇನೂ ಪ್ರಯಾಸಪಡಲಿಲ್ಲ.

ಸಾಮಾನ್ಯವಾಗಿ ಧೂಮಕೇತುಗಳು ಸೂರ್ಯನನ್ನು ಸಮೀಪಿಸುವಾಗ ಅತಿ ಹೆಚ್ಚು ಪ್ರಕಾಶ ಪಡೆಯುವುವು. ಆದ್ದರಿಂದ ಅವು ಸಂಜೆಯ ಪಶ್ಚಿಮ ಆಕಾಶದಲ್ಲಿ ಅಥವಾ ಬೆಳಗಿನ ಪೂರ್ವದ ಆಕಾಶದಲ್ಲಿ ಕಾಣುವುವು. ಒಟ್ಟಿನಲ್ಲಿ ಸಂಧ್ಯಾಪ್ರಕಾಶದಲ್ಲಿ ಕರಗಿ ಹೋಗುವುವು ಎನ್ನಬಹುದು. ಆದರೆ ಹಯಾಕುಟಾಕೆ ಮತ್ತು 1999 ಲೀನಿಯರ್ ಮಾತ್ರ ರಾತ್ರಿ ಇಡೀ ಕಾಣುತ್ತಿದ್ದವು. ಇದಕ್ಕೆ ಅವುಗಳ ಕಕ್ಷೆಯ ವೈಶಿಷ್ಟ್ಯವೇ ಕಾರಣವಾಗಿತ್ತು. ಸೂರ್ಯ–ಭೂಮಿ ಇರುವ ಕ್ರಾಂತಿವೃತ್ತಕ್ಕೆ

ಲಂಬವಾಗಿತ್ತು ಇದರ ಕಕ್ಷೆ. ಹೀಗಾಗಿ ಅದು ಕ್ರಾಂತಿವೃತ್ತವನ್ನು ಹಾದುಹೋದಾಗ ರಾತ್ರಿ ಇಡೀ ಕಾಣುವ ಅವಕಾಶ ಸಿಕ್ಕಿತ್ತು.

ಧೂಮಕೇತುಗಳನ್ನು, ಗ್ರಹಗಳನ್ನು ಗುರುತಿಸಲು ಒಂದು ಸಣ್ಣ ಸೂಚನೆ ಇರುತ್ತದೆ. ಒಂದು ನಿರ್ದಿಷ್ಟ ದಿನ ಅವು ಚಂದ್ರನಿಂದ ಅಥವಾ ಪ್ರಕಾಶಮಾನದ ನಕ್ಷತ್ರದಿಂದ ಇಂತಿಷ್ಟು ಕೋನದಲ್ಲಿ ಕಾಣುತ್ತವೆ ಎಂದಿರುತ್ತದೆ. ಖಗೋಳ ಕಾಯಗಳ ವಿವರಣೆ ಕೊಡುವಾಗ 'ಹತ್ತಿರ' ಎಂದರೆ ಅವುಗಳ ನಡುವಿನ ಕೋನ ಕಡಿಮೆ ಎಂದರ್ಥ. ಚಂದ್ರನ(ಮತ್ತು ಸೂರ್ಯನ) ಗಾತ್ರ ಅರ್ಧ ಡಿಗ್ರಿ. ಆದ್ದರಿಂದ ಶನಿ–ಶುಕ್ರಗಳ ನಡುವೆ ಎರಡು ಡಿಗ್ರಿ ಕೋನ ಎಂದರೆ ಅಲ್ಲಿ ನಾಲ್ಕು ಚಂದ್ರರನ್ನು ಕೂಡಿಸಬಹುದು ಎಂದರ್ಥ. ಇದು ಅವುಗಳ ಪರಸ್ಪರ ಚಲನೆಯನ್ನು ತಿಳಿಯಲು ಸಹಾಯಕವಾಗುತ್ತದೆ. ಹಸ್ತವನ್ನು ಚಾಚಿ ಹಿಡಿದು ಒಂದು ಕಣ್ಣು ಮುಚ್ಚಿ ಆಕಾಶದ ಚುಕ್ಕೆಗಳನ್ನು ಅವುಗಳ ನಡುವಿನ ಕೋನ ಅಳೆಯಲು ನಿಮ್ಮ ಕೈಗಳನ್ನೇ ಬಳಸಬಹುದು ಎಂದು ಹಿಂದೆಯೇ ತಿಳಿದಿದ್ದೆವು.

ಹಸ್ತವನ್ನು ಚಾಚಿ ಹಿಡಿದಾಗ ನಿಮ್ಮ ತೋರ್ಬೆರಳಿನ ಕೋನ ಒಂದು ಡಿಗ್ರಿ, ಅಂಗೈನ ಅಗಲ ಐದು ಡಿಗ್ರಿ. ಈ ಅಳತೆಗಳನ್ನು ರೂಢಿಸಿಕೊಳ್ಳಲು ಚಂದ್ರನಿಂದ ಯಾವುದೇ ಗ್ರಹ ಎಷ್ಟು ದೂರದಲ್ಲಿದೆ ಎಂಬ ಕೋನದ ವ್ಯಾಖ್ಯೆಯೂ ತಿಳಿದಂತಾಯಿತು. ಜೊತೆಗೆ ಗ್ರಹಗಳ ಪರಿಚಯವೂ ಉಂಟಾದಂತಾಯಿತು.

ವರ್ಷಕ್ಕೆ ಸುಮಾರು 20–25 ಧೂಮಕೇತುಗಳು ಬಂದು ಹೋಗುತ್ತವೆ ಆ ಆದರೂ ಅವೆಲ್ಲವೂ ಬರಿಗಣ್ಣಿಗೆ ಕಾಣುವುದಿಲ್ಲ. ಆದ್ದರಿಂದ ಧೂಮಕೇತುವಿನ ಪ್ರಕಟಣೆಯನ್ನ ಸೂಕ್ಷ್ಮವಾಗಿ ಓದಿಕೊಳ್ಳಬೇಕು. ಅದು ಮಂಗಳಗ್ರಹದಷ್ಟು ಪ್ರಕಾಶಮಾನವಾಗಿದೆ ಎಂದರೆ ಮಾತ್ರ ಬರಿಗಣ್ಣಿಗೆ ಕಾಣುವ ಸಾಧ್ಯತೆ ಇದೆ ಎಂದರ್ಥ. ಅದರ ಬಾಲವನ್ನು ನೋಡಲು ಪ್ರಕಾಶ ಮಾಲಿನ್ಯವಿಲ್ಲದ ಸ್ಥಳಕ್ಕೆ ಹೋಗಿ ನೋಡಬೇಕು. ಚಂದ್ರನ ಬೆಳಕೂ ಇಲ್ಲದ ಶುಭ್ರರಾತ್ರಿಗಳು ಅತಿಸೂಕ್ತ. ದೂರದರ್ಶಕಗಳಿಗಿಂತ ದುರ್ಬೀನುಗಳಲ್ಲಿ ಧೂಮಕೇತುಗಳು ಸ್ಪಷ್ಟವಾಗಿ ಕಾಣುತ್ತವೆ.

*–ಆಕರ: ವೈಜ್ಞಾನಿಕ ಲೇಖನ: ಡಾ. ಬಿ.ಎಸ್. ಶೈಲಜ*

# 3. ತಾರುಣ್ಯ


| | | | |
|---|---|---|---|
| 3.1 | ಮುಪ್ಪುಯೌವನ | –ಮೂಲ: ಶೇಕ್ಸ್‌ಪಿಯರ್, ಕನ್ನಡಕ್ಕೆ: ಬಿ.ಎಂ.ಶ್ರೀ | 060 |
| 3.2 | ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ | –ಕುವೆಂಪು | 061 |
| 3.3 | ಬಾಳು | –ಡಾ. ಮೊಗಳ್ಳಿ ಗಣೇಶ್ | 073 |
| 3.4 | ಓದು ಪತ್ಯ: ಕೆಂಪು ಮುಡಿಯ ಹೆಣ್ಣು | –ಮೂಲ: ಒರ್ಹಾನ್ ಪಮುಕ್, ಕನ್ನಡಕ್ಕೆ: ಓ.ಎಲ್. ನಾಗಭೂಷಣ ಸ್ವಾಮಿ | 081 |

# 3. ತಾರುಣ್ಯ

## ಆಶಯ

ತಾರುಣ್ಯವು ಮನುಷ್ಯ ಬದುಕಿನ ಅತಿ ಆಕರ್ಷಕ, ನಿರ್ಣಾಯಕ ಕಾಲಾವಧಿಯಾಗಿದೆ. ಈ ಅವಧಿಯಲ್ಲಿನ ತಲ್ಲಣಗಳು, ಆಕರ್ಷಣೆಗಳು, ಆಮಿಷಗಳು ಮುಂತಾದವು ಅತಿ ವಿಶಿಷ್ಟವಾಗಿದ್ದು. ಅವನ ವ್ಯಕ್ತಿತ್ವ ತಳಹದಿಯಾಗಿರುತ್ತದೆ. ಹುಡುಗಾಟಿಕೆ ಮತ್ತು ಜವಾಬ್ದಾರಿಗಳ ನಡುವಿನ ದ್ವಂದ್ವಗಳನ್ನು ಮತ್ತು ಈ ಅವಧಿಯಲ್ಲಿನ ಒಳಿತು–ಕೆಡಕುಗಳನ್ನು ಸಾಹಿತ್ಯ ಭಾಗಗಳ ಮುಖೇನ ತಿಳಿಸಿಕೊಡುವುದು ಜೀವನದ ಮಹತ್ವದ ಘಟ್ಟವಾದ ಈ ಅವಧಿಯಲ್ಲಿ ಅವನ ಮನಸ್ಸು ಮಾಗುವತ್ತ ಚಲಿಸುತ್ತಿದ್ದು, ಕನಸುಗಾರಿಕೆ, ಆದರ್ಶಗಳು, ಭ್ರಮೆಗಳು, ಹೊಸತನದ ಹುಡುಕಾಟ, ಪ್ರೀತಿ ಪ್ರಣಯಗಳ ಸೆಳೆತ, ಪ್ರತಿಭೆ ಮುಂತಾದವುಗಳು ಬಗ್ಗೆ ಅರಿವನ್ನು ಮಂಡಿಸುವಲ್ಲಿ ಸಾಹಿತ್ಯದ ನೆರವನ್ನು ತಿಳಿಸಿಕೊಡುವುದು

## 3.1 ಮುಪ್ಪು ಯೌವನ

**–ಮೂಲ: ಶೇಕ್ಸ್‌ಪಿಯರ್,**
**ಕನ್ನಡಕ್ಕೆ : ಬಿ.ಎಂ.ಶ್ರೀ**

ನರೆಮುಪ್ಪು ಯೌವನಕೆ,
ಒಲ್ಲದೊಡನಾಟ ;
ಯೌವನವು ಸುಮ್ಮಾನ,
ಮುಪ್ಪು ಮಿಡುಕಾಟ;
ಯೌವನವು ಸಿರಿ ಸುಗ್ಗಿ
ಮುಪ್ಪು ಬರಿ ಮಾಗಿ ;
ಯೌವನವು ಶೃಂಗಾರಿ,
ಮುಪ್ಪು ತಲೆದೂಗಿ .
ಯೌವನಕೆ ಚೆಲ್ಲಾಟ,
ಮುಪ್ಪಿಗುಸಿರೆಳೆದಾಟ,
ಹುಲ್ಲೆನಗೆ ಯೌವನವು, ಹೆಳವು ಮುಪ್ಪು,
ಯೌವನದ ರಕ್ತ ಬಿಸಿ,
ಮುಪ್ಪೆಲ್ಲ ಕುಗ್ಗು ಕುಸಿ,
ಎದೆಗಚ್ಚು ಯೌವನವು, ಪೆಚ್ಚು ಮುಪ್ಪು,
ಎಲೆ ಮುಪ್ಪೆ ಸಾರತ್ತ,
ಯೌವನವೆ ಬಾರಿತ್ತ,
ಬರುವಳದೋ ಚಿಕ್ಕವಳು ನನ್ನ ಚೆಲುವೆ ;
ಮುಪ್ಪೆ, ನಡೆ, ನಡೆ ಒಲ್ಲೆ,
ಮುದಿಕುರುಬ, ನಿಲ್ಲಲ್ಲೆ,
ಬಂದಳದೊ ಚಿಕ್ಕವಳು ನನ್ನ ಚೆಲುವೆ,

## 3.2 ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ

**–ಕುವೆಂಪು**

ಯುವಕರು 'ನಿರಂಕುಶಮತಿ'ಗಳಾಗಬೇಕು 'ನಿರಂಕುಶಮತಿ'ತ್ವ ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೆ 'ನಿರಂಕುಶ ಮತಿ'

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆ ಹಕ್ಕನ್ನು ಬಿಟ್ಟವನು ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಾನೆ. ಆದ್ದರಿಂದ, ಸಹೋದರರೇ ಮತಿ ನಿಮ್ಮ ನಚ್ಚಿನ ರನ್ನ ದೀವಿಗೆಯಾಗಲಿ.

ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ; ಕಾಂತಿಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೆ ನಿಸ್ತೇಜವಾಗಿದೆ. ಯುವಕ ಮಿತ್ರರೇ, ಅಧೋಗತಿಗಿಳಿದಿರುವ ನಮ್ಮ ಮತಿಯನ್ನು ಮತ್ತೆ ಆಕಾಶಕ್ಕೆತ್ತಬೇಕು.

ಮತಿಯನ್ನು ನಿಸ್ತೇಜಗೈದಿರುವ ಕೆಲವು ಅಂಶಗಳನ್ನು ವಿವರಿಸುತ್ತೇನೆ. ಸಾವಧಾನದಿಂದ ಕೇಳಿ.

ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೆ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟುಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು, ನಾಮ ಹಾಕಿಕೊಳ್ಳುವುದು; ವಿಭೂತಿ

ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳವುದು, ಕೆಲವರನ್ನು ಸಾರ್ವಜನಿಕವಾಗಿ ಭಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ,

ಆದರೆ ಇನ್ನು ಹೆಚ್ಚು ಕಾಲ ಆ ಅಮೃತಸಂದೇಶಕ್ಕೆ ಕಿವುಡಾಗಿರಲಾರೆವು. ಹಾಗಿದ್ದರೆ ನಮಗೂ ನಮ್ಮ ಸಂಸ್ಕೃತಿಗೂ ಮರಣವೇ ಗತಿಯಾಗುತ್ತದೆ. ಯುವಕರಾದವರು ಎಚ್ಚತ್ತುಕೊಂಡು ದೀರ್ಘದೃಷ್ಟಿಯಿಂದಲೂ ವಿಶಾಲ ಹೃದಯದಿಂದಲೂ ಸನಾತನವಾದರೂ ಚಿರನವೀನವಾದ ಆತ್ಮನ ಚಿರಂತನ 'ದರ್ಶನ' ವನ್ನು ಪಡೆದು ತಮ್ಮನ್ನೂ ದೇಶವನ್ನೂ ಉದ್ಧಾರಮಾಡಿಕೊಳ್ಳಬೇಕಾಗಿದೆ.

ಸರ್ವಮತಗಳಿಗಿಂತಲೂ ಶುದ್ಧ ಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದವು ಏನೇ ಹೇಳಲಿ; ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳೂ ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರ ನಿಂದೆ. ಯಾರು ಆರಾಧಿಸಿ, ಬೋಧಿಸಿ, ಲಾಭ ಪಡೆಯುತ್ತ ನೆಮ್ಮದಿಯಾಗಿರುವವನು ಪಾಷಂಡಿಯಾಗುತ್ತಾನೆ.

ಚತುರ್ಮುಖ ಬ್ರಹ್ಮನೇ ಸಾಕ್ಷಾತ್ತಾಗಿ ಬಂದು, ನಾನೀಗ ನಿಮ್ಮೊಡನೆ ಮಾತಾಡುತ್ತಿರುವಂತೆ, ಋಷಿಗಳಿಗೆ ವೇದಗಳನ್ನು ಉಪನ್ಯಸಿಸಿದೆನು ಎಂದು ಹೇಳಿದರೆ, ಕಣ್ಣುಮುಚ್ಚಿಕೊಂಡು ನಂಬಬೇಡಿ. ಯಾವ ಕಾಲದಲ್ಲಿಯೋ ಯಾವ ಸಮಾಜಕ್ಕಾಗಿಯೋ ಮನು ಬರೆದಿಟ್ಟ ಕಟ್ಟಳೆಗಳು ಇಂದಿಗೂ ನಮ್ಮನ್ನಾಳಬೇಕೆಂದು ಹೇಳಿದರೆ ತಲೆದೂಗಿ ಬಿಡಬೇಡ. ಆಗಿನ ಮನು ಪವಿತ್ರನಾದರೆ ಈಗಿನ ಮಹಾತ್ಮಾಗಾಂಧಿ ಪವಿತ್ರನಲ್ಲವೆ? ನಂಬುಗೆ ಪುರಾತನವಾದ ಮಾತ್ರಕ್ಕೆ

ಸತ್ಯವಾದುದೆಂದು ಭಾವಿಸಬೇಡಿ. ವಿಜ್ಞಾನ ಪ್ರಪಂಚದಲ್ಲಿ ಹೊಸದಾಗಿ ಕಂಡು ಹಿಡಿದ ಸತ್ಯಗಳು ಹಳೆಯ ಅರ್ಧಸತ್ಯಗಳಿಂತಲೂ ಮಾನ್ಯವಾಗುವುದಾದರೆ ಧರ್ಮ ಪ್ರಪಂಚದಲ್ಲೇಕೆ ಹಾಗಾಗಬಾರದು? ವೇದ ಅನಾದಿಯಾದರೆ ಅನಂತವೂ ಆಗಿರುವುದಿಲ್ಲವೇ? ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೇಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗೊಂಡಿಲ್ಲ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರಮಾಡಿ ಹೃದಯಜೀವನ ಹಳೆಯನೀರಿನ ಕೊಳಕು ಕೊಳವಾಗದಿರಲಿ; ಯಾವಾಗಲೂ ಹೊಸ ನೀರು ಬಂದು ಹ–ರಿಯುತ್ತಿರುವ ಸ್ವಚ್ಛ ಸಲಿಲ ಸ್ತೋತ್ರವಾಗಿರಲಿ.

ಮಹನೀಯರೇ, ಕೆಲವು ಉದಾಹರಣೆಗಳನ್ನು ತೆಗೆದುಕೊಂಡರೆ ನನ್ನ ಆಶಯ ನಿಮಗೆ ಇನ್ನೂ ಸ್ಪಷ್ಟವಾಗುತ್ತದೆ. ಅಸ್ಪುಷ್ಟವಾಗಿ ಅನಿರ್ದಿಷ್ಟವಾಗಿ ನಿರಾಕಾರವಾಗಿ ತತ್ತ್ವಪ್ರತಿಪಾದನೆ ಮಾಡುವುದಕ್ಕಿಂತ ದೃಷ್ಟಾಂತರಗಳನ್ನೂ ನಿದರ್ಶಗಳನ್ನೂ ತೆಗೆದುಕೊಂಡು ಭಾವವನ್ನು ವಿವರಿಸುವುದು ಮೇಲು.

ಮತಭ್ರಾಂತಿಯೂ ಮೌಢ್ಯವೂ ವೈಜ್ಞಾನಿಕ ಪ್ರಗತಿಗೆ ಹೇಗೆ ಮಹಾಕಂಟಕಗಳಾದವೂ ಎಂಬುದಕ್ಕೆ ಪಾಶ್ಚಾತ್ಯ ದೇಶಗಳ ಕ್ರೈಸ್ತಧರ್ಮ ಚ–ರಿತ್ರೆತಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಅವುಗಳಲ್ಲಿ ಒಂದು, ಸುಪ್ರಸಿದ್ಧ ವಿಜ್ಞಾನಿಯಾಗಿ ಗೆಲಿಲಿಯೋ ಎಂಬಾತನನ್ನು ಕುರಿತದ್ದು. ಕ್ರೈಸ್ತರಿಗೆ ಬೈಬಲ್ ಪರಮ ಪ್ರಮಾಣದ ಪವಿತ್ರ ಗ್ರಂಥ. ಹಿಂದೂಗಳಿಗೆ ವೇದಗಳಿರುವಂತೆ. ಆದ್ದರಿಂದ ಕ್ರೈಸ್ತ ಪುರೋಹಿತ ಗುರುಗಳೂ ಭಕ್ತ ಜನರೂ ಬೈಬಲ್ಲಿಗೆ ವ್ಯತಿರಿಕ್ತವಾದುವೆಲ್ಲ ಪಾಷಂಡ ಮತವೆಯ ಸಾರಿ, ಅಂತಹ ದುರ್ಮತಕ್ಕೆ ಕಾರಣರಾದವರನ್ನು ಜೀವಸಹಿತವಾಗಿ ಸುಡುವುದು ಮೊದಲಾದ ಶಿಕ್ಷೆಗಳಿಗೆ ಗುರಿಮಾಡುತ್ತಿದ್ದರು. ಎಷ್ಟೋ ಜನ ಸಾತ್ತ್ವಿಕ ಜೀವಿಗಳೂ ಮೇಧಾವಿಗಳೂ ಆದ ಸತ್ಯಾರಾಧಾಕರು ಬೈಬಲ್ಲಿಗೂ ಮತ್ತು ಕ್ರೈಸ್ತಗುರು ಸಂಪ್ರದಾಯಕ್ಕೂ ವ್ಯತ್ತಿರಿಕ್ತವಾದ ಖಗೋಳಶಾಸ್ತ್ರ, ಜೀವಶಾಸ್ತ್ರ, ಮತ್ತು ಭೌತಶಾಸ್ತ್ರಗಳ ಅಮೂಲ್ಯ ಸತ್ಯಗಳನ್ನು ಕಂಡುಹಿಡಿದ ಹೇಳಿದುದರ ಫಲವಾಗಿ ಆ ಪುರೋಹಿತರ ಕ್ರೋಧಾಗ್ನಿಗೆ ಸಿಕ್ಕಿ ಭಸ್ಮೀಭೂತ ರಾಗಬೇಕಾಯಿತು.

ಗೆಲಿಲಿಯೊ ಎಂಬಾತನು ದೂರದರ್ಶಕ ಯಂತ್ರವನ್ನು ಕಂಡುಹಿಡಿದ, ಗ್ರಹ ಚಂದ್ರ ತಾರೆಗಳನ್ನು ನೋಡಿ ಪರೀಕ್ಷಿಸಿದುದರ ಫಲರೂಪವಾಗಿ ಭೂಮಿ

ಇತರ ಗ್ರಹಗಳಂತೆ ಸೂರ್ಯನ ಸುತ್ತ ಸುತ್ತುತ್ತದೆ ಎಂದು ಪ್ರಯೋಗಪೂರ್ವಕವಾಗಿ ಸಿದ್ಧಾಂತ ಮಾಡಿದನು. ಆದರೆ ಕ್ರೈಸ್ತ ಸಂಪ್ರದಾಯಕ್ಕೆ ಅನುಸಾರವಾಗಿ ಭೂಮಿ ಜಗತ್ತಿನ ಕೇಂದ್ರ ಸ್ಥಾನ; ಸೂರ್ಯ ನಕ್ಷತ್ರಗಳೆಲ್ಲ ಭೂಮಿಯ ಸುತ್ತ ಸುತ್ತುತ್ತವೆ. ಆ ಕಾರಣದಿಂದಲೇ ಕ್ರೈಸ್ತಗುರುಗಳು ಗೆಲಿಲಿಯೊವನ್ನು ಪಾಷಾಂಡಿಯೆಂದು ಸಾರಿ ವಿಚಾರಣೆಗೆ ಒಳಪಡಿಸಿದರು. ಮುಟ್ಠಾಳರೆಲ್ಲ ಸೇರಿ ಮೇಧಾವಿಯನ್ನು ಕುರಿತು ಹೀಗೆ ಹೆಳಿದರು; "ನಮ್ಮ ಪವಿತ್ರ ಧರ್ಮಶಾಸ್ತ್ರ ಭೂಮಿಯೆ ವಿಶ್ವದ ಕೇಂದ್ರವೆಂದು ಹೇಳುತ್ತದೆ. ಆಕಾಶದಲ್ಲಿಟ್ಟಿರುವ ಅಲಂಕಾರ ದೀಪಗಳು. ಅವು ಭೂಮಿಯ ಸುತ್ತಸುತ್ತುತ್ತವೆ. ಭೂಮಿ ತನಗಿಂತಲೂ ಬಹುಪಾಲು ದೊಡ್ಡದಾಗಿರುವ ಸೂರ್ಯನ ಸುತ್ತಲೂ ಸುತ್ತುವ ಅನೇಕ ಗ್ರಹಗಳಲ್ಲಿ ಒಂದು ಸಣ್ಣ ಯಃಕಶ್ಚಿತ ಗ್ರಹ ಮಾತ್ರವೆಂದು ಸಿದ್ಧಾಂತ ಮಾಡಿ ನಮ್ಮನ್ನು ಸೃಷ್ಟಿಸಿದ ಕರುಣಾಮಯನಾದ ಸೃಷ್ಟಿಕರ್ತನಿಗೂ ಆತನ ವಾಣಿಗೂ ಆತನ ಭಕ್ತರಿಗೂ ಅವಮಾನ ಮಾಡಿದ್ದೀಯೆ. ಅಲ್ಲದೆ ನೀನು ಹೇಳುವುದು ಬೈಬಲ್ಲಿಗೆ ವ್ಯತಿರಿಕ್ತ ವಾದುದರಿಂದ ಅದು ಸುಳ್ಳು. ನಿನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು ನಮ್ಮ ಪವಿತ್ರಮತ ಹೇಳುವ ಸಿದ್ಧಾಂತವನ್ನು ಒಪ್ಪಿಕೊಳ್ಳದಿದ್ದರೆ, ಪವಿತ್ರಮತದ ಉದ್ಧಾರಕ್ಕಾಗಿಯೂ ಬೈಬಲ್ಲಿನ ಗೌರವಾರ್ಥವಾಗಿಯೂ ಪಾಷಂಡಿಗಳಿಗೆ ಭೀತಿ ಹುಟ್ಟಿಸುವ ಸಲುವಾಗಿಯೂ ಸೃಷ್ಟಿಕರ್ತನ ಮಹಿಮೆ ಪೂಜೆಗಳಿಗಾಗಿಯೂ ನಿನ್ನ ಆತ್ಮದ ಪ್ರಾಯಶ್ಚಿತ್ತ ಮತ್ತು ಮೋಕ್ಷಾರ್ಥವಾಗಿಯೂ ನಿನ್ನನ್ನು ಜೀವಸಹಿತವಾಗಿ ಸುಡುತ್ತೇವೆ! ಹೇಳು! ಸುಳ್ಳು ಸಿದ್ಧಾಂತವನ್ನು ವಾಪಸು ತೆಗೆದುಕೊಳ್ಳುತ್ತೀಯೊ? ಜೀವಸಹಿತವಾಗಿ ಸುಡಿಸಿಕೊಳ್ಳುತ್ತೀಯೊ?" ಗೆಲಿಲಿಯೊಗೆ ಚೆನ್ನಾಗಿ ಗೊತ್ತು. ತನ್ನ ಸಿದ್ಧಾಂತವೇ ಸರಿ ಎಂದು. ಆದರೆ ವಾಪಸು ತೆಗೆದುಕೊಳ್ಳದಿದ್ದರೆ, ಹಿಂದೆ ಕೆಲವರನ್ನು ಸುಟ್ಟ ಹಾಗೆ ತನ್ನನ್ನೂ ಸುಡುತ್ತಾರೆ ಎಂದೂ ಆತನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಆ ಮುಟ್ಠಾಳರ ತೃಪ್ತಿಗಾಗಿ ತನ್ನ ಸಿದ್ಧಾಂತವನ್ನು ವಾಪಸು ತೆಗೆದುಕೊಂಡು, ಅವರ ಸಿದ್ಧಾಂತವೇ ಸರಿಯೆಂದು ಒಪ್ಪಿ ಬಿಡುಗಡೆ ಎಂದೂ ಪಡೆದನು. ಆದರೆ ಕೋರ್ಟಿನಿಂದ ಹೊರಗೆ ಬರುವಾಗ ತನ್ನಷ್ಟಕ್ಕೆ ತಾನೇ "ನಾನು ನೊವಿಗೆ ಹೆದರಿ ವಾಪಸು ತೆಗೆದುಕೊಂಡರೇನಾಯಿತು? ಭೂಮಿ ಸೂರ್ಯನ ಸುತ್ತ ಸುತ್ತಿಯೇ ಸುತ್ತುತ್ತದೆ" ಎಂದುಕೊಂಡನಂತೆ, ಹೀಗೆ ಮತಿಹೀನವಾದ ಮತ ಜ್ಞಾನದ ಪ್ರಗತಿಗೆ ಅಡಚಣೆಯಾಗಿರುವುದಕ್ಕೆ ಸಾವಿರಾರು ನಿದರ್ಶನಗಳು ಹಿಂದೆಯೂ ಸಿಕ್ಕುತ್ತವೆ; ಇಂದೂ ದೊರೆಯುತ್ತವೆ.

ಕೆಲವು ತಿಂಗಳ ಹಿಂದೆ ಪತ್ರಿಕೆಯೊಂದರಲ್ಲಿ ಯಾರೋ ಒಬ್ಬರಿಗೆ ಯಾವುದೇ ದೇವತೇ ಯಾವುದೋ ತೋಟದಲ್ಲಿ ಕಾಣಿಸಿಕೊಂಡಂತೆಯೂ, ಅ ದೇವತೆ "ಎಲ್ಲರೂ ಇಂತಿಷ್ಟು ದಿನಗಳ ಒಳಗಾಗಿ ಉಗಾದಿ ಹಬ್ಬವನ್ನು ಮಾಡದಿದ್ದರೆ

ಮನೆಮನೆಗೂ ಒಂದೋಂದು ಜೀವವನ್ನು ಅಪಹರಿಸುತ್ತೇನೆ" ಎಂದು ಹೇಳಿದಹಾಗು ಪ್ರಕಟವಾಗದ್ದಿತು. ಮಾಡಬೇಕಾದ ನೈವೇದ್ಯಗಳ ವಿವರವು ಪ್ರಮಾಣವು ಕೂಡ ಅಚ್ಚಾಗಿತ್ತು. ಅನೇಕರು ಹೆದರಿಯು ಹಬ್ಬ ಮಾಡಿಕೊಂಡು ತಿಂದರು ಹಬ್ಬ ಮಾಡಿಕೊಂಡು ತಿಂದುದ್ದರಿಂದ ಅಪಾಯವೇನಿಲ್ಲ ಆದರೆ ಅಂತಹ ಮೂಢ ಭಾವಗಳ ಪ್ರಚಾರ ದುಷ್ಪರಿಣಾಮಕಾರಿ ಯಾದುದಲ್ಲದೆ? ಅದರಲ್ಲಿ ಯೂ ಹಳ್ಳಿಗಳಲ್ಲಿ ಪತ್ರಿಕೆಗಳೆಂದರೆ ವೇದ ಸಮಯವಾಗಿದೆ ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನನ್ನು ಬೇಕಾದರು ನಂಬುತ್ತಾರೆ ವೇದಾ ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದರೆ ಎಂತಹ ಕ್ರೂರ ಕರ್ಮವನ್ನಾದರು ಸರಿ ಎಂದು ನಂಬುವಂತೆ! ಅಚ್ಚಿನಲ್ಲಿ ಅವರಿಗಷ್ಟು ಗೌರವ" ನಮಗೆ ಸಂಸ್ಕೃತ ಶ್ಲೋಕಗಳಲ್ಲಿರುವಂತೆ ದುಡ್ಡು ಇದ್ದರೆ ಸರಿ. 'ಮೊಲಕ್ಕೆ ಮೂರು ಕೋಂಬುಗಳ ತುದಿಯಲ್ಲಿ ಕಣ್ಣುಗಳಿವೇ. ಎಂದು ಬೇಕಾದರು ಅಚ್ಚು ಮಾಡಬಹುದು ಎಂಬ ಸಂಗತಿ, ಪಾಪ, ಆ ಹಳ್ಳಿಗ–ರಿಗೇನು ಗೋತ್ತು? ಹಾಗೆಯೆ ಪರ್ಜನ್ಯಜಪ ಮಾಡಿ ಮಳೆ ಬರಿಸಿದ್ದರು ಎನ್ನುವ ವಿಷಯ. ಅದನ್ನು ಕುರಿತು ಎಷ್ಟು ಮಂದಿ ನಿಷ್ಪಕ್ಷಪಾತವಾಗಿ ಧೀರಮತಿಯಿಂದ ಆಲೋಚಿಸಿದ್ದಾರೆ? ಸಹರಾ ಮರುಭೂಮಿಗೆ ಪುರೋಹಿತರನ್ನು ಕಳುಹಿಸಿ ಪರ್ಜನ್ಯಜಪ ಮಾಡಿದರೆ ಮಳೆ ಬಂದು ಅದು ಫಲವತ್ತಾಗುತ್ತದೆಯೆ? ಆಗುತ್ತದೆ ಎಂದು ನಿರ್ಣಯವಾಗುವವರೆಗೆ ನಂಬುಗೆ ಕುರುಡಲ್ಲವೆ? ಹೃತ್ಪೂರ್ವಕವಾದ ಪ್ರಾರ್ಥನೆಯಿಂದ ಪ್ರಕೃತಿ ನಿಯಮಗಳು ಮನಕರಗುತ್ತವೆಯೆ? ಒಂದು ವೇಳೆ ಕರಗುವುದಾದರೂ ರೈತಾಪಿ ಜನಗಳು ಮನೆಮನೆಯಲ್ಲಿಯೂ ಮೂರುಹೊತ್ತು 'ಭಗವಂತ' ಮಳೆಯನ್ನು ದಯಪಾಲಿಸು' ಎಂದು ಬೇಡುವ ಆರ್ತಧ್ವನಿಗಿಂತಲೂ ದುಡ್ಡುಕೊಟ್ಟು ಮಾಡಿಸುವ ಜಪಕ್ಕೆ ಜಗಚ್ಛಕ್ತಿ ಹೆಚ್ಚಾಗಿ ಕೃಪೆದೋರುತ್ತದೆಯೆ? ಯುವಕರೆಲ್ಲರೂ ಇಂಥ ಪ್ರಶ್ನೆಗಳನ್ನು ಧೀರವಾಗಿ ಕೇಳಿಕೊಳ್ಳಬೇಕು. ಧೀರವಾದ ಉತ್ತರಗಳನ್ನು ಕಂಡು ಹಿಡಿದು ಕೊಳ್ಳಬೇಕು.

ಏಕೆಂದರೆ ಇಂದು ಪರ್ಜನ್ಯಜಪ ಮಾಡಿ ಮಳೆಬರಿಸಿದವರು ನಾಳೆರಾಮಧ್ಯಾನ ಮಾಡಿ ಪ್ಲೇಗು ಓಡಿಸಲಾರರೆ ಎಂದು ಮೂಢರು ಆ ರೋಗಕ್ಕೆ ಬೇಕಾಗುವ ವೈದ್ಯಕಾರ್ಯಗಳನ್ನು ಮಾಡದೆ ನಾಶವಾಗಬಹುದು. ಉದ್ದೇಶ ಎಷ್ಟೇ ಶ್ಲಾಘ್ಯವಾಗಲಿ, ಅದು ತಿಳಿವಳಿಕೆಯಿಂದ ಕೂಡಿರದಿದ್ದರೆ ಎಲ್ಲೆಲ್ಲಿಯೂ ಜನರು ಸಾಯುತ್ತಿದ್ದರಂತೆ. ಆ ನಗರದ ದೊಡ್ಡ ಪಾದ್ರಿ ಸಿಡುಬಿನ ರೋಗವನ್ನು ಓಡಿಸುವುದಕ್ಕೆಂದು ಜನರನ್ನೆಲ್ಲ ಚರ್ಚಿನಲ್ಲಿ ಒಟ್ಟುಗೂಡಿಸಿ ದೇವರ ಪ್ರಾರ್ಥನೆ ಮಾಡಿಸಿದನಂತೆ. ಆದರೆ ಆ ಗುಂಪಿನಲ್ಲಿ ಸಿಡುಬಿನ ಸೋಂಕು ತಗುಲಿದವರು ಇದ್ದುದರಿಂದ, ಜನರು 'ಸಿಡುಬಿನಿಂದ ಪಾರುಮಾಡು' ಎಂದು ದೇವರನ್ನು ಬೇಡುತ್ತಿದ್ದಾಗಲೂ ಆ ಭಯಂಕರ ರೋಗ ನೆರೆದವರಲ್ಲಿ ಒಬ್ಬರಿಂದೊಬ್ಬ–

ರಿಗೆ ಹರಡುತಿತ್ತು. ಇಲ್ಲಿ ಪಾದ್ರಿಯ ಮತ್ತು ಜನರ ಉದ್ದೇಶ ಸದ್ಭಾವದಿಂದ, ಕೂಡಿದ್ದರೂ ಸಿಡುಬಿನ ರೋಗದ ವಿಚಾರವಾಗಿದ್ದ ಅವರ ಅಜ್ಞಾನ ಅನಾಹುತಗಳಿಂದ ಜನರನ್ನು ಪಾರುಮಾಡಬೇಕಾದರೆ ಅವರ ಕೈಗೆ ಮತಿಯ ದೀವಿಗೆಯನ್ನು ಕೊಡಬೇಕು ಅವರಲ್ಲಿ ಪರೀಕ್ಷಿಸುವ ಬುದ್ದಿಯೂ ವಿಮರ್ಶಿಸುವ ಧೈರ್ಯವೂ ಉದ್ಭವಿಸುವಂತೆ ಮಾಡಬೇಕು. "ಅವಿದ್ಯಾಯವಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ। ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇ ನೈವ ನೀಯಮಾನಾ ಯಂಥಾಂಧಾಃ॥ ಅವಿದ್ಯೆಯ ಮಧ್ಯೆ ಬಿದ್ದುಕೊಂಡಿದ್ದರೂ ತಾವು ಬುದ್ಧಿವಂತರೆಂದೂ ಪಂಡಿತರೆಂದೂ ಭ್ರಮಿಸಿ, ಕುರುಡರಿಂದ ನಡೆಯಿಸಲ್ಪಡುವ ಕುರುಡರಂತೆ, ಅಜ್ಞಾನಿಗಳು ಕಷ್ಟಕ್ಕೀಡಾಗಿ ತೊಳಲುತ್ತಾರೆ" ಎಂದು ಹೇಳುವ ಉಪನಿಷತ್ತಿನ ಎಚ್ಚರಿಕೆಗೆ ಕಿವಿಗೊಡಬೇಕು.

ಹಾಗೆಯೆ 'ದೇವಾಲಯ ಪ್ರವೇಶ'ದ ಪ್ರಶ್ನೆ ಮುಂತಾದವುಗಳನ್ನು ಕೆಚ್ಚಿನಿಂದ ಮತಿಯ ಒರೆಗಲ್ಲಿಗೆ ಹಚ್ಚಿನೋಡಬೇಕು. ಮೊನ್ನೆ ಪತ್ರಿಕೆಗಳಲ್ಲಿ ನಾನು ಓದಿದೆ. ಒಬ್ಬರು ಕೃತವಿದ್ಯರದ ಗೌರವಸ್ಥರು ದೇವಾಲಯಕ್ಕೆ ಹೋಗಿ ಬಂದುದಕ್ಕೆ ಪ್ರತಿಯಾಗಿ ಸಂಪ್ರೋಕ್ಷಣೆಗೆ ಜುಲುಮಾನೆ ಕೊಡಬೇಕಾಗಿ ಬಂದಿತಂತೆ. ಕಾರಣ ಅವರು ಅಸ್ಪೃಶ್ಯದ ಜಾತಿಗೆ ಸೆರಿದವರಂತೆ. ಅವರಿಗಿಂತಲೂ ಮೂಢರು ಕೊಳಕರೂ ದುಷ್ಟರೂ ರೋಗಿಗಳೂ ದುರಾಚಾರಿಗಳೂ ಆದ 'ಸ್ಪೃಶ್ಯ'ರೆನಿಸಿಕೊಂಡವರು ಗುಡಿಯೊಳಗೆ ಹೋದರೆ ಮೈಲಿಗೆಯಾಗುವುದಿಲ್ಲವಂತೆ! 'ಸ್ಪೃಶ್ಯ' ಯುವಕರು ತಮ್ಮ ಸಹೋದರನಿಗಾದ ಅವಮಾನ ತಮ್ಮದೆಂದು ಭಾವಿಸಿ ದೇವಾಲಯಗಳಿಗೆ

ಹೋಗುವುದನ್ನೆ ಬಿಟ್ಟು, ಹೊರಗೆ, ಪ್ರಕೃತಿ ಸೌಂದರ್ಯದಲ್ಲಿ, ಉದಯಿಸುವ ಸೂರ್ಯನಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ, ದರಿದ್ರನಾರಾಯಣನ ಸೇವೆಯಲ್ಲಿ ತಮ್ಮ ದೇವಾಲಯಗಳನ್ನು ಕಟ್ಟಿಕೊಂಡು, ಮತದ ಅನೌದಾರ್ಯವನ್ನು ಮು–ರಿಯಬೇಕು. ಅಸ್ಪೃಶ್ಯ ಯುವಕರಾದವರಿಗೆ ನನ್ನದೊಂದು ಬಿನ್ನಹ. ನೀವು ಅವಮಾನಿಸಿಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ? ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ? 'ಪ್ರಭುಲಿಂಗ ಲೀಲೆ'ಯಲ್ಲಿ ಸತ್ಯಸಾಕ್ಷಾತ್ಕಾರದ ಕಾರ್ಯವನ್ನು ಬಿಟ್ಟು ಕೀರ್ತಿಪೂಜಾಲಾಭದಾಶೆಗೆ ದೇವಸ್ಥಾನವನ್ನು ಕಟ್ಟಿಸುತ್ತಿದ್ದ ಸಿದ್ಧರಾಮವನ್ನು ಕುರಿತು ಅಲ್ಲಮನು

ಸಕಲ ಕಲ್ಲನು ಕಡಿದು, ಕಲ್ಲಿಗೆ
ಶಿಖರ ದೇಗುಲವೆಂದು ಮಾಡಿಸಿ,
ಮಕರಿಸುವರಿವರೊಡ್ಡರಲ್ಲದೆ ಸಿದ್ಧರಲ್ಲ–

ಎಂದಿದ್ದಾನೆ. ಒಡ್ಡತನದ ಕೆಲಸವನ್ನು ನಾವೇಕೆ ಮಾಡಬೇಕು! ಗುಡಿಯೊಳಗೆ

ಹೋಗಿ ಮತದ ಮೌಢ್ಯಕ್ಕೂ ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೆ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ? ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ ಸಾಧನೆಗಾಗಿಯೆ ಹೊರತು ಹರಿಜನ ಮೋಕ್ಷಕ್ಕಾಗಿಯಲ್ಲ. ಹೊರಗಿನ ಸುಂದರ ಪ್ರಕೃತಿಮಯ ಜಗತ್ತೂ ಅಂತರಂಗದ ದಿವ್ಯಭಾವಗಳ ಪ್ರಪಂಚವೂ ಸರ್ವರಿಗೂ ಸುಲಭವಾದ ಮಹಾಪುರುಷ ಕೃತಿಗಳಲ್ಲಿರುವ ಮಹದಾಲೋಚನೆಗಳೂ ನಮಗೆ ದೇವಸ್ಥಾನ, ಪೂಜೆ, ಗುರು, ಮಂತ್ರ ಇವುಗಳೆಲ್ಲವೂ ಆಗಲಿ; ಪ್ರಯತ್ನಿಸುವವ ರಿಗೆಲ್ಲ ಆ 'ದರ್ಶನ' ಲಭಿಸುವುದರಲ್ಲಿ ಸಂದೇಹವಿಲ್ಲ; ಅದು ಸಿದ್ಧಿಸುವವರೆಗೂ ನಮಗಾಗಲಿ ನಮ್ಮ ದೇಶಕ್ಕಾಗಲಿ ಮೋಕ್ಷವಿಲ್ಲ; ಸುಖವಿಲ್ಲ; ಶಾಂತಿಯಿಲ್ಲ; ದಾಸ್ಯದಿಂದಬಿಡುಗಡೆಯಿಲ್ಲ.

ಆದ್ದರಿಂದ ಯುವಕ ಸಹೋದರರೇ ಯಾವ ಒಂದು ಸಂಪ್ರದಾಯದ ಸಂಕೋಲೆಗೂ ಸಿಕ್ಕಿಕೊಳ್ಳಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು. ಜಾತಿ ಮತ ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರಷರ ಜ್ಞಾನಗಂಗೆಗಳ ಮಂಗಳಸಂಗಮದಲ್ಲಿ ತೀರ್ಥಸ್ನಾನಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು

ಸೋದರರೇ, ಅಂತಹ 'ದರ್ಶನ'ದ ಸಂಪಾದನೆ ಅಷ್ಟೇನೂ ದುಸ್ಸಾಧ್ಯವಲ್ಲ. ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭಸಾಧ್ಯ.

ಆ 'ದರ್ಶನ' ವನ್ನು ಪಡೆದ ಮೇಲೆ ನಮಗೆ ದೇವಸ್ಥಾನಗಳ ಅವಶ್ಯಕತೆ ಇರುವುದಿಲ್ಲ. ದೇವದೇವನ ಶರೀರರೂಪಿಯಾದ ಜಗತ್ತೆಲ್ಲವೂ ದೇವಸ್ಥಾನವಾಗುತ್ತದೆ. ಅಸ್ಪೃಶ್ಯರೆಂದು ಪರಿಗಣಿತರಾಗಿರುವ ಈಶ್ವರ ಶಿಶುಗಳು ಕಲ್ಲು ಕಟ್ಟಡದ ದೇವಸ್ಥಾನಗಳಿಗೆ ಹೋಗಿ ಭಕ್ತಿಪ್ರದರ್ಶನ ಮಾಡಿದ ಪಾಪಕ್ಕೆ ಆಮೇಲೆ ಸಂಪ್ರೋಕ್ಷಣೆಗಾಗಿ ಜುಲುಮಾನೆ ಕೊಡುವುದೂ ತಪ್ಪುತ್ತದೆ.

ಇಂತಹ ದಿವ್ಯ 'ದರ್ಶನ' ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೆ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ. ಆದ್ದರಿಂದ ತಮ್ಮ ಮತ್ತು ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ 'ನಿರಂಕುಶಮತಿ' ಗಳಾಗಬೇಕು.

'ನಿರಂಕುಶಮತಿ' ಗಳಾಗಬೇಕಾದರೆ ದಾಸ್ಯಬುದ್ಧಿ ತೊಲಗಬೇಕು;

ದಾಸ್ಯಯಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸುವ ಪ್ರಯತ್ನಿಸಬೇಕು; ಎಂದರೆ ಸ್ವಾವಲಂಬನಬೇಕು; ಎಂದರೆ ಇನ್ನೊಬ್ಬರ ಕೈ ಹಾರೈಸಿ ಹೊಟ್ಟೆ ಹೊರೆಯುವುದು ತಪ್ಪಬೇಕು. ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುವುದಾದರೆ, ಸಂಪತ್ತುಬೇಕು, ಹಣಬೇಕು; ಉದ್ಯೋಗಬೇಕು. ಮಿತ್ರರೇ, ನಾನು ಒಪ್ಪಿಕೊಳ್ಳುತೇನೆ, ಈ ಸಮಸ್ಯೆ ನಿಜವಾಗಿಯೂ ಕಗ್ಗಂಟಾಗಿದೆ. ಆ ಸಮಸ್ಯೆಯನ್ನು ಪರಿಹರಿಸ ಲೆಂದೇ ದೇಶದ ನಾಯಕರೆಲ್ಲರೂ ಕಷ್ಟಪಡುತ್ತಿದ್ದಾರೆ. ಆಶಾಬುದ್ಧಿಯನ್ನು ಅವರ ಉದ್ಯಮದಲ್ಲಿ ನಾವೂ ಭಾಗಿಗಳಾಗಿ ಇಂದಿನ ತಪಸ್ಸು ಮುಂದಿನ ಸತ್ಫಲಕ್ಕೆ ಮಾರ್ಗವೆಂದು ಶ್ರದ್ಧೆಯಿಂದ ಮುಂದುವರಿಯಬೇಕಾಗಿದೆ. ಸಮಸ್ಯೆಯ ಅಗಾಧತೆ ನಮ್ಮ ಮುಂದಿರುವ ಸಾಹಸದ ಆಳಗಲಗಳನ್ನು ಸೂಚಿಸುತ್ತದೆ.

ಆದರೂ ಪಾರಾಗಲೂ ಕೆಲವು ಸೂಚನೆಗಳನ್ನು ಕೊಡಬಹುದು. ಹೀಗೆಯೇ ಮಾಡಿ ಎಂದು ಇತಿವಿಧಿಗಳನ್ನು ಸೂಚಿಸುವುದು ಕಷ್ಟಸಾಧ್ಯವಾದರೂ ಹೀಗೆ ಮಾಡದಿದ್ದರೆ ಒಂದಿಷ್ಟು ಲೇಸಾಗಬಹುದೆಂದು ನೇತಿವಿಧಾನವನ್ನಾದರೂ ಹೇಳಲು ಸಾಧ್ಯ.

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿಮೆ 'ಉತ್ಪತ್ತಿಕಾರಕ' ವಾಗಿರುವುದಿಲ್ಲ; 'ಸಂಗ್ರಹಕಾರಕ' ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೆ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೆ ಹೋಗಲಾಗುತ್ತದೆ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯೆ ನಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನು ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟನಷ್ಟಗಳನ್ನು ಪರಿಹ–ರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ, ದೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲುಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಅವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನ ಪಥದಲ್ಲಿ ವಿನಿಯೋಗಿಸುವಂತೆ ಮಾಡಬೇಕು.

ಯುವಕರು ವೇಷ ಭೂಷಣಗಳಲ್ಲಿ ಅತಿ ಷೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಷೋಕಿ

ಮಾಡಲೆಂದು ಮದುವೆ ಮಾಡಿಕೊಂಡು ಮಾವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ಯುವಕನು ಸಂಪಾದನೆ ಮಾಡುವ ಸಾಮರ್ಥ್ಯವನ್ನು ಪಡೆಯುವ ಮೊದಲೆ ಮದುವೆ ಮಾಡಿಕೊಂಡಲ್ಲಿ ಒಡನೆಯೆ ಚತುಷ್ಪಾದಿಯಾಗುತ್ತಾನೆ. ಅವನ ಸ್ವತಂತ್ರ ಬುದ್ಧಿ, ನಿರಂಕುಶಮತಿ ಎಲ್ಲವೂ ಮಣ್ಣುಗೂಡುತ್ತವೆ. ಅವರಿವರ ಕೈ ಹಾರೈಸಿ, ನಾಲ್ಕು ಕಾಸು ಸಂಪಾದನೆಗಾಗಿ ಅವರಿವರನ್ನು ಓಲೈಸಿ, ಅಧಿಕಾರಿಗಳ ಅಥವಾ ಸಾಹುಕಾರರ ಕಾಲಬಳಿ ಮೂಲಗಿಸಿ, ತನ್ನಲ್ಲಿರುವ ದಿವ್ಯಾತ್ಮವನ್ನು ಸಂಪೂರ್ಣವಾಗಿ ಅವಮಾನಪಡಿತ್ತಾನೆ. ಆತನ ತಾರುಣ್ಯದ 'ದರ್ಶನ' ಜ್ಯೋತಿ ಸಾಂಸಾರಿಕ ಜೀವನದ ದಾಸ್ಯದಲ್ಲಿ, ಕೋಟಲೆಯಲ್ಲಿ, ಕಷ್ಟದಲ್ಲಿ ಧೂಳಿಧೂಮಗಳಲ್ಲಿ ನಂದಿಹೋಗುತ್ತದೆ ಅಥವಾ ನಂದಿಹೋಗುವಷ್ಟರ ಮಟ್ಟಿಗೆ ಮಾಸಿಹೋಗುತ್ತದೆ. ಕಡೆಕಡೆಗೆ ಅನೀತಿ ಕೂಡ ಹೀನವಾಗಿ ತೋರುವುದಿಲ್ಲ. ಅವನ ಔದಾರ್ಯದ ವಲಯ ಬರಬರುತ್ತಾ ಕಿರಿದಾಗ, ಕಡೆಗೆ ತಾನು, ತನ್ನ ಹೆಂಡತಿ, ತನ್ನ ಮಗು ಮೂವರನ್ನು ಮಾತ್ರ ಸುತ್ತುವರಿಯುತ್ತದೆ. ಅವರಿಗಾಗಿ ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಹಾಗಾಗುವವರು ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಾರೆ. ಆದ್ದರಿಂದ, ಮಿತ್ರರೇ, ನಿಮ್ಮ ಕಾಲ ಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗಬೇಡಿ; ಆತ್ಮಕ್ಕೆ ಅಗೌರವನ್ನೂ ಮನಸ್ಸಿಗೆ ಯಾತನೆಯನ್ನೂ ದೇಶಕ್ಕೆ ಹಾನಿಯನ್ನೂ ತರಬೇಡಿ.

ಅದಕ್ಕೆ ಬದಲು ವೈವಾಹಿಕ ಜೀವನವನ್ನು ಸಾಂಗವಾಗಿ ನಡೆಸಲು ತಕ್ಕ ಸಂಪತ್ತೂ ಸಾಮರ್ಥ್ಯವೂ ಲಭಿಸುವ ತನಕ ಬ್ರಹ್ಮಚಾರಿಗಳಾಗಿದ್ದುಕೊಂಡು ದೇಶಕ್ಕೆ ಹಿತಕರವಾದ ಕಾರ್ಯಗಳನ್ನು ಮಾಡುತ್ತಿರಬಹುದು. ಭೀಷ್ಮನು ಬ್ರಹ್ಮಚಾರಿಯಾಗಿದ್ದನು. ಹನುಮಂತನು ಬ್ರಹ್ಮಚಾರಿಯಾಗಿದ್ದನು. ಅವರು ಮಹತ್ಕಾರ್ಯಗಳನ್ನು ಸಾಧಿಸಿದರು. ಇಂದಿನ ಮನಶ್ಶಾಸ್ತ್ರವೂ ಕೂಡ ಬ್ರಹ್ಮಚರ್ಯದಿಂದ ತೇಜಸ್ಸು ಓಜಸ್ಸುಗಳೂ ದರ್ಪ ಬಲ ಅಧಿಕಾರಗಳೂ ಲಭಿಸುತ್ತವೆ ಎಂದು ಹೇಳುತ್ತಿದೆ. "ನ್ಯಾಯಮಾತ್ಮಾ ಬಲಹೀನೇನ ಲಭ್ಯಃ"

ದೇಶವು ಸರ್ವತೋಮುಖವಾಗಿ ಎಚ್ಚರಗೊಳ್ಳುತ್ತಿರವ ಕಾಲವಿದು. ಎಲ್ಲೆಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಕೆಲಸಗಾರರು ಬೇಕಾಗಿದ್ದಾರೆ. ಸಂಘಬದ್ಧರಾಗಿಯೊ, ಸಂಸ್ಥೆಗಳಿಗೆ ಸದಸ್ಯರಾಗಿಯೊ, ಅಥವಾ ವ್ಯಕ್ತಿಶಃವಾಗಿಯೊ ಎಲ್ಲರೂ ಕಾರ್ಯೋನ್ಮುಖರಾಗಬೇಕು. ಆ ಕಾರ್ಯಗಳ ರೀತಿ ನೀತಿ ವಲಯ ವಿಸ್ತಾರಗಳನ್ನು ಯಾರೊಬ್ಬರೂ ನಿಷ್ಕರ್ಶಿಸಿ ಹೇಳಲಾಗದು. ಆಯಾ ಸನ್ನಿವೇಶಕ್ಕೆ

ತಕ್ಕಂತೆ ಅವರವರ ಮನೋಧರ್ಮ, ಆತ್ಮಾನುಭವ, ಅಭಿರುಚಿ, ಉದ್ದೇಶಗಳಿಗೆ ತಕ್ಕಂತೆ ಕಾರ್ಯಾರಂಭ ಮಾಡಬೇಕು. ಮೈಸೂರು ಪಟ್ಟಣದಲ್ಲಿರುವ ಯುವಕರು ಕೈಗೊಳ್ಳಬೇಕಾಗಿರುವ ಕಾರ್ಯದ ಸ್ವಭಾವ ರೀತಿನೀತಿ ವಲಯಗಳು' ಶ್ರೀರಂಗಪಟ್ಟಣಕ್ಕೆ ಹೊಂದದಿರಬಹುದು; ಶ್ರೀರಂಗಪಟ್ಟಣಕ್ಕೆ ಹೊಂದುವ ಕಾರ್ಯಗಳು ಪಕ್ಕದ ಹಳ್ಳಿಗೆ ಹೊಂದದಿರಬಹುದು ಹಳ್ಳಿಗಳಲ್ಲಿ ನೈರ್ಮಲ್ಯ ವಿದ್ಯಾಪ್ರಚಾರಗಳು ಬೇಕಾಗುವಂತೆ ಪಟ್ಟಣಗಳಲ್ಲಿ ಬಹುಶಃ ಅನೌದಾರ್ಯ ಮತಭ್ರಾಂತಿಗಳನ್ನು ಪರಿಹಾರ ಮಾಡುವ ಬೋಧಪ್ರದ ಕಾರ್ಯಗಳು ಬೇಕಾಗಬಹುದು. ಆದ್ದರಿಂದ ಮಿತ್ರರೇ, ನೂತನ ಭಾರತರಾಷ್ಟ್ರ ಭವನ ನಿರ್ಮಾಣ ಕಾರ್ಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರಿಗೂ ಗೌರವಪೂರ್ಣವಾದ ಸ್ಥಾನವಿದೆ; ಪ್ರತಿಯೊಬ್ಬರ ಸಾಹಸಕ್ಕೂ ಅವಕಾಶವಿದೆ.

ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಿ ಮುಂದುವರಿಯಬೇಕಾಗಿದೆ. ನಮ್ಮಲ್ಲಿ ಅನೇಕರು ಸಾದ್ಯಃಫಲಾಕಾಂಕ್ಷಿಗಳು. ದೀರ್ಘಕಾಲ ಸಾಧನೆ ಮಾಡುವ ತಾಳ್ಮೆಯಿಲ್ಲ, ದೃಢಚಿತ್ತವಿಲ್ಲ ಸತ್ಕರ್ಮ ಸತ್ಫಲವನ್ನು ತಂದೇ ತರುತ್ತದೆ ಎಂಬ ಶ್ರದ್ಧೆಯಿಲ್ಲ. ಗೀತೆಯಲ್ಲಿ ಶೀ ಕೃಷ್ಣನು "ಪಾರ್ಥ, ನೈವೇದ ನಾಮುತ್ರ ವಿನಾಶಸ್ತಸ್ಯ ವಿದ್ಯತೇ! ನ ಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ॥ (6–40) ಪೃಥ್‌ನಂದನನೆ, ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಅವನಿಗೆ ವಿನಾಶವಿಲ್ಲ. ಎಳ್ಳನಿತಾದರೂ ಆಗಲಿ ಒಳ್ಳೆಯದನ್ನು ಮಾಡಿದವನಿಗೆ ದುರ್ಗತಿಯಿಲ್ಲ" ಎಂದು ಆಘೋಚಿಸಿದ್ದಾನೆ, ಮಹಾಫಲಕ್ಕೆ ಹೆಚ್ಚು ಕಾಲವೂ ಹೆಚ್ಚು ಸಾಧನೆಯೂ ಬೇಕಾಗುತ್ತದೆ. ಆದ್ದರಿಂದ ಅಲ್ಪಕಾಲದಲ್ಲಿ ಫಲ ಲಭಿಸಿದಿದ್ದರೆ ಹತಾಶರಾಗದೆ ಮುಂದುವರಿಯುವ ಉಕ್ಕಿನಂತಹ ಚಿತ್ತದಾರ್ಢ್ಯವನ್ನು ನಾವು ಸಂಪಾದಿಸಬೇಕು. ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು.

ಸದ್ಯಃ ಫಲಾಕಾಂಕ್ಷೆಗಿಂತಲೂ ಕೀರ್ತಿ ಮೋಹದಿಂದ ಹೆಚ್ಚು ಅನಾಹುತವಾಗುತ್ತದೆ! 'ಕೀರ್ತಿ ಮಹಾ ಪುರುಷರಲ್ಲಿರುವ ಕಟ್ಟಕಡೆಯ ದೌರ್ಬಲ್ಯ' ಎಂಬುದಾಗಿ ಒಂದು ಸುಭಾಷಿತವಿದೆ. ಮಹಾಪುರುಷರಾದವರೇ ಈ ಯಶೋಲೋಭಕೊಳ್ಳಗಾದ ಮೇಲೆ ಸಾಮಾನ್ಯರ ಗತಿಯೇನು ಆದರೂ ಮಹಾಪುರುಷರಲ್ಲಿರುವ ದೌರ್ಬಲ್ಯವನ್ನು ಸಾಮಾನ್ಯರೂ ಪೋಷಿಸಬೇಕೆಂಬ ನಿಯಮವಿಲ್ಲ. ಮಹಾಪುರುಷರಿಗೆ ಬಂದೊದಗುವ ಕೀರ್ತಿಯ ಪ್ರಭಾವಂದಲೇ ಅದರ ಲೋಭವನ್ನು ಗೆಲ್ಲಲು ಅವರಿಂದ ಸಾಧ್ಯವಾಗದಿರಬಹುದು. ನಮಗೆ ಅದರ ಅನುಭವ ಆದಾಗ ಲೋಭದಿಂದ ಪಾರಾಗಲು ಸಹಾಯವಾಗುತ್ತದೆ. ಮಂದಿಯ

ಕೈಚಪ್ಪಾಳೆ, ವೃತ್ತಿಪತ್ರಿಕೆಗಳ ಅಗ್ಗದ ಸ್ತುತಿ, ಬಿರುದು ಬಾವಲಿಗಳ ವ್ಯಾಮೋಹ ಇವುಗಳಿಗೆ ವಶವಾಗದೆ, ತಾನು ಹಿಡಿದ ಕೆಲಸನ್ನು ಪಟ್ಟುಹಿಡಿದ ನಿಃಶಬ್ದವಾಗಿ ಮಾಡುವಾತನೇ ನಿಜವಾದ ಕರ್ಮಯೋಗಿ. ಸ್ವಾಮಿ ವಿವೇಕಾನಂದರು ಒಂದು ಕಡೆ ಈ ಅರ್ಥದ ಮಾತುಗಳನ್ನು ಹೇಳಿದ್ದಾರೆ. ಸಾವಿರಾರು ಜನರು ಸುತ್ತಲು ನೆರೆದು ಕರತಾಡನ ಮಾಡುವಾಗ, ಜಯಘೋಷದಿಂದ ಹುರಿದುಂಬಿಸುವಾಗ, ಸ್ಮಾರಕ ಸ್ತೂಪಗಳೂ ಜೀವನ ಚರಿತ್ರೆಗಳೂ ತನ್ನನ್ನು ಕೊಂಡಾಡುತ್ತವೆ ಎಂದು ಗೊತ್ತಾದಾಗ. ತನ್ನ ಮರಣವೇ ತನ್ನ ಯಶೋದುಂದುಭಿಯನ್ನು ಮೊಳಗುತ್ತದೆಂದು ತಿಳಿದಾಗ, ಯಾವ ಹೇಡಿ ತಾನೆ ಮುಂದುವರಿದು ರಣ–ರಂಗದಲ್ಲಿ ಮಡಿಯಲಾರ? ಯಾವ ಕ್ರಿಮಿ ತಾನೆ ಸಾಹಸಿಯಾಗಲಾರದು? ಆದರೆ ಕೀರ್ತಿಯ ಕಿರಣಮಾತ್ರವೂ ಪ್ರಕಾಶಿಸದಿರುವಾಗ ಪ್ರಶಂಸೆ ಮಾಡುವವರಾಗಲಿ ಹುರಿದುಂಬಿಸುವವರಾಗಲಿ ಒಬ್ಬರೂ ಇಲ್ಲದಿರುವಾಗ ಬಹುಕಾಲದ ಪ್ರಯತ್ನದಿಂದಲೂ ಕಾರ್ಯಸಿದ್ಧಿಯಾಗದಿರುವಾಗ ದೃಢಚಿತ್ತನಾಗಿ ಶ್ರದ್ಧಾನ್ವಿತನಾಗಿ, ಮೌನಿಯಾಗಿ, ಹಲ್ಲುಕಚ್ಚಿಕೊಂಡು, ಹಣಕಿಸಿಕೊಂಡು, ಬೆವರು ಸುರಿಸುತ್ತಾ, ನಸುಬಾಗಿ, ಕಟ್ಟಕಡೆಯ ಕಲ್ಯಾಣದಲ್ಲಿ ನೆಚ್ಚಿಟ್ಟುಕೊಂಡು, ಈಶ್ವರನನ್ನು ನೆನೆದು ಕರ್ಮಪರ್ವತವನ್ನೇರುವವನೇ ಮಹಾತಪಸ್ವಿ, ಅವನಿಗಿಂತಲೂ ಹೆಚ್ಚಾದ ವಿಭೂತಿಗಳಿನ್ನಿಲ್ಲ. ಅವನ ಹೆಸರು ಪತ್ರಿಕೆಗಳಿಗೆ ಗೊತ್ತಿಲ್ಲದಿರಬಹುದು; ಆದರೆ ಈಶ್ವರನ ದೃಷ್ಟಿಯಲ್ಲಿ ಅವನು ಅಗ್ರಗಣ್ಯನಾಗುತ್ತಾನೆ.

ಆದ್ದರಿಂದ ಪ್ರತಿಯೊಬ್ಬ ಯುವಕನೂ ಅಂತಿಮದ ಅನಂತ ಕಲ್ಯಾಣದಲ್ಲಿ ಶ್ರದ್ಧೆಯಿಟ್ಟು ಕಾರ್ಯರಂಗಕ್ಕಿಳಿಯಬೇಕು. ತಾನು ರಂಗಕ್ಕಿಳಿದೊಡನೆಯೆ ಜಗತ್ತು ಉದ್ಧಾರವಾಗುತ್ತದೆ ಎಂದಾಗಲಿ, ಲೋಕಲೋಚನವಲಯಕ್ಕೆ ತಾನು ಕೇಂದ್ರವಾಗುತ್ತೇನೆಂದಾಗಲಿ, ಶಾಂತಿಸ್ಥಾಪನೆಗಾಗಿ ಕೊಡುವ ನೊಬೆಲ್ ಬಹುಮಾನ ತನಗೇ ಬರುತ್ತದೆ ಎಂದಾಗಲಿ ಹೊಂಗನಸುಗಳನ್ನೂ ಆಶಗೋಪುರಗಳನ್ನೂ ಕಟ್ಟಿಕೊಳ್ಳಬಾರದು.

ಇನ್ನು ನನಗೆ ಅತ್ಯಂತ ಪ್ರಿಯತಮವಾದ ಒಂದೆರಡು ವಿಷಯಗಳನ್ನು ಕುರಿತು ಪ್ರಸ್ತಾಪಿಸಿ ಉಪನ್ಯಾಸವನ್ನು ಕೊನೆಗಾಣಿಸುತ್ತೇನೆ. ಆ ವಿಷಯಗಳು ನಿಮ್ಮೆಲ್ಲರಿಗೂ ಕೂಡ ಪ್ರಿಯವಾಗಿರುತ್ತವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.

ಯುವಕರು ಕೈಕೊಳ್ಳಬೇಕಾಗಿರುವ ಅನೇಕ ಉದ್ಯಮಗಳಲ್ಲಿ ಭಾಷೆಯ ಅಭ್ಯುದಯವೂ ಸಾಹಿತ್ಯ ನಿರ್ಮಾಣ ಮತ್ತು ಪ್ರಚಾರಗಳೂ ಗಣ್ಯವಾಗಿವೆ. ಹಿಂದೆ, ಲ್ಯಾಟಿನ್, ಗ್ರೀಕ್, ಸಂಸ್ಕೃತ, ತೆಲಗುಗಳನ್ನಲ್ಲ ನಾನು ಹೇಳುತ್ತಿರುವುದು: ಕನ್ನಡದ ಭಾಷೆ; ಕನ್ನಡ ಸಾಹಿತ್ಯ! ನಮ್ಮ ಮಾತೃಭಾಷೆ ಮತ್ತು ಅದರ

ಸಾಹಿತ್ಯ! ಜನಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ. ಸಾಹಿತ್ಯ ಜನಜೀವನದ ಇಂದಿನ ಸ್ಥಿತಿಯನ್ನು ವರ್ಣಿಸಿ ಮುಂದಿನ ಗತಿಯನ್ನು ನಿರ್ಣಯಿಸುತ್ತದೆ. ಕೃತವಿದ್ಯರಾದ ಯುವಕರ ತಮ್ಮ ಆಶೆ ಆಕಾಂಕ್ಷೆಗಳನ್ನು ಬರೆದು ಓದಿ, ಮತ್ತೆ ಮತ್ತೆ ಹೇಳಿ, ಹೇಳಿ ಜನರ ಹೃದಯಗಳಲ್ಲಿ ಕಿಡಿಗಳನ್ನು ಬಿತ್ತಬೇಕು. ಈಗಾಗಲೆ ನಮ್ಮ ನಾಡಿನ ಜೀವನ ಕೃತಿಕ ದೀಪೋತ್ಸವದಂತೆ ಸಾವಿರಾರು ಸೊಡರ್ಮಾಲೆಯಾಗಿ ಉರಿಯುತ್ತರುವ ಮನೋಹರ ಭವ್ಯ ದೃಶ್ಯ ಕಂಗೊಳಿಸುತ್ತಿದೆ ಎಲ್ಲೆಲ್ಲಿಯೂ ಕರ್ನಾಟಕ ಸಂಘಗಳೇಳುತ್ತಿವೆ; ಕನ್ನಡದ ಪುನರುಜ್ಜೀವನಕ್ಕಾಗಿಯೂ ಉದ್ಧಾರಕ್ಕಾಗಿಯೂ ದೀಕ್ಷೆ ತೊಟ್ಟು ಸೊಂಟಕಟ್ಟಿ ಕಂಕಣಬದ್ಧರಾಗಿರುವ ಅನೇಕ ಪ್ರತಿಭಾಸಂಪನ್ನರಾದ ಮಹನೀಯರು ಕರ್ಣಾಟಕಲ್ಲೆಲ್ಲ ಸಂಚರಿಸಿ ಹಣತೆಗಳನ್ನು ಹೊತ್ತಿಸುತ್ತಿದ್ದಾರೆ; ಕೇಂದ್ರಸಂಸ್ಥೆಯಾಗಿರುವ ಸಾಹಿತ್ಯ ಪರಿಷತ್ತು ತನ್ನ ಕೈಯಲ್ಲಾದ ಮಟ್ಟಿಗೆ, ಹುರುಪಿನಿಂದ ಕಾರ್ಯಸಾಧನೆ ಮಾಡುತ್ತಿದೆ; ವಿದ್ಯಾಭ್ಯಾಸದ ಇಲಾಖೆ ಕನ್ನಡದಲ್ಲಿಯೆ ಪಾಠಹೇಳುವ ಏರ್ಪಾಡು ಮಾಡುತ್ತಿದೆ; ವಿಶ್ವವಿದ್ಯಾನಿಲಯ ಕನ್ನಡಗ್ರಂಥ ಪ್ರಕಟನೆಗಳಿಂದ ತನ್ನ ಭಾಗದ ತೈಲವನ್ನು ಹೊಯ್ದು ಉರಿಯನ್ನು ಪೋಷಿಸತ್ತಿದೆ. ಇಂತಹ ಮಹಾ ಸಾಹಿತ್ಯ ದೀಪೋತ್ಸವದಲ್ಲಿ ನಾವೆಲ್ಲರೂ ಉತ್ಸಾಹದಿಂದ ಭಾಗಿಗಳಾಗದಿದ್ದರೆ ಅದು ನಮ್ಮೆದೆಯ ಕಗ್ಗವಿಯ ಗಾಢಾಂಧಕಾರವನ್ನು ಮಾತ್ರ ಸೂಚಿಸುತ್ತದೆ. ಇಲ್ಲಿ ನೆರೆದಿರುವವರಲ್ಲಿ ಯಾರ ಹೃದಯಲ್ಲಿಯೂ ಅಂತಹ ಕಗ್ಗತ್ತಲಿಲ್ಲವೆಂದು ನಾನು ದೃಢವಾಗಿ ನಂಬುತ್ತೇನೆ.

## 3.3 ಬಾಳು

**–ಮೊಗಳ್ಳಿ ಗಣೇಶ**

ಕತ್ತಲು ತುಂಬಿದ ಹೊತ್ತಲ್ಲಿ ಹಜಾರದ ನಡುವೆ ಮಲಗಿದ್ದ ತಂಗಿಯರಿಗೆ ಮಾರೆ ಕತೆ ಹೇಳುತ್ತಿದ್ದಳು. ಗಾಳಿ ಯಾರ ಹಂಗೂ ಇಲ್ಲದೆ ಹೊರಗೆ ರಾತ್ರಿಯ ಜೊತೆ ಊರನ್ನೆಲ್ಲ ಸುತ್ತುತ್ತಿತ್ತು. ತನ್ನ ಬಾಲ್ಯ ಕಾಲದಿಂದಲೂ ಇಂಥ ಹೂಂಗುಟ್ಟಿವಿಕೆಯ ಕತೆ ಕೇಳುವಿಕೆಯಲ್ಲೇ ಬದುಕಿನ ಜೊತೆ ಮುಖಾಮುಖಿಯಾಗುವುದನ್ನು ಕರಗತ ಮಾಡಿಕೊಂಡಿದ್ದ ಮೂಗಿ, ಮಾರೆಯ ಕೊನೆಯ ತಂಗಿ ಈಗ ಅವಳಕ್ಕನ ಕತೆಗೆ ತಲ್ಲೀನಲಾಗುತ್ತಾ ಹಾರಾಡುವ ಕನಸುಗಳ ಮಾಂತ್ರಿಕ ಚಾಪೆಯನ್ನು ಹೆಣೆಯುತ್ತಿದ್ದಳು. ಯಾವತ್ತೂ ಇರುತ್ತಿದ್ದ 'ಎನ್ನ ನಾರಿಮಣಿಯನ್ನು ಬಿಟ್ಟು ಇಂದಿಗದಿನಾರು ವರುಸವಾದೋ' ಎಂಬ ನಳಚಕ್ರವರ್ತಿಯ ಪದ ಚಾಮಯ್ಯನ ಮುದಿಯಾದ ಹಳೆಯ ಕಂಠದಿಂದ ದೂರದಿಂದ ಕೇಳಿಬರುತ್ತಿತ್ತು. ಹಜಾರದ ತುದಿಗೆ ಮಲಗಿದ್ದ ತಮ್ಮಯ್ಯ ಇವರ ಕತೆಗೆ ಮನಸ್ಸು ಕೊಡದೆ ಅವನದೇ ಅಮೂರ್ತ ಕಲ್ಪನೆಗಳ ಜೊತೆ ಕುಸ್ತಿಗಿಳಿದ್ದ. ಗೌಡರ ಆಲೆಮನೆಯಲ್ಲಿ ಬೆಲ್ಲದ ಅಚ್ಚು ಮಣೆಗೆ ಬಲವಾಗಿ ಬಿಡಿದು ಬೆಲ್ಲದಚ್ಚುಗಳನ್ನು ಬಿಡಿಸುತ್ತಿದ್ದ ಶಬ್ದ ಇಡೀ ಹೊಲಗೇರಿಗೆ ತಟ್ಟಿ ಸಿಹಿ ಸಿಹಿಯ ಅಸ್ವಾದನೆಯನ್ನು ಅವರ ಮೂಗಿಗೂ ಮನೆಗಳಿಗೂ ಬಡಿದು ಮಜಾ ನೋಡುತ್ತಿತ್ತು. ಎದ್ದು ಕುಳಿತ ಮಾರೆ ತಲೆದಸಿಯಲ್ಲಿಟ್ಟಿದ್ದ ಬೀಡಿ ಬೆಂಕಿಪೆಟ್ಟಿಗೆ ತಕೊಂಡು ಬಾಯಿಗಿಟ್ಟು ಹಚ್ಚಿ ಕತ್ತಲೆಗೆ ಬೈಯ್ದು ಉಗಿಯುವಂತೆ, ಹೊಗೆ ಚೆಲ್ಲಿದಳು. ಇಡೀ ಕೇರಿ ಹಾವು ಪೊರೆ ಕಳಚಿ ಕೊಳ್ಳಲು ಒಂದೆಡೆ ಮಕಾಗಿ ಮುದುರಿಕೊಂಡು ಬಿದ್ದಿರುವಂತೆ ನಿದ್ದೆ ಮಾಡುತ್ತಿತ್ತು. ಮಾರೆ ಮತ್ತೂ ಒಮದು ಬೀಡಿ ಹಚ್ಚಿ ದೀರ್ಘವಾಗಿ ಹೊಗೆಯನ್ನು ಒಳ ಸೆಳೆದು ಬಿಟ್ಟು ಮನೆಯ ಸಂದುಗಳಲ್ಲಿ ಇಣುಕಿ ನೋಡುವ ಆಕಾಶವನ್ನು ದಿಟ್ಟಿಸಿದಳು. ತನ್ನ ಮೊಲೆಯನ್ನು ಬೆತ್ತಲು ಮಾಡಿದ್ದ ಘಟನೆಯನ್ನು ಮರೆ ಮಾಡಲು ಯತ್ನಿಸಿದರೂ ಆಗಲಿಲ್ಲ. ಆಗ ಮಾರೆ ತನ್ನ ಇಪ್ಪತ್ತನೇ ವರ್ಷದಲ್ಲಿ ಗಂಡನಿಂದ ಬಿಟ್ಟು ಬಂದು ಕೂಲಿ ಮಾಡಿ ಬದುಕುವ ಕಾಲದಲ್ಲಿ ಅವಳ ತಮ್ಮ ಇನ್ನೂ ಚಿಕ್ಕವನಿದ್ದ. ತಮ್ಮ, ತಂಗಿಯರಿನ್ನೂ ಚಿಕ್ಕವರಾಗಿದ್ದ ಆ ಕಾಲದಲ್ಲಿ ಅನ್ನಕ್ಕಾಗಿ ಎಲ್ಲ ರೀತಿಯ ಸವಾಲುಗಳಿಗೆ ಮುಖಾಮುಖಿಯಾಗಿದ್ದಳು.

ಒಂದು ದಿನ ಪಕ್ಕದ ಊರಿನ ದೊಡ್ಡವರ ಹೊಲದಲ್ಲಿ ಕಡಲೇಕಾಯಿ ಬಿಡಿಸಿವು ಕೆಲಸಕ್ಕೆ ತಮ್ಮನನ್ನು ಕಟ್ಟಿಕೊಂಡು ಹೋಗಿದ್ದಳು. ಉರಿವ ಒಡಲ ಹಸಿವನ್ನು ಸಮಾಧಾನ ಪಡಿಸಿಕೊಳ್ಳುತ್ತಾ ಆಗ ತಮ್ಮಯ್ಯ ಕಡಲೆಕಾಯಿ ಬಿಡಿಸುತ್ತಲೇ, ಕದ್ದು ತಿನ್ನುತ್ತಾ ಇದ್ದ. ಯಥಾಪ್ರಕಾರ ದಿನವೂ ಸೂರ್ಯ ಸಾಯುವ, ಸತ್ತೇ ಹುಟ್ಟುವ

ಹೊತ್ತಾಗಿತ್ತು. ಕೆಲಸ ಆದ ಮೇಲೆ ದೊಡ್ಡವರು ಎಲ್ಲ ಆಳುಗಳನ್ನೂ ಚೆಕ್ ಮಾಡುವುದಿತ್ತು. ಕೆಲವು ಹುಡುಗರು ಒಂದಿಡಿಯಷ್ಟು ಕಡಲೇಕಾಯಿಯನ್ನು ಹಳೆಯ ಟವಲುಗಳಿಗೆ ಸೇರಿಸಿ ತಲೆಗೆ ಅದನ್ನೆ ಪೇಟವಾಗಿ ಸುತ್ತಿಕೊಂಡು 'ನೋಡ್ಕಳಪ್ಪೋ ಎಲ್ಲವುಸ್ಕಂದಿದ್ದೆವು ಅನ್ನದಾ.... ನಾವಂತ ಕಳ್ರಲ್ಲ ಕನ್‌ಬಿಡ್ರಪ್ಪಾ,' ಎಂದು ನಿಲ್ಲುತ್ತಿದ್ದರು. ಎಷ್ಟು ಹುಡುಕಿದರೂ ಯಾರೂ ಅವರು ಬಚ್ಚಿಟ್ಟಿದ್ದ ಕಡಲೇಕಾಯನ್ನು ಪತ್ತೆಮಾಡುತ್ತಿರಲಿಲ್ಲ. ಕೊನೆಗೆ ಮಾರೆಯ ಕಡೆಗೆ ನೊಡಿ ಗಹನವಾಗಿ ದಿಟ್ಟಿಸಿ ಹತ್ತಿರ ಹೋಗಿ ಪಟಾರೆಂದು ಕತ್ತಿಗೆಯ ಹತ್ತಿರ ಕೈಹಾಕಿ ರವಿಕೆಯನ್ನು ಕಿತ್ತುಬಿಟ್ಟರು. ಅವಳ ದುರಾದೃಷ್ಟವೆಂಬಂತೆ ಕಡಲೇಕಾರಯಿ ಬೀಜವೊಮದು ಅವಳ ರವಿಕೆಯ ತುದಿಯಲ್ಲಿ ಇಣುಕುತ್ತಿದ್ದದನ್ನು ನೋಡಿ ಹಾಗೆ ರವಿಕೆ ಹರಿದು ಗುಟ್ಟು ಬಯಲು ಮಾಡಿದ್ದ. ಕಡಲೇಕಾಯಿ ಬಿಡಿಸುತ್ತಾ ಅದರ ಬೀಜಗಳನ್ನು ರವಿಕೆಯ ಒಳಗೆ ಮಾರೆ ತುಂಬಿಕೊಂಡಿದ್ದಳು. ಎಳೆದ ರಭಸಕ್ಕೆ ಅಲ್ಲೆಲ್ಲ ಕಡಲೇಕಾಯಿ ಬೀಜ ಭೂಮಿಗೆ ಬಿದ್ದು ಹೆದರಿಕೆ, ಅವಮಾನಗಳಿಂದ ಮಣ್ಣಿನ ಒಳಗೆ ಅವಿತುಕೊಳ್ಳುವಂತೆ ಚೆಲ್ಲಿಕೊಂಡವು. ಮಾರೆಯ ರವಿಕೆಯನ್ನು ಬಲವಾಗಿ ಜಗ್ಗಿ ಎಳೆದಿದ್ದಕ್ಕೂ ಅದು ಬೆವರು ಕೊಲೆಯಿಂದ ಹಳತಾದ್ದರಿಂದಲೂ ಪೂರಾ ಚಿಂದಿಯಾದಂತೆ ನೇತಾಡಿತ್ತು.

ಇದಾದ ಮೇಲೆ ಮಾರೆಯ ಮೊಲೆಗಳನ್ನು ವರ್ಣಿಸುವ ಹುಡುಗರಿಗೆ ಗಂಡಸರಿಗೆ ಖಾಯಂ ಚಾಕರಿ ಸಿಕ್ಕಂತಾಗಿ ಅವರೆಲ್ಲ ಹೇಗೇಗೋ ನಾಟಕ ಮಾಡಿ ತಮ್ಮತ್ತ ಅವಳನ್ನು ಸೆಳೆದುಕೊಳ್ಳುವ ಸಾಹಸದಲ್ಲಿ ಜಯಶಾಲಿಗಳಾದರು. ಇದಿಷ್ಟೇ, ಆ ಮೇಲೆ ಎಲ್ಲ ಸಡಿಲವಾದವು. ಬದುಕು ಅವರ ಮುಂದೆ ಜಂಗೀ ಕುಸ್ತಿ ಮಾಡಿ ಬೀಳಿಸಿತು. ಮಾರೆಯ ಅಪ್ಪ ತನ್ನ ಹೆಂಡತಿಯನ್ನು ಕಳೆದುಕೊಂಡ ಮೇಲೆ ಮತ್ತೆ ಮರು ಮದುವೆಯ ಗೋಜಿಗೇ ಹೋಗದೆ ತನ್ನದೇ ಲೋಕದಲ್ಲಿ ವಿಹರಿಸುತ್ತಾ ಕದ್ದು ಜೀವನ ಸಾಗಿಸುತ್ತಾ ತೆಂಗಿನ ಎಂಡವನ್ನು ರಾತ್ರಿ ವೇಳೆ ಇಳಿಸಿ ಕುಡಿದು ಇರುತ್ತಿದ್ದವನಿಗೆ ಗ್ರಹಚಾರ ಅನ್ನೋದು ಕುಕ್ಕು ತಿಂದಿತ್ತು. ಇವನ ಕಳ್ಳತನದ ಕಾಟ ತಡೆಯದೆ ಮರದ ಎಂಡದ ಗಡಿಗೆಗೆ ಎಂಥದೋ ಗಿಡ ಮೂಲಕೆಯ ವಿಷ ಬೆರಸಿ ಆತ ಬೆಳಗಾಗೋದರೊಳಗೆ ಸಾಯುವಂತೆ ಮಾಡಿ ಬಿಟ್ಟಿದ್ದರು. ಇದೆಲ್ಲ ಆದ ಮೇಲೆ ಗಂಡನ ಮನೆಯ ಕಾಟ ತಡೆಯದೆ ಹಿಂತಿ–ರುಗಿ ಬಂದಿದ್ದ ಮಾರೆ ಈಗ ತನ್ನ ದೇಹವನ್ನೇ ಬಯಸಿದವರಿಗೆಲ್ಲ ತೆರೆದಿಟ್ಟು ಅದನ್ನೇ ಬದುಕಿನ ಇನ್ನೊಂದು ದಾರಿಯನ್ನಾಗಿಸಿಕೊಂಡಿದ್ದಳು.

ತಮ್ಮಯ್ಯ ಬೆಳಿಗ್ಗೆ ಎದ್ದವನೇ ಕಬ್ಬು ಕಡಿಯುವ ಕೆಲಸಕ್ಕೆ ಹೊರಟು ಹೋದ. ತಾನು ದುಡಿದು ಸಂಪಾದಿಸಿದ್ದರಲ್ಲಿ ಮನೆ ಖರ್ಚಿಗೆ ಇಷ್ಟು ಬೇಕು ಕೊಡು ಎಂದು

ತಮ್ಮಯ್ಯನನ್ನು ಮಾರೆ ಕೇಳುತ್ತಲೂ ಇರಲಿಲ್ಲ. ತನ್ನ ತಮ್ಮನಿಗೆ ಯಾವುದು ಸರಿ ಅನಿಸುತ್ತದೋ ಅದರಂತಿರಲಿ ಎಂದು ಬಿಟ್ಟು ಬಿಟ್ಟಿದಳು. ಅದರೆ ತಮ್ಮಯ್ಯ ಅಕ್ಕ ತಂಗಿಯರ ಚೆಲ್ಲಾಟ ಕಂಡು ಸಾಕಾಗಿ ಒಳಗೊಳಗೇ ತಲೆ ಕೆಡಿಸಿಕೊಂಡಿದ್ದ. ಪೇಟೆಯಿಂದ ಮಾಂಸ ತಂದು ಊರಿಬಾಡು ಮಾಡಿ ಸಾರಾಯಿ ಜೊತೆ ಸವಿಯುತ್ತಾ ತಮ್ಮನಿಗೂ ಒಂದಿಷ್ಟು ಕೊಟ್ಟು ತಂಗಿಯರ ಜೊತೆ ಕನಸಿನಲ್ಲಿ ಮುಳುಗುತ್ತಿದ್ದಳು. ಅವಳೆಂದೂ ದುಃಖಿಸಿದ್ದಾಗಲೀ, ಅಸಹ್ಯ ಪಟ್ಟಿದ್ದಾಗಲೀ ಇಲ್ಲವೆ ಸುಖ ಕೂಡ ಪಟ್ಟಿದ್ದಾಗಲೀ ಇರಲಿಲ್ಲ. ಆದರೆ, ಇದರಿಂದಲೇ ಎಷ್ಟೋ ಅನಾಹುತಗಳಿಗೆ ಜನ ದಾರಿ ಮಾಡಿದ್ದರು. ಮಾರೆಯ ತಂಗಿಯರು ಮದುವೆಗೆ ಅಯೋಗ್ಯರು ಎಂಬ ತೀರ್ಮಾನ ನೀಡಿ ಅನೇಕ ದಿನಗಳಾಗಿದ್ದವು. ಹಾಗಾಗಿ ಮದುವೆಗೆಂದು ಹೆಣ್ಣು ಕೇಳಲು ಬರುವ ಯಾರೊಬಬರೂ ಅವರ ಮನೆ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ಹೊಳೆವ ಸೂರ್ಯ ಆಕಾಶವನ್ನಾಳುತ್ತಿದ್ದ. ಮಾರೆಯ ತಮ್ಮ ತಮ್ಮಯ್ಯ ಸ್ವಲ್ಪದರಲ್ಲಿ ಸಾವಿನಿಂದ ಬಚಾವಾಗಿದ್ದ. ವಾರದ ಹಿಂದೆ ಕಬ್ಬಿನ ಗದ್ದೆಗೆ ನರಿಗಳ ಕಾಟ ಜಾಸ್ತಿಯಾಗಿದ್ದಾಗ ಅವುಗಳನ್ನು ಕೊಲ್ಲಲು ಸಿಡಿಮದ್ದನ್ನು ಗದ್ದೆಯ ಒಳಗೆ ಇಡಲಾಗಿತ್ತು. ಯಾವ ನರಿಯೂ ಸಿಡಿಮದ್ದಿಗೆ ಬಾಯಿಕ್ಕಿ ಸಾವಿನಿಂದ ಛಿದ್ರವಾಗುವ ಸ್ಥಿತಿಗೆ ಹೋಗಿರಲಿಲ್ಲ. ಸಿಡಿಮದ್ದು ಸಿಡಿಯದೆ ಹಾಗೇ ಉಳಿದು ಹೋಗಿತ್ತು. ಇದನ್ನು ಇಟ್ಟಿದ್ದ ಆಳುಗಳು ಅನಂತರ ಅದರ ನೆನಪನ್ನೇ ಕಳದುಕೊಂಡಿದ್ದರು. ಗದ್ದೆಯ ತೆವರಿ ಬಳಸಿ ಬಂದು ಕಬ್ಬಿನ ಕಂತೆಗಳನ್ನು ತುಂಬಿಕೊಂಡು ಹೋಗಲು ಬರುತ್ತಿದ್ದ ಟೈರುಗಾಡಿಯ ಮೇಲತ್ತಿದ್ದ ತಮ್ಮಯ್ಯ ಮದ್ದು ಸಿಡಿದ ಕೂಡಲೇ ಅದರ ಬಡಿತಕ್ಕೆ ಗಾಡಿಯಿಮದ ನೆಗೆದು ಎತ್ತುಗಳು ಕೆಳಕ್ಕೆ ಮುಗುಚಿಕೊಂಡಿದ್ದವು.

ಕೆಳಗೆ ಬಿದ್ದ ತಮ್ಮಯ್ಯನಿಗೆ ತರಚು ಗಾಯಗಳಾಗಿದ್ದವು. ಇಡೀ ಘಟನೆಯಿಂದ ಕೆಲಸಗಾರರೆಲ್ಲ ನಗಾಡಿ ತಮ್ಮಯ್ಯ ಕೆಳಗೆ ಬಿದ್ದ ಪರಿಗೆ ಅನೇಕರು ಹಾಸ್ಯ ಕತೆಗಳನ್ನೇ ಆ ಕ್ಷಣದಲ್ಲಿ ನಿರ್ಮಿಸಿ ತಣ್ಣಗಾದರು. ತಮ್ಮಯ್ಯ ನಡುಗುತ್ತಾ ಮನೆಗೆ ವಾಪಸ್ಸು ಬಂದವನೇ, ತಾನು ಸತ್ತು ಹೊಗಿದ್ದರೆ ಏನೇನು ಆಗುತ್ತಿತ್ತೋ ಎಂದುಕೊಂಡು, ಅತ್ಯಂತ ಮರುಕ ಭಾವಕ್ಕೆ ಅರ್ಹನಾದ ವ್ಯಕ್ತಿಯ ಹಾಗೆ ಸಾವನ್ನು ಚಿತ್ರಿಸಿಕೊಂಡು ನರಳಿದ. ಮನೆಗೆ ಬಂದವನೆ ಗಟಗಟ ನೀರು ಕುಡಿದು ಪಡಸಾಲೆಯಲ್ಲಿ ಒರಗಿದ. ಸೀತೆ, ಸಾವಿತ್ರಿ, ಮಾರೆ ಇವರಾರೂ ಇನ್ನೂ ಮನೆಗೆ ಹಿಂತಿರುಗಿರಲಿಲ್ಲ. ಅವರ ಬಗ್ಗೆ ಏನೇನೋ ಅನುಮಾನಿಸುತ್ತಾ ತನ್ನ ಈ ಸ್ಥಿತಿಯಲ್ಲಿ ಅವರು ಇರದಿದ್ದರ ಬಗ್ಗೆ ಅಸಾಧ್ಯ ಸಿಟ್ಟು ಮಾಡಿಕೊಂಡ.

ಕಾಲ ಸಂಜೆಯನ್ನು ಕೂಗಿ ಕರೆಯುತ್ತಿತ್ತು. ಹಸಿವಾಗಿ ಮೂಗಿ ರಾತ್ರಿ

ಮಾಡಿದ್ದ ಹಿಟ್ಟಿನ ಮಡಕೆಯಲ್ಲಿ ಹಿಟ್ಟು ಅಂಟಿಕೊಂಡು ಚಕ್ಕೆಯಂತೆ ಏಳುವ ಕರಿಟ್ಟನ್ನು ಎಡೆದುಕೊಂಡು ಕಾರದ ಕಂಟಿದಲ್ಲಿದ್ದ ಮೆಣಸಿನಕಾಯಿ ಕಾರವನ್ನು ಹಾಕಿಕೊಂಡು ತಿನ್ನತೊಡಿಗಿದಳು.

ಕತ್ತಲಾಯಿತು, ದೀಪ ಹಚ್ಚಿ ಅಡ್ಡಗೋಡೆಯ ಮೇಲಿಟ್ಟು ಬೀದಿಗೆ ಬಂದು ಅಡುವ ಹುಡುಗರ ಚಂದಕ್ಕೆ ಸುಖ ಪಡುತ್ತಾ ನಗಾಡಿದಳು. ತಮ್ಮಯ್ಯನನ್ನು ನಿದ್ದೆಯಿಂದ ಏಳಿಸಲು ಹೋಗಿ ಕೊನೆ ತಂಗಿ ಅವನ ಅಲುಗಾಡಿಸಿ ಶಬ್ದ ಮಾಡಿದಳು. ಎದ್ದ ತಮ್ಮಯ್ಯನಿಗೆ ಇದೇನು ಇಷ್ಟು ಬೇಗ ಕತ್ತಲಾಗಿದೆಯಲ್ಲಾ ಎನಿಸಿ ದಡದಡ ಎದ್ದು, 'ಅವಿನ್ನೂ ಬರ್ಲಿಲ್ಲುವೇ, ಆಳಾದೋರು ಎಲ್ಲಲಿತಿದ್ದಾರೋ ಏನೋ, ಬತ್ತಿನ ಇರು, ಎಂದು ಹೊರಟವನು ಸುಮಾರು ಹೊತ್ತಿನವರೆಗೆ ಹಿಂತಿರುಗಲಿಲ್ಲ. ಸೀತೆ ಸಾವಿತ್ರಿ ಇಬ್ಬರೂ ಮಡಿಲಲ್ಲಿ ಹೊಲಮಾಳಗಳ ಬಗೆ ಬಗೆಯ ಸೊಪ್ಪು ಕೊಯ್ದುಕೊಂಡು ಬಂದಿದ್ದರು. ಸಾವಿತ್ರಿ ಒಲೆ ಮುಮದೆ ಕುಳಿತು ಹಿಟ್ಟು ಸೊಪ್ಪು ಮಾಡಲು ಕಾತರಿಸುತ್ತಿದ್ದಳು. ಸೀತೆ ತನಗೆ ಸಾಕಾಗಿ ಹೋಗಿದೆಯೆಂದೂ, ಮಾರಕ್ಕ ಯಾಕೆ ಇನ್ನೂ ಬಂದಿಲ್ಲವೆಂದೂ ಗೊಣಗಿ ಮಲಗಿಕೊಂಡಳು. ಪುಳ್ಳೆ ಸೌದೆ ಕಟ್ಟಿಗಳು ಕಡು ದುಃಖ ಮಾಡುತ್ತಾ ಆಕ್ರೋಶವನ್ನು ಚೆಲ್ಲುತ್ತಾ ಹೊಗೆಯನ್ನು ಹೊರ ಹಾಕುತ್ತಾ, ಕಾದು ಉರಿದು ಕೆಂಪಗೆ ಅರಿಶಿನ ಬಣ್ಣಕ್ಕೆ ಬೆಂಕಿಯನ್ನು ಕಕ್ಕುತ್ತಿದ್ದವು. ಸಾವಿತ್ರಿ ಅವನ್ನೆಲ್ಲ ಕ್ರಮವಾಗಿ ಒಲೆಯ ಒಳಕ್ಕೆ ತಳ್ಳುತ್ತಾ ಹಿಟ್ಟು ಸಾರು ಕುದಿಯಲು ಕಾತರಿಸುತ್ತಿದ್ದಳು. ಆ ನಡುವೆ ಇವರಿಬ್ಬ–ರಿಗೂ ತನ್ನ ಅಣ್ಣ ಸಿಡಿಮದ್ದಿನಿಂದ ಬಚಾವಾದದ್ದು ತಿಳಿದು, ಇದೆಲ್ಲಾ ಸಾಮಾನ್ಯ ಎಂಬಂತೆ ಸದ್ಯದ ಊಟದ ಕಾಯಕದ ಆಚರಣೆಗೆ ಮುಂದಾಗಿದ್ದರು.

ಕತ್ತಲು ರಾತ್ರಿಯ ಒಂದೊಂದು ಅಂಗವನ್ನೂ ಅಲುಗಿಸಿಕೊಂಡು ಈಗ ಇಡೀ ಊರನ್ನು ವಶಪಡಿಸಿಕೊಂಡಿತ್ತು. ಬಿಸಿ ಮುದ್ದೆಯನ್ನು ಹಸೆಗಲ್ಲ ಮೇಲೆ ದುಂಡಗೆ ಕೈತುಂಬ ತಟ್ಟುತ್ತಾ ಬಳೆಗಳ ಶಬ್ದದಲ್ಲಿ ಅಲ್ಲೆಲ್ಲ ಆಹಾರದ ಸುಖದ ಸೀತೆ ಈಗ ಓಕುಳಿ ಬಣ್ಣದಂತೆ ಎರಚಿದ್ದಳು. ಎಲ್ಲ ಮಾಡಿದ ಮೇಲೆ ಊಟಕ್ಕೆ ಕುಳಿತುಕೊಳ್ಳುವ ಮುಂಚೆ ಮಾರೆ ಆಮೇಲೆ ಬರುತ್ತಾಳೆಂದು ನಿರ್ಧರಿಸಿ ಕಾರದ ಗೂಡಿನಲ್ಲಿರುವ ಕರದ ಕಂಟಕ್ಕೆ ಕೈಹಾಕಿ ನೋಡಿದರೆ ಅಲ್ಲಿ ಕಾರವೇ ಇರಲಿಲ್ಲ. ಸೌಭಾಗ್ಯ ಆ ಕಾರವನ್ನೆಲ್ಲ ಕರಿಟ್ಟಿನ ಜೊತೆ ತಿಂದು ಬಿಟ್ಟಿದ್ದಳು.

ಆ ಕ್ಷಣಕ್ಕೆ ಮತ್ತೆ ಹಸೆಗಲ್ಲ ಮೇಲೆ ಚೋಟುಪಾಟು ಒಂದೆರಡು ಮೆಣಸಿನಕಾಯಿ ಬೆಳ್ಳುಳ್ಳಿ, ಮೆಣಸು, ಉಪ್ಪುಗಳನ್ನು ಬೆರೆಸಿ ಅರೆದು ಕಾರಮಾಡಿ ಊಟಕ್ಕೆ ಕೂತರು. ಉಣ್ಣುತ್ತಲೇ ಬೆವರಿಕೊಂಡರು. ತುತ್ತು ನುಂಗುವ ಗುಳುಂ ನಾದ ಮಾತ್ರ ಅವರ ಜೊತೆ ಮಾತನಾಡುತ್ತಿರುವಂತೆ ಇತ್ತು. ಕೂತೊಳೆದು

ಎಲ್ಲ ಮುಗಿಸಿದ ಮೇಲೆ ಎಷ್ಟೋ ಹೊತ್ತಿಗೆ ತಮ್ಮಯ್ಯ ಬಂದ. ಸಾವಿತ್ರಿ ಬೀಳಲಿದ್ದ ಅಣ್ಣನನ್ನು ಹಿಡಿದುಕೊಂಡಳು. ಹಿಂದೆಂದೂ ಕುಡಿಯಲಾರದಷ್ಟನ್ನು ಇವತ್ತು ಕುಡಿದು ಬಂದಿದ್ದ.'ಇಷ್ಟೊತ್‌ಗಂಟಾ ಅವಳು ಬಂದಿಲ್‌ವಲ್ಲಾ, ಯಾವ ಮಿಂಡ್‌ಗಾರನ್ ಜೊತೆ ಪ್ಯಾಟೆ ಬೀದಿಲಿ ಅಲೀತಿದ್ದಾಳೊ, ನನ್ನ ಏನೂಕಾಣ ಅನ್ಕಂಡಿದ್ದಿರಮ್ಮಿ ನೀವು, ನಿಮ್ಮಾಟಾನೆಲ್ಲ ಕಂತೆ ಕಟ್ಟಿ ಅತ್ತಾಗ್ ಬಿಸಾಕ್ ಬುಡಿ, ನಾವೆಲ್ಲ ಇಂಗೇ ಇರ್ತಿವಿ ನಮ್ಮಿಷ್ಟ ಅನ್ನುವಂಗಿದ್ರೆ ನನ್ ಮನೆಯಿಂದ ಅಚುಕ್ ನಡೀರಿ, ನಾನು ಗಂಡ್ ಮಗಾ. ಈ ಮನೆ ನಂದು ನನ್ನ ಮಾನ್‌ವಾಗಿ ಬದ್ಕಕೇ ಬಿಡುದಿಲ್‌ವಲ್ಲಾ... ಆ ಲೌಡಿ ಮಕ್ಕಳೆಲ್ಲ ನನ್ನ ಅನ್ನಾಡಿ, ತಲಿಡ್ಕ ಅಮತಾ ಅಡ್ಕೊಳುರೇ ಆಗವರೆ, ನಾನು ಕನ್ನಾ ಕಾಯ್ತಿವಿನಿ, ಒಂದಲ್ಲಾ ಒಂದಿನ ಎಲ್ರೂಗೂ ಸರಿಯಾಗಿ ಸಾಸ್ತಿ ಮಾಡಿ ಕಣ್ಣುಗ್ ಮರೆಯಾಗಿ ಮಂಟೋಯ್ತಿನಿ' ಎಂದು ದೊಡ್ಡ ಗಂಟಲಲ್ಲಿ ಕೂಗಾಡತೊಡಗಿದ.

ತಮ್ಮಯ್ಯನ ಈ ಅವತಾರಕ್ಕೆ ತಂಗಿಯರು ಕೊಂಚ ಹೆದರಿ ಯಾಕೋ ಬೇಜಾರಾಗವನೆ ಬಿಡು ಎಂದು' ಸುಮ್ನಿರಣ್ಣಾ, ಅಕ್ಕಾ ಬಂದ್ ಮ್ಯಾಲೆ ಅದೇನು ಅಂತಾ ಕೇಳುವೆ' ಎಂದು ಸೀತೆ ಸಮಾಧಾನ ಮಾಡತೊಡಗಿದಳು. ಸಿಟ್ಟಿನಿಂದ 'ಲೋಫರ್.. ಬುದ್ದಿ ಹೇಳಕೆ ಬಂದಿಯಮ್ಮೀ, ಬಾಯ್ ಮುಚ್ಕೊಂಡು ಸುಮ್ಮನಿದ್ದಾ ಸರಿ... ಎಂದು ಬಾಯಿ ಮುಚ್ಚಿಸಿದ. ಸೌಭಾಗ್ಯ ಗಡಗಡ ನಡುಗುತ್ತಾ ಅಣ್ಣನನ್ನು ತಮ್ಮಯ್ಯ 'ಇವತ್ತವುಳು ಬರ್ಲೀ ಅದೆಂಗೆ ಕಾಲಾಕಿ ವಸಲ ದಾಟಳು ಅನ್ನುದಾ ನೋಡ್ತೀನಿ' ಎಂದು ಹೊಗೆ ಬಿಟ್ಟ. ಪಕ್ಕದ ಮನೆಯವರು ತಮ್ಮಯ್ಯನ ಇಂಥ ಮಾತುಗಳ ಕೇಳಿ ಏನೋ ಯತ್ತೋ ಏನಾರ ಆಲಿ ಬಿಡು, ಅವರಕ್ಕುನ್ ಚಾಲು ಅಂಗೇ ಅದೆ' ಎಂದುಕೊಂಡು ಸುಮ್ಮನಾದರು. ಆಕಾಶದಲ್ಲಿ ಚುಕ್ಕೆಗಳು ಲೀಲಾಜಾಲವಾಗಿ ಮುನುಗುತ್ತಿದ್ದವು. ತಮ್ಮಯ್ಯನ ಸಿಟ್ಟು ಏರುತ್ತಲೇ ಇತ್ತು. 'ಅವುಳಾ ತುಂಡ್ ತುಂಡ್ ಮಾಡಿ ನಾಯಿಗಾಗಿ ತಿನಿಸ್ದೇ ಇದ್ರೆ ನನ್ನೆಸ್ರು ತಮ್ಮಯ್ನೇ ಅಲ್ಲ. ತಡೆಯೋಕೆ ಬಂದೋರ ಮೊದ್ಲು ಮುಗ್ಸಿ ಆಮೆಕೆ ಅವಳಾ ಮುಗಿಸ್ತೀನಿ ಎನ್ನುತ್ತಿದ್ದ. ಎಮದೂ ಹೀಗೆ ವರ್ತಿಸದ ಇವನ ನಡವಳಿಕೆಗೆ ತಂಗಿಯರು ಹೆದರಿ ಗೊಂದಲಗೊಂಡು ಇವತ್ತು ಅಕ್ಕಯ್ಯ ಬರದಿದ್ದರೆ ಸಾಕು ಎಂದುಕೊಂಡರು. ನಿಧಾನವಾಗಿ ಜನರನ್ನು ನಿದ್ರಾದೇವರೆ ಸಮ್ಮೋಹನಗೊಳಿಸಿ ಅವರಿಗೆ ಬೇಕಾದ ಕನಸುಗಳನ್ನು ಉಣಬಡಿಸಲು ಸಿದ್ಧತೆ ನಡೆಸುತ್ತಿದ್ದಳು ಚಾಪೆ ಹಕಿಕೊಂಡ ಸೀತೆ, ಸಾವಿತ್ರಿ. ಸೌಭಾಗ್ಯ ಮೂವರೂ ಮೈ ಚೆಲ್ಲಿದರೇ ಹೊರತು ನಿದ್ದೆಗೆ ಜೋಗಲಿಲ್ಲ. ತಮ್ಮಯ್ಯ ಗೊಣಗುತ್ತಲೇ ಇದ್ದ. ಅವನ ಇವತ್ತಿನ ಈ ಮಾತುಗಳಿಗೆಲ್ಲ ಮಂಚಣ್ಣನ ಮಗನ ಅನೇಕ ಕುಮ್ಮಕ್ಕುಗಳು ಜರುಗಿದ್ದವು.

ಕುಡಿದ ಅಮಲಿನಲ್ಲಿ ಆತ ಹೇಳಿದ್ದು, 'ನಿನ್ನ ಅಕ್ಕ ತಂಗಿಯರ ಹಲ್ಕಾ ಆಟಗಳಿಂದ ನಾಳೆದಿನ ನಿನಗೆ ಯಾರೂ ಹೆಣ್ಣು ಕೊಡುವುದಿಲ್ಲ ಎಂದು ವಿವರಿಸಿ. ಈಗ ನೀನು ಇವಕ್ಕೆಲ್ಲ ಸರಿಯಾದ ಪಾಠ ಕಲಿಸದಿದ್ದರೆ ಎಲ್ಲಾ ಹಾಳಾಗಿ ಹೋಗುತ್ತದೆಂದು ತಿಳಿಸಿದ್ದ. ತಂಗಿಯರು ಕಾದು ಕಾದು ಮಾರೆ ಬರದಿರುವುದಕ್ಕೆ ಸಮಾಧಾನ ತಂದುಕೊಂಡು ಹೊರಳಾಡಿದರು. ತಮ್ಮಯ್ಯ ನಿಶೆಯಿಳಿದಂತೆಲ್ಲ ತೆಪ್ಪಗಾಗುತ್ತಾ ಗೋಣಗಿಕೊಂಡು ಹಜಾರದ ತುದಿಯಲ್ಲೇ ಮಲಗಿಕೊಂಡ.

ಬೆಳಗಾಗಿ ಸಂಜೆ ಬಂತು, ರಾತ್ರಿ ಬಂತು, ಮುಂಜಾವು ಬಂತು, ಮಧ್ಯಾಹ್ನವಾಯಿತು. ಮತ್ತೆ ದಿನ ಹುಟ್ಟಿತ್ತು, ಸತ್ತಿತು, ಮುರು ದಿನ ಕಳೆದು ಹೋದುವು. ಸೀತೆ ಸಾವಿತ್ರಿ ಸೌಭಾಗ್ಯ ಅಕ್ಕ ಬರದೇ ಇರುವುದಕ್ಕೆ ದಿಗಿಲಾದರು. ಯಕೆ ಬರಲಿಲ್ಲ, ಎಲ್ಲಿ ಹೋದಳು ಏನಾಯಿತು, ಆ ರಾತ್ರಿ ತಾನು ಹಾಗೆಲ್ಲ ಬೈಯ್ದು, ಆಕೆಯನ್ನು ಕೊಂದೇ ತೀರುತ್ತೇನೆ ಎಂದಿದ್ದನ್ನು ಮನೆ ಸಂದಿಯಲ್ಲಿ ಬಂದು ಕೇಳಿಸಿಕೊಂಡೇನಾದರೂ ಹೆದರಿ ಇಲ್ಲಿಗೆ ಬರದೆ ಎಲ್ಲಿಯಾದರೂ ಹೊರಟು ಹೋದಳೆ? ಇಲ್ಲವೆ ಸದ್ಯ ಸಾಬರ ಜೊತೆ ಓಡಿಹೋಗಿರುವ ಅವಳ ತಂಗಿಯ ಮನೆಗೆ ಹೊರಟು ಹೋಗಿರುವಳೆ, ಏನು ಮಾಡಿಕೊಂಡಳು, ಎಲ್ಲಿಯಾದರೂ ಸತ್ತಳೇ... ಎಂದೆಲ್ಲ ತರ್ಕಿಸಿ ವಿಪರೀತ ತಲೆ ಬಿಸಿ ಮಾಡಿಕೊಂಡು ತಾನು ಹಾಗೆಲ್ಲ ಮಾತನಾಡಿದ್ದು ತಪ್ಪಾಯಿತೇನೋ ಎಂದು ಕಂಗಾಲಾದ. ಸಣ್ಣಪುಟ್ಟ ಮಾತು ಜಗಳಕ್ಕೆಲ್ಲ ತಾನು ನೇಣೋ ನೀರೋ ನೋಡಿಕೊಳ್ಳುತ್ತೇನೆ. ಈ ಬದುಕು ಸಾಕಾಗಿ ಹೋಗಿದೆ ಎಂದು ಮಾರೆ ಉರು ಬಿಟ್ಟಿದ್ದಾಳೆ ಎಂಬ ಸುದ್ದಿ ಇದ್ದಕ್ಕಿದ್ದಂತೆ ಹಲವಾರು ರೆಕ್ಕೆ ಪುಕ್ಕ ಬಣ್ಣಗಳಿಂದ ಜನರಲ್ಲಿ ಹಂಚಿಕೆಯಾಯಿತು. ಇವರನ್ನೆಲ್ಲ ಸಾಕುವ ಜವಾಬ್ದಾರಿ ತನಗೆ ಯಾಕೆ ಬೇಕು, ಯಾವನಾದರೊಬ್ಬನ ಜೊತೆ ಹೋಗಿ ಸುಖವಾಗಿರುವಾ ಎಂದು ಓಡಿಹೋಗಿದ್ದಾಳೆ ಎಂದು ಜನ ಆಡಿಕೊಂಡರು. ತಮ್ಮಯ್ಯ ಇದನ್ನೆಲ್ಲ ನಂಬುವುದರ ಜೊತೆಗೆ ನಮ್ಮ ಹಣೆಬರಹ ಏನೋ ಕೆಟ್ಟಿದೆ, ಅಲ್ಲದಿದ್ದರೆ ಅವತ್ತು ಸಿಡಿಮದ್ದು ಯಾಕೆ ತಾನು ಗಾಡಿಯಲ್ಲಿ ಬರುವಾಗಲೇ ಸಿಡಿಯಬೇಕಿತ್ತು ಎಂದು ಯೋಚಿಸಿ ತಾಳ್ಮೆ ಕಳೆದುಕೊಂಡ.

ತಮ್ಮಯ್ಯ ಎದ್ದು ಬರ ಬರ ಹೊರಟು ಊರ ತೋಟಗಳಲ್ಲಿದ್ದ ಎಲ್ಲ ಬಾವಿಗಳನ್ನೂ ಒಮ್ಮೆ ನೋಡಿ ಬರುವಾ ಎಂದು ತೀರ್ಮಾನಿಸಿದ. ಈ ಹಿಂದೆ ಒಮ್ಮೆ ಯಾರೋ ಬಿದ್ದು ಸತ್ತಿದ್ದ ಬಾವಿಯ ಬಳಿ ಬರುವ ಹೊತ್ತಿಗೆ ಸುಸ್ತಾಗಿಹೋದ. ಎದೆ ಹೊಡೆದುಕೊಳ್ಳತೊಡಗಿತ್ತು. ಇನ್ನು ಮುಂದೆ ಹೆಜ್ಜೆ ಇಡಲಾರೆನೆಂದುಕೊಂಡ. ಹೆಣದ ವಾಸನೆಯನ್ನು ಕಂಡುಹಿಡಿಯುವಂತೆ ಉಸಿರಳೆದು ನೋಡಿದ. ತಡೆಯಲಾರದೆ ಕುಸಿದು ಕುಳಿತ. ಸಮಾಧಾನ

ತಂದುಕೊಂಡು ಎದ್ದುಬಂದ. ನಡುಗುವ ತೊಡೆಗಳನ್ನು ಹೊಂದಿಸಿಕೊಂಡು ಸಾವು ಎಷ್ಟು ಭೀಕರವಾಗಿದೆ. ಕ್ರೂರವಾಗಿದೆ ಎಂಬಂತೆ ಬಾವಿಯನ್ನು ಬಗ್ಗಿ ನೋಡಿದ ತಣ್ಣಗೆ ನೀರು ಮಲಗಿತ್ತು. ಗೌಗತ್ತಲಲ್ಲಿ ಏನೇನೋ ಕಸಕಡ್ಡಿ ಆಕೃತಿಗಳು ಕಂಡವು.

ಯಾರಾದರೂ ಅವಳನ್ನು ಕೊಂದು ಈಚಲು ಮರದ ತೋಪಿನಲ್ಲಿ ಎಸೆದಿರಬಹುದೇ ಎಂದು ಹುಚ್ಚನಂತೆ ಆ ಕಡೆ ಹೋಗಿ ಚುಚ್ಚುವ ಮುಳ್ಳುಕಡ್ಡಿ ಎಲ್ಲವನ್ನು ಲೆಕ್ಕಿಸದೆ ಹುಡುಕಾಡಿದ. ಎಲ್ಲಿಯಾದರೂ ನೇಣು ಹಾಕಿಕೊಂಡಳಾ ಎಂದು ಒಮ್ಮೆ ಯೋಚಿಸಿ ಹಾಗೆ ಮಾಡಿಕೊಂಡಿರಲಾರಳು ಎಂದುಕೊಂಡ. ಮರದ ಕೆಳಗೆ ಯಾತನೆಯಿಂದ ಕುಳಿತು ಕಟ್ಟುಗಟ್ಟಲೆ ಬೇಡಿ ಸೇದಿ ಒಂದು ಮಟ್ಟಕ್ಕೆ ಬಂದು ಪೇಟೆಗೆ ಹೋಗಿ ಮಾರೆಗೆ ಪರಿಚಯವಿದ್ದವರನ್ನು ಕೇಳಿ ಬರವಾ ಎಂದು ತೀರ್ಮಾನಿಸಿ ಹೊರಟು ಹಲಗೂರು ರಸ್ತೆಯಲ್ಲಿ ಓಡಾಡುವ ಬಸ್ಸುಗಳಿಗೆ ಕಾದು ಪೇಟೆ ಮುಟ್ಟಿದ. ಯಾರು ಯಾರನ್ನೋ ಸುಮ್ಮನೇ ಕೇಳಿದ. ಅಲ್ಲೆಲ್ಲೂ ಮಾರೆಯ ಸುಳಿವಿನ ಬಗ್ಗೆ ಆಧಾರ ಸಿಗಲಿಲ್ಲ. ಪೇಟೆಯ ಬೀದಿ, ಬೀದಿ, ಹೋಟೆಲು, ಮಾರ್ಕೆಟು, ಜನಸಂದಣಿಯ ಸ್ಥಳಗಳು, ಬಸ್ ಸ್ಟ್ಯಾಂಡ್ ಮತ್ತು ಗಲ್ಲಿಗಳನ್ನೆಲ್ಲ ಸುತ್ತಿ ತನ್ನ ಅಕ್ಕನಿಗಾಗಿ ಹುಡುಕಾಡಿದ. ಯಾಕೋ ಏನೋ, ಆಗ ಮಾರೆ ಕಡಲೆ ಬೀಜಗಳನ್ನು ರವಿಕೆಯೊಳಗೆ ಬಚ್ಚಿಟ್ಟುಕೊಂಡು ತನಗಾಗಿ ಕೊಡಲು ಮಾಡಿದ ಕಳ್ಳತನ ಮತ್ತು ಅದರಿಂದಾದ ಮಾನಭಂಗ ನಿಚ್ಚಳವಾಗಿ ಅವನ ಕಣ್ಣಮುಂದೆ ಬಂದು ಕುಣಿದಾಡಿ ಆ ಒಂದೊಂದು ಕಡಲೇಕಾಯಿ ಬೀಜಗಳನ್ನು ಅವನ ಎದೆಯೊಳಗೆ ಮೂಡತೊಡಗಿದವು

ಬಿಸಿಲು ತಾರಕಸ್ವರದಲ್ಲಿ ಪೇಟೆಯ ತುಂಬ ಧೂಳು ಹೊಗೆ ಗದ್ದಲದ ನಡುವೆ ಹಾಡುತ್ತಿತ್ತು. ಇಡೀ ದಿನ ಎಲ್ಲೆಂದರಲ್ಲಿ ಹುಡುಕಿ ಹುಡುಕಿ ಸುಸ್ತಾಗಿ ತಮ್ಮಯ್ಯ ಬರಿಗೈಯಲ್ಲಿ ಮನೆಗೆ ಬರುವ ಹೊತ್ತಿಗೆ ಮತ್ತೆ ಸಂಜೆಯಾಗುತ್ತಿತ್ತು. ಮಾರೆಯ ತಂಗಿಯರು ಕಾಯುತ್ತಲೇ ಕುಂತಲ್ಲೆ ಮನದಲ್ಲೇ ಹುಡುಕುತ್ತಿದ್ದರು. ತಮ್ಮಯ್ಯ ಮನೆಗೆ ಬಂದ ಮೇಲೆ ಜೀವ ಬಂದಂತಾಗಿ 'ಅಕ್ಕ ಸಿಕ್ಕಿದ್ಲೋ' ಎಂದರು. ಮಾತಿಲ್ಲದ ತಮ್ಮಯ್ಯ ತಪ್ಪಲೆ ತುಂಬ ನೀರು ಕುಡಿದು ಎಲ್ಲವನ್ನೂ ಚುಟುಕಾಗಿ ವಿವರಿಸಿದ. ಮಾರೆ ಸತ್ತಳೋ ಇಲ್ಲವೋ, ಎಲ್ಲಯಾದರೂ ಓಡಿಹೋದಳೋ ಎಂಬುದು ಯಾರಿಗೂ ಗೊತ್ತಾಗಲಿಲ್ಲ.ಜನ ಅವರಿಷ್ಟದಂತೆ ಈ ಬಗ್ಗೆ ಕತೆ ಕಟ್ಟಿಕೊಂಡು ಸಮಾಧಾನಪಟ್ಟರು.

ಅಡ್ಡ ಗೋಡೆಯ ಮೇಲಿನ ದೀಪ ಎಲ್ಲಕ್ಕೂ ಸಾಕ್ಷಿಯಂತೆ ನೋಡುತ್ತಿತ್ತು. ಆ ಕಡೆ ಬೆಳಕು, ಈ ಕಡೆಗೂ ಬೆಳಕು, ಅಲ್ಲಿ ಇಲ್ಲಿ ಹೊರಳಾಡುತ್ತಿತ್ತು. ಎದ್ದು

ಬಂದು ನಿಟ್ಟುಸಿರು ಬಿಟ್ಟು, ಎಲ್ಲವನ್ನೂ ನಾನು ನಿರ್ಧರಿಸಿಕೊಳ್ಳಬಲ್ಲೆ ಎಂಬಂತೆ ದುಕ್ಕಳಿಕೆಯನ್ನು ನುಂಗಿಕೊಂಡು ಕೋಣೆಗೆ ಹೋಗಿ ಸೌದೆ ಇಟ್ಟು ಬೆಂಕಿ ಹತ್ತಿಸಿ, ಇಟು ನೀರು ಹಾಕಿ ಅಡಿಗೆಗೆ ಸಾವಿತ್ರಿ ತಯಾರು ಮಾಡತೊಡಗಿದಳು. ಬೆಂಕಿಯ ಬೆಳಕು ಬಗೆಬಗೆಯಾಗಿ ಆ ಮನೆಯಲ್ಲಿ ಆವರಿಸಿಕೊಂಡಿತು. ಸೀತೆ ಒಲೆಯ ಬೇಳಕಿನ ಹೊಳೆವ ಕೆಂಬಣ್ಣದ ಮುಖದಲ್ಲಿ ಒಂದು ತೊಟ್ಟು ಕಣ್ಣೀರು ಭೂಮಿಗೆ ಬೀಳಿಸಿ ಸೆರಗಲ್ಲಿ ಸೀಟಿಕೊಂಡು ಬೆಂಕಿಯನ್ನು ಹೆಚ್ಚಿಸಿದಳು. ಈಗ ಹಿಟ್ಟಿನೆಸರು ಮಡಕೆಯಲ್ಲಿ ಕೊತಕೊತನೆ ಕುದಿಯತೊಡಗಿದಂತೆಲ್ಲ ಅದರೊಳಗೆ ಮಾರೆಯ ಚೆಂದದ ನಗಮೊಗವು ಬೆರೆತು ಮನೆ ತುಂಬ ಆವರಿಕೊಳ್ಳತ್ತಿತ್ತು. ಸೌಭಾಗ್ಯ ಯೋಚಿಸುತ್ತಾ ಅಕ್ಕನ ದೇಹವನ್ನು ತನ್ನೊಳಗೆ ತುಂಬಿಕೊಳ್ಳುವಂತೆ ನಾಳೆಯನ್ನು ಕೂಗುತ್ತಿದ್ದಳು. ತಮ್ಮಯ್ಯ ಪಡಸಾಲೆಯಲ್ಲಿ ಕುಳಿತು ದುಕ್ಕಳಿಯನ್ನು ನುಂಗುತ್ತ ಕತ್ತಲನ್ನು ಹಿಡಿದು ಕೊಂದು ಹಾಕುವವನಂತೆ ತದೇಕ ದಿಟ್ಟಿಸುತ್ತ ಎಷ್ಟೋ ಹೊತ್ತಿನ ತನಕ ಹಾಗೇ ಕೂತಿದ್ದ, ಮಾರೆ ನಾಳೆ ಬಂದೇ ಬರುವಳು ಎಂಬ ಯಾವೂದೊ ವಿಶ್ವಾಸ ತಂಗಿಯರಲ್ಲಿ ಮೂಡುತ್ತಿತ್ತು.

**ಲೇಖಕರ ಪರಿಚಯ:**

ಮೊಗಳ್ಳಿ ಗಣೇಶ: ಹಂಪೆಯ ಕನ್ನಡ ವಿಶ್ವವಿದ್ಯಾಲಯದಲ್ಲಿ ದಲಿತ ಸಂಸ್ಕೃತಿ ಅಧ್ಯಯನ ಪೀಠದ ಅಧ್ಯಕ್ಷರು ಶ್ರೇಷ್ಟ ಕತೆಗಾರರು, ಚಿಂತಕರು , ದಲಿತ ಲೋಕದ ಹಸಿಹಸಿ ಅನುಭವಗಳನ್ನು ಶಕ್ತಿ ಪೂರ್ಣ ಅಭಿವ್ಯಕ್ತಿಯ ಮೂಲಕ ಸಾಹಿತ್ಯ ಲೋಕದಲ್ಲಿ ಅನಾವೆಣಗೊಳಿಸುತ್ತಿದ್ದಾರೆ, ಬುಗುರಿ, ಅತ್ತೆ, ದಲಿತರು ಮತ್ತು ಜಾಗತೀಕರಣ, ಕಥನ, ದೇಶಿ, ಸೊಲ್ಲು, ಶತಮಾನ ಮುಂತಾದ ಕೃತಿಗಳನ್ನು ರಚಿಸಿರುವ ಇವರಿಗೆ ಕನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ದಮಾನ ಸಾಹಿತ್ಯ ಪ್ರಶಸ್ತಿ, ದೆಹಲಿಯ ಕಥಾ ಪ್ರಶಸ್ತಿ ಸೇರಿದಂತೆ ಹಲಾವಾರು ಪ್ರಶಸ್ತಿಗಳು ಲಭಿಸಿವೆ.

## 3.4 ಓದು ಪಠ್ಯ: ಕೆಂಪು ಮುಡಿಯ ಹೆಣ್ಣು

**–ಮೂಲ–ಒರ್ಹಾನ್ ಪಮುಕ್**
**ಕನ್ನಡಕ್ಕೆ: ಓ.ಎಲ್. ನಾಗಭೂಷಣ ಸ್ವಾಮಿ**

ಮೂವತ್ತು ವರ್ಷದ ಹಿಂದೆ. 1980ರ ಶುರುವಿನಲ್ಲಿ ಒಂದು ರಾತ್ರಿ. ನಮ್ಮ ನಾಟಕ ಕಂಪನಿಯ ಕೆಲವರು. ನಾವು ನಾಟಕವಾಡುತಿದ್ದ ಊರಿನ ಹೋಟೆಲಲ್ಲಿ ರಾಜಕೀಯ ಚಳವಳಿಗಾರರ ಜೋತೆಯಲ್ಲಿ ಊಟ ಮಾಡುತ್ತ, ಕುಡಿಯುತ್ತ ಕೂತಿದ್ದೆವು, ಆಗ ಕೆಂಪು ಮುಡಿಯ ಹೆಂಗಸು ಊಟದ ಟೇಬಲಿನ ಇನ್ನೊಂದು ತುದಿಯಲ್ಲಿ ಕಾಣಿಸಿಕೊಂಡಳು ಒಂದೇ ಟೆಬಲಿನಲ್ಲಿ ಕೆಂಪು ಮೂಡಿಯ ಇಬ್ಬರು ಹೆಂಗಸರು ಇರುವುದು ಎಂಥಾ ಆಕಾಸ್ಮಿಕ, ಹೀಗಾಗುವುದು ಎಷ್ಟು ಅಪರೂಪ ಎಂದು ಎಲ್ಲರು ಅಂದುಕೊಂಡರು,' ಹಿಗಾಗಿದ್ದು ಅದೃಷ್ಟವೋ ದುಶ್ಯಕುನವೋ ಅನ್ನುವ ಚರ್ಚೆಗೆ ಶುರುಮಾಡಿದರು, ಆಗ ಇದ್ದಕಿದ್ದ ಹಾಗೆ ಟೆಬಲಿನ ದೂರದ ತುದಿಯಲ್ಲಿದ್ದ ಹೆಂಗಸು

'ನಾನು ಹುಟ್ಟಾ ಕೆಂಚು ಕೂದಲಿನವಳು,' ಎಂದು ಘೋಷಿಸಿದಳು ಅವಳ ಮಾತಿನಲ್ಲಿ ಹೆಮ್ಮೆ ಇತ್ತು' ಕ್ಷಮೆ ಕೇಳುವ ಧನಿಯು ಇತ್ತು, 'ನೋಡಿ. ನನ್ನ ಮುಖದ ಮೇಲೆ, ತೋಳಿನ ಮೇಲೆ ಮಚ್ಚೆ ಇವೆ. ನನ್ನ ಮೈ ಬಣ್ಣ ಬೆಳ್ಳಗಿದೆ ಕಣ್ಣು ಹಸಿರು,' ಅಂದಳು

ನನ್ನ ಅಭಿಪ್ರಾಯ ತಿಳಿಯುವ ಹಂಬಲದಲ್ಲಿ ಎಲ್ಲರು ನನ್ನತ್ತ ತಿರುಗಿದಳು 'ನೀನು ಹುಟ್ಟಾ ಕೆಂಪು ಮುಡಿಯವಳಿರಬಹುದು. ನಾನು ಬಯಸಿ ಬಯಸಿ ಕೆಂಪು ಮುಡಿಯಳಾದೆ', ಎಂದು ತಕ್ಷಣ ನುಡಿದೆ.

ಬದುಕಿನಲ್ಲಿ ಯಾವ ಪ್ರಶ್ನೆಗೂ ಹೀಗೆ ತಟ್ಟನೆ ಉತ್ತರ ಕೊಡುವವಳಲ್ಲ ನಾನು, ಈ ವಿಷಯದ ಬಗ್ಗೆ ಮೊದಲೆ ಸಾಕಷ್ಟು ಯೋಚನೆ ಮಾಡಿದೆ, 'ದೇವರು ನಿನಗೆ ಕೆಂಚು ಕೂದಲನ್ನು ಕೊಟ್ಟ, ಅದು ನಿನ್ನ ವಿಧಿ, ನನ್ನ ಕೆಂಚು ಕೂದಲು ನಾನು ಬಯಸಿ ಮಾಡಿಕೊಂಡ ಆಯ್ಕೆ ,' ಅಂದೆ.

ಆ ವಿಚಾರ ಅಷ್ಟಕ್ಕೆ ಬಿಟ್ಟೆ.. ನನ್ನ ಜೋತೆಯಲ್ಲಿ ಕುಡಿಯುತಿದ್ದವರು ನಾನು ತುಂಬ ಹಮ್ಮಿನವಳು ಅಂದುಕೊಳ್ಳುವುದು ಇಷ್ಟವಗುತ್ತಿರಲಿಲ್ಲ. ಕೆಲವರು ಆಗಲೆ ಗೇಲಿಯ ಮಾಡುತಡುವುದು ಕಿವಿಗೆ ಬಿದ್ದತ್ತು. ನಾಲಗೆ ಕಚ್ಚಿಕೊಂಡು ಸುಮ್ಮನ್ನಿದ್ದೆ. 'ಹೌದು, ನಾನು ತಪ್ಪಿತಸ್ಥೆ, ನನ್ನ ಕೂದಲ ಬಣ್ಣ ಕೃತಕವಾದದ್ದು,' ಎಂದು ತಪ್ಪೊಪ್ಪಿಗೆ ಮಾಡಿಕೊಂಡದ್ದಕ್ಕೆ ಸಮನಾಗಿತ್ತು. ನನ್ನ ಮಾತು ನನ್ನ ಮೌನವನ್ನು ಶರಣಾಗತಿ ಅಂದುಕೊಳ್ಳಬಹುದಾಗಿತ್ತು. ನನ್ನ ವ್ಯಕ್ತಿತ್ವದ ಬಗ್ಗೆ ಗೆಳೆಯರೆಲ್ಲ ತಪ್ಪು

ತಿಳಿದು ನನನ್ನು ಆಸೆಬುರಕಿ. ಮೋಸಗಾತಿ ಅಂದುಕೊಳ್ಳಬಹುದಾಗಿತ್ತು.

ಬದುಕಿನಲ್ಲಿ ತಡಾವಾಗಿ ಕೆಂಚುಕೂದಲಿನವರಾದ ನಮ್ಮಂಥರಿಗೆ ಬಣ್ಣದ ಆಯ್ಕೆ ಅನ್ನುವುದು ವ್ಯಕ್ತಿತ್ವದ ಆಯ್ಕೆಯೆ ಆಗಿರುತ್ತದೆ. ನಾನು ಕೆಂಚುಕೂದಲಿನಳಾದ ಮೇಲೆ ನನ್ನ ಆಯ್ಕೆಗೆ ನಿಷ್ಠವಾಗಿ ನನ್ನ ಬದುಕಿನ ದಿನಗಳನ್ನು ಕಳೆದಿದ್ದೇನೆ.

ನಾನು ಇಪ್ಪತ್ತೈದರ ಹರೆಯದಲ್ಲಿರುವಾಗ ಆಧುನಿಕ ಪ್ರಕ್ಷಕರಿಗಾಗಿ ಜನಪದ ಬಯಲು ರಂಗ ಪರಂಪರೆಗೆ ಮತ್ತೇ ಜೀವಾ ತುಂಬುವ ಕೆಲಸದಲ್ಲಿ ತೊಡಗಿದೆ. ಹಳೇಯ ಕಥೆ. ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ನೀತಿಕತೆಗಳನ್ನು ಹೊಸೆಯುವ ಕೆಲಸ ಮಾಡುತ್ತಿರಲಿಲ್ಲ. ನನ್ನೊಳಗೆ ನ್ಯಾಯಪರವಾದ ಉದಾರ ಭಾವಗಳ ಇದ್ದರು ಮೂಲತಃ ನಾನು ತೃಪ್ತೆ. ಕಾಲದ ನನ್ನ ಪ್ರೇಮಿ ನನ್ನಗಿಂತ ಹತ್ತು ವರ್ಷ ಸುಂದರವಾಗಿ ಕಾಣುತಿದ್ದ ಕ್ರಾಂತಿಕಾರಿ ಮೂರು ವರ್ಷ ನಮ್ಮ ಪ್ರಣಯ ವ್ಯವಹಾರ ಗುಟ್ಟಾಗಿ ನಡೆದಿತ್ತು. ನಾವು ಒಟ್ಟಿಗೆ ಪುಸ್ತಕಗಳನ್ನು ಓದುತ್ತ ಕಳೆದ ಗಂಟೆಗಳು ಎಷ್ಟು ರೊಮಾಂಟಿಕ್ ಆಗಿದ್ದವು. ಆನಂದಮಯವಗಿದ್ದವು! ಅವನು ನನ್ನ ಬಿಟ್ಟು ಹೋದನೆಂದು ಕೋಪವಿದ್ದರು ಅದು ಅವನ ತಪ್ಪೆಂದು ಬೈಲಾರೆ. ನಮ್ಮ ಪ್ರಣಯ ಬಯಲಾಗಿತ್ತು. ನಮ್ಮ ಕಾಮ್ರೇಡುಗಳಿಗೆ ಅದನ್ನು ಸಹಿಸಲಾಗಿಲ್ಲ. ರೊಮಾನ್ಸು, ಪ್ರಣಯ ಇವುಗಳಿಂದ ಕ್ರಾಂತಿಕಾರಿಗಳ ಸಂಘಟನೆಗಳಲ್ಲಿ ವಿಷ ಹರಡುತ್ತದೆ. ಸಂಬಂದಪಟ್ಟ ಎಲ್ಲರು ಕಣ್ಣೀರಿಡಬೇಕಾಗುತ್ತದೆ. ಅಂದರು. ನಮಗೆ ಗೋತ್ತೆ ಆಗದೆ ಆಗಲೆ 1980 ಬಂದಿತ್ತು ಇನ್ನೊಂದು ಮಿಲೀಟರಿ ದಂಗೆ ನಡೆದಿತ್ತು. ನಾವು ಕೆಲವರು ಭೂಗತರಾದೇವು. ಒಂದಷ್ಟು ಜನ ದೋಣಿ ಹತ್ತಿ ಗ್ರೀಸ್‌ಗೆ ಅಲ್ಲಿಂದ ಜರ್ಮನಿಗೆ ಹೋಗಿ ರಾಜಕೀಯ ನಿರಾಶ್ರಿತರಾದರು ಕೆಲವರನ್ನು ಸೇರೆ ಹಿಡಿದು ಹಿಂಸೆ ಕೊಟ್ಟರು. ನನ್ನ ಹಳೆಯ ಪ್ರೇಮಿ ಅಕನ್ ಮನೆಗೆ ವಾಪಸ್ಸು ಹೋದ ಹೆಂಡತಿ, ಮಗನ ಜೋತೆಗೆ ಔಷಧದ ಅಂಗಡಿ ನೋಡಿಕೊಂಡು ಇದ್ದುಬಿಟ್ಟ. ಯಾವಾಗಲು ಕಿರಿಕಿರಿ ಕೊಡುತ್ತಾನೆಂದು. ನನ್ನ ಪ್ರೇಮಿಯನ್ನು ನಿಂದಿಸುತ್ತಾನೆಂದು ನಾನು ಯಾವಾಗಲು ಕೋಪಗೊಳ್ಳುತ್ತಿದ್ದ ತುರ್ಹಾನ್ ಈಗ ತುಂಬ ಮರುಕದಿಂದ ನಡೆದುಕೊಂಡ ಹೀಗೇ. ನಾವು ಮದುವೆಯಾಗಬೇಕೆಂಬ ತೀರ್ಮಾನ ಮಾಡಿದ್ದೆವು. ನಮ್ಮ ಮದುವೆಯಿಂದ ನಾವಿದ್ದ ಎಡಪಂಥಿಯ ನ್ಯಾಶನಲ್ ರೆವೊಲ್ಯೂಶನರಿ ಸಂಘಟನೆಗೂ ಒಳಿತಾಗುತ್ತದೆಂದು. ಅಂದುಕೊಂಡೆವು.

ಹೋಸ ಗಂಡನಿಗೆ ನನ್ನ ಹಳೇಯ ಸಂಬಂಧವನ್ನು ಮರೆಯಲಾಗಲಿಲ್ಲ ಸಂಘಟನೆಯ ಮೇಲೆ ಅವನೀಗಿರುವ ಅಧಿಕಾರದ ಹಿಡಿತವನ್ನು ನನ್ನ ಗತಕಾಲ ಹಾಳುಗೆಡವಿದೆ. ಅಂದುಕೊಂಡಿದ್ದ. ನಾನು 'ಸಡಿಲ' ಹೆಂಗಸ್ಸು

ಎಂದು ಬೈಯಲಿಲ್ಲ. ಪ್ರೀತಿ ಮಾಡಿದ ತಕ್ಷಣ ಪ್ರೀತಿಯನ್ನು ಮರೆಯುತಿದ್ದ. ನನ್ನ ಪ್ರಿಯಕರ ಅಕನ್‌ನ ಹಾಗಲ್ಲ ಇವನು ಏನೂ ತಪ್ಪಾಗಿಲ್ಲ ಅನ್ನುವ ಹಾಗೆ ನಟಿಸುವವನೆ ಅಲ್ಲ. ತುರ್ಹಾನ್. ನ್ಯಾಷನಲ್ ರೆವಲ್ಯೂಶನರಿ ಕಾಮ್ರೇಡುಗಳು ಆಡುವ ಮಾಮುಲಿ ಮಾತುಗಳ್ಳು ಅವನೀಗೆ ಅವಹೇಳನ. ಬಚ್ಚಿಟ್ಟುಕೊಂಡ ಮುಳ್ಳು ಕಾಣುತ್ತಿದ್ದವು. ತನ್ನ ಕಾಮ್ರೇಡುಗಳು ಪರೀಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ನಿಂದಿಸಿ ಸಶಸ್ತ್ರ ಹೋರಾಟಕ್ಕೆ ಸಜ್ಜು ಮಾಡುಲು ಮಲಯಾಕ್ಕೆ ಹೊರಟು ಹೋದ. ಆದರೆ ಯಾವ ಜನರನ್ನು ಒಗ್ಗುಡಿಸಲು ನನ್ನ ಗಂಡ ಪ್ರಯತ್ನಪಡುತ್ತಿದ್ದಾನೋ. ಅದೇ ಜನ ಅವನ ವಿರುದ್ಧ ಸರ್ಕಾರಕ್ಕೆ ದೂರು ಕೊಟ್ಟರು ಅವನು ಯಾವುದೊ ಹಳ್ಳದಲ್ಲಿ ಆಡಗಿದ್ದಾಗ ಪೋಲಿಸರು ಹೀಡಿದರು. ಮುಂದೇನಾಯಿತೆಂದು ನೀವೇ ಊಹಿಸಬಹುದು.

ಅಲ್ಪ ಕಾಲದಲ್ಲೇ ಎರಡನೇಯ ದೊಡ್ಡ ಆಘಾತ ಅನುಭಿವಿಸಿದ್ದ ನಾನು ರಾಜಕೀಯದಿಂದ ಮತ್ತಷ್ಟು ದೂರ ಸರಿದೆ. ಮನೆಗೆ ಹೋಗಿ ಅಪ್ಪ ಅಮ್ಮಂದಿರ ಜೋತೆ ಇರಬೇಕು ಅನುಸಿತು. (ನಮ್ಮಪ್ಪ ನಿವೃತ್ತನಾಗುವ ಮೋದಲು ಸ್ಥಳಿಯ ಸರ್ಕಾರೀ ಅಧಿಕಾರಿಯಾಗಿದ್ದ). ಹೊಗಲಿಲ್ಲ. ಮನೆಗೆ ಹೊಗುವದೆಂದರೆ ಸೋಲನ್ನು ಒಪ್ಪಿಸಿಕೊಂಡ ಹಾಗೆ, ಅಭಿನಯ ಕೈ ಬಿಟ್ಟ ಹಾಗೆ, ನನ್ನನ್ನು ಸೇ–ರಿಸಿಕೋಳ್ಳುವ ಇನ್ನೊಂದು ನಾಟಕ ಕಂಪನಿ ಹುಡುಕುವುದು ಕಷ್ಟವಾಗಿತ್ತು. ರಂಗಭೂಮಿಗಾಗಿಯೇ ರಂಗಭೂಮಿಯಲ್ಲಿ ತೊಡಗಬೆಕು. ರಾಜಕೀಯಕ್ಕಾಗಿ ಅಲ್ಲ ಅನ್ನುವ ಬದುಕಿನ ಹಂತಕ್ಕೆ ಮುಟ್ಟಿದೆ.

ಹಾಗಾಗಿ ಸಂಘಟನೆಯಲ್ಲೇ ಉಳಿದುಕೊಂಡೆ. ಕೆಲವು ಕಾಲ ಕಳೆದ ಮೇಲೆ ನನ್ನ ದಿವಂಗತ ಗಂಡನ ತಮ್ಮನ್ನು ಮದುವೆಯಾದೆ–ಮತ್ತೋಂದು ವಾಪಸ್ಸು ಬರುವ ಖಾತ್ರಿ ಇಲ್ಲದೆ ಪಾರ್ಶಿಯಾದ ಗಡಿಗೆ ತೆರಳುತಿದ್ದ ಅಟ್ಟೋಮನ್ ಅಶ್ವದಳದ ಸೈನಿಕರ ಹೆಂಡತಿಯರೂ ಹೀಗೆ ಮಾಡುತ್ತಿದ್ದರು. ಒಂದೇ ವ್ಯತ್ಯಾಸವೇನೆಂದರೆ ಟರ್ಗೇಯನ್ನು ಮದುವೆಯಾಗುವುದು ನನದೆ ವಿಚಾರವಾಗಿತ್ತು. ನಾಟಕ ಕಂಪನಿ ಶುರುಮಾಡುವ ಹಾಗೆ ಅವನಿಗೆ ಕುಮಕ್ಕು ಕೊಟ್ಟದ್ದು ನಾನೆ, ಹೀಗೆ, ಮದುವೆಯಾದ ಮೊದಲ ದಿನಗಳಲ್ಲಿ ತಿರ ಅನಿ–ರೀಕ್ಷಿತವಾದ ಸಾಮಾರಸ್ಯವಿತ್ತು. ನಾನು ಅಗಲೇ ಇಬ್ಬರನ್ನು ಪ್ರೀತಿಮಾಡಿ ಇಬ್ಬರನ್ನೂ ಕಳೆದುಕೊಂಡಿದೆ. ಟರ್ಗೇ ಇನ್ನೂ ಯುವಕ, ಹಾಗಾಗಿ ಅವನು ಧೀರ್ಘಾಕಾಲ ನನ್ನೊಡನೆ ಇರುತ್ತಾನೆ ಅನಿಸಿತ್ತು. ಚಳಿಗಾಲಗಳನ್ನು ನಾವು ಇಸ್ತಾಂಬುಲ್ ಅಥವಾ ಅಂಕಾರದಂಥ ದೊಡ್ಡ ನಗರಗಳ್ಳಿ ಕಳೆಯುತ್ತಿದ್ದೆವು. ಎಡಪಂಥಿಯ ಸಂಘಟನೆಗಳ ರಂಗಮಂದಿರಗಳಲ್ಲಿ. ಮೀಟಿಂಗೂ ನಡೆಸಲು

ಬಳಸುತ್ತಿದ್ದ. ಥೀಯೇಟರು ಎಂದು ಕರೆಯಲಾದ ಕಟ್ಟಡಗಳಲ್ಲಿ ನಾಟಕ ಆಡುತ್ತಿದ್ದೆವು. ಬೇಸಗೆಯಲ್ಲಿ ನಮ್ಮ ಗೆಳೆಯರ ಶಿಫಾರಸ್ಸಿನ ಹಾಗೆ ಹಳ್ಳಿಗಳಲ್ಲಿ, ಚಿಕ್ಕ ಪಟ್ಟಣಗಳಲ್ಲಿ, ಹಾಲಿಡೆ ರೆಸಾರ್ಟುಗಳಲ್ಲಿ. ಮಿಲಿಟರಿ ಗ್ಯಾರಿಸನ್ನು ಗಳಲ್ಲಿ. ಹೊಸದಾಗಿ ಕಟ್ಟಿದ ಫ್ಯಾಕ್ಟರಿಗಳಲ್ಲಿ ಪ್ರದರ್ಶನ ನೀಡುತ್ತಿದ್ದೆವು ಹೀಗೆ ಮೂರು ವರ್ಷ ಬದುಕಿದ್ದೆವು, ಆ ಮೇಲೆ ಇನ್ನೊಬ್ಬ ಕೆಂಪು ಮುಡಿಯವಳನ್ನು ಊಟ ಮೇಜಿನಲ್ಲಿ ನೋಡಿದ್ದು. ಕೇವಲ ಒಂದೇ ಒಂದು ವರ್ಷದ ಮೊದಲು ನನ್ನ ತಲೆಗೂದಲಿಗೆ ಕೆಂಪು ಹಚ್ಚಿಕೊಳ್ಳುವ ತೀರ್ಮಾನ ಮಾಡಿದೆ.

ಯೋಚನೆ ಮಾಡಿ ತೆಗೆದುಕೊಂಡ ನಿರ್ಣಯವಲ್ಲ ಅದು. ಅವತ್ತು ನಾನು ಬಕ್ರಿಕೋಯ್‌ನ ತೀರಾ ಮಾಮೂಲಿ ಸೆಲೂನಿಗೆ ಹೋಗಿದ್ದೆ. ಅಲ್ಲಿದ್ದ ಮಧ್ಯವಯಸಿನ ಹೇರ್‌ಡ್ರೆಸರ್‌ಗೆ, 'ನನ್ನ ತಲೆಗೂದಲಿನ ಬಣ್ಣ ಬದಲಾಯಿಸಿ,' ಅಂದೆ ಇಂಥದೇ ಬಣ್ಣ ಬೇಕು ಅಂತೇನು ಇರಲಿಲ್ಲ ಮನಸಿನಲ್ಲಿ

'ನಿಮ್ಮಕೂದಲು ಈಗಾಗಲೇ ಲೈಟ್ ಕಲರಿದೆ. ಬ್ಲಾ ಂಡ್ ಆದರೆ ಹೊಂದುತ್ತದೆ,' ಅಂದ.

'ಕೆಂಪು ಬಣ್ಣ ಹಾಕಿ ಚೆನ್ನಾಗಿರತ್ತೆ,' ಅಂತ ತಪ್ಪನ್ನೆ ಅಂದೆ .

ಕಿತ್ತಲೆ ಬಣ್ಣಕ್ಕೂ ಬೆಂಕಿ ಆರಿಸುವ ವ್ಯನಿನ ಬಣ್ಣಕ್ಕು ಮಾಡುವಿನ ಶೇಡ್ ಹಚ್ಚಿದ ಅವನು, ನಿಜವಾಗಿ ಎದ್ದು ಕಾಣುತ್ತಿತ್ತು. ಆದರೆ ಟರ್ಗೇಯಾಗಲೀ ಹತ್ತಿರದ ಗೆಳೆಯರಾಗಲೀ ಯಾರು ತಲೆಗೂದಲ ಬಣ್ಣದ ಬಗ್ಗೆ ಅಕ್ಷೇಪಮಾಡಲಿಲ್ಲ. ನಾನು ಯಾವುದೋ ನಾಟಕಕ್ಕೆ ಸಿದ್ದವಾಗುತ್ತಿದ್ದೇನೆ ಅಂದುಕೊಂಡರು ನನ್ನ ಪ್ರಣಯ ವ್ಯವಹಾರಗಳ ದುರಂತವೆ ನಾನು ಹೀಗೆಲ್ಲ ಆಡುವುದಕ್ಕೆ ಕಾರಣ ಅಂದುಕೊಂಡರು ಅನ್ನುವುದೂ ನನಗೆ ಗೊತ್ತಿತ್ತು. ಬಣ್ಣ ನೋಡಲಾರದೆ ಮುಖ ತಿರುಗಿಸುವ ಮೊದಲು, 'ಪಾಪ, ಅವಳನ್ನು ಅನ್ನುವುದಕ್ಕೆ ಅಗಾತದಾ? 'ಅಂ–ದುಕೊಳ್ಳುತ್ತಿದ್ದರೇನೋ.

ನಾನು ಮಾಡಿದ ಕೆಲಸದ ಪೂರ್ಣ ಪರಿಣಾಮ ತಿಳಿಯುವದಕ್ಕೆ ಅವರ ಪ್ರತಿಕ್ರಿಯೆಗಳು ಸಹಾಯ ಮಾಡುತ್ತಿದ್ದವು. ಟರ್ಕರು ಆಧಿಕೃತವಾದದ್ದು. ಮತ್ತು ಕೃತಕವಾದುದರ ವ್ಯತ್ಯಸಕ್ಕೆ ತುಂಬ ಬೆಲೆ ಕೊಡುತ್ತಾರೆ. ಊಟದ ಮೇಜಿನಲ್ಲಿ ಇನ್ನೊಬ್ಬ ಕೆಂಪು ಮುಡಿಯವಳು ತನ್ನ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಾದ ಮೇಲೆ ನಾನು ಸೆಲೂನಿನವರನ್ನು ಅವರ ಕೆಮಿಕಲ್‌ಗಳನ್ನು ನಂಬುವುದು ಬಿಟ್ಟು ಅಂಗಡಿಯಿಂದ ಹೆಣ ತಂದು ಹಚ್ಚಿಕೊಳ್ಳುವುದಕ್ಕೆ ಶುರುಮಾಡಿದೆ. ಸಹಜ ಕೆಂಚು ಕೂದಲಿನವಳ ಜೊತೆ ಆದ ಬೇಟಿಯಾದ ಪರಿಣಾಮ ಇದು.

ರಂಗದ ಮೇಲೆ ಪ್ರೇಕ್ಷಕರ ನಡುವೆ ಇರುತ್ತಿದ್ದ ಹೈಸ್ಕೂಲ್ ಹುಡುಗರು, ಕಾಲೇಜು

ಹುಡುಗರು ಒಂಟಿ ಸೈನಿಕರಿಗೆ ವಿಶೇಷ ಗಮನ ಕೊಡುತ್ತಿದೆ. ಅವರ ಕನಸು, ಹಂಬಲಗಳಿಗೆ ನನ್ನ ಮನಸ್ಸು ತೆರೆದಿರುತ್ತಿತ್ತು. ಯಾವುದು ನಿಜಾ, ಯಾವುದು ಕೃತಕ ಎಂದು ವಿಂಗಡಿಸುವುದರಲ್ಲಿ, ಪ್ರಾಮಾಣಿಕ ಭಾವನೆಗೆ ಕರಗುವುದರಲ್ಲಿ ಮಿಕ್ಕ ವಯಸ್ಕರಿಗಿಂತ ಅವರು ಎಷ್ಟೋ ವಾಸಿ, ನನ್ನ ತಲೆಗೂದಲಿಗೆ ಹೆನ್ನಾ ಹಚ್ಚಿಕೊಳ್ಳದಿದ್ದರೆ ಸೇಮ್‌ನ ಕಣ್ಣು ಸೆಳೆಯುವುದಕ್ಕೆ ಆಗುತ್ತಿರಲಿಲ್ಲವೇನೋ

ಅವನು ನನ್ನ ಗಮನಿಸಿದ ಅಂತಲೆ ನಾನೂ ಅವನನ್ನ ಗಮನಿಸಿದೆ, ಅವನು ಪೂರಾ ಅವರಪ್ಪನ ಹಾಗೆ ಕಾಣುತಿದ್ದ, ಅವನನ್ನು ನೋಡಿದರೆ ಖುಷಿಯಾಗುತ್ತಿತ್ತು. ನಾವಿದ್ದ ಕಟ್ಟಡದ ಕಿಟಕಿಯನ್ನು ಅವನು ದಿನಾ ನೋಡಿವುದು ತಿಳಿದಾಗ ಅವನು ನನಗೆ ಬಿದ್ದಿದ್ದಾನೆ ಅನ್ನುವುದು ಖಾತ್ರಿಯಾಯಿತು. ಅವನಿಗೆ ಸಂಕೋಚ, ನಾಚಿಕೆ, ನಾಚಿಕೆ, ಸಂಕೋಚ ಇಲ್ಲದವರನ್ನ ಕಂಡರೆ ನನಗೆ ಭಯ, ನಮ್ಮ ಸುತ್ತಲು ಅಂಥವರು ಬಹಳ ಜನ ಇದ್ದಾರೆ. ನಿರ್ಲಜ್ಜೆ ಅನ್ನುವುದು ಸಾಂಕ್ರಾಮಿಕ, ಅದು ಈ ದೇಶದಲ್ಲಿ ಉಸಿರು ಕಟ್ಟಿಸುವುದಷ್ಟು ವ್ಯಪಾಕವಾಗಿ ಹರಡಿದೆ, ಹೆಂಗಸರು ನಿರ್ಲಜ್ಜರಾಗಿರಬೇಕೆಂದು ಬಹಳಷ್ಟು ಜನ ನಾಚಿಕೆ ಇರದ ಗಂಡಸರು ಬಯಸುತ್ತಾರೆ. ಸೆಮ್ ಮೃದು ಸ್ವಾಭಾವದ, ಸಂಕೋಚದ ಹುಡುಗ, ನಮ್ಮ ನಾಟಕಕ್ಕೆ ಅವನು ಬಂದಿದ್ದನಲ್ಲ ಆ ರಾತ್ರಿ ಅವನ ಜೋತೆ ಸ್ಟೇಶನ್ ಚೌಕದಲ್ಲಿ ಸುತ್ತು ಹಾಕುವ ಅವನು ಯಾರೆನ್ನುವುದನ್ನು ತಿಳಿದುಕೊಂಡೆ

ನನಗೆ ಆಶ್ಚರ್ಯವಾಗಿದ್ದರು ನನ್ನ ಒಳ ಮನಸಿಗೆ ಇದೆಲ್ಲ, ಗೊತ್ತೆ ಇತ್ತು ಅನಿಸುತ್ತದೆ. ಯಾವುದನ್ನು ಅಕಾಸ್ಮಿಕ ಎಂದು ನಿರ್ಲಕ್ಷ್ಯ ಮಾಡಬಾರದು ಅನ್ನುವುದನ್ನು ರಂಗಭೂಮಿ ನನಗೆ ಕಲಿಸಿದೆ. ನನ್ನ ಮಗ ಮತ್ತೆ ಅವನಪ್ಪ ಇನ್ನೊಬ್ಬರ ಸಾಹಿತಿಗಳಾಗು ಕನಸು ಕಂಡದ್ದು ಅಕಾಸ್ಮಿಕವಲ್ಲ,' ನನ್ನ ಮಗನ ಅಪ್ಪನನ್ನು ಇಲ್ಲೇ ಓಂಗೋರಿನಲ್ಲಿ ಮೂವತ್ತು ವರ್ಷದ ನಂತರ ಮತ್ತೆ ಕಂಡದ್ದು ಅಕಾಸ್ಮಿಕವಲ್ಲ, ತನಗೆ ಅಪ್ಪ ಇಲ್ಲ ಎಂದು ನನ್ನ ಮಗ ಕಳವಳಪಟ್ಟಿದ್ದ. ಹಿಂದೆ ಅವನಪ್ಪ ಕಳವಳಪಟ್ಟ ಹಾಗೆನೆ ಆಕಾರಣದಿಂದಲೆ ಸ್ಟೇಜಿನ್ ಮೇಲೆ ಎಷ್ಟೋ ವರ್ಷ ಕಣ್ಣಿರು ಸುರಿಸಿದ್ದ ನಾನು ನಿಜವಾಗಿ ಕಣ್ಣಿರು ಸುರಿಸುವ ಕಾರಣ ಒದಗಿ ಬಂದಿದೆ.

ಸಾವಿರದ ಒಂಬೈನೂರು ಎಂಬತ್ತರಲ್ಲಿ ದಂಗೆ ನಡೆದ ಮೇಲೆ ನಮ್ಮ ಜನಪದ ನಾಟಕ ಕಂಪನಿ ಸರ್ಕಾರದ ಜೋತೆ ವಿರೋಧ ಬೇಡವೇಂದು ರಾಜಕೀಯ ನಿಲ್ಲುವನು ಬದಲಾಯಿಸಿಕೊಂಡಿತ್ತು ಎಡಪಂಥಿಯ ನಿಲುವಿನ ಮಾತು ಕಡಮೆಯಾದವು. ಸಾಧ್ಯವಾದಷ್ಟೂ ಹೆಚ್ಚಿನ ಪ್ರೇಕ್ಷಕರ ಮನಸ್ಸು ಸೆಳೆಯಬೇಕೆಂದು ನಾನು ರೂಮಿಯ ಮಸ್ನವಿಯಿಂದ. ಹಳೆಯ ಸೂಫೀ ಕಥೆ, ಐತಿಹ್ಯಗಳಿಂದ, ಫರ್ಹಾದ್–ಶಿರೀನ್, ಅಸ್ಲೀ–ಕರಾಮ್‌ನಂಥ ಪರಿಚಿತ ಕಥ–

'ಗಳಿಂದ ಸಂಭಾಷಣೆಗಳನ್ನು ಎತ್ತಿಕೊಳ್ಳುತ್ತಿದ್ದ ಯೆಶಿಲ್ಕ್ಯಾಮ್ ಸಿನಿಮಾಗಳಿಗೆ ಮೆಲೊಡ್ರಾಮಾದ ಚಿತ್ರಕಥೆ ಬರೆಯಿತ್ತಿದ್ದ. ಬಹಳ ಲೇಖಕನೊಬ್ಬ ಸೊಹ್ರಾಬ್ ರುಸ್ತುಮ್ ಕಥೆ ಎಂದೂ ಹಳತಾಗುವುದಿಲ್ಲ. ಅನ್ನುವ ಭರವಸೆ ನೀಡಿದರಿಂದ ನಾನು ರೂಪಿಸಿದ್ದ ರುಸ್ತುಮ್ ಕಥೆ ಬಹಲ ಜನಪ್ರಿಯವಾಗಿತ್ತು.

ಆನಪ್ರಿಯ ಟಿವಿ ಜಾಹಿರಾತುಗಳ ಲೇವಡಿ ಆದಾ ಮೇಲೆ ನಾನು ಬೇಲ್ಲಿ ಡಾನ್ಸು, ಮಾಡುತ್ತಿದ್ದೆ. ಆಗ ಬೇಕು, ನಾಯಿಗಳ ಹಾಗೆ ಅರಚಾಡುವ ಕಾಮಣಗಳು ನನ್ನ ಚಿಕ್ಕ ಸ್ಕರ್ಟು, ಉದ್ದ ಕಾಲುಗಳನ್ನು ಕಂಡು ಆ ಕ್ಷಣವೆ ನನ್ನ ಪ್ರೀತಿಯಲ್ಲಿ ಬೀಳುತ್ತಿದ್ದರು. ಅಥವಾ ಸಮೃದವಾದ ಲೈಂಗೀಕ ಭ್ರಮೆಗಳಲ್ಲಿ ಕಳೆದುಹೊಗುತ್ತಿದ್ದರು. ಸೊಹ್ರಾಬನ ತಾಯಿ ತಹ್ಮಿನಾಳ ರೂಪದಲ್ಲಿ ನಾನು ಸ್ಟೇಜನಲ್ಲಿ ಕಂಡ ತಕ್ಷಣ, ನನ್ನ ಮಗನಿಗೆ ನನ್ನ ಗಂಡ ಏನು ಮಾಡಿದ ಅನ್ನುವುದನ್ನು ಕಂಡು ಚೀರಿದ ತಕ್ಷಣ, ಎಲ್ಲಾ ಪ್ರೇಕ್ಷಕರು. ಪೋಲಿಗಳಾಗಿ ವರ್ತಿಸಿದವರು ಕೂಡಾ, ಹೆದರಿಕೆ ಹುಟ್ಟಿಸುವುದಂಥ ಮೌನದಲ್ಲಿ ಅದ್ದಿಹೋಗುತ್ತಿದ್ದರು.

ಮೊದಲು ಮೇಲುವಾಗಿ ಅಳುತ್ತ, ದಾನ ನಿಧಾನವಾಗಿ ಬಿಕ್ಕಬಿಳೀಸುತ್ತ ಆಮೇಲೆ ಭೋರ್ಗರೆದು ರೋದಿಸುತ್ತದೆ, ಪ್ರೇಕ್ಷಕರ ಮೇಲೆ ನನಗಿದ್ದ ಅಧಿಕಾರದ ಬಗ್ಗೆ ಬಿಗ್ಗುತ್ತಿದೆ ನನ್ನ ಬದುಕನ್ನು ರಂಗಭೂಮಿಗಾಗಿ ಮೀಸಲಿಟ್ಟುದಕ್ಕೆ ಖುಷಿಪಡುತಿದ್ದೆ. ಕೆಂಪನೆಯ ನಿಲುವಂಗಿ ತೊಟ್ಟು, ನಾಟಕದ ಒಡವೆ ಧರಿಸಿ, ಸೊಂಟಕ್ಕೆ ಮಿಲಿಟರಿ ಸ್ಯಾಶ್ ತೊಟ್ಟು, ತೋಳಿಗೆ ಪ್ರಾಚೀನ ಶೈಲಿಯ ಬ್ರೇಸ್ಲೆಟ್ ಧರಿಸಿ, ತಾಯಂದಿರಿಗೆ ಮಾತ್ರ ಗೊತ್ತಿರುವ ದುಃಖವನ್ನು ಅನುಭವಿಸುತ್ತ ಅಳುತಿದ್ದೆ. ನನ್ನ ಮುಂದೆ ಕುಳಿತಿದ್ದ ಗಂಡಸರ ಕಣ್ಣು ವದ್ದೆಯಾಗುವುದು ಕಂಡು ಅವರ ಆತ್ಮವೂ ಗದ್ಗದಿಸುವುದು ಗೊತ್ತಾಗುತಿತ್ತು. ತಪ್ಪಿತಸ್ಥ ಭಾವನೆ ಅವರ ಮನಸ್ಸಿನಲ್ಲೂ ಜಾಗೃತವಾಗುತಿತ್ತು. ಅಪ್ಪ ಮಗನ ಯುದ್ಧ ಶುರುವಾದ ತಕ್ಷಣ ಹಳ್ಳಿಗಾಡಿನ ಬಹಳಷ್ಟು ಯುವಕರು ತಮ್ಮನ್ನು ತಾವು ಸೊಹ್ರಾಬ್‌ನ ಜೊತೆ ಗುರುತಿಸಿಕೊಳ್ಳುತಿದ್ದರೇ ಹೊರತು ಬಲಶಾಲಿಯಾದ, ವಿಧೇಯತೆಯನ್ನು ಬಯಸುವ ಅವನಪ್ಪ ರುಸ್ತುಮನ ಜೊತೆಗಲ್ಲ ಅನ್ನುವುದು ತಿಳಿಯುತಿತ್ತು. ಸೊಹ್ರಾಬ್‌ನ ಸಾವು ತಮ್ಮದೇ ಸಾವು ಅನ್ನುವ ಹಾಗೆ ಅಳುತದ್ದರು. ಕೆಂಪು ಮುಡಿಯ ತಾಯಿ ತಾಳಲಾಗದ ದುಃಖದಲ್ಲಿ ರೋದಿಸುವ ಮುನ್ನ ಅವರು ಯಾರಿಗೂ ತಮ್ಮದೇ ವಿಧಿ ಇದು ಅನಿಸಿ ಹೀಗೆ ಅತ್ತಿರಲಾರರು.

ತೀವ್ರ ಭಾವನೆಗಳ ಆವೇಸದಲ್ಲೂ ಅಭಿಮಾನಿಗಳ ಕಣ್ಣು ನನ್ನ ಮುಖ, ಕೊರಳು, ಎದೆಕಣಿವೆ, ಕಂಚುಕೂದಲುಗಳ ಮೆಲೆ ಅಲೆದಾಡುತ್ತಿದ್ದವು– ಹಳೆಯ ಜಾನಪದ ಕತೆಗಳಲ್ಲಿ ಅಮೂರ್ತವಾದ ದುಃಖವು ಸಾಮಾನ್ಯವಾಗಿ ಕಾಮಪ್ರಚೋದನೆಯೊಡನೆ ಸೇರಿಕೊಂಡಿರುತ್ತಲ್ಲ ಹಾಗೆ. ಕೆಲವು ಅಪರೂಪದ,

ವೈಭವದ ಕ್ಷಣಗಳಲ್ಲಿ ನನ್ನ ಪ್ರತಿ ನೋಟ, ಪ್ರತಿ ಅಳತೆ ಮಾಡಿದ ಹೆಜ್ಜೆಯೊಡನೆ ಅವರ ಮನಸ್ಸು ಹೃದಯಗಳನ್ನು ಒಟ್ಟಿಗೆ ಸೆಳೆದು, ಅವರ ಮನಸ್ಸಿನಲ್ಲಿ ಇಂದ್ರಿಯ ಲಾಲಸೆ ಹುಟ್ಟಿಸಲು ಯತ್ನಿಸುತ್ತಿದ್ದೆ. ಒಂದೊಂದು ಸಾರಿ ಅವರಲ್ಲೊಬ್ಬ ಬಿಕ್ಕಿಬಿಕ್ಕಿ ಅಳುತಿದ್ದ. ಅವನ ಅಳು ಅವನ ಸುತ್ತಲಿನವರ ಮೇಲೆ ಪ್ರಭಾವ ಬೀರಿ ಅವರೂ ಅಳುತ್ತಿದ್ದರು. ಮತ್ತೆ ಇನ್ನು ಯಾರೋ ಒಬ್ಬಾತ ಕಸಿವಿಸಿಪಡುತ್ತ ದೃಶ್ಯದ ಮಧ್ಯದಲ್ಲೇ ಚಪ್ಪಾಳೆ ತಟ್ಟಲು ಶುರುಮಾಡುತಿದ್ದ. ಇದರಿಂದ ನನ್ನ ಅಭಿನಯ ಮುಳುಗಿ ಹೋಗುತಿತ್ತು, ಪ್ರೇಕ್ಷಕರಲ್ಲಿ ಗಲಾಟೆ ಶುರುವಾಗುತಿತ್ತು. ಎಷ್ಟೋ ಸಾರಿ ಟೆಂಟಿನೊಳಗಿದ್ದ ಇಡೀ ಪ್ರೇಕ್ಷಕ ಸಮೂಹ ಸ್ತಿಮಿತ ಕಳಕೊಂಡು ಜಗಳಗಂಟ–ರೆಲ್ಲ ಅಳುಬುರುಕರ ಜೊತೆ ಹೊಡೆದಾಡುವುದು ನೋಡಿದ್ದೇನೆ. ಬಾಯಿಗೆ ಬಂದ ಹಾಗೆ ಬೈಯುವ ಜನ ಸುಮ್ಮನೆ ನಾಟಕ ನೋಡುತಿದ್ದವರನ್ನೂ ನಮ್ಮ ಅಭಿನಯ ಮೆಚ್ಚಿ ಚಪ್ಪಾಳೆ ತಟ್ಟಿದವರನ್ನೂ ಬೈಯುತ್ತಿದ್ದರು. ಪ್ರೇಕ್ಷಕ ಸಮೂಹದ ಈ ತೀವ್ರತೆ, ಈ ಶಕ್ತಿ ಸಾಮಾನ್ಯವಾಗಿ ನನಗೆ ಇಷ್ಟ. ಆದರೆ ಹಿಂಸೆಯ ಭಯ ಕಾಡುತಿತ್ತು.

ಅಳುವ ತಹ್ಮೀನಾಳ ದೃಶ್ಯಕ್ಕೆ ಸಮತೋಲ ಬೇಕೆಂದು ದೇವರಿಗೆ ತನ್ನ ಸಂಪೂರ್ಣ ಶರಣಾಗತಿಯನ್ನು ಸಾಬೀತು ಮಾಡಲು ತನ್ನ ಒಬ್ಬನೇ ಮಗನ ಕೊರಳು ಕೊಯ್ಯಲು ಸಿದ್ಧವಾಗುವ ಪ್ರವಾದಿ ಅಬ್ರಹಾಮನ ದೃಶ್ಯವನ್ನು ಸೇ–ರಿಸಿದೆವು. ಆ ದೃಶ್ಯದಲ್ಲಿ ನಾನು ಹಿನ್ನಲೆಯಲ್ಲಿ ಅಳುವ, ಆಮೇಲೆ ರಂಗದ ಮೇಲೆ ಕುರಿಮರಿಯ ಬೊಂಬೆಯನ್ನು ತರುವ ದೇವತೆಯ ಪಾತ್ರ ಮಾಡುತ್ತಿದ್ದೆ ನಿಜ ಹೇಳಬೇಕೆಂದರೆ ಆ ಕಥೆಯಲ್ಲಿ ಹೆಂಗಸಿನ ಪಾತ್ರ ಇಲ್ಲವೇ ಇಲ್ಲ. ಪ್ರೇಕ್ಷಕರ ಮೇಲೆ ನನ್ನ ಪ್ರಭಾವವೂ ಆಗುತ್ತಿರಲಿಲ್ಲ. ಹಾಗಾಗಿ ನನ್ನ ಸ್ವಗತ ಭಾಷಣ–ಕ್ಕೆ ಈಡಿಪಸನ ಮಾತಿಗೆ ಉತ್ತರ ನೀಡುವ ತಾಯಿ ಯೋಕಸ್ತಳ ಸಂಭಾಷಣೆ ಆಯ್ದುಕೊಂಡೆ. ಮಗನಾದವನು ಆಕಸ್ಮಿಕವಾಗಿ ತಂದೆಯನ್ನು ಕೊಲ್ಲಬೇಕು ಎಂಬ ವೀಚಾರವನ್ನು ಪ್ರೇಕ್ಷಕರು ನಿರ್ಭಾವುಕವಾಗಿ ನೋಡುತಿದ್ದರು. ಅವರ ವಿಚಾರ ಶಕ್ತಿ ಕೆರಳುತಿತ್ತು. ಅಷ್ಟು ಸಾಕಾಗಿತ್ತು. ಕೆಂಪು ಮುಡಿಯ ತಾಯಿಯೊಡನೆ ಮಲಗುವ ಮಗನ ಪ್ರಸ್ತಾಪ ಬಿಟ್ಟುಬಿಡಬೇಕಾಗಿತ್ತು. ಅದೆಂಥ ದುರದೃಷ್ಟದ ಆಯ್ಕೆ ಅನ್ನುವುದು ಇವತ್ತು ತಿಳಿಯುತ್ತಿದೆ. ಟರ್ಗೇ ನನಗೆ ಎಚ್ಚರಿಕೆ ನೀಡಿದ್ದ ಅದನ್ನು ಉದಾಸೀನ ಮಾಡಿದ್ದೆ. ಹಾಗೇ ನಾಟಕದ ಅಭ್ಯಸದ ಸಮಯದಲ್ಲಿ ನಮಗೆ ಟೀ ತರುತಿದ್ದ ಹುಡುಗ ನನ್ನ ಸ್ವಗತ ಕೇಳಿ ಇದೆಂಥ ಕೆಟ್ಟ ಕತೆ ಅಂದದ್ದನ್ನೂ ನಮ್ಮ ಮೇನೇಜರು ಯೂಸುಫ್ ಕಳವಳಪಡುತ್ತ 'ಇಂದು ಬೇಡವೇನೋ' ಅಂ–ದದ್ದನೂ ಉದಾಸೀನ ಮಾಡಿದ.

ಗುದುಲ್ ಪಟ್ಟಣದಲ್ಲಿ, 1986ರಲ್ಲಿ, ನಾನು ಕೆಂಪು ಮುಡಿಯ ಯೊಕಾಸ್ತಳ ಪಾತ್ರ ಮಾಡಿದೆ. ನನ್ನ ಸ್ವಂತ ಮಗನ ಜೊತೆ ಮಲಗಿದೆ ಎಂದು ಹೇಳುವಾಗ ಪ್ರಾಮಾಣಿಕವಾದ ಕಣ್ಣೀರು ಸುರಿಸಿದೆ. ಮೊದಲ ಪ್ರದರ್ಶನವಾದ ಮೇಲೆ ಬೆದರಿಕೆಗಳು ಬಂದವು. ಎರಡನೆಯ ಪ್ರದರ್ಶನವಾದ ಮೇಲೆ, ಮಧ್ಯರಾತ್ರಿಯ ಹೊತ್ತಿನಲ್ಲಿ. ನಾಟಕದ ಟೆಂಟಿಗೆ ಬೆಂಕಿ ಇಟ್ಟರು. ಬೆಂಕಿ ಆರಿಸುವುದರಲ್ಲಿ ನಮಗೆ ಸಾಕುಬೇಕಾಯಿತು. ಒಂದು ತಿಂಗಾಳಾದ ಮೇಲೆ ಇದೇ ದೃಶ್ಯವನ್ನು ಸ್ಯಾಮ್ಸನ್‌ನಲ್ಲಿ  ಅಭಿನಯಿಸಿದೆ. ಸಮುದ್ರ ನಡೆದ ಜೋಪಡಿಗಳಲ್ಲಿ ನಾವಿದ್ದೆವು. ಮಾರನೆಯ ದಿನ ಊರಿನ ಹುಡುಗರು ನಮ್ಮ ಟೆಂಟಿನ ಮೇಲೆ ಕಲ್ಲೆಸೆದರು. ಅಝ್ರುಮ್‌ನಲ್ಲಿ ಕುಪಿತ ರಾಷ್ಟ್ರೀಯವಾದಿಗಳು ನಾವು 'ಗ್ರೀಕ್ ನಾಟಕಗಳ ಪ್ರಚಾರ' ಮಾಡುತಿದ್ದೇವೆ ಅನ್ನುವ ಆಪಾದನೆ ಮಾಡಿದರು. ಅವರ ಬೆದರಿಕೆ ಅಂಜಿ ನಾನು ಹೋಟಲಿನಲ್ಲಿ ರೂಮೀನಲ್ಲೇ ಉಳಿದೆ. ಧೈರ್ಯಶಾಲಿಗಳೂ ಗೌರವಸ್ಥರೂ ಆದ ಪೋಲಿಸರು ನಮ್ಮ ಟೆಂಟಿನ ಸುತ್ತ ರಕ್ಷಣೆಗೆ ನಿಂತರು. ಒಳನಾಡಿನ ಹಳ್ಳಿಗರ ಪಾಲಿಗೆ ನಮ್ಮ ಕಲೆ ತೀರ ವಾಚ್ಯವಾಯಿತೇನೋ ಅಂದುಕೊಂಡೆವು. ಆದರೆ, ಅಂಕಾರದ ಪ್ರಗತಿಶೀಲ ದೇಶಪ್ರೇಮಿಗಳ ಸಂಘಟನೆಯ ಪುಟ್ಟ ಸಭಾಂಗಣದಲ್ಲಿ, ರಾಕಿ ಮತ್ತು ಕಾಫಿಯ ವಾಸನೆ ತುಂಬಿದ್ದ ಆ ಜಾಗದಲ್ಲಿ ಕೂಡ, ಒಂದೆರಡು ಪ್ರದರ್ಶನಗಳಾದ ತಕ್ಷಣ ಈಡಿಪಸ್ ಕತೆಯನ್ನು ಆಡಬಾರದೆಂಬ ಒತ್ತಾಯ ಹುಟ್ಟಿತು. 'ಸಾರ್ವಜನಿಕರ ಸಂವೇದನೆಗಳನ್ನು ಭ್ರಷ್ಟಗೊಳಿಸುತಿದ್ದೇವೆ,. ಎಂದು ಹೇಳಲಾಯಿತು 'ಅಮ್ಮ' ಎಂಬ ಪದದಿಂದ ಆರಂಭವಾಗುವ ಬೈಗುಳವೇ ಪ್ರತಿಯೊಬ್ಬ ಗಂಡಸಿನ ಅತ್ಯಂತ ಪ್ರಿಯವಾದ ಬೈಗುಳವಾಗಿರುವ ಈ ದೇಶದಲ್ಲಿ ಮಗ ಅಮ್ಮನೊಡನೆ ಕೂಡಿದ ಕಥೆಯನ್ನು ಆಡಬಾರದೆಂಬ ನ್ಯಾಯಧೀಶರ ತೀರ್ಮಾನ ವಿರೋಧಿಸುವುದು ಕಷ್ಟವಾಗಿತ್ತು.

ಆಗ ಇಪ್ಪತ್ತರ ಹರೆಯದಲ್ಲಿದ್ದ ನಾನು ಮುಂದೆ ನನ್ನ ಮಗನ ತಾತನಾಗಲಿರುವ ಅಕನ್‌ನ ಜೊತೆಯಲ್ಲಿ ಈ ವಿಷಯವನ್ನೆಲ್ಲ ಚರ್ಚೆ ಮಾಡುತಿದ್ದೆ. ನಾವಾಗ ಪ್ರೀತಿಸುತ್ತಿದ್ದೆವು. ಸ್ಕೂಲುಗಳಲ್ಲಿ, ಮಿಲಿಟರಿ ಸೇವೆಯಲ್ಲಿ ಹುಡುಗರು ಕಲಿಯುವ ಬೈಗುಗಳ ಬಗ್ಗೆ ಆಶ್ಚರ್ಯಪಡುತ್ತಿದ್ದ. ಅವನು ಉದಾಹರಣೆಯಾಗಿ ಹೇಳುತಿದ್ದ 'ಕೆಟ್ಟ' ಮಾತುಗಳನ್ನು ನಾನೆಂದೂ ಕೇಳಿರಲಿಲ್ಲ. ಇದೆಲ್ಲ ಎಷ್ಟು ಅಸಹ್ಯ, ಹೆಂಗಸರ ಮೇಲೆ ಎಂಥ ದಬ್ಬಾಳಿಕೆ ಎಂದು ಉದ್ವೇಗದಿಂದ ಮಾತಾಡುತಿದ್ದ. ದುಡಿಯುವ ದುರ್ಗದ ಆದರ್ಶ ರಾಜ್ಯ ಸ್ಥಾಪನೆಯಾದಾಗ ಇಂಥ ಬೈಗುಳಗಳು ಇರುವುದಿಲ್ಲ ಅನ್ನುವ ವಿಶ್ವಾಸ ತೋರ್ಪಡಿಸುತ್ತಿದ್ದ. ನಾನು ತಾಳ್ಮೆಯಿಂದಿದ್ದು ಕ್ರಾಂತಿಗೆ ಸಿದ್ಧರಾಗುತ್ತಿರು ಜನಕ್ಕೆ ಬೆಂಬಲ ಕೊಟ್ಟರೆ ಸಾಕು ಅನ್ನುತಿದ್ದ, ಟಕಿ9ಯ ಎಡಪಂಥೀಯ ಚಳವಳಿಯಲ್ಲಿ ಲಿಂಗಭೇದಭಾವ ಕುರಿತ ಅತ್ಯಂತ ಹಳೆಯ

ವಾಗ್ವಾದವನ್ನು ವಿವರಿಸಲು ಇದು ಸಮಯವೂ ಅಲ್ಲ, ತಕ್ಕ ಸ್ಥಳವೂ ಅಲ್ಲ. ದೃಶ್ಯಗಳ ಕೊನೆಯಲ್ಲಿ ಬರುತಿದ್ದ ನನ್ನ ಸ್ವಗತಗಳು ಕೇವಲ ಕೋಪವನ್ನು ಮಾತ್ರ ವ್ಯಕ್ತಪಡಿಸುತ್ತಿರಲಿಲ್ಲ, ಅವು ಕಾವ್ಯಮಯ–ವಾಗಿದ್ದವು, ಸುಂದರವಾಗಿದ್ದವು. ನನ್ನ ಮಗನ ಪುಸ್ತಕ ಆ ದನಿಯನ್ನು ಹಿಡಿಯುತ್ತದೆ, ರಂಗದ ಮೇಲೆ ನಾನು ತರುತಿದ್ದ ಭಾವದ ಛಾಯೆಗಳನ್ನೆಲ್ಲ ಓದುಗರಿಗೆ ಮುಟ್ಟಿಸುತ್ತದೆ ಎಂದು ಆಶಿಸುತ್ತೇನೆ. ತಾತ–ತಂದೆಯಿಂದ ಆರಂಭಮಾಡಿ ನಮ್ಮ ಅನುಭವಗಳ ಬಗ್ಗೆ ಅನ್ವರ್ ಪುಸ್ತಕವನ್ನು ಬರೆಯಬೇಕು ಅನ್ನುವುದು ನನ್ನದೇ ಐಡಿಯಾ,

ಅನ್ವರ್ ಇನ್ನೂ ಮಗುವಾಗಿದ್ದಾಗ ಅವನು ಮನೆಯಲ್ಲೇ ಇದ್ದು ಸ್ಕೂಲಿಗೆ ಹೋಗಲಿ, ಭೋರ್ಡಿಂಗ್ ಸ್ಕೂಲು ಭೇಡ, ಅಲ್ಲಿ ಅವನಿಗೆ ಹುಟ್ಟಿನಿಂದ ಬಂದರುವ ಮಾನವೀಯತೆ ಒಳ್ಳೆತನಗಳನ್ನು ಕಳಕೊಂಡುಬಿಡಿತ್ತಾನೆ, ಮಿಕ್ಕ ಹುಡಿಗರ ಹುಡುಗರ ಹಾಗೆ ಕೆಟ್ಟ ವಿಷಯಗಳನ್ನು ಕಲಿಯುತ್ತಾನೆ ಅನಿಸಿತ್ತು, ಟರ್ಗೇ ಇದನ್ನು ಭ್ರಮೆ ಎಂದುಬಿಟ್ಟ, ನಮ್ಮ ಮಗನನ್ನು ಬಕ್ರಿಕೋಯ್‌ನಲ್ಲಿರುವ ಎಲಿಮೆಂಟರಿ ಶಾಲೆಗೆ ಸೇರಿಸುವ ಹೊತ್ತಿಗೆ ನಾವಿಬ್ಬರೂ ನಾಟಕವನ್ನು ಬಿಟ್ಟು, ಪ್ರತಿಯೊಂದೂ ಚಾನೆಲ್‌ನಲ್ಲಿ ಕಾಣಿಸಿಕೊಳ್ಳುತಿದ್ದ ವಿದೇಶೀ ಟಿವಿ ಧಾರಾವಾಹಿಗಳ ಟರ್ಕಿಶ್ ಅನುವಾದಕ್ಕೆ ಧ್ವನಿ ನೀಡಲು ಶುರುಮಾಡಿದ್ದೆವು, ಸಿರ್ರಿಸಿಯಹೋಗ್‌ನ ಕಾರಣದಿಂದ ನಾವು ಆಗಾಗ ಓಂಗೋರೆನ್‌ಗೆ ಹೋಗುತಿದ್ದೆವು, ನಮ್ಮ ಎಡಪಂಥೀಯ ಸಮಾಜವಾದೀ ಭಾವನೆಗಳು ಮಸುಕಾಗಿದ್ದವು, ಆದರೂ ಹಳೆಯ ಗೆಳೆಯರ ಸಂಪರ್ಕವಿತ್ತು, ಹಾಗೆ ನೋಡಿದರೆ ಅಷ್ಟೆಲ್ಲ ವರ್ಷಗಳು ಮಸುಕಾಗಿದ್ದವು, ಆದರೂ ಹಳೆಯ ಗೆಳೆಯರ ಸಂಪರ್ಕವಿತ್ತು. ಹಾಗೆ ನೋಡಿದರೆ ಅಷ್ಟೆಲ್ಲ ವರ್ಷಗಳ ನಂತರ ಉಸ್ತಾದ್ ಮಹಮದ್‌ನ ಜೊತೆಗೆ ನಮ್ಮನ್ನು ಮತ್ತೆ ಒಂದುಗೂಡಿಸಿದವನು ಸಿರ್ರಿ,

ಉಸ್ತಾದ್ ಮಹಮದ್‌ನ ಕತೆಗಳನ್ನು ಕೇಳಿ ನಮ್ಮ ಅನ್ಮರ್ ಬಹಳ ಖುಷಿಪಡುತಿದ್ದ, ಅವನ ಮನೆಗೆ ಹೋಗುತಿದ್ದೆವು, ಆ ಮನೆಯ ಹಿತ್ತಿಲಲ್ಲಿ ಬಾವಿ ಇತ್ತು, ಓಂಗೊರೆನ್‌ನಲ್ಲಿ, ಅವನು ಅವನು ವೊದಲ ಬಾವಿ ತೋಡಿದ ಮೇಲೆ ನಿರ್ಮಾಣ ಪ್ರಾಜೆಕ್ಟುಗಳು ಹೆಚ್ಚಿದವು, ಮಹಮದ್ ಬಾವಿಗಳನ್ನು ತೋಡಿ ಚೆನ್ನಾಗಿ ದುಡ್ಡು ಮಾಡಿಕೊಂಡಿದ್ದ, ಬೆಲೆ ಹೆಚ್ಚಾಗುವ ಮೊದಲೇ ಸ್ವಲ್ಪ ಭೂಮಿ ಖರೀದಿ ಮಾಡಿದ್ದ, ಸಾಕಷ್ಟು ಚೆನ್ನಾಗಿಯೇ ಬದುಕಿದ್ದ, ಸ್ಥಳೀಯರು ವಿಧವೆಯೊಬ್ಬಳ ಜೊತೆ ಅವನ ಮದುವೆ ಏರ್ಪಾಟು ಮಾಡಿದರು, ಆ ವಿಧವೆಯನ್ನೂ ಅವಳ ಮಗನನ್ನೂ ಬಿಟ್ಟು ಗಂಡ ಜರ್ಮನಿಗೆ ಹೋದವನು ವಾಪಸ್ಸು ಬಂದಿರಲೇ ಇಲ್ಲ, ಅವನ ಮಗುವನ್ನು ಉಸ್ತಾದ್ ಮಹಮದ್

ತನ್ನ ಮಗನೆಂದೇ ಪ್ರೀತಿ ಮಾಡಿದ, ಒಳ್ಳೆಯ ತಂದೆಯಾದ. ಆ ಹುಡುಗ, ಸಾಲಿಹ್‌ನ ಜೊತೆಯಲ್ಲಿ ಅನ್ವರ್‌ಗೆ ಒಳ್ಳೆಯ ಸ್ನೇಹ ಬೆಳೆಯಿತು, ಸಾಲಿಹ್‌ಗೆ ನಾಟಕದಲ್ಲಿ ಆಸಕ್ತಿ ಹುಟ್ಟಿಸುವುದಕ್ಕೆ ಪ್ರಯತ್ನಪಟ್ಟೆ. ಆಗಲಿಲ್ಲ ನನ್ನ ಜೊತೆಯಲ್ಲಿದ್ದ ಬಹುಪಾಲು ಯುವ ನಟರು ಅನ್ವರ್‌ನ ಕಾರಣದಿಂದ ಅಲ್ಲೇ ಬಹಳ ಹೊತ್ತು ಇರುತ್ತದೆ. ರಂಗಭೂಮಿಯ ಪ್ರೀತಿ ಸೋಂಕು ತಗುಲಿದ ಹಾಗೆ. ಈ ಹುಡುಗರಲ್ಲಿ ಬಹಳಷ್ಟು ಜನ ಉಸ್ತಾದ್ ಮಹನದ್‌ನ ಮನೆಗೆ ಬರುತಿದ್ದರು. ಆಟವಾಡುವ ಮಕ್ಕಳು ಬಾವಿಗೆ ಬಿದ್ದಾರು ಎಂದು ಅವನ ಮನೆಯ ಕೈತೋಟದಲ್ಲಿ ಅವನೇ ತೋಡಿದ್ದ ಬಾವಿಗೆ ಮುಚ್ಚಳ ಹಾಕಿ ಅದಕ್ಕೊಂದು ಬೀಗ ಹಾಕಿದ್ದ. ಮನೆಯ ಹಿಂದಿನ ಬಾಲ್ಕನಿಯಲ್ಲಿ ನಿಂತು 'ಹತ್ತಿರ ಹೋಗಬೇಡಿ, ಎಂದು ಮಕ್ಕಳಿಗೆ ನಾನು ಎಚ್ಚರಿಕೆ ಹೇಳುತಿದ್ದೆ. ಪುರಾಣದಲ್ಲಿ"ಕತೆಗಳಲ್ಲಿ ನದೆಯುವ ಘಟನೆಗಳು ನಿಜಜೀವನದಲ್ಲೂ ನಡೆಯುತ್ತವೆ.

ಉಸ್ತಾದ್ ಮಹಮದ್‌ನನ್ನು ಬಾವಿಯಿಂದ ಎತ್ತುವುದರಲ್ಲಿ ನನ್ನದೇ ಪ್ರಮುಖ ಪಾತ್ರ, ಹಿಂದಿನ ರಾತ್ರಿ ನನ್ನ ಹದಿಹರೆಯದ ಪ್ರೇಮಿಗೆ ನಾನು ಮರುಳಾಗಿಬಿಟ್ಟಿದ್ದೆ, ಅವನಿಂದ ನಾನು ಬಸುರಿಯಾಗುವುದಿತ್ತು, ಹೀಗಾದೀತ್ತು, ಅನ್ನುವ ಚಿಕ್ಕ ಊಹೆ ಕೂಡ ನಮಗೆ ಇರಲಿಲ್ಲ ಇನ್ನೂ ಒಂದು ಗ್ಲಾಸು ಕ್ಲಬ್ಬ್ ರಾಕಿ ಕುಡಿಯುತ್ತ ಅವನು ಮನಸ್ಸಿನಲ್ಲಿರುದೆನ್ನೆಲ್ಲಾ ಪೂರ್ತಿಯಾಗಿ ಹೇಳಿಕೊಂಡ ( ಇವು ಅವನವೆ ಮಾತು ) " ಅವನ ಮೇಲೆ ಉಸ್ತಾದ ತುಂಬಾ ಒತ್ತಡ ಹಾಕುತ್ತಿದ್ದಾನೆ, ಅವನಿಗೆ ಸಾಕಾಗಿಹೋಗಿದೆ, ಮನೆಗೆ ಅಮ್ಮನ ಹತ್ತಿರ ಹೋಗಬೇಕು ಅನಿಸುತ್ತದೆ. ನೀರು ಸಿಕ್ಕೀತು ಅನ್ನುವ ನಂಬಿಕೆ ಅವನಿಗಿಲ್ಲ, ಅವನು ಅದನ್ನು ಕೇರ್ ಮಾಡುವವನೂ ಅಲ್ಲ, ಓಂಗೋರೆನ್‌ನಲ್ಲಿ ಅವನು ಉಳಿದಿರುವುದಕ್ಕೆ ಒಂದೇ ಕಾರಣ, ಅದು ನೀನು–ಅಂದ.

ಹಾಗಾಗಿ ಮಾರನೆಯ ದಿನ ಮಧ್ಯಾಹ್ನ ಅವನು ತನ್ನ ಪುಟ್ಟ ಪೆಟ್ಟಿಗೆ ಹಿಡಿದು ಸ್ಟೇಷನ್ ಕಡೆ ಹೊರಟಿರುವುದು ನೋಡಿ ಗೊಂದಲವಾಯಿತು. ನನ್ನ ಅಭಿನಯ ನೋಡಿ ಎಷ್ಟೇ ಅಲ್ಪ ಕಾಲಕ್ಕಾಗಲೀ ನನ್ನ ಪ್ರೀತಿಸಿದ ಗಂಡಸರು ಒಂದು ಬಾರಿ ನನ್ನೊಡನೆ ಇದ್ದು ತೃಪ್ತರಾಗುತ್ತಿರಲಿಲ್ಲ. ಅವರಿಗೆ ಅಪಾರ ಅಸೂಯೆ ಇರುತಿತ್ತು.

ಸೆಮ್‌ನನ್ನು ಮತ್ತೆ ನೋಡಲಾಗದೆಂದು ನನಗೂ ಅಷ್ಟೇ ನರಾಸೆ ಆಗಿತ್ತೋ ಏನೋ. ಅವನು ತನ್ನಪ್ಪನ ಬಗ್ಗೆ ತೀರ ಸ್ವಲ್ಪ ಹೇಳಿದ್ದ. ಮೊದಲಿನಿಂದಲೂ ಅವನಿಗೆ ಏನಾದರೂ ಅನುಮಾನವಿತ್ತೋ ನಾನು ನನ್ನ ಸಹಟನರೂ ಮುಂದಿನ ರೈಲಿನಲ್ಲಿ ಊರು ಬಿಡುವ ತೀರ್ಮಾನ ಮಾಡಿದ್ದೆವು. ಆದರೆ ಸೆಮ್ ಯಾಕೆ

ಕಳ್ಳನ್ ಹಾಗೆ ಓಂಗೋರೆನ್ ಬಿಟ್ಟು ಓಡಿಹೋಗುತಿದ್ದಾನೆ ಅನ್ನುವುದು ತಿಳಿಯಲಿಲ್ಲ. ಸ್ಟೇಶನ್ನಿನ ತುಂಬ ಮಕ್ಕಳು, ಮಾರುಕಟ್ಟೆ ತರಕಾರಿ ತೆಗೆದುಕೊಂಡು ಹೋಗುತಿದ್ದ ರೈತರು ತುಂಬಿದ್ದರು. ಸೆಮ್‌ನ ಭೇಟಿಯ ಹಿಂದಿನ ರಾತ್ರಿ ಉಸ್ತಾದ್ ಮಹಮದ್‌ನನ್ನು ನಮ್ಮ ನಾಟಕಕ್ಕೆ ಕರೆತರುವ ಜವಾಬ್ದಾರಿಯನ್ನು ಅಲಿಗೆ ವಹಿಸಿದ್ದ ಟರ್ಗೇ. ಅವನು ಗೌರವಪೂರ್ವಕ ಮೌನದಲ್ಲಿ ನಮ್ಮ ನಾಟಕ ನೋಡಿದ್ದ. ಅಲಿ ಈಗ ಅವನ ಕೈಯಾಳಗಿಲ್ಲ. ಬಾವಿ ತೋಡಲು ಹೇಳಿದ್ದ ಜಮೀನಿನ ಯಜಮಾನ ದುಡ್ಡು ಕೊಡುವುದು ನಿಲ್ಲಿಸಿದ್ದ ಅನ್ನುವುದು ಉಸ್ತಾದ್ ಮಹಮದ್‌ನಿಂದಲೇ ತಿಳಿಯಿತು. ಕುತೂಹಲ ಹೆಚ್ಚಿ ಇನ್ನಷ್ಟು ಸುದ್ದಿ ತಿಳಿದು ಬರಲು ಟರ್ಗೇಯನ್ನು ಬಾವಿಯ ಹತ್ತಿರ ಕಳಿಸಿದೆವು. ಈ ನಡುವೆ ನಮ್ಮ ರೈಲು ಬಂದ ಹೋಗಿಬಿಟ್ಟಿದ್ದರಿಂದ ನಾವೆಲ್ಲ ಹಳೆಯ ಜಾನಪದ ಕತೆಯ ಪಾತ್ರಗಳ ಹಾಗೆ ಗುಡ್ಡ ಏರಿ ಹೋದವು. ಅಲಿಯನ್ನು ಬಾವಿಗಿಳಿಸಿದೆವು. ಅವನು ಅರ್ಧ ಪ್ರಜ್ಞೆ ತಪ್ಪಿದ್ದ ಉಸ್ತಾದ್ ಮಹಮದ್‌ನನ್ನು ಮೇಲಕ್ಕೆ ಕರಕೊಂಡು ಬಂದ.

ಉಸ್ತಾದ್ ಮಹಮದ್‌ನನ್ನು ಆಸ್ಪತ್ರೆಗೆ ಕರಕೊಂಡು ಹೋದರು. ಅವನ ಭುಜದ ಮುರಿದ ಕಾಲರ್ ಬೋನು ಪೂರ್ತಿ ವಾಸಿಯಾಗುವದರೊಳಗೇ ಮತ್ತೆ ಬಾವಿಯ ಕೆಲಸ ಶುರುಮಾಡಿದ್ದ ಅನ್ನುವುದು ಆಮೇಲೆ ನಮಗೆ ತಿಳಿಯಿತು. ಅವನಿಗೆ ಇನ್ನೊಬ್ಬ ಕೈಯಾಳು ಸಿಕ್ಕಿದನೋ ಗೊತ್ತಾಗಲಿಲ್ಲ. ಅಷ್ಟು ಹೊತ್ತಿಗೆ ನಾವು ಓಂಗೋರೆನ್ ಬಿಟ್ಟಿದ್ದೆವು. ನಿಜ ಹೇಳಬೇಕೆಂದರೆ ಮರೆಯಲು ಬಯಸುತಿದ್ದೆ–ನಾಟಕೀಯ ಸ್ವಚ್ಛಂತೆಯ ಗಳಿಗೆಯಲ್ಲಿ ಹೈಸ್ಕೂಲು ಹುಡುಗನ ಜೊತೆ ಆ ಊರಲ್ಲಿ ಮಲಗಿದ್ದನ್ನು, ಅದೇ ಹುಡುಗನ ತಂದೆಯ ಜೊತೆಗೂ ಹಿಂದೆ ಮಲಗುತಿದ್ದೆ ಅನ್ನುವುದನ್ನೂ, ನನಗಿನ್ನೂ ಮೂವತ್ತೈದು ಆಗಿರಲಿಲ್ಲ. ಗಂಡಸರಿಗೆ ಹೆಮ್ಮೆ ಹೆಚ್ಚು, ದುರ್ಬಲತೆಯೂ ಹೆಚ್ಚು, 'ನಾನು' ಅನ್ನುವ ಅಪ್ಪ ಮಗನನ್ನು, ಮಗ ಅಪ್ಪನನ್ನು ಕೊಲ್ಲಬಲ್ಲರು. ಯಾರು ಯಾರನ್ನು ಕೊಂದರು ಗೆಲವು ಗಂಡಸರದ್ದೇ: ಅಳುವುದಷ್ಟೆ ಹೆಂಗಸಿನ ಪಾಲಿಗೆ ಉಳಿದದ್ದು. ನಾನು ಅದುವರೆಗೆ ಕಲಿತದ್ದನ್ನೆಲ್ಲ ಅಳಿಸಿಹಾಕಿ ಬೇರೆ ಎಲ್ಲಾದರೂ ಹೊಸ ಬದುಕು ಶುರುಮಾಡಬೇಕು ಅನಿಸಿತ್ತು.

ಅನ್ವರ್‌ನ ತಂದೆ ಸೆಮ್ ಇರಬಹುದು ಅನ್ನುವ ಅನುಮಾನ, ಟರ್ಗೇ ವಿಚಾರ ಹಾಗಿರಲಿ, ನನಗೇ ಬಂದಿರಲಿಲ್ಲ. ಬಸುರಾದದ್ದು ಯಾವಾಗ ಎಂದು ಲೆಕ್ಕಹಾಕುವಾಗ ಅವನ ಹೆಸರು ಮನಸಿನಲ್ಲಿ ಸುಮ್ಮನೆ ಸುಳಿದಿತ್ತು. ಹೆಚ್ಚು ತಲೆಕಡಿಸಿಕೊಂಡಿರಲಿಲ್ಲ. ಆದರೂ ಅನ್ವರ್ ಬೆಳೆದ ಹಾಗೆ ಅವನ ಕಣ್ಣು, ಅದಕ್ಕಿಂತ ಅವನ ಮೂಗು ಟರ್ಗೇಯ ಹಾಗಿಲ್ಲ ಅನ್ನಿಸುವುದಕ್ಕೆ ಶುರುವಾಯಿತು.

ನನ್ನ ಯುವಕ ಪ್ರಿಯಕರನೆ ನನ್ನ ಮಗನ ತಂದೆ ಇರಬಹುದು ಎಂದು ಮತ್ತೆ ಅನ್ನಿಸಿತು, ಟರ್ಗೇಗೆ ಯಾವತ್ತಾದರೂ ಇಂಥ ಯೋಚನೆ ಬಂದಿತ್ತೋ?

ಅನ್ವರ್, ಟರ್ಗೇ ಎಂದೂ ಒಬ್ಬರಿಗೊಬ್ಬರು ಹೊಂದಿಕೊಳ್ಳಲೇ ಇಲ್ಲ. ನಮ್ಮ ಮಗನನ್ನು ನೋಡಿದಾಗೆಲ್ಲ ನನು ಮೊದಲು ಅವನಣ್ಣನ ಹೆಂಡತಿಯಾಗಿದ್ದ ನೆನಪು ಕಾಡುತಿತ್ತೇನೋ, ತನ್ನಣನ ಹಾಗೇ ಅವನಿಗೂ ಅನುಮಾನ. ಮೊದಲೇ ಮದುವೆ ಯಾಗಿದ್ದವನ ಜೊತೆ ನನಗೆ ಪ್ರಣಯ ಸಂಬಂಧ ಇದ್ದುದರಿಂದ ನಾನು ತುರ್ಹಾನ್‌ಗೆ ಕೂಡ ಮೋಸಮಾಡಿರಬಹುದು ಅನ್ನುವ ಅನುಮಾನ ಇಬ್ಬರಿಗೂ ಇತ್ತು. ಅವನು ಇದನ್ನೆಲ್ಲ ಬಾಯಿ ಬಿಟ್ಟು ಹೇಳದಿದ್ದರೂ ಹೀಗನ್ನಿಸಿದೆ ಅವನಿಗೆ ಅನ್ನುವುದು ನನಗೆ ಗೊತ್ತಿತ್ತು. ಅವನಿಗೆ ನನ್ನ ಕೆಂಪು ಮುಡಿಯನ್ನು ಕಂಡರೆ ಅಗುತ್ತಿರಲಿಲ್ಲ. ಅದು ನನ್ನ ಗತಕಾಲವನ್ನು ಅವನಿಗೆ ನೆನಪಿಸುತಿತ್ತು. ಇದನ್ನೂ ಅವನೆಂದೂ ಬಾಯಿಬಿಟ್ಟು ಹೇಳಿಲ್ಲ.

ಪಶ್ಚಿಮ ದೇಶಗಳಲ್ಲಿ ಕೆಂಪು ಮುಡಿಯ ಹೆಂಗಸನ್ನು ಬೆಂಕಿಯಂಥವರು, ಯಾರಿಗೂ ಜಗ್ಗದ ಬಜಾರಿಗಳು ಎಂದು ಚಿತ್ರಿಸುತ್ತಾರೆ ಅನ್ನುವುದನ್ನು ಅವನು ಗಮನಿಸಲಿ ಎಂದು ಇಂಗ್ಲಿಷ್‌ನಿಂದ, ಫ್ರೇಚಿನಿಂದ ಅನುವಾದವಾದ ನಾಟಕ, ಕಾದಂಬರಿಗಳನ್ನು ಟರ್ಗೇಗೆ ತಂದುಕೊಡುತಿದ್ದೆ. ಅವನಿಗೆನೂ ಅನಿಸಲಿಲ್ಲ. 'ಹೆಂಗಸರ ದೃಷ್ಟಿಯಲ್ಲಿ ಗಂಡಸರು' ಎಂಬ ಲೇಖನ ಓದಿದೆ. ಮಹಿಳೆಯರ ಪತ್ರಿಕೆಯಲ್ಲಿತ್ತು. ಇಂಗ್ಲಿಷ್ ಲೇಖನವೊಂದರ ಯಥಾವತ್ ಅನುವಾದ. ಅದರಲ್ಲಿ ಕೆಂಚುಕೂದಲಿನ ಹೆಂಗಸಿನ ಚಿತ್ರವಿತ್ತು. ನಿಗೂಢ ಜ್ವಾಲೆ' ಎಂಬ ಶೀರ್ಷಿಕೆ ಇತ್ತು. ಚಿತ್ರದಲ್ಲಿದ್ದವಳ ಭಾವ, ತುಟಿಗಳ ಆಕಾರ ನನಗೆ ಹೋಲಿಕೆಯಾಗುತಿತ್ತು. ಆ ಚಿತ್ರವನ್ನು ಕತ್ತರಿಸಿ ಗೋಡೆಗೆ ಅಂಟಿಸಿದೆ. ನನ್ನ ಗಂಡ ಅದನ್ನು ಗಮನಿಸಲ್ಲೇ ಇಲ್ಲ. ಅವನು ರಾಷ್ಟ್ರೀಯ, ಅಂತಾರಾಷ್ಟ್ರೀಯ ಅನ್ನುವ ತೋರಿಕೆಯವನೇ ಹೊರತು ಅವನು ಬೌದ್ಧಿಕ ದಿಗಂತ ಬಹಳ ಕಿರಿದಾದದ್ದು. ಅವನ ಪ್ರಕಾರ ನಮ್ಮ ದೇಶದ ಕೆಂಪು ಮುಡಿಯ ಹೆಣ್ಣುಗಳು ಸಡಿಲ ನೈತಿಕತೆಯವರು; ಹೆಣ್ಣೊಬ್ಬಳು ತನ್ನ ಕೂದಲನ್ನು ಕೆಂಪಾಗಿಸಿಕೊಳ್ಳಲು ಬಯಸಿದರೆ ಅದು ಅವಳ ಸ್ವಭಾವದ ಸೂಚನೆಯಷ್ಟೇ. ನಾನು ನಟಿಯಾದ್ದರಿಂದ ಮಾತ್ರವೆ ನನ್ನ ಕೆಂಪು ಮುಡಿಯ ರಂಗ ದೃಶ್ಯದ ಭಾಗವಾಗಿತ್ತು, ಅಪರಾಧವಾಗಿರಲಿಲ್ಲ.

ಟರ್ಗೇ ಮತ್ತು ನಾನು ಡಬಿಂಗ್ ಕಲಾವಿದರಾಗಿದ್ದ ವರ್ಷಗಳಲ್ಲಿ ಪರಸ್ಪರ ದೂರವಾದೆವು. ನಾವು ಬಕೀರ್‌ಕಾಯ್‌ನಲ್ಲಿರುವ ಅಪಾರ್ಟ್‌ಮೆಂಟಿನಲ್ಲಿದ್ದೆವು. ಅದು ನನ್ನ ಗಂಡನಿಗೆ ಅವನ ಅಪ್ಪ ಅಮ್ಮಂದಿರಿಂದ ಬಂದಿತ್ತು. ಆದರೆ ಅನ್ವರ್‌ಗೆ ಅಪ್ಪ ಕಾಣುತ್ತಲೇ ಇರಲಿಲ್ಲ. ಟರ್ಗೇ ಜಾಹಿರಾತುಗಳಿಗೆ ಧ್ವನಿ ನೀಡುತಿದ್ದ.

ಜೊತೆಗೆ ಇನ್ನೂ ಸಣ್ಣಪುಟ್ಟ ಕೆಲಸ ಮಾಡುತಿದ್ದ. ಮನೆಗೆ ಬಂದರೂ ಬಹಳ ತಡವಾಗಿ ಬರುತಿದ್ದ, ರಾತ್ರಿಯ ಊಟಕ್ಕೆ ಮನೆಗೆ ಬಾರದ ತಂದೆಯ ಮಗನನ್ನು ಬೆಳೆಸುವುದು ಹೇಗಿರುತ್ತದೆ ಅನ್ನುವುದು ನನಗೆ ಗೊತ್ತು.

ನಾನು, ಅನ್ವರ್ ಆಪ್ತರಾದೆವು. ಅವನ ಬದಲಾಗುತಿದ್ದ ಮೂಡುಗಳಿಗೆ ನಾನು ಸಾಕ್ಷಿಯಾಗಿದ್ದೆ. ಅವನ ಸೂಕ್ಷ್ಮವಾದ ಆತ್ಮ, ಸೂಕ್ಷ್ಮವಾದ ಸಂವೇದನೆಗಳು ನನಗೆ ಸಾಕ್ಷಿಯಾಗಿದೆ. ಕೋಪ, ಒಂಟಿತನ, ಹತಾಶೆಗಳು ನನ್ನ ತಕುತಿದ್ದವು. ಅವನ ಭಯ, ಮೌನ, ಆತಂಕಗಳನ್ನೂ ಗಮನಿಸುತ್ತಿದೆ. ಅವನ ತೋಳು, ಕುತ್ತಿಗೆಗಳ ನಯವಾದ ಚರ್ಮದ ಮೇಲೆ ಬೆರಳಾಡಿಸುದಕ್ಕೆ ನನಗೆ ಇಷ್ಟ, ಅವನ ಭುಜ, ಕಿವಿಗಳು ಹಿಗ್ಗುವುದು ಕಂಡು ತೃಪ್ತಳಾಗುತಿದ್ದ, ಅವನ ಬುದ್ಧಿ, ವಿಚಾರಶಕ್ತಿಗಳ ಬೆಳವಣಿಗೆಯ ಹಾಗೇ ಲೈಂಗಿಕ ಅವಯವಗಳ ಬೆಳವಣಿಗೆಯೂ ತೃಪ್ತಿಕೊಡುತಿತ್ತು, ಜೊತೆಗೇ ಅವನಲ್ಲಿ ಮಗುವಿನ ಎಳಸುತನವೂ ಉಳಿದಿತ್ತು.

ಕೆಲವು ದಿನ ಅವನಿಗೆ ಹೇಗೆ ಇಷ್ಟವೋ ಹಾಗೆ ಇರುತಿದ್ದೆವೂ–ಆಪ್ತ ಮಿತ್ರರ ಹಗೆ ಹರಟೆ ಹೊಡೆಯುತ್ತ, ನಗುತ್ತ, ಬಚ್ಚಿಟ್ಟುಕೊಳ್ಳುವ ಆಟವಾಡುತ್ತ, ಪದಬಂಧ ಬಿಡಿಸುತ್ತ, ಒಟ್ಟಿಗೆ ಶಾಪಿಂಗ್ ಹೊಗುತ್ತ,,, ಒಂದೊಂದು ಸಲ ವಿಷಾದದ ಒಂಟಿತನದ ಪರದೆ ನಮ್ಮನ್ನು ಕವಿಯುತಿತ್ತು. ಜಗತ್ತು ಎಷ್ಟು ದೊಡ್ಡ ಗಾತ್ರದ್ದು, ನಾವೆಷ್ಟು ಚಿಕ್ಕವರು ಅನಿಸಿ ಭಯವಾಗುತಿತ್ತು. ಒಬ್ಬರ ಮುಖ ಒಬ್ಬರು ನೋಡುತಿರಲಿಲ್ಲ. ನಾನು ಬಹಳ ಪ್ರೀತಿಸುವ ನನ್ನ ಮಗನೇ ಆಗಿರಲಿ ಇನ್ನೊಬ್ಬರನ್ನು ನಿಜವಾಗಿ ಅರಿಯುವುದು, ಅವರ ಆತ್ಮದೊಡನೆ ಸಂಪರ್ಕ ಬೆಳೆಸುವುದು ಎಷ್ಟು ಕಷ್ಟ ಅನ್ನುವುದು ಅಂಥ ಹೊತ್ತಿನಲ್ಲಿ ಮನಸಿಗೆ ಬರುತಿತ್ತು. ಅವನ ಕೈ ಹಿಡಿದು ಇಡೀ ಜಗತ್ತು ತೋರಬೆಕು. ಅವನು ಬಕೀರ್‌ಕೋಯ್, ಓಂಗೋರೆನ್ ಗೆಳೆಯರ ಜೊತೆ ಬೀದಿಯಲ್ಲಿ ಆಡಬೇಕ, ತನಗಾಗಿ ತಾನು ಹೋರಾಡುವುದು ಕಲಿಯಬೇಕು ಅನಿಸುತಿತ್ತು. ತಾಯಿಯ ಹೆಸರು ಎತ್ತಿ ಒಬ್ಬರನ್ನೊಬ್ಬರು ಬೈದುಕೊಳ್ಳುವವರಿಂದ, ಥಿಯೇಟರಿನಲ್ಲಿ ನಮ್ಮನ್ನು ಲೇವಡಿ ಮಾಡುವಂಥ ಜನರಿಂದ ಅವನು ದೂರವಿರಬೇಕು ಅನಿಸುತಿತ್ತು.

ಮಿಕ್ಕಮಕ್ಕಳಷ್ಟು ಸಮಯವನ್ನು ಹೊರಗೆ ಆಟವಡುತ್ತ ಕಳೆಯಲಿಲ್ಲ ಅನ್ವರ್. ಹಾಗೇ ಸ್ಕೂಲಿನಲ್ಲಿ ಮಾಮೂಲಿ ವಿದ್ಯಾರ್ಥಿ, ಅಷ್ಟೆ ಇದರಿಂದ ನನಗೆ ಬೇಸರವಾಗುತಿತ್ತು, ಯಾಕೆ ಅನ್ನುವುದು ತಿಳಿಯುತ್ತಿರಲಿಲ್ಲ. ಅವನು ಚೆನ್ನಾಗಿ ಓದಿ, ಒಳ್ಳೆಯ ಕೆಲಸ ಹಿಡಿದು, ಶ್ರೀಮಂತನಾಗಿ,,, ಇತ್ಯದಿ ಆಸೆ ಇರಲಿಲ್ಲ ನನಗೆ ನನ್ನ ಮಗ ಮರುಕವುಳ್ಳವನಾಗಬೇಕು. ನ್ಯಾಯಕ್ಕೆ ಬೆಲೆ ಕೊಡುವವನಾಗಬೇಕು, ಸಮಾಧಾನಿಯಾಗಬೇಕು ಎಂದು ಬಯಸಿದ್ದೆ ಅವನು

ಸಂತೋಷವಗಿಯೂ ಇರಬೇಕು, ಹಿರೋನೂ ಆಗಬೇಕು ಅನ್ನುವ ಆಸೆ! ಕ್ಷುಲ್ಲಕ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಳ್ಳಬಾರದು ಅವನು ಅನಿಸುತಿತ್ತು. ಅವನು ಪುಟ್ಟ ಮಗುವಾಗಿದ್ದಾಗ ಕಣ್ಣರಳಿಸಿ, ದೊಡ್ಡದಾಗಿ ಬಾಯಿ ತೆರೆದ ಅಳುವಾಗ 'ನನ್ನ ಮುದ್ದು ಮಗನ ಬದುಕು ಹಿತವಾಗಿರಲಿ,' ಅನಿಸುತಿತ್ತು.

ಅವನ ಸರೋವದಂಥ ಕಣ್ಣು ನೋಡುತ್ತ, ನೀನು ಮಿಕ್ಕವರಿಗಿಂತ ಬೇರೆ ಥರ, ನಿನ್ನಲ್ಲಿ ಏನೋ ವಿಶೇಷವಿದೆ, ಅನ್ನುತಿದ್ದೆ. ಮಕ್ಕಳ ಪುಸ್ತಕ, ಹಳೆಯ ಕತೆ, ಪದ್ಯಗಳನ್ನು ಒಟ್ಟಿಗೆ ಓದುತಿದ್ದೆವು. ಟಿವಿಯಲ್ಲಿ ಮಕ್ಕಳ ನಾಟಕ, ಕಾರ್ಟೂನು ನೋಡುತ್ತಿದ್ದೆವು. ಅವನು ಅವರ ಅಪ್ಪ, ತಾತನಿಗಿಂತ ಹೆಚ್ಚು ಚಿಂತನಶೀಲ, ಸಂವೇದನಾಶೀಲ ಅನ್ನುವುದನ್ನು ನೋಡುತಿದ್ದೆ. ನೀನೊಂದು ನಾಟಕ ಬರಿ ಅನ್ನುತದ್ದೆ. ಬರೆಯುವು-ದಕ್ಕೇನೋ ಅವನಿಗೆ ಇಷ್ಟ, ಆದರೆ ನಾಟಕ ಬೇಡ ಅನ್ನುತಿದ್ದ.

ಎಲಿಮೆಂಟರಿ ಸ್ಕೂಲು ಮುಗಿದ ಮೇಲೆ ಅನ್ವರ್‌ನ ಸ್ವಭಾವದ ಸಿಡುಕು. ಚುಚ್ಚುವ ಗುಣ ಕಾಣಿಸಿತು, ಇಂಥ ಸ್ವಭಾವವನ್ನು ಅವನ ಅಪ್ಪನಲ್ಲಾಗಲೀ ತಾತನಲ್ಲಾಗಲೀ ಯಾವತ್ತೂ ಕಂಡಿರಲಿಲ್ಲ. ಅವನ ಕೋಪ, ಆಕ್ರೋಶ ನನ್ನಿಂದಲೇ ಬಂದಿರ ಬಹುದೆಂದುಕೊಂಡು ಅವಕ್ಕೆ ಸ್ವಲ್ಪ ಅವಕಾಶ ಕೊಟ್ಟೆ ಎಷ್ಟು ಶಾಂತಸ್ವಭಾವದ ಮಗು, ನನ್ನ ಮಗು ಅನ್ವರ್‌ಗೆ ಸ್ನಾನ ತುಂಬ ಇಷ್ಟ, ಅವನಿಗೆ ನೀರು ಹಾಕಿ, ಮೃದುವಾದ, ನಯವಾದ ಅವನ ಮೈಯನ್ನು ಬಿಸಿ ನೀರಲ್ಲಿ ತೊಳೆದು, ಅವನ ಪುಟ್ಟ ತೋಳು, ಪುಟ್ಟ ಕಲ್ಲಂಗಡಿಯಂಥ ಸೋಪು ಹಚ್ಚುವ ಹೊತ್ತು ಬಲು ಇಷ್ಟ. ಬಚ್ಚಲು ಮನೆ ಬೆಚ್ಚಗೆ, ಹಿತವಾಗಿರುತಿತ್ತು. ಒಂದೊಂದು ಸಲ ಅವನಿಗೆ ಸ್ನಾನ ಮಾಡಿಸಿ ಆದ ಮೇಲೆ ನಾನು ಸ್ನಾನ ಮಾಡುತಿದ್ದೆ. ಹಾಗಾಗಿ ಅವನಿಗೆ ಹತ್ತು ವರ್ಷವಾಗುವವರೆಗೆ ನವು ಬಾತ್ ಟಬ್ಬಿನಲ್ಲಿ ಒಟ್ಟಿಗೆ ಸ್ನಾನಮಾಡುತಿದ್ದೆವು, ಆಮೇಲೆ ಅವನು ಕಣ್ಣು ಮುಚ್ಚಕೊಂಡೇ ತಲೆ, ಕೂದಲು, ಕಾಲುಗಳನ್ನೆಲ್ಲ ತಾನೆ ತೊಳೆದುಕೊಂಡು ಸ್ನಾನಮಾಡುವುದು ಹೇಗೆಂದು ಹೇಳಿಕೊಟ್ಟೆ.

ನನ್ನ ಮಗನಿಗೆ ಅದು ಇಷ್ಟವಾಗಲೇ ಇಲ್ಲ. ಅವನು ಬೆಳೆದ ಹಗೆ ಬೆಳೆಯುತ್ತ ಹೋದಹಾಗೆಲ್ಲ ಬೆಳೆದ ಕೋಪ, ಆಕ್ರೋಶಗಳು ಈ ಅವಧಿಯಲ್ಲಿ ಬಲವಾಗಿ ಬೇರು ಬಿಟ್ಟವು ಅನ್ನಿಸುತ್ತದೆ. ಅವನು ಹೈಸ್ಕೂಲಿನಲ್ಲಿದ್ದಾಗ ಟರ್ಗೇ ಮನೆಗೆ ಬರುವುದನ್ನು ಪೂರಾ ನಿಲ್ಲಿಸಿಬಿಟ್ಟ. ಅನ್ವರ್ ಸಂಕಟಪಟ್ಟ, ಅವನ ಬಗ್ಗೆ ಎಷ್ಟೇ ಮೆಚ್ಚುಗೆ ನನಗಾದ ನಿರಾಸೆಯನ್ನು ಬಚ್ಚಿಡಲಾಗಲಿಲ್ಲ. ಈ ಕಾರಣ-ಕ್ಕೆ ಅವನ ವೇದನೆ ಇನ್ನೂ ಹೆಚ್ಚಿತು, ನನ್ನ ಜೊತೆಯಲ್ಲಿ ವಾದಕ್ಕಾಗಿ ವಾದ,

ಜಗಳಕ್ಕಾಗಿ ಜಗಳ ಮಾಡುವುದು ಅವನಿಗೆ ಇಷ್ಟವಾಗುತಿತ್ತು. ಅವನ ಕಾಮಿಕ್ ಪುಸ್ತಕಗಳನ್ನು ಟೀಕೆ ಮಾಡಿದರೆ, ಟಿವಿ ಚಾನೆಲ್ಲು ಬದಲಾಯಿಸಿದರೆ ಅವನು ಗುರುಗುಟ್ಟಿ 'ನಿನಗೇನು ತಿಳಿಯುತ್ತದೆ,' ಅನ್ನುತಿದ್ದ. ಅನಾಥ ನಿರಾಶ್ರಿತನ ಹಾಗೆ ತಲೆ ಬೋಳಿಸಿಕೊಳ್ಳುತಿದ್ದ. ಧಾರ್ಮಿಕ ಫ್ಯಾನಟಿಕ್‌ನ ಹಾಗೆ ಗಡ್ಡ ಬೆಳೆಸುತಿದ್ದ. ಹುಚ್ಚನ ಹಾಗೆ ಕ್ಷೌರ ಮಾಡಿಕೊಳದೆ ಇರುತಿದ್ದ. ನಾನು ಬೆಚ್ಚಿದರೆ, ಬೆದ-ರಿದರೆ ಅವನಿಗೆ ವಿಕೃತವಾದ ಅಮಾಧಾನ. ಅದಕ್ಕಾಗಿ ನನ್ನ ಜೊತೆ ಜಗಳ ತೆಗೆಯುತಿದ್ದ. ಇಬ್ಬರೂ ಕೂಗಡುತಿದ್ದೆವು. ಬಗಿಲು ದಡಾರನೆ ಎಳಕೊಂಡು ಬಿರುಗಾಳಿಯ ಹಾಗೆ ಹೊರಟುಹೋಗುತಿದ್ದ.

ಯೂನಿವರ್ಸಿಟಿಯಲ್ಲಿದ್ದಾಗ ಓಂಗೋರೆನ್ಗೆ ಮತ್ತೆ ಮತ್ತೆ ಹೋಗುತಿದ್ದ-ಚಿಕ್ಕಂದಿನ ಗೆಳೆಯರನ್ನು ನೋಡುವುದಕ್ಕೆ. ಉಸ್ತಾದ್ ಮಹಮದ್‌ನ ಮನೆಯಲ್ಲಿ ಭೆಟಿಯಾದ ನಿರುದ್ಯೋಗ ಆದರ್ಶವಾದಿಗಳ ಗುಂಪಿನ ಸ್ನೇಹವಾಗಿ ಅವರನ್ನು ಮೆಚ್ಚಿಕೊಂಡಿದ್ದ. ಬಕೀರ್‌ಕೋಯ್‌ನ ನಮ್ಮ ಮನೆಯ ಹತ್ತಿರವಿದ್ದ ವಿಲೆಫೆಂಡಿ ರೇಸ್‌ಕೋರ್ಸಿನಲ್ಲಿ ಅವನು ಕುದುರೆಗಳ ಮೇಲೆ ದುಡ್ಡು ಕಟ್ಟಿ ಜೂಜಾಡುತಿದ್ದ ಕಾಲವು ಒಂದಿತ್ತು. ಬಲುಬೇಗ ಪಶ್ಚಾತ್ತಾಪಟ್ಟ, ನನ್ನ ಹತ್ತಿರ ದುಡ್ಡು ಕೇಳುವುದು ನಿಲ್ಲಿಸಿದೆ ಬೂರ್ದೂರ್‌ನಲ್ಲಿ ರಜಾದಿನಗಳಲ್ಲಿ ಫೋನು ಮಾಡಿ ಅಳುವುದರಲ್ಲೇ ಇಡೀ ದಿನ ಕಳೆಯುತಿದ್ದ. ಅವನು ಇಸ್ತಾಂಬುಲ್‌ಗೆ ಬಂದಾಗ ಅವನ ಚಿಕ್ಕದಾಗಿ ಕತ್ತರಿಸಿದ, ಕೂದಲು, ಬಿಸಿಲಿಗೆ ಬೆಂದ ಚರ್ಮ, ಚೆರ್ರಿ, ಹಣ್ಣಿನ ತೊಟ್ಟಿನ ಹಾಗೆ ಬಡಕಲಾಗಿದ್ದ ಕುತ್ತಿಗೆ ಕಂಡು ನನ್ನ ಕಣ್ಣಲ್ಲಿ ನೀರು ಬರುತಿತ್ತು. ನಮ್ಮಿಬ್ಬರ ಮಧ್ಯೆ ಕೂಗಾಟ, ಚೀರಾಟಗಳ ಪಂದ್ಯ ನಡೆಯುತಿತ್ತು. ಒಂದೊಂದು ಜಗಳವಾದ ಮೇಲೂ ಅವನು ಎಷ್ಟೋ ದಿನ ವಾಪಸು ಬರುತ್ತಲೇ ಇರಲಿಲ್ಲ. ಅವನಿಗಾಗಿ ಕಾಯುತ್ತ ನಿದ್ರೆ ಇರದ ರಾತ್ರಿಗಳನ್ನು ಕಳೆಯುತಿದ್ದೆ. ಯಾರಾದರೂ ಪೆದ್ದು ಹುಡುಗಿಯ ಬಲೆಗೋ, ತಲೆಕೆಟ್ಟ ಹೆಂಗಸಿನ ಪ್ರೀತಿಗೋ ಸಿಕ್ಕಿಬಿದ್ದಾನು ಅನ್ನುವ ಹೆದರಿಕೆ ನನಗಿತ್ತು, ನಾವಿಬ್ಬರೂ ಎಷ್ಟೇ ವಾದಮಾಡಲಿ. ಸಿಟ್ಟು ಮಾಡಲಿ, ಚುಚ್ಚುಮಾತಾಡಲಿ, ನಮ್ಮ ನಡುವೆ ಭಾರವಾದ ಮೌನವೇ ಇರಲಿ, ಯಾವುದೋ ಒಂದು ಕ್ಷಣದಲ್ಲಿ ಇಬ್ಬರೂ ಬಲವಾಗಿ ಅಪ್ಪಿಕೊಂಡು ರಾಜೀಯಾಗುತಿದ್ದೆವು, ನನ್ನ ಮಗನಿಂದ ದೂರವಾಗುವುದನ್ನು ಸಹಿಸಲಾರೆ, ಅವನಿಲ್ಲದೆ ಬದುಕಲಾರೆ ಅನಿಸುತಿತ್ತು, ಅಂಥ ಹೊತ್ತಿನಲ್ಲಿ.

ಅವನಪ್ಪನಿಂದ ( ಅಥವಾ ತನ್ನ ಅಪ್ಪ ಎಂದು ಅವನು ತಿಳಿದಿದ್ದವಿನಿಂದ) ನಾವಿಬ್ಬರೂ ದೂರವಾಗೆಯೇ ಇದ್ದೆವು. ಹಾಗಾಗಿ ನಾನು-ಟರ್ಗ ತೀರಿಯೂ ಹೋದಾಗ, ಮಗನ ಮೇಲೆ ಅಂಥ ಪರಿಣಾಮವಾಗಲಿಲ್ಲ,

ತಂದೆ ಇಲ್ಲದೆ ಬೆಳೆದು ಸೂಕ್ಷ್ಮವಾಗಿದ್ದಾನೆ, ಅದಕ್ಕೇ ನನ್ನ ಮಗನ ಸಿಟ್ಟು, ಕಾರಣವಿರದ ಆಕ್ರೋಶ, ಹೆಚ್ಚುತ್ತಿದ್ದ ಮೌನ, ಎಲ್ಲವನ್ನೂ ಇದು ಹೀಗೇ ಎಂದು ತೀರ್ಮಾನ ಮಾಡುವ ಸ್ವಭಾವ ಬೆಳೆದಿವೆ, ನಮ್ಮ ಬಡತನವೂ ಅವನ ಇಂಥ ಸ್ವಭಾವಕ್ಕೆ ಕಾರಣವಿರಬಹುದು ಅನಿಸಿತ್ತು. ಸೆರ್ಮ್‌ನನ್ನು ನೋಡಿದಾಗ, ಅವನ ರಿಯಲ್ ಎಸ್ಟೇಟುಗಳ ಜಾಹಿರಾತು ಪೇಪರಿನಲ್ಲಿ ಕಂಡಾಗ. ತಂದೆತನವನ್ನು ಸಂಶಯವಿಲ್ಲದೆ ಸಾಬೀತು ಮಾಡುವ ವಿಧಾನವನ್ನು ಪಾಶ್ಚಾತ್ಯಾ ಔಷಧ ಶಾಸ್ತ್ರ ಕಂಡುಹಿಡಿದಿದೆ, ಟರ್ಕಿಯ ಕೋರ್ಟುಗಳೂ ಅದನ್ನು ಒಪ್ಪಿವೆ ಎಂದು ಓದಿದಾಗ ನನಗೆ ಹೊಸ ಯೋಚನೆ ಬಂದಿತು.

**ಲೇಖಕರ ಪರಿಚಯ:**

**ಒರ್ಹಾನ್ ಪಮುಕ್ :**

ನಾಲ್ಕು ದಸಕಗಳ ಕಾಲಕ್ಕಿಂತ ಮಿಗಿಲಾಗಿ ಬರಹವನ್ನೇ ವೃತ್ತಿಯಾಗಿಸಿಕೊಂಡಿರುವ ಘೆರಿಟ ಒರ್ಹಾನ್ ಪಮುಕ್ ಹುಟ್ಟಿದ್ದು 7 ಜೂನ್ 1952. ನೊಬೆಲ್ ಸಾಹಿತ್ಯ ಬಹುಮಾನ (2006) ಪಡೆದಿರುವ ಅವರ ಕೃತಿಗಳು 63 ಭಾಷೆಗೆ ಅನುವಾದಗೊಂಡಿದೆ.

ಮೈ ನೇಮ್ ಈಸ್ ರೆಡ್ (1998) ಕಾದಂಬರಿಯಿಂದ ಪಮುಕ್‌ಗೆ, ಅಂತರಾಷ್ಟ್ರೀಯ ಖ್ಯಾತಿ ದೊರೆಯಿತು. ಹದಿನಾರನೆಯ ಶತಮಾನದ ಇಸ್ತಾಂಬುಲ್ ನಗರದಲ್ಲಿ ನಡೆಯುವ ಕಥೆ ಆಟ್ಟೊಮನ್ ಚಕ್ರವರ್ತಿ ಸುಲ್ತಾನ್ ಮೂರನೆಯ ಮುರಾದ್‌ನ ಆಳ್ವಿಕೆಯ ದಿನಗಳನ್ನು ಚಿತ್ರಿಸುತ್ತದೆ.

ಇಂಗ್ಲಿಷಿನಲ್ಲಿ ಲಭ್ಯವಿರುವ ಪಮುಕ್ ಕೃತಿಗಳು; ದಿ ವೈಟ್ ಕ್ಯಾಸಲ್ (1991), ದಿ ಬ್ಲಾಕ್ ಬುಕ್ (1994) ದಿ ನ್ಯೂ ಲೈಫ್ (1997), ಮೈ ನೇಮ್ ಈಸ್ ರೆಡ್ (2001), ಸ್ನೋ (2004), ಇಸ್ತಾಬುಲ್; ಮೆಮೊರಿಸ್ ಅಂಡ್ ದಿ ಸಿಟಿ (2005), ಅದರ್ ಕಲರ್ಸ್; ಎಸ್ಸೇಸ್ ಅಂಡ್ ಎ ಸ್ಟೋರಿ (2007), ದಿ ಮ್ಯೂಸಿಯಮ್ ಆಫ್ ಇನ್ನೊಸೆನ್ಸ್ (2009), ದಿ ನಯೀವ್ ಅಂಡ್ ಸೆಂಟಿಮೆಂಟಲ್ ನಾವೆಲಿಸ್ಟ್ (2010), ದಿ ಸೈಲೆಂಟ್ ಹೌಸ್ (2012), ಎ ಸ್ಟ್ರೇಂಜ್ನೆಸ್ ಇನ್ ಮೈ ಮೈಂಡ್ (2015) ದಿ ರೆಡ್ ಹೇರ್ಡ್‌ವುಮನ್ (2016)

**ಅನುವಾದ: ಓ. ಎಲ್ . ನಾಗಭೂಷಣ ಸ್ವಾಮಿ**

ಹುಟ್ಟಿದ್ದು 22 ಸೆಪ್ಟೆಂಬರ್, 1953, ಬೆಂಗಳೂರು ಜಿಲ್ಲೆಯ ಹೊಸಕೋಟೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಕನ್ನಡ ವಿಶ್ವಾವಿದ್ಯಾನಿಲಯ, ಕರ್ನಾಟಕ ಅನುವಾದ

ಸಾಹಿತ್ಯ ಅಕಾಡೆಮಿ, ಕೆ.ಕೆ ಬಿರ್ಲಾ ಫೌಂಡೇಷನ್, ಜೆ. ಕೃಷ್ಣಮೂರ್ತಿ ಫೌಂಡೇಷನ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಹಲವು ಮಹತ್ವದ ಗೌರವಯುತ ಹುದ್ದೆಗಳ ನಿರ್ವಹಣೆ.

ನಕ್ಷತ್ರಗಳು (ಕವನ ಸಂಕಲನ, 1973), ವಿಮರ್ಶೆಯ ಪರಿಭಾಷೆ (1983, 1996.2012), ಪ್ರಜ್ಞಾಪ್ರವಾಹ ತಂತ್ರ (1985), ಹರಿಹರ (1992), ಪುರಾಣ (1992), ಭಾಷಾಂತರ (1992), ನನ್ನ ಹಿಮಾಲಯ (ಪ್ರವಾಸ ಕಥನ 1992,2012), ನಮ್ಮ ಕನ್ನಡ ಕಾವ್ಯ (ಸಂಪಾದನೆ 1993), ಕನ್ನಡ ಶೈಲಿ ಕೈಪಿಡಿ (ಇತರರೊಡನೆ 1993), ಅಲ್ಲಮ ವಚನ ಸಂಗ್ರಹ (1994), ತತ್ವಪದಗಳ (ಪ್ರಾತಿನಿಧಿಕ ಸಂಕಲನ), ಇಂದಿನ ಹೆಜ್ಜೆ (ವಚನಗಳನ್ನು ಕುರಿತು ವಿಮರ್ಶಾ ಲೇಖನಗಳು), ಏಕಾಂತ ಲೋಕಾಂತ, ನುಡಿಯೊಳಗಾಗಿ (ಅಂಕಣ ಬರಹಗಳು) ಮುಖ್ಯ ಪುಸ್ತಕಗಳು.

# 4. ಸಂಕೀರ್ಣ


| | | | |
|---|---|---|---|
| 4.1 | ದಾಂಪತ್ಯ | –ಪ್ರತಿಭಾ ನಂದಕುಮಾರ್ | 100 |
| 4.2 | ಮೌಸ್ ಬಿಟ್ಟು ಮೊಲ ಹಿಡಿದಾತ | –ಡಿ.ಬಿ ನಾಗರಾಜ | 101 |
| 4.3 | ಮುಗಿದ ಅಧ್ಯಾಯ | –ಯಾನ್ ರಫ್ –ಓ'ಹರ್ನ್ | 106 |
| 4.4 | ಓದು ಪತ್ಯ: ಪೈಪೋಟಿಗೆ ಸಜ್ಜಾಗುತ್ತಿರುವ ದೇಶ | –ಎ.ಪಿ.ಜೆ ಅಬ್ದುಲ್ ಕಲಾಂ | 126 |

# 4. ಸಂಕೀರ್ಣ

## ಆಶಯ

ತಾಂತ್ರಿಕ ವಿಷಯಗಳನ್ನು ಕನ್ನಡದಲ್ಲಿ ರೂಪಿಸಬೇಕಾದ ಅಗತ್ಯತೆಗಳನ್ನು ತಿಳಿಸಿಕೊಡುವುದು ಇಂದಿನ ತಂತ್ರಜ್ಞಾನ ಯುಗದಲ್ಲಿ ಅದಕ್ಕೆ ಅಗತ್ಯವಾದ ಕನ್ನಡವನ್ನು ರೂಪಿಸುವ ತರಬೇತಿ ನೀಡುವುದು ಗಣಕ ಕ್ಷೇತ್ರದಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಬಳಸುವುದಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು. ಗಣಕ ಕ್ಷೇತ್ರಕ್ಕೆ ಸಂಬಂಧಿಸಿದ ತಾಂತ್ರಿಕ ವಿಷಯಗಳನ್ನು ಉದಾಹರಣೆ;– ಇ–ಮೇಲ್, ಕನ್ನಡ ಅಂತರ್ಜಾಲ, ತಾಣಗಳು, ಕನ್ನಡ ತಂತ್ರಾಂಶಗಳು, ಕನ್ನಡ ವಿಕಿಪೀಡಿಯಾ ಮುಂತಾದ ಪರಿಭಾಷೆಗಳು, ಕನ್ನಡದಲ್ಲಿ ತಿಳಿಸುವುದು.

## 4.1 ದಾಂಪತ್ಯ

**–ಪ್ರತಿಭಾ ನಂದಕುಮಾರ್**

ಎಂತೆಂತಹ ಕದನಗಳನ್ನು ಕಾದಿದೆವು ನಾನು
ಹರಿತ ಖಡ್ಗ ಚಾಟಿ ಸೀಳಿ
ಕತ್ತರಿಸುವ ಮಾತು ಬಳಸಿ

ಒಂಟಿ ಕೈ ಮುಖಾಬಿಲೆಯಲ್ಲಿ
ಇನ್ನೊಂದು ಕೈ ಭದ್ರವಾಗಿ
ಹಿಡಿದು ಹೃದಯ ಮುಷ್ಟಿಯಲ್ಲಿ
ಹೇಗೆ ಕಾಪಾಡಿಕೊಂಡೆವು ಹಾಳಾಗದಂತೆ
ಪರಸ್ಪರರ ಮುಂಗವಚ ಗುರಾಣಿ
ಕಳಚಿಬಿದ್ದರೆ ಅದೂ, ಮುಗಿಯಿತು
ಮೃಗಗಳಂತೆ ಮುಗಿಸೇ ಬೀಡುತ್ತಿದ್ದೆವು
ಕೊನೆಗೆ ತಿಂದೇ ಬಿಡುತ್ತಿದ್ದೆವು

ಹೇಗೆ ಸೇರಿಗೆ ಸವ್ವಾಸೇರು
ಈಡಿಗೆ ಜೋಡು ತಾಳಕ್ಕೆ
ತಕ್ಕ ಮೇಳವಾದೆವು ನಾವು
ಕೋಪದುತ್ತುಂಗದಲ್ಲೂ ಮರೆಯದೇ
ಉಳಿಸಿದೆವು ಎಲ್ಲ ನಿಷ್ಠೆ ನಿಯತ್ತು

ಯಾರಿಗ್ಯಾರು ಸೋಲಬೇಕು
ಯಾರಿಗೆ ಗೆಲವು ಯಾರ ಪಲಾಯನ
ಕದನ ವಿರಾಮ ಎಂದು, ಯಾರಿಗೆ ಗೊತ್ತು.
ಕೊನೆಗೆ ಹೇಗೋ ಮುಗಿಯಿತು
ಯದ್ಧಾನಂತರ ಆರಿಸಿಕೊಂಡೆವು ಅಳಿದುಳಿದದ್ದು
ನಾನೊಂದು ಕುರೂಪಿ ಕಪ್ಪೆಯಾದರೆ
ನೀನೊಂದು ಕೇರೆ ಹಾವು
ಈ ಕೊಳದ ಗಡಿ ದಾಟಲಾರೆವು
ಕೈಕುಲುಕಿ ನಮ್ಮನಮ್ಮ ಮೂಲೆಗೆ ಸರಿದೆವು

## 4.2 ಮೌಸ್ ಬಿಟ್ಟು ಮೊಲ ಹಿಡಿದಾತ

**–ಡಿ.ಬಿ ನಾಗರಾಜ**

ಹುಟ್ಟಿದ್ದು ಹಳ್ಳಿಯಲ್ಲಿ. ಓದಿದ್ದು ಕಂಪ್ಯೂಟರ್ ಸೈನ್ಸ್, ರಾಜಧಾನಿಯಲ್ಲಿ ಸಾಫ್ಟ್ ವೇರ್ ಉದ್ದಿಮೆಯಲ್ಲಿ ಉದ್ಯೋಗ. ಕೈ ತುಂಬಾ ಸಂಬಳ. ಆದರೂ ಅತೃಪ್ತಿ. ಇದು ಹೆಚ್ಚು ಸಂಪಾದನೆಯ ಹಪಹಪಿಕೆಯಲ್ಲ. ಅರ್ಥಪೂರ್ಣವಾಗಿ ದುಡಿಯುವ ತುಡಿತ. ಅದಕ್ಕಾಗಿ ಇಪ್ಪತ್ತಾರರ ಹರೆಯದ ಎ.ಸಿ ಸುಮಿಲ್ ಎಂಬ ಈ 'ತಾಂತ್ರಿಕ' ಮೌಸ್ ಬಿಟ್ಟು ಮೊಲ ಹಿಡಿಯಲು ತೀರ್ಮಾನಿಸಿದರು.

ಈಗ ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ಕಾರೇಹಳ್ಳಿಯಲ್ಲಿ 'ಎಸಿಎಸ್ ರ್‍ಯಾಬಿಟ್ ಫಾರ್ಮ್' ಹಾಗೂ ವೈಜ್ಞಾನಿಕ ಹಿನ್ನೆಲೆಯ 'ಬ್ರೀಡಿಂಗ್ ಸೆಂಟರ್' ಇದೆ. ಮೂರು ವರ್ಷದ ಹಿಂದೆ ಮೊಲ ಹಿಡಿಯಲು ಹೊರಟ ಸುನಿಲ್‌ಗೆ ಮೌಸ್ ಹಿಡಿಯುವುದಕ್ಕಿಂತ ಹೆಚ್ಚಿನ ಸಂತೋಷ ದೊರೆಯುತ್ತಿದೆ. ಕೋಡಿಂಗ್, ಡಿಬಗ್ಗಿಂಗ್ ಎಂದುಕೊಂಡು ಮನೆಗೂ ಕಚೇರಿಗೂ ಸೀಮಿತನಾಗಿದ್ದ ಯುವಕನನ್ನು ಈಗ ಇಡೀ ಸಮಾಜ ಗುರುತಿಸುತ್ತಿದೆ.

ಸುನಿಲ್ ಅವರ ಮೊಲ ಸಾಕಣೆ ಕೇಂದ್ರಕ್ಕೆ ಇದುವರೆಗೂ ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿ ತಮ್ಮ ಸಾಧ್ಯತೆಗಳನ್ನು ಅರಿತುಕೊಂಡಿದ್ದಾರೆ. ಐವತ್ತಕ್ಕೂ ಹೆಚ್ಚು ಮಂದಿ ಸುನಿಲ್ ಮಾರ್ಗದರ್ಶನದಲ್ಲಿ ಮೊಲ ಸಾಕಣೆ ಆರಂಭಿಸಿ, ಯಶಸ್ಸಿನ ಪಥದತ್ತ ಸಾಗುತ್ತಿದ್ದಾರೆ.

### ಮೊಲದತ್ತ ಚಿತ್ತ...

25 ರಿಂದ 40 ವರ್ಷ ನಡುವಿನ ಅವಧಿ ಪ್ರತಿಯೊಬ್ಬರ ಜೀವನದಲ್ಲೂ ಬದಲಾವಣೆಯ ಪರ್ವ. ಅದಕ್ಕೇ ಸುನಿಲ್ ಕಾಲು ಶತಕದತ್ತ ಸಾಗುತ್ತಿರುವಾಗಲೇ ಬದಲಾವಣೆಯ ದಾರಿಯನ್ನು ಆರಿಸಿಕೊಂಡರು. ಇದು ಅವರು ಏಕಾಏಕಿ ಕೈಗೊಂಡ ನಿರ್ಣಯವಲ್ಲ. ಅದರ ಹಿಂದೊಂದು ಚಿಂತನೆಯಿದೆ. ಅದನ್ನು ಅವರದೇ ಮಾತುಗಳಲ್ಲಿ ಹೀಗೆ ಸಂಗ್ರಹಿಸ ಬಹುದು.

'ಯಾರೂ ಸುಮ್ಮನೆ ಸಂಬಳ ನೀಡಲ್ಲ. ನಮ್ಮ ಸಾಮರ್ಥ್ಯ ಅಳೆಯುತ್ತಾರೆ. ನಮಗೆ 1 ಲಕ್ಷ ಸಂಬಳ ಕೊಟ್ಟರೆ, ನಮ್ಮಿಂದ 2 ಲಕ್ಷ ಮೌಲ್ಯದ ದುಡಿಮೆ ಪಡೆಯುತ್ತಾರೆ. ಎಲ್ಲ ಖರ್ಚು ವೆಚ್ಚ ಕಳೆದು ಲಾಭದ ಒಂದು ಭಾಗವನ್ನು ಮಾತ್ರ ನಮಗೆ ಸಂಬಳದ ರೂಪದಲ್ಲಿ ನೀಡುತ್ತಾರೆ. ಸಂಬಳದ ಈ ಒಳಮರ್ಮ ಅರಿತೆ. ನಲವತ್ತು ತುಂಬುವುದರೊಳಗೆ ಮಾನಸಿಕ, ದೈಹಿಕ ಸಾಮರ್ಥ್ಯ ಕುಂಠಿತಗೊಂಡಿರುತ್ತದೆ. ಕಬ್ಬು ಹಿಂಡುವ ರೀತಿ ನಮ್ಮ ಸಾಮರ್ಥ್ಯವನ್ನು ಕಂಪನಿಗಳು ಹೀರಿ ಹಾಕುತ್ತವೆ.

ಕಂಪನಿಗಳಿಗಾಗಿ ಇಲ್ಲೀ ತನಕ ಅಹೋರಾತ್ರಿ ದುಡಿದ ನಮ್ಮಂಥವರಿಗೆ ಸಾಮರ್ಥ್ಯ ಕುಂದುತ್ತಿದ್ದಂತೆ ಚಿಕ್ಕಪುಟ್ಟ ತಪ್ಪಿಗೂ ಗೇಟ್‌ಪಾಸ್ ನೀಡುತ್ತಾರೆ. ಆಗ ನಮ್ಮ ಇಷ್ಟು ವರ್ಷದ ದುಡಿಮೆಗೆ ತಕ್ಕ ಗೌರವ, ಘನತೆ, ಸಂಪತ್ತು, ಕೀರ್ತಿ ದೊರಕಲಿಲ್ಲ ಎಂಬ ಪಶ್ಚಾತ್ತಾಪ ಕಾಡುತ್ತದೆ. ಬೇರೆ ಯಾರೂ ಕರೆದು ಕೆಲಸ ಕೊಡಲ್ಲ. ನಾವು ಹತ್ತಾರು ಕಂಪನಿಗೆ ಅಲೆದರೂ; ಕೆಲಸ ಸಿಗಲ್ಲ, ಅಂಥ ಸ್ಥಿತಿಯಲ್ಲಿ ನಾವು ಎಲ್ಲಿಗೆ ಹೋಗಬೇಕು.

ಸ್ವಾವಲಂಬಿಗಳಾದಾಗ ಮಾತ್ರ ನಮ್ಮ ಉದ್ಧಾರ ಎಂಬುದು ಹೊಳೆಯಿತು. ಯಾವ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹತ್ತು ಹಲವು ಕ್ಷೇತ್ರಗಳ ಅಧ್ಯಯನ ಕೈಗೊಂಡೆ, ಅದರ ಪ್ರತಿಫಲವೇ ಆಹಾರಕ್ಕಾಗಿ ಮೊಲ ಸಾಕಣೆ. ಸಾಫ್ಟ್‌ವೇರ್‌ನಲ್ಲೇ ಹೊಸ ಕಂಪನಿ ಆರಂಭಿಸೋಣ ಎಂದರೆ ತುಂಬಾ ಪೈಪೋಟಿ. ಹೆಜ್ಜೆ ಹೆಜ್ಜೆಗೂ ಸ್ಪರ್ಧೆ. ತಂತ್ರಜ್ಞಾನ ಕ್ಷೇತ್ರಕ್ಕಿಳಿಯೋಣ ಎಂದರೆ ಗಂಟೆಗೊಮ್ಮೆ ಬದಲಾವಣೆ. ಪ್ರತಿಕ್ಷಣವೂ ಅಪ್‌ಡೇಟ್ ಆಗಬೇಕು. ಇನ್ನು ರೀಟೇಲ್ ಇಂಡಸ್ಟ್ರೀಯೂ ಕಷ್ಟದಲ್ಲಿದೆ. ಇರುವ ಚಿಲ್ಲರೆ ವ್ಯಾಪಾರಿಗಳೇ ಬೀದಿಗೆ ಬೀಳುತ್ತಿದ್ದಾರೆ. ಸಾಮಾನ್ಯ ಜನರ ಉದ್ಯಮಕ್ಕೆ ಮಲ್ಟೀನ್ಯಾಷನಲ್ ಕಂಪನಿಗಳು ಲಗ್ಗೆ ಹಾಕುತ್ತಿವೆ. ಗ್ರಾಹಕರನ್ನು ಸೆಳೆಯಲು ಆಫರ್‌ಗಳ ಸುರಿಮಳೆ ನೀಡುತ್ತಿವೆ. ಬೃಹತ್ ಕಂಪನಿಗಳಿಗೆ ವರ್ಷದ ನಷ್ಟ ಭರಿಸುವ ಸಾಮರ್ಥ್ಯ ಇದೆ. ನಮ್ಮಿಂದ ಆಗಲ್ಲ. ಅಲ್ಲೂ ಕಷ್ಟ–ನಷ್ಟ ತಪ್ಪಿದ್ದಲ್ಲ. ಹೀಗೆ ಹತ್ತು ಹಲವು ರೀತಿ ಆಲೋಚನೆ ಮಾಡಿದ ಬಳಿಕ ಆಹಾರ ಉತ್ಪಾದನಾ ಕ್ಷೇತ್ರ ಎಂದೂ ಕೈ ಬಿಡಲ್ಲ ಎಂಬುದನ್ನು ಖಚಿತ ಪಡಿಸಿಕೊಂಡೆ. ಕೊನೆಗೆ ಮೊಲ ಸಾಕಣೆಯ ದೃಢ ನಿರ್ಧಾರ ಮಾಡಿದೆ. ಕಂಪ್ಯೂಟರ್ ಮೌಸ್ ಬಿಟ್ಟು ಬಂದ ನನ್ನನ್ನು 'ಮೊಲ' ಕೈ ಹಿಡಿದು ನಡೆಸುತ್ತಿದೆ.

**ಮೊಲ ಹಿಡಿದರೆ..**

ಮೊಲ ಸಾಕಣೆಯಲ್ಲಿ ಕಡಿಮೆ ರಿಸ್ಕ್, ನಷ್ಟಕ್ಕೆ ಅವಕಾಶವಿಲ್ಲ. ಎಲ್ಲರೂ ಉಪಕಸುಬಾಗಿ ಸುಲಭವಾಗಿ ನಿರ್ವಹಿಸಬಹುದು. ಸುನಿಲ್ ಅವರ ಫಾರ್ಮ್‌ನಲ್ಲಿ ಮಾಂಸಕ್ಕಾಗಿ ಹಾಗೂ ತಳಿ ಅಭಿವೃದ್ಧಿಗಾಗಿ ಮೊಲ ಸಾಕಲಾಗುತ್ತಿದೆ. ಇಲ್ಲೀತನಕ ಹತ್ತು ಲಕ್ಷ ಬಂಡವಾಳ ಹಾಕಿದ್ದು, ಮೂರು ವರ್ಷದಲ್ಲಿ ಶೇಕಡಾ 90 ಭಾಗ ಮರಳಿದೆ ಎನ್ನುತ್ತಾರೆ ಸುನಿಲ್. ಮೊಲದ ಜೀವಿತಾವಧಿ 8 ವರ್ಷ. ವಂಶಾಭಿವೃದ್ಧಿ ಅತಿ ವೇಗವಾಗಿ ನಡೆಯುತ್ತದೆ. ಹುಟ್ಟಿದ ಮರಿ 6 ತಿಂಗಳಿಗೆ ಗರ್ಭ ಧರಿಸುವ ಸಾಮರ್ಥ್ಯ ಪಡೆಯುತ್ತದೆ. ನಂತರ ವರ್ಷಕ್ಕೆ 6 ಬಾರಿ ಮರಿ ಹಾಕುವುದು. ಮೊದಲ ತಿಂಗಳು ಗರ್ಭ ಧರಿಸಿದರೆ; ಮತ್ತೊಂದು ತಿಂಗಳು ಮರಿಗಳ ಆರೈಕೆ ಮಾಡುತ್ತದೆ.

ಮೂರು ತಿಂಗಳ ಮರಿ 2.5 ಕೆ.ಜಿ ತೂಗುತ್ತದೆ. ವರ್ಷದ ಮೊಲ 5–6 ಕೆ.ಜಿ. ತೂಗುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಜೀವಂತ ಮೊಲದ ತೂಕ ಕೆ.ಜಿ.ಗೆ 130 ನಡೆಯುತ್ತಿದೆ. ಸಾಕಷ್ಟು ಬೇಡಕೆಯಿದೆ. ಸೋವಿಯತ್ ಚಿಂಚಿಲ್ಲಾ, ವೈಟ್ ಜೈಂಟ್, ನ್ಯೂಜಿಲೆಂಡ, ವೈಟ್ ಕ್ಯಾಲಿಫೋರ್ನಿಯ, ವೈಟ್ ರಷ್ಯನ್ ಗ್ರೇಜೈಂಟ್ ಫ್ಲೇಮೆಸ್ ಮಾಂಸಕ್ಕಾಗಿಯೇ ಸಾಕುವ ಮೊಲದ ತಳಿಗಳು. ಇವುಗಳಿಗೆ ಎಲ್ಲೆಡೆ ಬೇಡಿಕೆ. ಮೊಲದ ಮಾಂಸದಲ್ಲಿ ಕೊಲೆಸ್ಟ್ರಾಲ್ ಕಡಿಮೆ. ಹೆಚ್ಚು ಪ್ರೋಟೀನ್ ಅಂಶ ಇರುವುದರಿಂದ ಮಕ್ಕಳು, ವಯಸ್ಕರು, ವೃದ್ಧರು ಸೇರಿದಂತೆ ರೋಗಿಗಳಿಗೂ ಉತ್ತಮ ಆಹಾರ. ಈ ಆರೋಗ್ಯದಾಯಕ ಮಾಂಸಾಹಾರಕ್ಕೆ ಎಲ್ಲೆಡೆ ಬೇಡಿಕೆ ಹೆಚ್ಚುತ್ತಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬೇಡಿಕೆ ದಿನಕಳೆದಂತೆ ದ್ವಿಗುಣಗೊಳ್ಳುತ್ತಿದೆ ಎಂದು ಸುನಿಲ್ ಮಾಹಿತಿ ನೀಡಿದರು.

ತುಪ್ಪಳಕ್ಕಾಗಿ ಅಂಗೋರಾ ಮೊಲ ಸಾಕಣೆ ಚಾಲ್ತಿಯಲ್ಲಿದೆ. ವರ್ಷಕ್ಕೆ ಒಂದು ಮೊಲದಿಂದ ಒಂದು ಕೆ.ಜಿ. ತುಪ್ಪಳ ಸಿಗುತ್ತದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆ ಇದೆ.

**ಸಾಕಾಣಿಕೆ ಹೇಗೆ?**

ಮೊಲದ ವಸತಿ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕಡಿಮೆ ಜನಸಂದಣಿ, ಉತ್ತಮ ನೆರಳಿರಬೇಕು. ಶುದ್ಧ ಗಾಳಿ, ಉತ್ತಮ ಬೆಳಕಿನ ಜಾಗದಲ್ಲಿ ಗೂಡು ಅಥವಾ ಮನೆ ನಿರ್ಮಿಸಬೇಕು. ಬೆಕ್ಕು, ನಾಯಿ, ಮುಂಗುಸಿ, ಹೆಗ್ಗಣ, ಇಲಿ..... ಇತ್ಯಾದಿ ಪ್ರಾಣಿಗಳು ಬರದಂತೆ ನಿಯಂತ್ರಿಸಬೇಕು.

ಪ್ರತಿಯೊಂದು ಮೊಲಕ್ಕೂ ಪ್ರತ್ಯೇಕ ಗೂಡು ನಿರ್ಮಿಸುವುದರಿಂದ ರೋಗ ತಡೆಗಟ್ಟುವ ಜೊತೆಗೆ ಆರೋಗ್ಯಕರವಾಗಿ ಬೆಳೆಸಬಹುದು. ಮೊಲಗಳು ಎಲ್ಲಾ ರೀತಿಯ ಹುಲ್ಲು, ಹಸಿರೆಲೆ, ಸೊಪ್ಪು, ತರಕಾರಿ, ಗೆಡ್ಡೆ – ಗೆಣಸು, ಮೊಳಕೆ ಕಾಳುಗಳನ್ನು ತಿನ್ನುತ್ತವೆ. ಇದಲ್ಲದೆ ಮೊಲಗಳಿಗೆ ಬೇಕಾದ ಆಹಾರ ಮಾರುಕಟ್ಟೆ ಯಲ್ಲೂ ದೊರೆಯುತ್ತದೆ. ಬೆಳೆಯುವ ಮರಿಗಳಿಗೆ ನಿತ್ಯ ಶೇ.20ರಷ್ಟು ಪ್ರೋಟೀನ್, 50 – 80 ಗ್ರಾಂ ಧಾನ್ಯ ಮಿಶ್ರಣ, 100 – 200 ಗ್ರಾಂ ಹಸಿರು ಮೇವು, ತಾಯಿ ಹಾಗೂ ಗಂಡು ಮೊಲಗಳಿಗೆ ಶೇ.16 ರಷ್ಟು ಪ್ರೋಟೀನ್, 100–150 ಗ್ರಾಂ ಧಾನ್ಯ ಮಿಶ್ರಣ, 200 – 300 ಗ್ರಾಂ ಹಸಿರು ಮೇವು ಒದಗಿಸಬೇಕು. ಗೂಡಿನಲ್ಲಿ ಸದಾ ಶುದ್ಧ ನೀರು ಇರಬೆಕು. ಕುದರೆಮೆಂತ್ಯಸೊಪ್ಪು, ರೋಟ್ಸ್‌ಹುಲ್ಲು ಉತ್ತಮ ಆಹಾರ. ಒಮ್ಮೆ ಬಿತ್ತಿದರೆ ಪ್ರತಿ ತಿಂಗಳು ಕಟಾವಿಗೆ ಬರುತ್ತದೆ. ರೋಟ್ಸ್ ಹತ್ತು ವರ್ಷ ಬಳಕೆಗೆ ಬಂದರೆ; ಕುದುರೆ ಮೆಂತ್ಯಸೊಪ್ಪು ಐದು ವರ್ಷ ಸಿಗುತ್ತದೆ.

ಎರಡು–ಮೂರು ಹೆಣ್ಣು ಮೊಲಗಳಿಗೆ ಒಂದು ಗಂಡು ಮೊಲ. ಗಂಡು

ಮೊಲದ ಜತೆ ಮುಂಜಾನೆ ಅಥವಾ ಮುಸ್ಸಂಜೆ ಎರಡು ಗಂಟೆ ಅವಧಿ ಹೆಣ್ಣು ಮೊಲವನ್ನೂ ಬಿಡಬೇಕು. ನಂತರ ಗೂಡಿನಿಂದ ಬೇರ್ಪಡಿಸಬೇಕು. ಈ ದಿನಕ್ಕೆ ಸರಿಯಾಗಿ 28 ರಿಂದ 30 ದಿನದ ಅವಧಿಯಲ್ಲಿ ಮರಿಗಳನ್ನು ಹಾಕುತ್ತವೆ. 10ಕ್ಕಿಂತ ಹೆಚ್ಚು ಮರಿ ಹಾಕಿದಾಗ ಹಾಲು ಸಾಲದೆ ಮರಿಗಳು ಸಾಯಬಹುದು. ಅದನ್ನು ತಪ್ಪಿಸಲು ತಾಯಿ ಮೊಲಕ್ಕೆ ಸಾಕಷ್ಟು ಪ್ರಮಾಣದಲ್ಲಿ ಹುಲ್ಲು, ಧಾನ್ಯ ಮಿಶ್ರಣ ನೀಡಿ ಆರೈಕೆ ಮಾಡಿದರೆ, ಎಲ್ಲಾ ಮರಿಗಳು ಬದುಕುಳಿಯುವ ಸಾಧ್ಯತೆ ಹೆಚ್ಚಿರುತ್ತದೆ. ವಂಶಾಭಿವೃದ್ಧಿಗಾಗಿ ಸುನಿಲ್, ವಂಶಾವಳಿ ದಾಖಲಾತಿ ತಂತ್ರಜ್ಞಾನ ಕಂಡುಕೊಂಡಿದ್ದಾರೆ. ಆರೋಗ್ಯವಂತ ಮೊಲಗಳನ್ನು ಆಯ್ದು ಬೇರೆ ಜೀನ್ಸ್ ಹೊಂದಿರುವ ಮೊಲಗಳ ಜೊತೆ ಅಭಿವೃದ್ಧಿ ಪಡಿಸುತ್ತಿದ್ದಾರೆ. ಇದರಿಂದ ಉತ್ತಮ ತಳಿ ಸೃಷ್ಟಿಯಾಗುವ ಜೊತೆಗೆ ಎಲ್ಲವೂ ಆರೋಗ್ಯಕರವಾಗಿರುತ್ತವೆ ಎಂಬ ಅಭಿಪ್ರಾಯ ಇವರದು.

ಮೊಲ ಸಾಕಲು ಬರುವವರ ಸಂಖ್ಯೆ ಹೆಚ್ಚುತ್ತಿದೆ. ಆಸಕ್ತರಿಗೆ ಮೊದಲು ಮೊಲಗಳನ್ನು ನೀಡದೆ ತರಬೇತಿ ಕೊಡಿಸಲಾಗುತ್ತಿದೆ. ಹೆಸರುಘಟ್ಟದಲ್ಲಿರುವ ಮೊಲಸಾಕಣೆ ತರಬೇರಿ ಕೇಂದ್ರದಲ್ಲಿ ಡಾ. ಸುಧಾಕರ್, ಡಾ. ಮಂಜುನಾಥ್ ತರಬೇರಿ ನೀಡುತ್ತಾರೆ. ಸಾಕಣೆಯ ಎಲ್ಲ ಕ್ರಮ ತಿಳಿಸಿ, ಸರ್ಟಿಫಿಕೇಟ್ ನೀಡುತ್ತಾರೆ. 'ಹೀಗೆ ತರಬೇತಿ ಪಡೆದವರಿಗೆ ಮೊಲ ನೀಡಿದ್ದೇನೆ. ಇಷ್ಟಕ್ಕೆ ಸುಮ್ಮನಾಗದೆ ಅವರ ಸಂಪರ್ಕದಲ್ಲಿದ್ದು, ಎಲ್ಲಾ ಸಲಹೆ ನೀಡುತ್ತೇನೆ. ಅದನ್ನು ನನ್ನ ಮತ್ತೊಂದು ಬ್ರಾಂಚ್ ಎಂದು ಪರಿಗಣಿಸಿ ಆಗಾಗ್ಗೆ ಭೇಟಿ ನೀಡುತ್ತೇನೆ' ಎನ್ನುತ್ತಾರೆ ಸುನಿಲ್.

**ಹೊಸ ಮಾರುಕಟ್ಟೆ**

ಮೊಲದ ಮಾಂಸಕ್ಕೆ ಎಲ್ಲೆಡೆ ಬೇಡಿಕೆ ಇದೆ. ಆದರೆ ಅದಕ್ಕೆ ತಕ್ಕಂಥ ವ್ಯವಸ್ಥಿತ ಮಾರುಕಟ್ಟೆಯಿಲ್ಲ. ಬೆಂಗಳೂರಿನ ಮಧ್ಯವರ್ತಿಗಳಿಗೆ ಮಾರಲಾಗುತ್ತಿದೆ. ಈ ಪರಿಸ್ಥಿತಿಯನ್ನು ಬದಲಾಯಿಸುವುದರ ಕುರಿತೂ ಸುನಿಲ್ ಚಿಂತಿಸುತ್ತಿದ್ದಾರೆ. ಅವರ ಬಳಿ ಮೊಲ ಖರೀದಿಸಿ ಸಾಕಲು ಕೊಂಡೊಯ್ದವರಿಗೆ ಮಾರುಕಟ್ಟೆ ಸಮಸ್ಯೆ ಎದುರಾಗಬಾರದು ಎಂಬ ಕಾರಣಕ್ಕೆ ಅವರೊಟ್ಟಿಗೆ ಕೆ.ಜಿ.ಗೆ 130 ರಂತೆ ಮರು ಖರೀದಿಯ 'ಒಪ್ಪಂದ' ಮಾಡಿಕೊಳ್ಳುತ್ತಾರೆ.

'ಒಬ್ಬನೇ ಬೆಳೆಯುವ ಹಂಬಲವಿಲ್ಲ. ಜತೆಯಾಗಿ ಎಲ್ಲರೂ ಬೆಳೆಯೋಣ ಎಂಬ ಚಿಂತನೆ ನನ್ನದು' ಎನ್ನುವ ಸುನಿಲ್ ಎರಡು ವರ್ಷದೊಳಗೆ ಸಾಕಣೆದಾರರ ಒಕ್ಕೂಟ ರಚಿಸಿಕೊಂಡು, ನೇರ ಮಾರುಕಟ್ಟೆ ಪ್ರವೇಶಿಸಿವ ಚಿಂತನೆ. ಈ ಯೋಜನೆಯಲ್ಲಿ ಮಾಂಸ ಕೆಡದಂತೆ ಕಾಪಾಡುವ ಶೈತ್ಯಾಗಾರ, ಪ್ಯಾಕಿಂಗ್ ವ್ಯವಸ್ಥೆ,

ಪಾಶ್ಚಾತ್ಯ ರಾಷ್ಟ್ರಗಳಿಗೆ ರಫ್ತು ಮಾಡುವುದು ಇತ್ಯಾದಿಗಳೆಲ್ಲವೂ ಒಳಗೊಂಡಿದೆ. ಶೈತ್ಯಾಗಾರ ಆರಂಭಗೊಂಡರೆ ಮೊಲದ ಚರ್ಮಕ್ಕೂ ಬೆಲೆ ಸಿಗುತ್ತದೆ. ಬೆಚ್ಚನೆಯ ಉಡುಪು ತಯಾರಿಕೆಗೆ ಬಳಕೆಯಾಗುತ್ತದೆ. ಅತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದೆ. ಪ್ರಸ್ತುತ ಕೆ.ಜಿ.ಗೆ 700 – 800 ರೂಪಾಯಿ ಇದೆ. ಈ ಲಾಭವೂ ಸಾಕಣೆದಾರರ ಪಾಲಾಗುತ್ತದೆ.

ಈಗ ಸುನಿಲ್ ಅವರ ಫಾರಂನಲ್ಲಿ 550 ಹೆಣ್ಣು, 250 ಗಂಡು ಸೇರಿದಂತೆ 800 ಮೊಲಗಳಿವೆ. ಬ್ಯಾಚ್ ಮಾಡಿ ಸಾಕಲಾಗುತ್ತಿದೆ. ಪ್ರತಿ ಬ್ಯಾಚ್‌ನ ಮೊಲಗಳು ವಾರಕ್ಕೊಮ್ಮೆ ಮರಿ ಹಾಕುತ್ತಿವೆ. ಇದರಿಂದ ನಮಗೆ ಪ್ರತಿವಾರವೂ ವಹಿವಾಟು ನಡೆಯುತ್ತಿದೆ. ಪ್ರಸಕ್ತ ವಾರಕ್ಕೆ ಒಂದು ಸಾವಿರ ಕೆ.ಜಿ. ಜೀವಂತ ಮೊಲಗಳು ಮಾರಾಟವಾಗುತ್ತವೆ. ಇದನ್ನು ಹೊರತುಪಡಿಸಿ ತಳಿ ಅಭಿವೃದ್ಧಿಪಡಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಪ್ರತಿ ತಿಂಗಳು ನೂರಕ್ಕೂ ಹೆಚ್ಚು ಮೊಲಗಳನ್ನು ಮಾರಾಟ ಮಾಡುತ್ತಾರೆ. ಇವರ ಫಾರ್ಮ್‌ನಲ್ಲಿ ಕೆಲಸಗಾರರಿಲ್ಲ. ಸುನಿಲ್ ಅವರ ಜೊತೆಗೆ ಅವರ ತಾಯಿ ಸಾಕಾಣಿಕೆಗೆ ನೆರವಾಗುತ್ತಾರೆ.

## 4.3 ಮುಗಿದ ಅಧ್ಯಾಯ

**–ಯಾನ್ ರಫ್ – ಓಹಾರ್ನ್**

ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಸುಖದಾಯಿ ಹೆಂಗಸರ ಶೋಚನೀಯ ಸ್ಥಿತಿಯ ವಿರುದ್ಧ ದಣಿಂವರಿಯದೆ ದುಡಿಯುತ್ತಿರುವ ಯಾನ್ ರಫ್–ಓ'ಹರ್ನ್ ಯುದ್ಧ ಮತ್ತು ಸಶಸ್ತ್ರ ಸಂಘರ್ಷದ ಸಂದರ್ಭಗಳಲ್ಲಿ ಸದಾ ತೊಂದರೆಗೊಳಗಾಗುವ ಮುಗ್ಧ ಮಹಿಳೆಯರ ರಕ್ಷಣೆಗಾಗಿ ದನಿಯೆತ್ತಿದವಳು. ಅವಳು ತನ್ನ ಉದ್ದೇಶ ಸಾಧನೆಗಾಗಿ ಮಾನವ ಹಕ್ಕುಗಳ ಆಯೋಗ, ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಮತ್ತು ಅಂತಾರಾಷ್ಟ್ರೀಯ ಆಮ್ನೆಸ್ಟಿ ಸಂಸ್ಥೆಗಳ ಜೊತೆಗೂಡಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್. ಜಪಾನ್, ಅಮೆರಿಕಾ ಸಂಯುಕ್ತ ಸಂಸ್ಥಾನ, ಬ್ರಿಟನ್ ಮತ್ತು ನೆದರ್ ಲ್ಯಾಂಡ್ ಅಲ್ಲದೆ ಇನ್ನೂ ಹಲವಾರು ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ್ದಾಳೆ.

ಜನವರಿ 11, 1946ರಂದು ಅಪ್ಪ, ನಾನು ಮತ್ತು ಫಿನ್, ಯೋಹಾನ್ ಫಾನ್ ಓಲ್ಡನ್ಬಾರ್ನಫೆಲ್ಟ್ ಎಂಬ ಹಡಗಿನಲ್ಲಿ ನಮ್ಮೊಲುಮೆಯ ದೇಶವನ್ನು ಬಿಟ್ಟು ಹೊರಟೆವು. ನಾವು ಹುಟ್ಟಿದ ಆ ಜಾವಾ ದೇಶಕ್ಕೆ ಮರಳಿ ಬರುತ್ತೇವೋ ಇಲ್ಲವೋ ಎಂದು ತಿಳಿದಿರಲಿಲ್ಲ. ಹಾಲೆಂಡಿಗೆ ಹಡಗಿನಲ್ಲಿ ಪ್ರಯಾಣಿಸಿದ್ದು ರೋಮಾಂಚಕಾರಿ ಅನುಭವ. ಯದ್ಧದ ಸಮಯದಲ್ಲಿ ಆ ಹಡಗನ್ನು ಸೈನ್ಯ ಸಾಗಿಸಲು ಬಳಸಿದ್ದರು. ಹೀಗಾಗಿ ಅದರಲ್ಲಿ ನಮಗೆ ಮಲಗಲು ಹಾಸಿಗೆಗಳಿರಲಿಲ್ಲ. ಜೋಲಿಯಲ್ಲಿ ಮಲಗುತ್ತಿದ್ದೆವು. ಜಾವಾ ಬಿಡುವಾಗ ನಾವು ಉಷ್ಣವಲಯದ ವಾತವರಣಕ್ಕೆ ತಕ್ಕ ತಂಪಾದ ಉಡುಪು ತೊಟ್ಟಿದ್ದೆವು. ಆದರೆ ಸುಯೇಜ್ ಬಳಿ ಬರುವ ವೇಳೆಗೆ ರೆಡ್ ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು ಬಂದು ನಮಗೆಲ್ಲ ಚಳಿಗಾಲದಲ್ಲಿ ಉಪಯೋಗಿಸುವ ಬೆಚ್ಚನೆಯ ಉಡುಪುಗಳು ಮತ್ತು ಕೋಟುಗಳನ್ನು ತೊಡಲು ಕೊಟ್ಟರು, ಹೆಂಗಸರಿಗೆಲ್ಲ ಒಂದೇ ರೀತಿಯ ಉಡುಪು ನೀಡಲಾಗಿತ್ತು, ಗಂಡಸರಿಗೂ ಕೂಡ ಮೊದಲದಿನ ಒಂದೇ ರೀತಿಯಿದ್ದ ಆ ಉಡುಪುಗಳನ್ನು ತೊಟ್ಟು ನಾವೆಲ್ಲ ಹಡಗಿನ ಡೆಕ್ಕಿನ ಮೇಲೆ ತಿರುಗಾಡುತಿದ್ದರೆ ನಿಜವಾಗಿಯೂ ನಿರಾಶ್ರಿತರ ರೀತಿಯೇ ಕಾಣುತ್ತಿದ್ದೆವು.

ಯಾವುದೇ ಚಿತ್ರಗಳಿಲ್ಲದಿದ್ದ, ನೀಲಿಬಣ್ಣದ ಚಳಿಗಾಲದ ಉಡುಪು ಚೆನ್ನಾಗಿ ನೆನಪಿದೆ. ನಾನು ತೊಡುವ ಉಡುಪು ಉಳಿದವರ ತೊಡುವ ಉಡುಪಿಗಿಂತಲೂ ಭಿನ್ನವಾಗಿರಬೇಕು ಎನ್ನುವಾಸೆ. ಹೀಗಾಗಿ ಹಳೆಯ ಬಟ್ಟೆಯ ತುಂಡುಗಳನ್ನು ಬಳಸಿ ಆ ಉಡುಪಿನ ಮೇಲು ಭಾಗದಲ್ಲಿ ಹೂವಿನ ಚಿತ್ರವನ್ನು

ಹೊಲಿದುಕೊಂಡೆ. ನನ್ನ ಉಡುಪು ಉಳಿದವರಿಗಿಂತಲೂ ಭಿನ್ನವಾಗಿದೆ ಎಂದು ನನಗೆ ಹೆಮ್ಮೆಯಾಯಿತು. ನನ್ನ ಆ ಕೈಕೆಲಸವು ಅನೇಕ ಹೆಂಗಸರ ಅಸೂಯೆಗೂ ಕಾರಣವಾಯಿತು!

ನಾವು ಫೆಬ್ರವರಿ 1946ರ ಕೊನೆಯ ಭಾಗದಲ್ಲಿ ರೋಟರ್ಡಾಮ್ ಬಂದರನ್ನು ಸಮೀಪಿಸಿದೆವು. ಅಪ್ಪ ನಮ್ಮಿಬ್ಬರನ್ನೂ ಡೆಕ್ಕಿನ ಮೇಲೆ ಕರೆದು ದೂರದಲ್ಲಿ ಕಾಣುತ್ತಿದ್ದ ನೆಲದ ಭಾಗವನ್ನು ತೋರಿಸುತ್ತ ನಮ್ಮೊಳಗೆ ತಾಯ್ನಾಡಿನ ಬಗ್ಗೆ ಪ್ರೀತಿಯನ್ನೂ, ಉತ್ಸಾಹವನ್ನೂ ಉದ್ದೀಪನಗೊಳಿಸಲು ಪ್ರಯತ್ನಿಸಿದ. 'ನೋಡಿ, ನಾವು ಹಾಲೆಂಡಿನ ತೀರಕ್ಕೆ ಬಂದಿದ್ದೇವೆ,' ಎಂದ. ಆದರೆ ಹಾಲೆಂಡಿನಲ್ಲಿ ಅಮ್ಮ ಮತ್ತು ಕುಟುಂಬದ ಇತರರನ್ನು ಸೇರಲಿದ್ದೇವೆ ಎಂಬುದನ್ನು ಬಿಟ್ಟು ಬೇರೆ ಯಾವ ಉತ್ಸಾಹವಗಲಿ, ಆಭಿಮಾನವಾಗಲಿ ನಮ್ಮಲ್ಲಿರಲಿಲ್ಲ.

ಆಮ್ಸ್ಟರ್ಡ್ಯಾಮ್ಮಿನಲ್ಲಿ ನನ್ನ ಚಿಕ್ಕಮ್ಮನ ಮನೆಯಲ್ಲಿ ಅಪ್ಪ-ಅಮ್ಮ ನಾಲ್ಕು ವರ್ಷಗಳ ನಂತರ ಪರಸ್ಪರ ಭೇಟಿಯಾದರು. ಅವು ಸಂಭ್ರಮ ಮತ್ತು ಭಾವುಕತೆಯ ಕ್ಷಣಗಳು. ಅವರಿಬ್ಬರೂ ಪರಸ್ಪರರನ್ನು ಅಪ್ಪಿ ಹಿಡಿದು ಸಂತೋಷದಿಂದ ಕಣ್ಣೀರು ಸುರಿಸುತ್ತಿದ್ದ ದೃಶ್ಯವು ನಾನು ಊಹಿಸಿದ್ದಕ್ಕಿಂತಲು ಹೆಚ್ಚು ಸುಂದರವಾಗಿತ್ತು. ಮಾತಿಗೆ ಅಲ್ಲಿ ಜಾಗವೇ ಇರಲಿಲ್ಲ. ಅವರ ಅಪ್ಪುಗೆಯಲ್ಲಿ ಅವರಿಬ್ಬರ ನಡುವಣ ಪ್ರೀತಿಯು ತುಂಬಿ ಹರಿಯುತ್ತಿದೆ ಎನ್ನಿಸುತ್ತಿತ್ತು. ನೀರು ತುಂಬಿದ ಕಣ್ಣುಗಳಿಂದ ಪರಸ್ಪರರನ್ನು ನೋಡಿದರು. ಮೃದುವಾಗಿ ಮುಟ್ಟಿದರು. ಅದೆಲ್ಲವೂ ಕನಸೋ ನನಸೋ ಎಂಬಂತೆ ನೋಡುತ್ತಲೇ ಇದ್ದರು. ಅಪ್ಪ -ಅಮ್ಮರ ಮಿಲನದ ಸಂತೋಷವನ್ನು ನೋಡುತ್ತಿರುವಾಗ ಅವರಿಬ್ಬರೂ ಬದುಕುಳಿದು ಬರಲು ಸಾಧ್ಯವಾದುದಕ್ಕೆ ದೇವರಿಗೆ ಕೃತಜ್ಞತೆ ಸಲ್ಲಿಸಿದೆ.

ಅಮ್ಮ ಕನ್ನಡಿಯಲ್ಲಿ ಪದೇ ಪದೇ ತನ್ನನ್ನು ತಾನು ನೋಡಿಕೊಳ್ಳುತ್ತಿದ್ದುದನ್ನು ಗಮನಿಸಿದ್ದೆ. ತಾನು ಹೇಗೆ ಕಾಣುತ್ತಿದ್ದೇನೋ ಎಂಬ ಅತಂಕ, ಚೆನ್ನಾಗಿ ಕಾಣಬೇಕು ಎಂಬ ತವಕ ಅವಳಲ್ಲಿತ್ತು. ನಾಲ್ಕು ವರ್ಷಗಳ ನಂತರ ಅಪ್ಪನನ್ನು ಭೇಟಿಯಾಗುವ ವಿಚಾರದಲ್ಲಿ ಅವಳು ಆತಂಕಪಡುತ್ತಿದ್ದಳು ಎನ್ನಿಸುತ್ತದೆ. ಯುದ್ಧದ ದುರ್ದಿನಗಳು ಅವರಿಬ್ಬರ ಬದುಕಿನ ಮೇಲೂ ಸಾಕಷ್ಟು ಪರಿಣಾಮ ಮಾಡಿದ್ದವು. ಮೂರುವರೆ ವರ್ಷಗಳ ಕಾಲದ ಉಪವಾಸ ಮತ್ತು ಕಷ್ಟಗಳಿಂದಾಗಿ ಅಮ್ಮನಂತೂ ತುಂಬಾ ವಯಸ್ಸಾದವಳಂತೆ ಕಾಣುತ್ತಿದ್ದಳು. ತಾನು ಪುನಃ ತನ್ನ ಪ್ರೀತಿಯ ಹೆಂಡತಿಯನ್ನು ನೋಡಬೇಕು ಎಂಬ ಅವನ ಉತ್ಕಟವಾದ ಆಸೆ ಅಪ್ಪ ಪಾಕನ್ ಬಾರು ಸೆರೆಮನೆಯಿಂದ ಜೀವಂತವಾಗಿ ಹೊರ ಬರಲು ಕಾರಣವಾಯಿತು. ಅವನ ಪಾಲಿಗೆ ಅವಳು ಅತ್ಯಂತ

ಸುಂದರಳಾದ ಪರಿಪೂರ್ಣ ಹೆಣ್ಣು. ಅವಳೇ ತನ್ನ ಜೀವಾಳ, ತನ್ನ ಶಕ್ತಿ ಮತ್ತು ದೇವರು ತನಗಿತ್ತ ಉತ್ಕೃಷ್ಟವಾದ ಕೊಡುಗೆ ಎಂದು ತಿಳಿದಿದ್ದ. ಸೆರೆಮನೆಯಲ್ಲಿನ ಕತ್ತಲ ಬದುಕಿನಲ್ಲಿ ಅವಳ ನೆನಪು ಅವನ ಪಾಲಿಗೆ ಹೊಳೆಯುವ ಬೆಳಕಿನಂತೆ ಕಂಡಿತ್ತು. ವರ್ಷಗಳು ಉರುಳಿದಂತೆ ಅವಳ ಚೆಲುವು ಇನ್ನಷ್ಟು ಹೆಚ್ಚಾದಂತೆ ಅವನು ಕನಸು ಕಂಡಿದ್ದ.

ಯುದ್ಧದ ಆಘಾತ, ದೈಹಿಕ ಮತ್ತು ಭಾವುಕ ನೋವುಗಳಿಂದ ಹೊರ ಬರಲು ಅಪ್ಪ-ಅಮ್ಮ ಇಬ್ಬರಿಗೂ ಸಾಕಷ್ಟು ಸಮಯ ಬೇಕಾಯಿತು. ಅರಿಬ್ಬರ ಸಂಕಷ್ಟಗಳು ಆ ರೀತಿಯಿದ್ದವು. ಜಪಾನೀಯರ ಯುದ್ಧ ಶಿಬಿರಗಳಲ್ಲಿ ಬಂದಿಗಳಾಗಿದ್ದವರು ಹೊರಬರುವಗ ಮೊದಲಿನಂತೆ ಇರಲು ಸಾಧ್ಯವೆ ಇಲ್ಲ. ಅಪ್ಪ-ಅಮ್ಮ ತಮ್ಮ ಸುಂದರವಾದ ಮನೆ, ಆಸ್ತಿ-ಪಾಸ್ತಿ, ಬದುಕು ಎಲ್ಲವನ್ನೂ ಕಳೆದುಕೊಂಡಿದ್ದರು. ತನ್ನ ಐವತ್ತೊಂದನೆಯ ವಯಸ್ಸಿನಲ್ಲಿ ಅಪ್ಪ ಬೇರೆಯೇ ದೇಶದಲ್ಲಿ ಎಲ್ಲವನ್ನು ಹೊಸದಾಗಿ ಆರಂಭಿಸಬೇಕಿತ್ತು ಅದೇನೂ ಸುಲಭದ ಕೆಲಸವಾಗಿರಲಿಲ್ಲ. ಅದು ಆಗ ಹಾಲೆಂಡಿನಲ್ಲಿ ಡಚ್ ಈಸ್ಟ್ ಇಂಡೀಸ್‌ನಿಂದ ಬಂದ ನಿರಾಶ್ರಿತರ ಬಗ್ಗೆ ತಾತ್ಸಾರವು ಇತ್ತು. ಹಾಲೆಂಡ್ ಕೂಡ ಆಗಷ್ಟೆ ಯುದ್ಧದ ಸಂಕಷ್ಟಗಳನ್ನು ಅನುಭವಿಸಿ ಜರ್ಮನರ ಹಿಡಿತದಿಂದ ಬಿಡುಗಡೆ ಹೊಂದಿ ಸ್ವಂತ ಕಾಲಮೇಲೆ ನಿಲ್ಲಲು ಪ್ರಯತ್ನಿಸುತಿತ್ತು. ಅಂಥ ಸಮಯದಲ್ಲಿ ಡಚ್ ಈಸ್ಟ್ ಇಂಡೀಸಿನ ನಿರಾಶ್ರಿತರು ಕೂಡ ಹಾಲೆಂಡಿಗೆ ಬಂದು ಮನೆ ಮತ್ತು ಕೆಲಸಗಳ ಹುಡುಕಾಟದಲ್ಲಿ ತೊಡಗಿದ್ದು ಅವರಿಗೆ ಸಹಿಸಲಾಗಿರಲಿಲ್ಲ. ಹೀಗಾಗಿ ಅನೇಕರು ಹಾಲೆಂಡಿನಲ್ಲಿ ಉಳಿಯಲಾಗದೆ ಆಸ್ಟ್ರೇಲಿಯ, ನ್ಯೂಜಿಲಂಡ್, ಕೆನಡಾಗಳಿಗೆ ವಲಸೆ ಹೋದರು.

ನಾವು ಆಮ್ಸರ್ಡಮ್ಮಿನಲ್ಲಿ ಇಳಿದಾಗ ನನ್ನ ಬಳಿ ಒಂದೆರಡು ಜೊತೆ ಬಟ್ಟೆಗಳು ಮಾತ್ರವಿದ್ದವು. ಹಾಲೆಂಡಿನಲ್ಲಿದ್ದ ನನ್ನ ಕುಟುಂಬದ ಸದ್ಯಸರಿಗೆ ಇದು ಗೊತ್ತಿತ್ತು. ಹೀಗಾಗಿ ಅವರು ಅತ್ಯಂತ ಧಾರಾಳತನದಿಂದ ನಡೆದುಕೊಂಡರು. ನನಗಿಷ್ಟವಾದ ವಿಶೇಷ ಉಡುಪನ್ನು ಓಡ್ರೆ ಹೆಪ್ಬರ್ನ್ ಕೊಟ್ಟಳು. ಆಮ್ಸ್ಟರ್ಡಮ್ಮಿನಲ್ಲಿ ನಾವು ನನ್ನ ತಾಯಿಯ ತಂಗಿಯ ಮನೆಯಲ್ಲಿ ಉಳಿದಿದ್ದೆವು. ಅವಳ ಗಂಡ, ನನ್ನ ಚಿಕ್ಕಪ್ಪ, ಬೆನ್ ಪಾನ್ ಅಸ್ಬೆಕ್. ಅವನ ಸೋದರ ಸೊಸೆಯೇ ಓಡ್ರೆ ಹೆಪ್ಬರ್ನ್. ಓಡ್ರೆಯ ತಾಯಿ  ಡಚ್, ತಂದೆ ಇಂಗ್ಲಿಷ್. ನಾವು ಆಮ್ಸ್ಟರ್ಡಮ್ ತಲುಪುವ ಕೆಲವೇ ದಿನಗಳ ಮೊದಲು ಅವಳು ಇಂಗ್ಲೆಂಡಿಗೆ ಹೋಗಿದ್ದಳು. ಆದರೆ ನಾನಲ್ಲಿಗೆ ಬರುವುದನ್ನು ಮತ್ತು ನನ್ನ ಬಳಿ ಕೆಲವೆ ಉಡುಪುಗಳಿವೆ ಎಂಬುದನ್ನು ತಿಳಿದಿದ್ದ ಅವಳು ತನ್ನ ಹಲವಾರು ಉಡುಪುಗಳನ್ನು ನನಗಾಗಿ ಬಿಟ್ಟು ಹೋಗಿದ್ದಳು. ಉದ್ದ ತೋಳಿನ ಹಳದಿ ಬಣ್ಣದ ಬ್ಲೌಸ್ ಕೂಡ ಒಂದು, ನನಗಿಷ್ಟವಾದ ಆ

ಉಡುಪನ್ನು ಮುಂದೆ ಹಲವಾರು ವರ್ಷ ತೊಡುತ್ತಿದ್ದೆ. ಓಡ್ರೆ ಮುಂದೆ ತುಂಬಾ ಪ್ರಸಿದ್ಧವಾದ ನಟಿಯಾದಳು. ಅವಳು ಕೊಟ್ಟ ಬ್ಲೌಸ್ ಎಂದು ಎಲ್ಲರ ಬಳಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆ.

ಕ್ರಮೇಣ ಕುಟುಂಬದ ಎಲ್ಲ ಸದಸ್ಯರೂ ಒಂದಾದೆವು. ಅಜ್ಜ ಹೆನ್ರಿ, ಅಣ್ಣ ವರ್ಡ್ ಮತ್ತು ಅಕ್ಕ ಅಲೀನು ಎಲ್ಲರೂ ಸೇರಿಕೊಂಡೆವು. ಯುದ್ಧದ ಕಷ್ಟದ ದಿನಗಳಿಂದ ಪಾರಾಗಿದ್ದೆವು. ಆದರೆ ಯುದ್ಧದಿಂದಾದ ಗಾಯ ಮಾತ್ರ ಇನ್ನೂ ಉಳಿದಿತ್ತು.

ಒಂದು ಸಂಜೆ ನಾವಷ್ಟೇ ಜನ ಒಟ್ಟಾಗಿರುವ ಅಪ್ಪ ಯುದ್ಧದ ಸಮಯದಲ್ಲಿ ತಾನನುಭವಿಸಿದ ಕಷ್ಟಗಳ ಕತೆಯನ್ನು ಹೇಳಿದ. ನಾವು ಪರಸ್ಪರರಷ್ಟೇ ಮಾತನಾಡಲು ಸಿಕ್ಕ ಮೊದಲ ಅವಕಾಶವದು. ನನಗೇನಾಯಿತು ಎಂದು ಅವನಿಗೂ ಹೇಳಬೇಕೆಂದು ಬಯಸುತ್ತಿದೆ. ಜಪಾನೀಯರ ಕೈಯಲ್ಲಿ ಅಪ್ಪ ಅತ್ಯಂತ ಅಘಾತಕಾರಿ ಕಷ್ಟಗಳನ್ನು ಅನುಭವಿಸಬೇಕಾಯಿತು. ಅವುಗಳ ನೆನಪು ಅವನ ಜೀವನದುದ್ದಕ್ಕೂ ಕಾಡುತ್ತಿದ್ದವು. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಜೆಯೊ ಮರು ಹಡಗು ಮುಳುಗಿದಾಗಿನ ಭಯಾನಕ ವಿವರಗಳನ್ನು ನೆನಪಿಸಿಕೊಂಡು ಮಕ್ಕಳಂತೆ ಅಳತೊಡಗುತ್ತಿದ್ದ.

ಜಪಾನೀಯರು ಜಾವಾದ ಮೇಲೆ ಮಾರ್ಚ್ 1,1942ರಲ್ಲಿ ದಾಳಿ ಮಾಡಿದಾಗ ಅವನು ಸೈನ್ಯದ ಸೇವೆಯಲ್ಲಿದ್ದ, ಡಚ್ ಸೈನ್ಯವನ್ನು ವಶಪಡಿಸಿಕೊಂಡಾಗ ಅವನನ್ನು ಮೊದಲ ತ್ಜಿಮಾಹಿ, ನಂತರ ಬಟಾವಿಯಾದ ಹೊರವಲಯದಲ್ಲಿದ್ದ ಮಕಾಸರ್ ಸೆರಮನೆಗಳಲ್ಲಿ ಯುದ್ಧ ಕೈದಿಯಾಗಿ ಇಟ್ಟಿದ್ದರು. ಸಪ್ಟೆಂಬರ್ 1944ರಲ್ಲಿ ಮಕಾಸರ್ ಶಿಬಿರದಲ್ಲಿದ್ದ, ಅಪ್ಪನೂ ಸೇರಿದಂತೆ, ಎಲ್ಲ ಸೆರೆಯಾಳುಗಳನ್ನು ಬಟಾವಿಯಾದ ಬಂದರು ತಾಂಜೊಂಗ್ ಪ್ರಿಯೊಗೆ ಟ್ರಕ್ಕುಗಳಲ್ಲಿ ಸಾಗಿಸಿದರು. ಅಲ್ಲಿಂದ ಬರ್ಮಾ ಮತ್ತು ಸುಮಾತ್ರಾಗಳಲ್ಲಿ ಸಾವಿನ ಹಳಿಗಳು ಎಂದೇ ಕುಪ್ರಸಿದ್ಧವಾಗಿದ್ದ ರೈಲ್ವೇ ಹಳಿ ಹಾಕುವ ಕೆಲಸ ಮಾಡಲು ಸಾವಿರಾರು ಯುದ್ಧ ಕೈದಿಗಳನ್ನು ಸಾಗಿಸಿದರು. ತಮ್ಮನ್ನು ಅಂತ್ಯಂತ ಹಳೆಯದಾದ, ತುಕ್ಕು ಹಿಡಿದ ಜೆಯೊ ಮರು ಎಂಬ ವಾಣಿಜ್ಯ ಹಡಗಿನಲ್ಲಿ ಕರೆದೊಯ್ಯಲಿದ್ದಾರೆ ಎಂದು ಡೆಕ್ಕಿನ ಮೇಲೇರಿದಾಗಲೇ ಅಪ್ಪನಿಗೆ ತಿಳಿದಿದ್ದು. ಅದರಿಂದ ಅವನು ಸಾಕಷ್ಟು ದುಃಖಿತನೂ ಆಗಿದ್ದ. ಎಲ್ಲರಿಗಿಂತಲೂ ಮೊದಲು ಸುಮಾರು 4000 ಜಪಾನೀ ಕೂಲಿಯಾಳುಗಳನ್ನು ಹಡಗಿನೊಳಗೆ ಕಳಿಸಿದರು. ಅವರೆಲ್ಲರನ್ನೂ ಜಪಾನಿನ ಹಳ್ಳಿಗಳಿಂದ ಕೂಲಿಗಳಾಗಿ ಕೆಲಸಮಾಡಲೆಂದು ಬಲಾತ್ಕಾರ ಪೂರ್ವಕವಾಗಿ ಕರೆತರಲಾಗಿತ್ತು.

ಸಪ್ಟೆಂಬರ್ 16ರ ಮಧ್ಯಧಹ್ನ ಜೆಯೊ ಮರು ಹಡಗು ಸುಮತ್ರದಲ್ಲಿನ ಪಡಾಂಗ್ ಎಂಬ ತೀರಕ್ಕೆ ಸುಂಡಾ ಜಲಸಂಧಿಯ ಮೂಲಕ ತನ್ನ ಪ್ರಯಾಣ ಬೆಳೆಸಿತು. ಸುಮಾರು 2500 ಯುದ್ಧ ಕೈದಿಗಳೂ ಸೇರಿದಂತೆ ಸುಮಾರು 6500 ಜನರನ್ನು ಆ ಹಡಗಿನಲ್ಲಿ ತುಂಬಲಾಗಿತ್ತು. ಹಡಗಿನಲ್ಲಿ ಜನರನ್ನು ಅಕ್ಷರಶಃ ಸಾರ್ಡೈನ್ ಮೀನುಗಳಂತೆ ತುಂಬಿದ್ದರು. ಹಡಗಿನಲ್ಲಿದ್ದವರು ಮೂತ್ರ ವಿಸರ್ಜನೆ ಮಾಡಬೇಕೆಂದರೆ ಅಲ್ಲಿಯೇ ನಿಂತಲ್ಲಿಯೇ ಮಾಡಬೇಕಿತ್ತು. ಬೇರೆ ಕಡೆ ಹೊಗಲೂ ಅವಕಾಶವಿರಲಿಲ್ಲ. ಹೀಗಾಗಿ ಇಡೀ ಹಡಗು ಕೊಳಕು ವಾಸನೆಯಿಂದ ತುಂಬಿತ್ತು. ಜೊತೆಗೆ ಸಮುದ್ರದ ಆ ಭಾಗದಲ್ಲಿ ಮಿತ್ರ ರಾಷ್ಟ್ರಗಳ ಜಲಾಂತರ್ಗಾಮಿಗಳು ಸಾಕಷ್ಟು ಸಂಖ್ಯೆಯಲ್ಲಿ ತಿರುಗಾಡುತಿದ್ದವು.

ಸೋಮವಾರ, ಸಪ್ಟೆಂಬರ್ 18ರ ಅಪರಾಹ್ನ, ಕ್ಷಿಪಣಿಯೊಂದು ಬಂದು ಜೆಯೊ ಮರು ಹಡಗಿಗೆ ಅಪ್ಪಳಿಸಿದ ಪರಿಣಾಮ ಅದರ ಬುಡ ತುಂಡಾಗಿ ಬಾಯಿಬಿಟ್ಟಿತು. ತಳಭಾಗದಲ್ಲಿದ್ದ ನಾಲ್ಕು ಸಾವಿರ ಕೂಲಿಯಾಳುಗಳು ಆತಂಕದಿಂದ ಹಡಗಿನ ಮೇಲ್ಭಾಗಕ್ಕೆ ನುಗ್ಗಲು ಪ್ರಯತ್ನಿಸಿದ್ದರು. ಅದೇ ಸಮಯಕ್ಕೆ ಇನ್ನೊಂದು ಕ್ಷಿಪಣಿ ಹಡಗಿನ ಹಿಂಭಾಗಕ್ಕೆ ಅಪ್ಪಳಿಸಿತು. ಅಪ್ಪ ಇಂಜಿನ್ ರೂಮಿನಲ್ಲಿದ್ದುದರಿಂದ ಮೇಲ್ಭಾಗಕ್ಕೆ ಬರಲು ಸಾಕಷ್ಟು ಪರಿತಪಿಸಬೇಕಾಯಿತು. ಬುದ್ಧಿ ಉಪಯೋಗಿಸಿ ಅವನು ತನ್ನೆಲ್ಲ ಮೇಲುಡುಪುಗಳನ್ನೂ ತೆಗೆದು ಹಾಕಿದೆ. ಒಳಉಡಪಿನಲ್ಲಿ ನಿಂತ. ತನ್ನ ಬಳಿಯಿದ್ದ ಮಣಿಮಾಲೆಯನ್ನೂ ಬಿಸಾಡಿದ.

ಆತಂಕದಿಂದಿದ್ದ ಗುಂಪಿನಲ್ಲಿ ಅಪ್ಪನಿಗೆ ಸೈನ್ಯದ ಕ್ರೈಸ್ತ ಗುರು ಕ್ಷಫಿಯೆ ಫ್ಲುಟ್ ಕಂಡರು. 'ಹಡಗಿನಿಂದ ಜಿಗಿಯಲು ಸಿದ್ಧರಾಗಿ' ಎಂದು ಅಪ್ಪ ಅವರಿಗೆ ಹೇಳಿದ 'ಹಡಗಿನ ಮೇಲೆ ಉಳಿಯುವುದು ಸದ್ಯಕ್ಕೆ ನನ್ನ ಜವಾಬ್ದಾರಿ. ಇಲ್ಲಿರುವವ ರಿಗೆ ಇನ್ನೂ ನನ್ನ ಅಗತ್ಯವಿದೆ. ಇಷ್ಟಾಗಿ, ನನಗೆ ಈಜಲೂ ಬರುವುದಿಲ್ಲ, ಎಂದರವರು. ಅಪ್ಪ ಅವರಿಗೆ ತೇಲುವೆಯಂಥ ವಸ್ತುವನ್ನು ಕೊಟ್ಟರೂ ಅವರು ಜಿಗಿಯಲು ನಿರಾಕರಿಸಿದರು, ತಾವೆಲ್ಲಿದ್ದರೋ ಅಲ್ಲಯೇ ನಿಂತು ಒಬ್ಬ ಪ್ರೀಸ್ಟಿನ ಜವಾಬ್ದಾರಿಯಂತೆ ಪಾಪ ವಿಮೋಚನೆಯ ಆಶೀರ್ವಾದ ಮಾಡತೊಡಗಿದರು. ನನ್ನ ತಂದೆಯ ಹಣೆಯ ಮೇಲೆ ಕೂಡ ಶಿಲುಬೆಯ ಗುರುತನ್ನು ಮಾಡಿದರು. ಇಬ್ಬರೂ ಪರಸ್ಪರರನ್ನೂ ಅಪ್ಪಿಕೊಂಡ ನಂತರ ಅಪ್ಪ ತಣ್ಣಗೆ ಕೊರೆಯುತ್ತಿದ್ದ ಸಮುದ್ರದ ನೀರಿಗೆ ಜಿಗಿದ. ಜೆಯೊ ಮರು ಹಡಗು ಮುಳುಗಿದಾಗ ಜೀವ ಕಳೆದುಕೊಂಡ 1278 ಡಚ್ ಕೈದಿಗಳಲ್ಲಿ ಫಾದರ್ ಕ್ಷಫಿಯೆ ಫ್ಲುಟ್ ಕೂಡ ಒಬ್ಬರು.

ಅಪ್ಪ ಒಳ್ಳೆಯ ಈಜುಗಾರ. ಮುಳುಗುತ್ತಿರುವ ಹಡಗಿನಿಂದಾಗಿ ನೀರಿನಲ್ಲಿ

ಉಂಟಾಗುವ ಸೆಳೆತದಿಂದ ಆದಷ್ಟು ದೂರ ಈಜಬೇಕು ಎಂದು ನೀರಿಗೆ ಜಿಗಿದ ತಕ್ಷಣ ಯೋಚಿಸಿದ. ಅವನ ಅದೃಷ್ಟಕ್ಕೆ ಹಲಗೆಯೊಂದು ಸಿಕ್ಕಿತು. ಸ್ವಲ್ಪ ದೂರ ಈಜುವಷ್ಟರಲ್ಲಿ ಅವನಿಗೆ ಇನ್ನೊಂದು ಹಲಗೆ ಮತ್ತು ಸೈನಿಕರು ಬಳಸುವ ಹಿಂಚೀಲ, ಹಗ್ಗ ಸಿಕ್ಕವು. ಅವುಗಳನ್ನು ಬಳಸಿ ತೇಲುವಂಥ ವಸ್ತುವೊಂದನ್ನು ಸಿದ್ಧಮಾಡಿಕೊಂಡ. ಇನ್ನೂ ಆರು ಜನ ಅವನ ಜೊತೆಗೂಡಿದರು. ಅವರೂ ಸೇರಿಕೊಂಡು ಸಣ್ಣ ತೆಪ್ಪವನ್ನು ಮಾಡಿಕೊಂಡು ಹೊರಟರು. ಅವರ ಸುತ್ತಲೂ ಮುಳುಗುತ್ತಿದ್ದವರ ಆಕ್ರಂದನ ನಡೆದಿತ್ತು.

ಹಡಗಿನಲ್ಲಿದ್ದ ರಕ್ಷಾದೋಣಿಗಳೆಲ್ಲ ಜಪಾನೀಯರ ಹತೋಟಿಯಲ್ಲಿದ್ದವು. ಮುಳುಗುತ್ತಿದ್ದರು. ಜೀವದಾಸೆಗೆ ರಕ್ಷಾದೋಣಿಯನ್ನು ಏರಲು ಪ್ರಯತ್ನಿಸಿದರೆ ಜಪಾನೀಯರು ಅವರ ಕೈಗಳನ್ನೇ ಕತ್ತರಿಸುತ್ತಿದ್ದರು. ಜಪಾನೀಯನೊಬ್ಬ ಅಪ್ಪ ತೇಲುತಿದ್ದ ತೆಪವನ್ನು ಹತ್ತಲು ಪ್ರಯತ್ನಿಸುವ ಭರದಲ್ಲಿ ಅದನ್ನೇ ಮುಳುಗಿಸಲಿದ್ದಾಗ ತಾನೂ ಜಪಾನೀಯರಂತೆಯೇ ವರ್ತಿಸಿದರೆ ಹೇಗಾದೀತು ಎಂಬ ಪ್ರಶ್ನೆ ಕರೆದುಕೊಳ್ಳುವಂತೆ ಗೋಗರೆದ. ಆದರೆ ಅವನನ್ನು ಮೇಲೆ ಕರೆದುಕೊಂಡರೆ ತೆಪ್ಪದ ಮೇಲಿದ್ದವರು ಮುಳುಗುವ ಸಂಭವವಿದ್ದುದರಿಂದ ಅವನ ಬೇಡಿಕೆಯನ್ನು ತಿರಸ್ಕರಿದರು. ಅಪ್ಪ ಅವನಿಗೆ ಒಂದು ಹಲಗೆ ಹಿಡಿದು ತೇಲಲು ಸಲಹೆ ಕೊಟ್ಟ. ಆದರೆ ಅವನೆಷ್ಟು ಬಳಲಿದ್ದನೆಂದರೆ ಹಲಗೆಯನ್ನು ಹುಡುಕಿ ಹಿಡಿಯುವಷ್ಟೂ ಶಕ್ತಿಯಿರಲಿಲ್ಲ. 'ದೇವರಲ್ಲಿ ನನಗೆ ನಂಬಿಕೆಯಿದ್ದರೆ ನಿಮ್ಮೆಲ್ಲರ ಪಾಪಗಳನ್ನು ಕ್ಷಮಿಸುವಂತೆ ಅವನಲ್ಲಿ ಮೊರೆಯಿಡು,' ಎಂದು ಅಪ್ಪ ಅವನಿಗೆ ಹೇಳಿದ. ನಂತರ ಅಪ್ಪ ಅವನಿಗೆ ಶುದ್ಧಿಸ್ನಾನದ ಸಂಕೇತ ಮಾಡಿ ಅವನ ಕೈಗಳನ್ನು ತೆಪ್ಪದಿಂದ ಬಿಡಿಸಿದ. ಅವನು ಸಮುದ್ರದಲ್ಲಿ ನಿಧಾನವಾಗಿ ಕಣ್ಮರೆಯಾದ. ಈ ಘಟನೆಯು ಅಪ್ಪನ ನೆನಪಿನಲ್ಲಿ ಬಹುಕಾಲ ಉಳಿದುಬಿಟಿತು. ನಿದ್ದೆಯಿಲ್ಲದೆ ಅನೇಕ ರಾತ್ರಿಗಳನ್ನು ಕಳೆದ. ನಿದ್ದೆಮಾಡಿದಾಗಲೂ ದುಸ್ವಪ್ನ ಕಂಡು ಬಿಚ್ಚಿಬಿದ್ದು ಏಳುತ್ತಿದ್ದ. ಆ ಘಟನೆಯನ್ನು ನನಗೆ ವಿವರಿಸುವಾಗ ನನಗೆ ಬೆರೆ ಆಯ್ಕೆಯೇ ಇರಲಿಲ್ಲ,' ಎಂದು ಬಿಕ್ಕಳಿಸಿ ಅಳತೊಡಗಿದ.

ಎರಡು ಹಗಲು, ಎರಡು ರಾತ್ರಿ ಸಮುದ್ರದಲ್ಲಿಯೇ ತೇಲಿದ ಅವರನ್ನು ಬದುಕುಳಿದವರನ್ನು ಹುಡುಕುತ್ತಿದ್ದ ಜಪಾನೀಯರ ಕಾವಲು ಪಡೆ ಕರೆದುಕೊಂಡು ಹೋಯಿತು, ಜೀವಸಹಿತ ಉಳಿದಿದ್ದ ಇನ್ನೂ ಮುವತ್ತು ಜನರೊಡನೆ ಅಪ್ಪನನ್ನೂ ಸುಮಾತ್ರಾದ ಪಾಕನ್ ಬಾರು ಎಂಬಲ್ಲಿನ ಸಾವಿನ ಶಿಬಿರಕ್ಕೆ ಕರೆದೊಯ್ದರು. ಸುಮಾತ್ರಾದ ದಟ್ಟಡವಿಯ ನಡುವೆ 230 ಕಿಲೊಮೀಟರು ಉದ್ದದ ರೈಲ್ವೆ ದಾರಿ ಮಾಡುವ ಕೆಲಸಕ್ಕೆ ಹಚ್ಚಿದರು. ಅಲ್ಲಿದ್ದ ಬಹಳಷ್ಟು ಯುದ್ಧ ಕೈದಿಗಳು

ಆಮಶಂಕೆ, ಅಪೌಷ್ಟಿಕತೆ ,ಮಲೇರಿಯಾ, ಬಳಲಿಕೆ ಮತ್ತು ಉಷ್ಣವಲಯದ ಹುಣ್ಣುಗಳಿಂದ ತೀರಿಕೊಂಡರು. ಪಾಕನ್ ಬಾರು ಕ್ಯಾಂಪಿನಲ್ಲಿ ಹೊಡೆತ ಮತ್ತು ಇತರ ಚಿತ್ರಹಿಂಸೆಗಳನ್ನು ಅನುಭವಿಸಿಯೂ ಅಪ್ಪ ಬದುಕುಳಿದ. ಅವನ ಮೈಮೇಲೆ ಆಗಿನ ಹಿಂಸೆಯ ಗುರುತುಗಳು ಬಹಳಷ್ಟು ವರ್ಷಗಳವರೆಗೆ ಹಾಗೆಯೇ ಇದ್ದವು. ಜಪಾನೀಯರು ಅವನ ದೇಹಕ್ಕೆ ಹಿಂಸೆ ನೀಡಿರಬಹುದು. ಆದರೆ ಅವನೊಳಗಿದ್ದ ಚೈತನ್ಯವನ್ನು ಸೋಲಿಸುವುದು ಅವರಿಂದ ಸಾಧ್ಯವಾಗಲಿಲ್ಲ.

ಸರಿಯಾದ ಸಮಯ ಸಿಕ್ಕಾಗ ಅಪ್ಪನಿಗೆ ಜಪಾನೀಯರು ನನ್ನನ್ನು ಯಾವ ರೀತಿ ದುರುಪಯೋಗಪಡಿಸಿಕೊಂಡರು ಎಂಬುದನ್ನು ವಿವರಿಸಿದೆ. ತನ್ನ ಮಗಳಿಗೆ ಅವರೇನು ಮಾಡಿದರು ಎಂಬುದನ್ನು ಅವನಿಂದ ಅರಗಿಸಿಕೊಳ್ಳಲು ಆಗಲಿಲ್ಲ. ಅಮ್ಮನಂತೆಯೇ ಅವನು ಕೂಡ ಮತ್ತೆಂದೂ ಅದರ ವಿಚಾರವನ್ನು ಮಾತನಾಡಲಿಲ್ಲ. ಆದರೆ ಅದನೆಲ್ಲ ಕೇಳುವಾಗ ಅವನೊಳಗಾಗುತ್ತಿದ್ದ ಬೇಗುದಿ ಮುಖದಲ್ಲಿ ಕಾಣುತ್ತಿತ್ತು. ಕಣ್ಣುಗಳಲ್ಲಿ ಸತತವಾಗಿ ನೀರು ಸುರಿಯುತ್ತಿತ್ತು.

ಹಾಲೆಂಡಿಗೆ ಬಂದಾಗಿನಿಂದ ನಮ್ಮ ಮದುವೆಯವರೆಗಿನ ಆರು ತಿಂಗಳ ಅವಧಿಯಲ್ಲಿ ಟಾಮ್ ಮತ್ತು ನಾನು ಪ್ರತಿ ನನಿತ್ಯ ಪರಸ್ಪರರಿಗೆ ಪತ್ರ ಬರೆಯುತ್ತಿದ್ದೆವು. ಎದುರು ಕುಳಿತು ಹೇಳುವುದಕ್ಕಿಂತಲೂ ಹೆಚ್ಚು ವಿವರವಾಗಿ, ಖಚಿತವಾಗಿ ನಾವು ಪತ್ರದ ಮೂಲಕ ಹೇಳಬಹುದು. ಮದುವೆಯ ನಂತರದ ಲೈಂಗಿಕ ಬದುಕನ್ನು ಎದುರಿಸುವುದು ನನಗೆ ಕಠಿಣವೆನ್ನಿಸುತ್ತಿದೆ ಎಂಬುದು ನನ್ನ ಪತ್ರಗಳಿಂದ ಟಾಮನಿಗೆ ನಿಚ್ಚಳವಾಗಿತ್ತು. ಅದರಿಂದಾಗಿಯೇ ತಾನು ಸಾಕಷ್ಟು ತಾಳ್ಮೆಯಿಂದ ನಡೆದುಕೊಳ್ಳುವುದು ಉತ್ತಮ ಎಂಬುದೂ ಅವನಿಗೆ ಅರಿವಾಗಿತ್ತು. ಅಂತೂ ಯುದ್ಧ ಕಾಲದ ಕೆಟ್ಟ ನೆನಪುಗಳನ್ನು ಮೀರಿ ಆ ಕರುಣಾಪೂರಿತ ಮತ್ತು ಶಾಂತ ಸ್ವಭಾವದ ಮನುಷ್ಯನನ್ನು ಮದುವೆಯಾಗಿ ಇಂಗ್ಲೆಂಡಿನಲ್ಲಿ ಹೊಸ ಬದುಕು ಆರಂಭಿಸಲು ಸಿದ್ಧಳಾದೆ.

ಆರು ವರ್ಷ ಸೇವೆ ಸಲ್ಲಿಸಿದ ನಂತರ ಟಾಮ್ ಬ್ರಿಟಿಷ್ ಸೈನ್ಯದಿಂದ ನಿವೃತ್ತಿ ತೆಗೆದುಕೊಂಡಿದ್ದ. ಜೂನ್ 1946ರಲ್ಲಿ ಇಂಗ್ಲೆಂಡಿಗೆ ವಾಪಾಸಾಗಿದ್ದ. ಅವನು ವಾಪಾಸಾದ ಕೆಲವೇ ದಿನಗಳ ನಂತರ ನಾನು ಹೂಕ್ ಆಫ್ ಹಾಲೆಂಡಿನಿಂದ ರಾತ್ರಿ ಹೊರಟ ಹಡಗಿನಲ್ಲಿ ಹಾರ್ವಿಚ್ಚಿಗೆ ಪ್ರಯಾಣ ಬೆಳೆಸಿದೆ. ಯುದ್ಧದ ಸಮಯದ ಕಷ್ಟದ ದಿನಗಳ ನಂತರ ಒಟ್ಟಾಗಿದ್ದ ಕುಟುಂಬವನ್ನು ಬಿಟ್ಟು ಹೊರಟಿದ್ದು ಖೇದವನ್ನುಂಟುಮಾಡಿತ್ತು. ಯುದ್ಧದಲ್ಲಿ ಎಲ್ಲವನ್ನೂ ಕಳೆದುಕೊಂಡಿದ್ದ ನನ್ನ ಅಪ್ಪ-ಅಮ್ಮನಿಗೆ ಮಗಳ ಮದುವೆಯ ಸಂದರ್ಭದಲ್ಲಿ ಉಡುಗೊರೆ ಕೊಡಲು ಏನೂ ಇರಲಿಲ್ಲ. ನಾನವರನ್ನು ಅಪ್ಪಿಕೊಂಡು ಬೀಳ್ಕೊಡುವಾಗ ಅವರಿಗೆ ಅದೇ

ಚಿಂತೆ ಕಾಡುತ್ತಿತ್ತು.

ಹಡಗಿನ ಪ್ರಯಣ ಕಷ್ಟಕರವಗಿತ್ತು. ಹೆಚ್ಚು ನಿದ್ದೆ ಮಾಡಲೂ ಆಗಲಿಲ್ಲ. ಹಾರ್ವಿಚ್ ತಲುಪಿದಾಗ ಟಾಮ್ ಮತ್ತು ಅವನ ತಂದೆ-ತಾಯಿ ಕರೆದೊಯ್ಯಲು ಬಂದಿದ್ದರು. ನನಗೋ ಒಂದು ಕಡೆ ಉದ್ವೇಗ ಮತ್ತೊಂದು ಕಡೆ ಭಯ, ಅದೇ ಮೊದಲ ಬಾರಿಗೆ ಯುನಿಫಾರಂ ಇಲ್ಲದ ನೋಡುತ್ತಿದ್ದು ತುಕ್ಕಿನ ಬಣ್ಣದ ಕೋಟನ್ನು ತೊಟ್ಟು ಬಂದಿದ್ದ ಟಾಮನನ್ನು ತಕ್ಷಣ ಗುರುತಿಸಲಿಕ್ಕೇ ಆಗಲಿಲ್ಲ. ಹಾರ್ವಿಚ್ಚಿನಿಂದ ವಾಲ್ಸಲಿಗೆ ಸಾಕಷ್ಟು ದೀರ್ಘವಾದ ಪ್ರಯಾಣ. ಟಾಮನ ಕುಟುಂಬಕ್ಕೆ ಸೇರಿದ ಹಂಬರ್ ಕಾರಿನಲ್ಲಿ ಹೋಗುವಾಗ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಟಾಮ್ ಮತ್ತು ನಾನು ಬಹಳಷ್ಟು ಸಮಯ ಪರಸ್ಪರರ ಕೈ ಹಿಡಿದುಕೊಂಡೇ ಇದ್ದೆವು. ಕೇಂಬ್ರಿಡ್ಜಿನ ಹೊರವಲಯದಲ್ಲಿ ಕಾರು ನಿಲ್ಲಿಸಿ ಟಾಮನ ತಂದೆ ನಮ್ಮಿಬ್ಬರಿಗಾಗಿ ಬುಟ್ಟಿಗಳ ತುಂಬ ಆಗಷ್ಟೆ ಕಿತ್ತ ಸ್ಟ್ರಾಬೆರಿ ಹಣ್ಣುಗಳನ್ನು ತಂದುಕೊಟ್ಟರು. ಚಿಕ್ಕಂದಿನಿಂದ ಉಷ್ಣವಲಯದ ಕಾಡಿನ ಹಣ್ಣುಗಳನ್ನು ತಿಂದು ಬೆಳೆದಿದ್ ನನಗೆ ಇಂಗ್ಲಿಷ್ ಹಣ್ಣುಗಳ ಮೊದಲ ರುಚಿ ತುಂಬಾ ಹಿತವಾಗಿತ್ತು. ಅಂದಿನಿಂದ ಸ್ಟ್ರಾಬೆರಿ ನನ್ನ ಮೆಚ್ಚಿನ ಹಣ್ಣೂ ಆಗಿಬಿಟ್ಟಿತು.

ಬರ್ಮಿಂಗ್ಯಾ್ಮಿಗೆ ಸಮೀಪದ, ಮಿಡ್ಲ್ಯಾಂಡ್ಸಿನಲ್ಲಿನ, ವಾಲ್ಸಲಿಗೆ ಬಂದಾಗ ಟಾಮನ ಹೆತ್ತವರು., ನನ್ನ ಹೊಸ ಅಪ್ಪ- ಅಮ್ಮ, ತಮ್ಮ ಮನೆಯೊಳಗೆ ನಮ್ಮನ್ನು ಕರೆದೊಯ್ದರು. ತುಂಬಾ ಒಳ್ಳೆಯವರು. ನನ್ನನ್ನು ತುಂಬಾ ಪ್ರೀತಿಯಿಂದ ನೋಡಿಕೊಂಡರು. ಸವಿಯಾದ, ಉದಾರ ನಡವಳಿಕೆಯವರು. ನಾನವರನ್ನು ಅತಿಶಯವಾಗಿ ಪ್ರೀತಿಸಿದೆ. ಟಾಮ್ ತಾನು ಸೆರೆಮನೆಯ ಶಿಬಿರದಲ್ಲಿ ಸಹಾಯ ಮಾಡಿದ್ದ ವಿದೇಶೀ ಹುಡುಗಿಯನ್ನು ಮದುವೆಯಾಗುತ್ತಿದ್ದುದು ಅವರಿಗೂ ಇಷ್ಟವಾಗಿತ್ತು. ನಾನು ವಧುವಾಗಿ ಬಂದುದು ಇಡೀ ವಾಲ್ಸಲಿನಲ್ಲಿ ದೊಡ್ಡ ಸುದ್ದಿಯಗಿತ್ತು. ಎಲ್ಲರ ಬಾಯಲ್ಲೂ ನನ್ನ ಬಗ್ಗೆಯೇ ಮಾತು. ನನ್ನನ್ನು ಸ್ವೀಕ-ರಿಸಲು ಇಡೀ ಊರೇ ಸಿದ್ಧವಾಂದತಿತ್ತು.

ಇಂಗ್ಲೆಂಡಿನಲ್ಲಿ ಯುದ್ಧಾನಂತರದ ದಿನಗಳಲ್ಲಿ ಬಟ್ಟೆಗೂ ಪಡಿತರ ವ್ಯವಸ್ಥೆ ಜಾರಿಯಲ್ಲಿತ್ತು. ಆದರೆ ಸೈನ್ಯದಲ್ಲಿ ಸಲ್ಲಿಸಿದ ಸೇವೆಗೆ ನೆನಪಿನ ಬ್ರಿಟಿಷ್ ಸರ್ಕಾರವು ಒಂದು ವಿಶೇಷವಾದ ಸೂಟನ್ನು ಕೊಟ್ಟಿತ್ತು. ಆದರೆ ತಮಾಷೆಯ ವಿಚಾರವೆಂದರೆ ಎಲ್ಲ ನಿವೃತ್ತ ಸೇನಾಧಿಕಾರಿಗಳೂ ಅದೇ ಸೂಟನ್ನು ತೊಟ್ಟು ಬೀದಿಯಲ್ಲಿ ತಿರುಗಾಡುತ್ತಿದ್ದರು. ನನ್ನ ಭಾವಿ ಅತ್ತೆ-ಮಾವನ ವಶೀಲಿಯಿಂದಾಗಿ ನನಗೆ ಬೆಚ್ಚಗಿನ ಚಳಿಗಾಲದ ಕೋಟು ಮತ್ತು ಬೂಟುಗಳು ದೊರೆತವು. ಬೂಟುಗಳು ಅಷ್ಟೇನೂ ಬೆಚ್ಚಗಿರಲಿಲ್ಲ. ಹೀಗಾಗಿ ನನಗೆ ಚಳಿಯಿಂದಾಗಿ ಪಾದಗಳು ಕೆಂಪಾಗಿ

ಊದಿಕೊಂಡುಬಿಡುತ್ತಿದವು. ಆಗೆಲ್ಲ ಓಡಾಡುವುದು ತುಂಬಾ ಕಷ್ಟವಾಗುತ್ತಿತ್ತು.

ಟಾಮನ ತಾಯಿ ಅಡುಗೆ ತುಂಬಾ ರುಚಿಯಾಗಿ ಮಾಡುತ್ತಿದ್ದಳು. ನಾನು ಅವಳೊಡನೆ 'ಸಾಕಷ್ಟು ಸಮಯವನ್ನು ಅಡುಗೆಮನೆಯಲ್ಲಿ ಕಳೆಯುತ್ತಿದ್ದೆ. ಇಂಗ್ಲಿಷ್ ಖಾದ್ಯಗಳನ್ನು ಮಾಡುವುದನ್ನು ಕಲಿತೆ. ದನದ ಮಾಂಸವನ್ನು ಹುರಿದು ಮಾಡುವ ಖಾದ್ಯ, ಯಾರ್ಕಶೈರಿನ ಕಡುಬುಗಳು, ಪುದಿನಾ ಸೇರಿಸಿ ಮಾಡಿದ ಕಡುಬು ತಯಾರಿಸಿ ಭಾನುವಾರಗಳಂದು ಬಡಿಸುವುದನ್ನು ಕಲಿತೆ. ಅವೆಲ್ಲ ನನ್ನ ಬಾಲ್ಯದಲ್ಲಿ ತಿಂಡಿ ಗಾಡಿಯಲ್ಲಿ ಸಿಗುತ್ತಿದ್ದ ಖಾದ್ಯಗಳಿಗಿಂತ ತುಂಬಾ ರುಚಿಯಾಗಿದ್ದವು.

ನನ್ನ ಮತ್ತು ಟಾಮನ ಮದುವೆ ವಾಲ್ಸಲಿನ ಸಂತ ಮೇರಿ ಕ್ಯಾಥೊಲಿಕ್ ಚರ್ಚಿನಲ್ಲಿ ಆಗಸ್ಟ್ 14,1946 ರಂದು ನಡೆಯಿತು.ಸುಮಾರು ತೊಂಬತ್ತು ಜನ ಮದುವೆಗೆ ಬಂದಿದ್ದರು. ಅವರು ಯಾರೂ ನನಗೆ ಪರಿಚಿತರಲ್ಲ. ಉದಾರಿಗಳಾದ ಜನ. ನಮ್ಮಿಬ್ಬರಿಗೂ ಉತ್ಕೃಷ್ಟವಾದ ಉಡುಗೊರೆಗಳನ್ನು ಕೊಟ್ಟರು. ಆದರೂ ನನ್ನ ಕುಟುಂಬದವರೊಬ್ಬರೂ ನನ್ನ ಮದುವೆಗೆ ಬರಲಾಗದಕ್ಕೆ ನನಗೆ ದುಃಖವೂ ಆಗಿತ್ತು. ಯುದ್ಧಾನಂತರದ ಆ ದಿನಗಳಲ್ಲಿ ವಧುವಿನ ಬಿಳಿಯ ಉಡುಪು ದೊರೆಯುವುದೇ ಕಠಿಣವಿತ್ತು. ಆದರೆ ರಫ್ ಕುಟುಂಬಕ್ಕೆ ಪರಿಚಿತನಾಗಿದ್ದ ವ್ಯಾಪಾರಿಯೊಬ್ಬನು ನನಗಾಗಿ ಬಿಳಿ ಉಡುಪನ್ನು ತಂದಿದ್ದ. ಜೊತೆಗೆ ದೊಡ್ಡದಾದ ಹೂಗಚ್ಚವನ್ನು ಕೊಟ್ಟಿದ್ದ. ಲಂಡನ್ನಿನಲ್ಲಿದ್ದ ವ್ಯಕ್ತಿಯೊಬ್ಬನು ಮೂಲಕ ಬಿಳಿ ಶೂಗಳನ್ನೂ ತರಿಸಲಾಗಿತ್ತು.

ನಾವು ಹೊಸ ಮನೆಯೊಂದರಲ್ಲಿ ನೆಲೆಸಲು ಹೋದೆವು. ಆ ಮನೆಗೆ ನಾನು ಜೂನಹುಕ್ ಎಂದು ಹೆಸರಿಟ್ಟೆ. ಜೂನಹುಕ್ ಎಂದರೆ 'ಸನಿ ಕಾರ್ನರ್' (ಉಲ್ಲಾಸದ ಮೂಲ) ಎಂದರ್ಥ. ಟಾಮನ ಹೆತ್ತವರು ನಮಗಾಗಿ ಆ ಮನೆಯನ್ನು ಕೊಂಡಿದ್ದರು. ಯುದ್ಧಾನಂತರದ ದಿನಗಳಲ್ಲಿ ಅದು ಅತ್ಯಂತ ದುಬಾರಿ ವೆಚ್ಚವೇ ಆಗಿತ್ತು. ಸೆರೆಮನೆಯಲ್ಲಿ ಸಾಕಷ್ಟು ಧೀರ್ಘ ಕಾಲ ಕಳೆದ ನಂತರ ಅಷ್ಟು ದೊಡ್ಡದಾದ ನಮ್ಮದೇ ಮನೆಯಲ್ಲಿ ವಾಸಿಸುಸುತ್ತಿದ್ದೇವೆ ಎಂದರೆ ನಂಬಲಿಕ್ಕೂ ಆಗುತ್ತಿರಲಿಲ್ಲ. ನಮ್ಮಿಬ್ಬರಿಗಂತೂ ತುಂಬ ಖುಷಿ ಯಾಗಿತ್ತು. ನನಗಲ್ಲಿ ಒಳ್ಳೆಯ ಗೆಳತಿಯರು ಸಿಕ್ಕರು. ಜೊತೆಗೆ ಅಲ್ಲಿನ ಚರ್ಚಿನ ಶಾಲೆಯಲ್ಲಿ ಚಿಕ್ಕ ಮಕ್ಕಳಿಗೆ ಪಾಠ ಹೇಳುವ ಕೆಲಸವೂ ಸಿಕ್ಕಿತು. ಟಾಮ್ ತನ್ನ ತಂದೆಯ ಚರ್ಮೋದ್ಯಮದಲ್ಲಿಯೇ ಕೆಲಸ ಮಾಡುತ್ತಿದ್ದ. ಅವರದು ಚರ್ಮದ ಕೈಚೀಲ ಮತ್ತು ಪ್ರಯಾಣ ಸಾಮಗ್ರಿಗಳನ್ನು ತಯಾರಿಸುವ ಉದ್ಯಮ. ಹಂದಿ ಮತ್ತು ಕರುವಿನ ಚರ್ಮಗಳಿಂದ ಮನಮೋಹಕವಾದ ಮತ್ತು ಅಂದವಾದ

ಕೈಚೀಲಗಳನ್ನು ತಯಾರಿಸುತ್ತಿದ್ದರು. ಅವುಗಳೊಳಗೆ ಪುಟ್ಟ ಪರ್ಸ್ ಮತ್ತು ಕನ್ನಡಿಗಳನ್ನೂ ಇಟ್ಟಿರುತ್ತಿದ್ದರು. ಈಗಲೂ ನನ್ನ ಬಳಿ ಕೆಲವು ಕೈಚೀಲಗಳಿವೆ.

ಇಂಗ್ಲೆಂಡಿನಲ್ಲಿ ನೆಲೆಸುವುದು ಅಷ್ಟೇನೂ ಸುಲಭವಾದ ವಿಚಾರವಾಗಿರಲಿಲ್ಲ. ಅಲ್ಲಿ ಎಲ್ಲವೂ ವಿಭಿನ್ನವಾಗಿತ್ತು. ಅದರಲ್ಲೂ ಹವಾಮಾನವಂತೂ ವಿಚಿತ್ರವಾಗಿರಲಿಲ್ಲ. ಅಲ್ಲಿ 1947ರ ಚಳಿಗಾವನ್ನಂತೂ ನಾನೆಂದೂ ಮರೆಯಲಾರೆ, ಆ ವರ್ಷ ಅತ್ಯಂತ ಕನಿಷ್ಟ ಉಷ್ಣತೆಯ ಚಳಿಗಾಲ. ಇಂಗ್ಲೆಂಡಿನ ಎಲ್ಲ ಮನೆಗಳಲ್ಲಿ ಇರುವಂತೆ ನಮ್ಮ ಮನೆಯಲ್ಲೂ ಅಗ್ನಿಕೋಷ್ಠವಿತ್ತು. ಆದರೆ ಅದರಲ್ಲಿ ಹೇಗೆ ಉರಿಮಾಡಬೇಕು ಎಂದೇ ನನಗೆ ಗೊತ್ತಿರಲಿಲ್ಲ ಸುಮ್ಮನೇ ಬೆಂಕಿಕಡ್ಡಿ ಗೀರಿ ಹಚ್ಚಿದರೆ ಉರಿ ಹೊತ್ತಿಕೊಳ್ಳುತ್ತದೆ ಎಂದುಕೊಂಡಿದ್ದೆ. ನನ್ನ ನೆರೆಮನೆಯಲ್ಲಿದ್ದ ಮಾರ್ಗರೇಟ್ ಬಂದು ಹಳೆಯ ಕಾಗದ ಮತ್ತು ಸಣ್ಣ ಚಕ್ಕೆಗಳನ್ನು ಉಪಯೋಗಿಸಿ ಅಗ್ನಿಕೋಷ್ಠದಲ್ಲಿ ಉರಿಮಾಡುವುದು ಹೇಗೆ ಎಂದು ಹೇಳಿಕೊಟ್ಟಳು.

ಬೇಗನೇ ಮಕ್ಕಳಾಗಲಿ ಎಂಬ ಆಸೆಯೇನೋ ನನಗೂ ಇತ್ತು ಆದರೆ ಯುದ್ಧದ ಸಮಯದಲ್ಲಿ ನನ್ನ ದೇಹಕ್ಕಾದ ಘಾಸಿಯಿಂದಾಗಿ ಪೂರ್ಣ ಕಾಲದ ಗರ್ಭಧಾರಣೆ ನನಗೆ ಸಾಧ್ಯವಾಗಲಿಲ್ಲ. ಮೂರು ಬಾರಿ ಗರ್ಭಪಾತವಾಯಿತು. ಮೂರನೆ ಬಾರಿಯದಂತೂ ಅತೀದುಃಖಕರವಾದ ಅನುಭವ. ನನಗಾಗ ನಾಲ್ಕು ತಿಂಗಳು. ಅಪಾಯದ ಹಂತ ದಾಟಿದ್ದೆ. ಬರಲಿರುವ ಮಗುವಿಗೆ ಬಟ್ಟೆಯನ್ನು ಹಣೆಯುವುದು, ತೊಟ್ಟಿಲು ಮತ್ತು ಮಗುವನ್ನು ಕರೆದೊಯ್ಯಲು ಪುಟ್ಟ ಗಾಡಿ ಹುಡುಕುವ ಕೆಲಸವನ್ನೂ ಆರಂಭಿಸಿದ್ದೆ. ಅಪಾಯದ ಹಂತ ದಾಟಿದ್ದರಿಂದ ಆ ಬಾರಿ ಗರ್ಭಧಾರಣೆ ಬಗ್ಗೆ ತುಂಬಾ ಭರವಸೆಯಿಟ್ಟುಕೊಂಡಿದ್ದೆ. ಆದರೆ ಒಂದು ದಿನ ಇದ್ದಕ್ಕಿದ್ದಂತೆ ತಡೆಯಲಾರದಂಥ ಯಮಯಾತನೆ ಆರಂಭವಾಯಿತು. ಟಾಮನಿಗೆ ಬೇಗನೇ ವೈದ್ಯರನ್ನು ಕರೆತರುವಂತೆ ಕಿರಿಚುತ್ತಿದ್ದೆ. 'ದೇವರೇ ನಾನೀಗ ನಾಲ್ಕು ತಿಂಗಳ ಗರ್ಭಿಣಿ ಪುನಃ ಗರ್ಭಪಾತವಗದಂತೆ ನೋಡಿಕೊ ಮಗುವನ್ನು ಮತ್ತೆ ಕಳೆದುಕೊಳ್ಳುವುದು ನನ್ನಿಂದ ಸಾಧ್ಯವಿಲ್ಲ,' ಎಂದು ಮನಸ್ಸಿನಲ್ಲಿಯೇ ಗೋಗರೆದೆ. ಆದರೂ ಮಗುವನ್ನು ಕಳೆದುಕೊಂಡುಬಿಟ್ಟೆ.

ವೈದ್ಯರು ದಾದಿಯೊಬ್ಬಳ ಜೊತೆಯಲ್ಲೇ ಬಂದಿದ್ದರು. ಅವರು ಬಂದ ಸ್ವಲ್ಪ ಅ ಸಮಯದಲ್ಲಿಯೇ ಗರ್ಭಪಾತವಾಯಿತು. ಮಗುವಿನ ದೇಹವು ಅಲ್ಲಿಯೇ ಇದ್ದ ಬಕೆಟಿನಲ್ಲಿ ಬಿದ್ದ ಆಬ್ದ ಕೇಳಿಸಿತು. ನನ್ನ ದೇಹವನ್ನೇ ಯಾತನೆಯಾಗುತ್ತಿತ್ತು. ಬದುಕಿ ಬಾಳುತ್ತದೆಂದು ನಾನು ಕನಸು ಕಂಡಿದ್ದ ನನ್ನ ಮಗು ಅಲ್ಲಿ ಬಕೆಟಿನಲ್ಲಿ ತನ್ನ ಜೀವನವನ್ನು ಮುಗಿಸಿತ್ತು. ಯುದ್ಧದ ಸಮಯದಲ್ಲಿ ಆದ ಆಘಾತದ ಪರಿಣಾಮವನ್ನು ನಾನು ಶಾಂತಿಯ ಆ ಸಮಯದಲ್ಲಿಯೂ ಅನಭವಿಸಬೇಕೆ?

ನಾನು ಜರ್ಜರಿತಳಾಗಿ ಹಾಸಿಗೆಯ ಮೇಲೆ ಮಲಗಿದ್ದಾಗ ಬಕೆಟನ್ನು ಕೋಣೆಗೆ ಒಯ್ದರು.

ಮಗುವನ್ನು ನೋಡಬೇಕು, ಅದಕ್ಕೆ ಜ್ಞಾನಸ್ನಾನವನ್ನಾದರೂ ಮಾಡಿಸಬೇಕು ಎಂಬ ತವಕ ನನಗೆ. ತನಗೆಲ್ಲವೂ ಗೊತ್ತು ಎಂಬ ಧೋರಣೆಯ ದಾದಿಯು 'ಇಲ್ಲ ಮಗಳೇ, ಸುಮ್ಮನೆ ಮಲಗು. ಸಮಾಧಾನ ಮಾಡಿಕೊ. ಅದನ್ನು ನೋಡಿ ಮಾಡುವುದೇನಿದೆ? ಅಲ್ಲಿ ನೋಡುವಂಥದ್ದು ನಿಜವಗಿಯೂ ಏನೂ ಇಲ್ಲ,' ಎಂದಳು ಏನೂ ಇಲ್ಲವೆ? ನನ್ನ ಮಗು ಏನೂ ಅಲ್ಲವೇ ಸಮಾಧಾನಕ್ಕೆಂದು ಆಡುವ ಮಾತುಗಳು ಎಷ್ಟು ಕ್ರೂರವಾಗಿಯೂ, ಕಠೋರವಾಗಿಯೂ ಇರುತ್ತವೆ? ತೆವಳುತ್ತ ಹಾಸಿಗೆ ಬಿಟ್ಟೆದ್ದೆ. ಕಣ್ಣಿಗೆ ಕತ್ತಲೆ ಬರುತ್ತಿತ್ತು. ತಲೆ ಸುತ್ತುತ್ತಿತ್ತು. ಕಾಲುಗಳುದ್ದಕ್ಕೂ ರಕ್ತ ಇಳಿಯುತ್ತಿತ್ತು. 'ನೀರು ಕೊಡು. ಮಗುವಿಗೆ ಜ್ಞಾನಸ್ನಾನ ಮಾಡಿಬೇಕು,' ಎಂದೆ, ಬಕೆಟಿನೊಳಗೆ ನೋಡಿದೆ. ಆಕಾರವೇ ಇಲ್ಲದಂತಿದ್ದ ನನ್ನ ಮಗುವನ್ನು ಬೆಡವಾದ ಹೊಲಸು ವಸ್ತು ಎಂಬಂತೆ ಬಕೆಟಿನಲ್ಲಿ ಬಿಸುಟಿದ್ದರು. ಆದರೆ ಅಲ್ಲಿದ್ದ ಪ್ರತಿ ತುಣುಕೂ ನನಗೆ ಅಮೂಲ್ಯವಾದುದಾಗಿತ್ತು. ತುಂಡುಗಳನ್ನು ಕೈಗೆತ್ತಿಕೊಂಡೆ, ಮಗುವನ್ನು ಮುಟ್ಟಿದ ಅನುಭವ ನನಗೆ ಬೇಕಿತ್ತು. ಅದನ್ನು ಕೈಯಲ್ಲಿ ಎತ್ತಬೇಕಿತ್ತು 'ಪವಿತ್ರ ಆತ್ಮನ ಮಗುವೆ, ದೇವರೆ ಹೆಸರಿನಲ್ಲಿ ನಿನಗೆ ಜ್ಞಾನಸ್ನಾನ ಮಾಡಿಸುತ್ತಿದ್ದೇನೆ,' ಎಂದೆ. ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು.

ಟಾಮನ ಮುಖದ ಮೇಲೆ ಮಡುಗಟ್ಟಿದ್ದ ಅವನೊಡಲ ನೋವನ್ನು, ಹತಾಶೆಯನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಅವನೂ ಮಗು ಬದುಕುಳಿಯಲಿ ಎಂದು ಬಹುವಾಗಿ ಆಶಿಸಿದ್ದ. ಇಬ್ಬರಿಗೂ ಏನು ಹೇಳಬೇಕೆಂದು ತೋಚಲಿಲ್ಲ. ಪರಸ್ಪರರನ್ನು ಅಪ್ಪಿಕೊಂಡೇವು, ಮಾತುಗಳಿಗೆ ಮೀರಿದ ನೋವನ್ನು ಇಬ್ಬರೂ ಅನುಭವಿಸುತ್ತಿದ್ದೆವು. ಅದು ಬರಿ ಗರ್ಭಪಾತವಾಗಿರಲಿಲ್ಲ. ಮಗುವಿನ ಸಾವೇ ಆಗಿತ್ತು. ದಾದಿಯ ಮಾತುಗಳು ಕಿವಿಯ ಮೇಲೆ ಬೀಳುತ್ತಿದ್ದವು, 'ಮಗು, ಬೇಸರಪಡಬೇಡ. ಮತ್ತೆ ಅವಕಾಶವಿದೆ, ನೀನಿನ್ನೂ ಚಿಕ್ಕವಳು. ಮತ್ತೆ ಮಕ್ಕಳಾಗುತ್ತವೆ. ನಿನಗೆ ಸಾಧ್ಯವಿದೆ. ಆ ಸಮಾಧಾನ, ಆ ಮಾತುಗಳು ಎಲ್ಲವೂ ಪೊಳ್ಳು ಎನ್ನಿಸಿಬಿಟ್ಟತು. ಹಂಬಲಿಸಿ ಪಡೆದ ಮಗು ಸತ್ತದ್ದಕ್ಕೆ ಅಳಲೂಬಾರದೆ? ಅದು ಗರ್ಭಪಾತವೆ ಆಗಿದ್ದರೂ ದುಃಖಪಡಬಾರದೆ? ಕೊನೆಗೂ ಅವರು ಅದನ್ನು ಸಾವು ಎಂದು ಪರಿಗಣಿಸಲೇ ಇಲ್ಲ. ಇನ್ನೊಂದು ಮಗುವನ್ನು ಪಡೆಯಲು ನನ್ನ ದೇಹ ಸಂಪೂರ್ಣವಾಗಿ ಸಿದ್ಧವಾಗಲು ನಾಲ್ಕು ತಿಂಗಳು ಬೇಕಾಯಿತು. ಅಲ್ಲಿಯವರೆಗೆ ನನ್ನ ದೇಹವೆಲ್ಲ ಬಸಿದು ಬರಿದಾಗಿ ಹೋಗಿದೆ

ಎಂದೇ ಅನ್ನಿಸುತ್ತಿತ್ತು. ನನ್ನ ದೇಹದಿಂದಲೇ ಏನನ್ನು ಅರಿದು ತೆಗೆದಿದ್ದಾರೆ ಅನಿಸುತ್ತಿತ್ತು. ನನ್ನಲ್ಲೇನೋ ಕೊರತೆಯಿದೆಯೇ? ನನಗೆ ಸಂಪೂರ್ಣ ಗರ್ಭವತಿಯಾಗಿ ಮಗು ಹೆರುವ ಶಕ್ತಿಯೇ ಇಲ್ಲವೇ? ಆ ಶಕ್ತಿ ಇಲ್ಲದ್ದರಿಂದಲೇ ಮಗು ಸಂಪೂರ್ಣ ಬೆಳೆಯಲಾಗದೆ ಸತ್ತು ಹೋಯಿತೆ? ದೇವರಲ್ಲಿ ನಾನು ಏನೆಂದು ಪ್ರಾರ್ಥಿಸಲಿ? ಪ್ರಾರ್ಥಿಸಲು ನನಗೆ ಪದಗಳೇ ಇರಲಿಲ್ಲ. ಪದಗಳೂ ಬರಿದಾಗಿಬಿಟ್ಟವೆ? ಕಳೆದು ಹೋದ ಮಗುವನ್ನು ದೇವರು ನನಗೆ ಪುನಃ ಕೊಡಲು ಸಾಧ್ಯವಿಲ್ಲ. ಅಂದರೆ ನನ್ನ ಪಾಲಿಗೆ ಇನ್ನೂ ಆ ಮಹಾ ಯುದ್ಧ ಮುಗಿದಿರಲಿಲ್ಲ. ಜಪಾನ್ ಸೈನ್ಯವು ನನ್ನ ಮೇಲೆ ನಡೆಸಿದ ಹಿಂಸಾಚಾರದ ಫಲವನ್ನು ನಾನು ಜೀವನದುದ್ದಕ್ಕೂ ಅನುಭವಿಸುತ್ತಲೇ ಇರಬೇಕೆ?

ಮೂರನೆಯ ಮಗುವಿನ ಪ್ರಕರಣದ ನಂತರ ನನಗೆ ಪ್ರಮುಖ ಶಸ್ತ್ರಚಿಕಿತ್ಸೆ ನಡೆಸಿದರು. ನಂತರ ಮುದ್ದಾದ ಎರಡು ಹೆಣ್ಣುಮಕ್ಕಳಾದವು. ಅಯಲೀನ್ ಮತ್ತು ಕ್ಯಾರಲ್ ಅಯಲಿನ್ ಸಪ್ಟೆಂಬರ್ 11,1949 ರಂದು ಮತ್ತು ಕ್ಯಾರಲ್ ಜೂನ್ 4, 1951ರಂದು ಹುಟ್ಟಿದರು. ನಮ್ಮ ಜೀವನ ಸಾರ್ಥಕವಾಯಿತು.

ವಾಲ್ಸಲಿನಲ್ಲಿ ನಾವು ಹದಿನಾಲ್ಕು ವರ್ಷ ವಾಸವಗಿದ್ದೆವು. ಇದೇ ಸಮಯದಲ್ಲಿ ಪ್ಲಾಸ್ಟಿಕ್ಕಿನ ಆವಿಷ್ಕರವಾಯಿತು. ಅದು ಉಳಿದ ಎಲ್ಲ ವಸುಗಳ ಸ್ಥಾನಗಳನ್ನೂ ಆಕ್ರಮಿಸಿಕೊಂಡಿತು. ಚರ್ಮೋದ್ಯಮದ ಮೇಲೂ ಅದರ ಪರಿಣಾಮವಾಯಿತು. ಪ್ಲಾಸ್ಟಿಕ್ ಕೈಚೀಲಗಳು ಬರತೊಡಗಿದಂತೆ ಟಾಮನ ತಂದೆ ತನ್ನ ವ್ಯವಹಾರವನ್ನು ಮಾರಬೇಕಾಯಿತು. ನಾವು ಆಸ್ಟ್ರೇಲಿಯಾಕ್ಕೆ ಹೋಗುವ ಸಾಹಸದ ನಿರ್ಧಾರ ತೆಗೆದುಕೊಂಡೆವು. ಆಗ ಕೇವಲ 10 ಪೌಂಡ್ ವೆಚ್ಚದಲ್ಲಿ ಆಸ್ಟ್ರೇಲಿಯಾಕ್ಕೆ ವಲಸೆ ಹೋಗಬಹುದು ಎಂಬ ವಿವರವುಳ್ಳ ಜಾಹಿರಾತುಗಳು ಎಲ್ಲ ಪತ್ರಿಕೆಗಳಲ್ಲಿಯೂ ಬರುತ್ತಿದ್ದವು, ನವು ಆಗ, ಈಗ ಹೇಳುವಂತೆ, ಹತ್ತು ಪೌಂಡಿನ ಬ್ರಿಟಿಷರಾದೆವು. ಜೂನ್ 21,1960ರಂದು ಎಸ್ ಎಸ್ ಸ್ಟ್ರಾತ್ನಾವರ್ ಎಂಬ ಹಡಗಿನಲ್ಲಿ ಪಿ ಅಂಡ್ ಓ ಓರಿಯಂಟ್ ಲೈನ್ ಎಂಬ ಕಂಪೆನಿಯ ಮೂಲಕ ಆಸ್ಟ್ರೇಲಿಯಾಕ್ಕೆ ವಲಸೆ ಹೊರಟೆವು. ಮತ್ತೊಮ್ಮೆ, ಮುಂದೇನು ಕಾದಿದೆ ಎಂಬ ಅರಿವಿಲ್ಲದೆ, ಸುಂದರವಾದ ಮನೆಯನ್ನು ಬಿಟ್ಟು ಹೊರಟೆವು, ಹದಿಮೂರು ಟೀ ಪೆಟ್ಟಿಗೆಗಳು ತುಂಬುವಷ್ಟು ವಸ್ತುಗಳನ್ನು ತೆಗೆದುಕೊಂಡೆವು. ನಮ್ಮ ಹೊಸ ಪೀಠೋಪಕರಗಳನ್ನು ಅಲ್ಲಯೇ ಬಿಟ್ಟೆವು. ಅಯಲೀನ್ ಮತ್ತು ಕ್ಯಾರಲ್ ಆಗ ಹನ್ನೊಂದು ಮತ್ತು ಒಂಬ್ಬತ್ತು ವರ್ಷದ ಮಕ್ಕಳು.

ಒಂದು ತಿಂಗಳ ಅವಧಿಯ ಹಡಗಿನ ಪ್ರಯಾಣ. ಜೀವನದಲ್ಲಿ ಒಮ್ಮೆ

ಮಾತ್ರ ಅನುಭವಕ್ಕೆ ಸಿಗಬಹುದಾದ ಪ್ರಯಾಣ. ಸೂಯೇಜ್ ಕಾಲುವೆಯ ಮೂಲಕ ನಮ್ಮ ಪ್ರಯಾಣ ಸಾಗಿತು. ಸೂಯೇಜ್ ಕಾಲುವೆ ಎಷ್ಟು ಕಿರಿದಾಗಿತ್ತೆಂದರೆ ಪಕ್ಕದಲ್ಲಿ ದಂಡೆಯ ಮೇಲಿದ್ದ ಜನರನ್ನು ಹಡಗಿನಲ್ಲಿರುವ ನೀವು ಸಲೀಸಾಗಿ ಮುಟ್ಟಬಹುದಿತ್ತು. ನನಗಿನ್ನೂ ಚನ್ನಾಗಿ ನೆನಪಿದೆ. ಹಡಗಿನಲ್ಲಿದ್ದ ಇಂಗ್ಲಿಷ್ ಹುಡುಗನೊಬ್ಬ ದಂಡೆಯಲ್ಲಿ ನಿಂತಿದ್ದ ಬಿಳಿಯ ನಿಲುವಂಗಿ ತೊಟ್ಟಿದ್ದ ಈಜಿಪ್ಟಿನ ವ್ಯಕ್ತಿಯೊಬ್ಬನನ್ನು ತೋರಿಸಿ, 'ಅಮ್ಮ, ನೋಡಲ್ಲಿ ಯೇಸು .'ಎಂದಿದ್ದ. ರಾತ್ರಿ ಊಟಕ್ಕೆ ನಾಲ್ಕು ಬಗೆಯ ಖಾದ್ಯಗಳು. ನೃತ್ಯ ಸಭಾಂಗಣದಲ್ಲಿ ಕುಣಿತ. ಒಳ್ಳೆಯ ಸ್ನೇಹಿತರೂ ಸಿಕ್ಕರು. ಅವರಲ್ಲಿ ಅನೇಕರು ಈಗಲೂ ಸ್ನೇಹ ಉಳಿಸಿಕೊಂಡಿದ್ದಾರೆ.

ಫ್ರಿಮ್ಯಾಂಟಲ್ಲಿನಲ್ಲಿ ಹಡಗು ದಡ ಸೇರಿದಾಗ ಆಸ್ಟ್ರೇಲಿಯಾದ ಮೊದಲ ಅನುಭವವಾಯಿತು. ಇಡಿ ದಿನವನ್ನು ದಡದ ಮೇಲೇ ಕಳೆದವು. ನನ್ನ ಗಮನ ಸೆಳೆದ ಮೊದಲ ದೃಶ್ಯವೆಂದರೆ ಅಲ್ಲಿನ ಆಕಾಶ, ಸ್ವಚ್ಚ ನೀಲಿಯ ಸುಂದರ ಆಕಾಶ. ಕಾಲ ಕೆಳಗಿನ ಒರಟು ಹುಲ್ಲು ಇಂಗ್ಲೆಂಡಿನ ಮೃದುವಾದ ಹುಲ್ಲಿಗಿಂತಲೂ ಭಿನ್ನವಾಗಿತ್ತು. ಮನೆಗಳಲ್ಲಿ ತಗಡಿನ ಛಾವಣಿ. ಬೇಲಿಗೂ ತಗಡು ಮತ್ತು ತೋಟದಲ್ಲಿನ ನೀರಿನ ಸಂಗ್ರಹಕ್ಕೂ ತಗಡು. ಎಲ್ಲ ಕಡೆಯೂ ತಗಡೇ ತುಂಬಿತ್ತು. ಗಾಳಿಗೆ ಹಾರಾಡುತ್ತಿದ್ದ ಬಟ್ಟೆಯ ಸಾಲುಗಳು. ನೊಣಗಳ ಬಗ್ಗೆ ಹೇಳುವುದೇ ಬೇಡ!

ನಾವು ಹೋಗಬೇಕಿದ್ದುದು ಅಡಿಲೇಡಿಗೆ. ಅಲ್ಲಗೆ ತಲುಪಿದಾಗ ನಮ್ಮನ್ನು ಫಿನ್ನಬರಿ ಅದೇ ವಲಸಿಗರ ಹಾಸ್ಟೆಲಿಗೆ ಕರೆದೊಯ್ದರು. ಅಲ್ಲಿಯೇ ಒಂದು ವಾರ ಇದ್ದೆವು. ಅದೇ ನಗರದಲ್ಲಿದ್ದ ಹ್ಯಾರಿಸ್ ಸ್ಕಾರ್ಫ್ ಡಿಪಾರ್ಟಮೆಂಟ್ ಸ್ಟೋರೊಂದರ ಪ್ರತಿದಿನ ನಮ್ಮನ್ನು ಪರಿಚಯಿಸಿದರು. ನಾವು ಇಂಗ್ಲೆಂಡ್ ಬಿಡುವ ಮೊದಲೇ ಟಾಮ್ ಆ ಸ್ಟೋರಿನ ಚರ್ಮೋತ್ಪನ್ನಗಳ ಮಾರಟ ವಿಭಾಗದ ಮ್ಯಾನೇಜರನ ಹುದ್ದೆಗೆ ಅರ್ಜಿ ಹಾಕಿದ್ದ. ಅದೇ ಕೆಲಸ ಸಿಕ್ಕಿತು. ಸಂಬಳವಲ್ಲದೆ ವಾಸಕ್ಕೆ ಸಂಪೂರ್ಣವಾಗಿ ಸಿದ್ಧವಾಗಿರುವ, ಬಾಡಿಗೆಯಿಲ್ಲದ ಮನೆಯನ್ನೂ ಕೊಟ್ಟರು. ಆಸ್ಟ್ರೇಲಿಯಾದಲ್ಲಿ ನಮ್ಮ ಬದುಕಿನ ಶುಭಾರಂಭವಾಗಿತ್ತು.

ನಾವು ಮೊದಲು ಮಾಡಿದ ಕೆಲಸವೆಂದರೆ ಒಂದು ಕ್ಯಾಥೊಲಿಕ್ ಚರ್ಚ್ ಮತ್ತು ಮಕ್ಕಳಿಗೆ ಒಂದು ಶಾಲೆಯನ್ನು ಹುಡುಕಿದ್ದು. ನಮ್ಮ ಮನೆಯಿದ್ದುದು ಕಿಂಗ್ಸ್‌ವುಡ್ ನಲ್ಲಿ. ಅಲ್ಲಗೆ ಹತ್ತಿರದಲ್ಲಿಯೇ ಚಚ್ ಮತ್ತು ಶಾಲೆ ಎರಡೂ ಇದ್ದವು. ಕಾನ್ವೆಂಟಿನ ಬಾಗಿಲು ತಟ್ಟದ್ದು ಇನ್ನೂ ನೆನಪಿದೆ. ಆಗ ಬಾಗಿಲು ತೆಗೆದವರು ತಲೆಗೆ ಕಂದು ಬಣ್ಣದ ಮೇಲ್ವಸ್ತ್ರ ಸುತ್ತಿಕೊಂಡಿದ್ದ ವಯಸ್ಸಾದ

ಸನ್ಯಸಿನಿ. ತನ್ನ ಹೆಸರು ಸಿಸ್ಟರ್ ಜೆನವೀವ್ ಎಂದು ಪರಿಚಯಿಸಿಕೊಂಡರು. ತುಂಬು ಹೃದಯದಿಂದ ನಮ್ಮನ್ನು ಒಳಗೆ ಬರಮಾಡಿಕೊಂಡ ಅವರು ಅಯಲೀನ್ ಮತ್ತು ಕ್ಯಾರಲ್ ಗೆ ಸಂತ ಜೋಸೆಫ್ ಶಾಲೆಯಲ್ಲಿ ಓದಲು ಅವಕಾಶವನ್ನೂ ಮಾಡಿಕೊಟ್ಟರು

ಕಿಂಗ್ಸ್ ವುಡ್ ಚರ್ಚಿನಲ್ಲಿಯೂ ನನಗೆ ಬೇಗನೆ ಅನೇಕರು ಗೆಳೆತಿಯರಾದರು. ಅಲ್ಲಿನ ತಾಯಂದಿರ ಕೂಟದ ಸದಸ್ಯೆಯರೆಲ್ಲ ನನಗೆ ಆಗೀಗ ಒಟ್ಟು ಸೇರಿ ಮಧ್ಯಾಹ್ನದ ಊಟ ಮಾಡುವುದಿತ್ತು. ಅಂಥ ಕಾರ್ಯಕ್ರಮವೊಂದಕ್ಕೆ ಬರುವಾಗ 'ನೀನೂ ತಟ್ಟೆ ತರಬೇಕು' ಎಂದು ನನಗೆ ಹೇಳಿದ್ದರು. ನನಗದು ಮೊದಲ ಅನುಭವ. ನಾನು ಒಂದು ತಟ್ಟೆಯನ್ನು ಹಿಡಿದುಕೊಂದು ಹೋಗಿದ್ದೆ. ಉಳಿದ ತಾಯಂದಿರೆಲ್ಲ ನನ್ನತ್ತ ನೋಡಿ ನಗತೊಡಗಿದರು. ತಟ್ಟೆಗಳು ಕಡಿಮೆಯಿರಬೇಕು, ಅದಕ್ಕಾಗಿ ತಟ್ಟೆ ತರಲು ಹೇಳಿದ್ದಾರೆ ಎಂದುಕೊಂಡಿದ್ದೆ. ಅಲ್ಲಿ ತಟ್ಟೆ ತರುವುದು ಎಂದರೆ ನಾನೂ ಕೂಡ ನನಗೆ ತಿಳಿದ ಯಾವುದಾದರೂ ಖಾದ್ಯವನ್ನು ಮಾಡಿಕೊಂಡು ಹೋಗುವುದು ಎಂದು ಅರ್ಥವಂತೆ. ನನಗೇನು ಗೊತ್ತು? ನನಗೆ ಆ ರೀತಿ ಅಭ್ಯಾಸವಿರುವುದೂ ಗೊತ್ತಿರಲಿಲ್ಲ. ಈಗಲೂ ಚರ್ಚಿನ ಯಾವುದೇ ಸಮಾರಂಭವಿದ್ದರೂ ನನ್ನ ಗೆಳತಿಯರು 'ಯಾನ್, ತಟ್ಟೆ ತರಲು ಮರೆಯಬೇಡ,' ಎಂದು ಹಾಸ್ಯ ಮಾಡುತ್ತಿರುತ್ತಾರೆ.

ಮುಂದಿನ ಒಂದೆರಡು ವರ್ಷಗಳಲ್ಲಿಯೇ ಟಾಮ್ ಹೊಸ ಕೆಲಸಕ್ಕೆ ಸೇರಿಕೊಂಡ; ನಾವು ಕಿಂಗ್ಸವುಡ್ಡಿಲ್ಲಿಯೇ ಮನೆ ಕೊಂಡೆವು. ಅವರ್ ಲೇಡಿ ಆಫ್ ಡೋಲರ್ಸ್ ಚರ್ಚ್ ಮತ್ತು ಸಂತ ಜೋಸೆಫ್ ಶಾಲೆಗೆ ಇನ್ನೂ ಸಮೀಪದಲ್ಲಿತ್ತು ಈ ಮನೆ. ಅನೇಕ ಕ್ಯಾಥೊಲಿಕ್ ಶಾಲೆಗಳಲ್ಲಿ ನಾನು ಶಿಕ್ಷಕಿಯಾಗಿ ಕೆಲಸ ಮಾಡಿದೆ. ಕೊನೆಯ ಹತ್ತು ವರ್ಷಗಲ ಕಾಲ ನಮ್ಮ ಚರ್ಚಿಗೇ ಸೇರಿದ್ದ ಸಂತ ಜೋಸೆಫ್ ಶಾಲೆಯಲ್ಲಿ ಕೆಲಸ ಮಾಡಿದೆ. ನನಗಿನ್ನೂ ಚೆನ್ನಾಗಿ ನೆನಪಿದೆ. ಒಂದು ದಿನ ನನ್ನ ತರಗತಿಯಲ್ಲಿ ಓದುತ್ತಿದ್ದ ಚಿಕ್ಕ ಮಗುವೊಂದರ ತಾಯಿ ಬಂದು ತನ್ನ ಮಗಳು ಡಚ್ ಉಚ್ಚಾರ ಶೈಲಿಗೆ ಎಷ್ಟು ಹೊಂದಿಕೊಂಡಿದ್ದಾಳೆಂದರೆ, ತನ್ನ ಗೊಂಬೆಗಳ ಜೊತೆಗೆ ಶಾಲೆಗೆ ಆಟವಾಡುವಾಗ ಡಚ್ ಶೈಲಿಯಲ್ಲೇ ಮಾತನಾಡುತ್ತ ಪಾಠ ಮಾಡುತ್ತಾಳೆ, ಎಂದಿದ್ದಳು.

ನಮ್ಮ ಮನೆಯಲ್ಲಿ ಸದಾ ಸಂಗೀತದ ವಾತಾವರನವಿತ್ತು. ಪಿಯಾನೊ, ಗಿಟಾರೆ, ಕ್ಲಾರಿಯಾನೆಟ್ ಮತ್ತು ಕೊಳಲುಗಳ ನಾದ ಸದಾ ತುಂಬಿರುತ್ತಿತ್ತು. ನಾವೆಲ್ಲರೂ ಬೇರೆ ಬೇರೆ ವಾದ್ಯಗಳನ್ನು ನುಡಿಸುತ್ತಿದ್ದೆವು. ಟಾಮ್ ತುಂಬಾ ಸೊಗಸಾಗಿ ಕ್ಲಾರಿಯಾನೆಟ್ ನುಡಿಸುತ್ತಿದ್ದನಲ್ಲವೆ ಎಲ್ಲ ವಾದ್ಯಗಳನ್ನೂ ಅಷ್ಟೇ

ಲೀಲಾಜಾಲವಾಗಿ ನುಡಿಸಬಲ್ಲವನಾಗಿದ್ದ. ರಂಗ ಚಟುವಟಿಕೆಯಲ್ಲೂ ಅವನಿಗೆ ಆಸಕ್ತಿಯಿತ್ತು. ಆದ್ದರಿಂದ ಅಡಿಲೇಡಿನಲ್ಲಿ ಅವನು ನಾಟಕ ಮತ್ತು ಸಂಗೀತ ಕಾರ್ಯಕ್ರಮಗಳಲ್ಲಿ ಸಾಕಷ್ಟು ತೊಡಗೆಡಿಕೊಂಡಿದ್ದ. ಬಹಳಷ್ಟು ವರ್ಷ ಅವನು ದಕ್ಷಿಣ ಆಸ್ಟ್ರೇಲಿಯಾದ ಗಿಲ್ಬರ್ಟ್ ಮತ್ತು ಸಲೈವೆನ್ ಅಪೆರಾ ಕಂಪೆನಿಯ ಸಂಗೀತ ನಿರ್ದೇಶಕ ಮತ್ತು ನಿರ್ವಾಹಕ ಅಗಿದ್ದ. ನಂತರ ಸಂಗೀತ ಕಾರ್ಯಕ್ರಮ ನಡೆಸುತ್ತಿದ್ದ ಮೆಟ್ರೊಪಾಲಿಟಿನ್ ಲೈಟ್ ಅಪೆರಾ ಕಂಪೆನಿಯಲ್ಲೂ ಕೆಲಸ ಮಾಡಿದ. ಸೌತ್ ಪೆಸಿಫಿಕ್ ಎಂಬ ಸಂಗೀತ ಕೃತಿ ಟಾಮನಿಗೆ ಬಲು ಪ್ರಿಯವಾಗಿತ್ತು. ಅವನು ಆ ಕೃತಿಯನ್ನು ಅದೆಷ್ಟು ಬಾರಿ ನುಡಿಸಿದ್ದನೋ ತಿಳಿಯದು.

ಆಸ್ಟ್ರೇಲಿಯಾಕ್ಕೆ ಬಂದುದರ ಬಗ್ಗೆ ನಮಗೆಂದೂ ಪಶ್ಚಾತ್ತಾಪ ಕಾಡಲೇ ಇಲ್ಲ. ಆಸ್ಟ್ರೇಲಿಯಾಕ್ಕೆ ನಾವು ಚೆನ್ನಾಗಿ ಹೊಂದಿಕೊಂಡೆವು. ನನಗೆ ಅನೇಕ ಗೆಳತಿಯರು ಸಿಕ್ಕರು. ಅದರಲ್ಲೂ ಚರ್ಚ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದುರಿಂದ ಮತ್ತು ಶಾಲೆಯಲ್ಲಿ ಪಾಠ ಮಾಡುತ್ತಿದ್ದುದರಿಂದ ಹೊಸ ಗೆಳತಿಯರನ್ನು ಗಳಿಸುವುದು ಸುಲಭವಾಯಿತು. ಅಯಲೀನ್ ಮತ್ತು ಕ್ಯಾರಲ್ ಮರ್ಸಿಡೀಸ್ ಕಾಲೇಜಿನಲ್ಲಿ ಓದಿದರು. ನಂತರ ಅಯಲೀನ್ ಬಿಸಿನೆಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರೆ ಕ್ಯಾರಲ್ ಸೌತ್ ಆಸ್ಟ್ರೇಲಿಯನ್ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಪದವಿ ಗಳಿಸಿದಳು. ಒಂದು ವರ್ಷದ ವ್ಯತ್ಯಾಸದಲ್ಲಿ ಇಬ್ಬರ ಮದುವೆಯೂ ಆಯಿತು. ಆಗ ಇದ್ದಕ್ಕಿದ್ದಂತೆ ಮನೆ ಖಾಲಿಯಾದಂತೆ ಅನ್ನಿಸಿಬಿಟ್ಟಿತ್ತು. ಮುಂದೆ ಮೊಮ್ಮಕ್ಕಳಾದ ಎಮಾ, ಜುಡ್ ಮತ್ತು ರುಬಿ ಸಂಸಾರದಲ್ಲಿ ಸಂತೋಷದ ಹೊಸ ಅಲೆಯನ್ನೇ ತಂದರು.

ಹಾಲೆಂಡಿನಿಂದ ಬಲುದೂರ, ಇಲ್ಲಿ ಈ ಆಸ್ಟ್ರೇಲಿಯಾದಲ್ಲಿ, ಬದುಕುವುದರಿಂದ ಯಾರಿಗೂ ನನ್ನೊಳಗೇ ಬಚ್ಚಿಟ್ಟುಕೊಂಡಿದ್ದೆ, ಗುಟ್ಟು ತಿಳಿಯಲು ಸಾಧ್ಯವಿಲ್ಲವಾದ್ದರಿಂದ ನಾನು ಸುರಕ್ಷಿತವಾಗಿದ್ದೇನೆ ಎಂದುಕೊಂಡಿದ್ದೇನೆ. ಆದರೂ ಯುದ್ಧ ಸಮಯದಲ್ಲಿ ನನ್ನ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಅವಮಾನ ನನ್ನೊಳಿಗೇ ಕುದಿಯುತ್ತಲೇ ಇತ್ತು.

ಅದು 1975ರ ಬೇಸಿಗೆಯ ಸುಂದರ ಬೆಳಗು. ಎಲ್ಲ ದಿನಗಳಂತೆಯೇ ಅಂದೂ ಕೂಡ ಎಲ್ಲವೂ ಯಥಾಪ್ರಕಾರ ನಡೆದಿತ್ತು. ಟಾಮ್ ತನ್ನ ಎಫ್ ಬಿ ಹೋಲ್ಡನ್ ಕಾರು ರಿಪೇರಿ ಮಾಡುತಿದ್ದ, ಅವನಿಗಾಗಿ ಹಣ್ಣಿನ ರಸ ತಯಾರಿಸಿ, ಅವನ ಕೆಲಸ ಎಲ್ಲಿಯವರೆಗೆ ಬಂದಿತೆಂದು ನೋಡಲು ಹೋದೆ. ಕೈಗೆ ಹತ್ತಿದ್ದ ಮಸಿಯನ್ನು ಒರೆಸಿಕೊಂಡು ಹಣ್ಣಿನ ರಸವಿದ್ದು ಲೋಟಾ ತೆಗೆದುಕೊಳ್ಳುತ್ತ ಟಾಮ್ 'ಹೋಲ್ಡನ್ ಕಂಪೆನಿಗೇ ಹೋಗಿ ಬಿಡಿ ಭಾಗವೊಂದನ್ನು ತರಬೇಕು,' ಎಂದ.

ಮನೆಗೆ ಸಮೀಪದಲ್ಲಿಯೇ ಇತ್ತು. 'ಬೇಗ ಬರುತ್ತೇನೆ,' ಎಂದು ಹೇಳಿ ಟಾಮ್ ಹೊರಹೋದ

ಒಂದು ತಾಸಾದರೂ ಟಾಮ್ ಮರಳಿ ಬರಲಿಲ್ಲ. ನನಗೂ ಚಿಂತೆಯಾಯಿತು. ರಾಯಲ್ ಅಡಿಲೇಡ್ ಆಸ್ಪತ್ರೆಗೆ ಫೋನ್ ಮಾಡಿದೆ. ಅವರು ಮಧ್ಯ ವಯಸ್ಸಿನ ಒಬ್ಬರನ್ನು ಅಂಬುಲೆನ್ಸಿನಲ್ಲಿ ತುರ್ತುನಿಗಾ ಘಟಕಕ್ಕೆ ಕರೆತರಲಾಗಿದೆ ಎಂದು ಹೇಳಿದರು. ಆತನನ್ನು ಗುರುತಿಸಬಹುದಾದ ಯಾವುದೇ ದಾಖಲೆಯಿಲ್ಲದ್ದರಿಂದ ಆತ ಯಾರು ಎಂದು ತಮಗೆ ತಿಳಿಯದು ಎಂದೂ ಹೇಳಿದರು. ಟಾಮ್ ತೋಟದ ಕೆಲಸ ಮಾಡುವಾಗ ಬಳಸುವ ಉಡುಪನ್ನು ತೊಟ್ಟಿದ. ಆಸ್ಪತ್ರೆಯವರು ಹೇಳುತ್ತಿದ್ದ ವಿವರ ಕೇಳಿದಾಗ, ಅವನೇ ಯಿರಬೇಕು ಎನ್ನಿಸಿತು. ಹೋಲ್ಡನ್ ಕಂಪೆನಿಗೆ ಫೋನ್ ಮಾಡಿದೆ. ಅಲ್ಲಗೆ ಸಮೀಪದ ಟ್ರಾಫಿಕ್ ಸ್ನಿಗ್ನಲ್ ಬಳಿ ವ್ಯಕ್ತಿಯೊಬ್ಬರು ರಸ್ತೆ ದಾಟುವಾಗ ಕಾರು ಡಿಕ್ಕಿ ಹೊಡೆದು ಅಪಘಾತವಾಯಿತು ಎಂದು ಹೇಳಿದರು.

ಒಂದು ಕ್ಷಣ ಏನು ಮಾಡಬೇಕು ಎಂದೇ ತೋಚಲಿಲ್ಲ. ಮರುಕ್ಷಣವೇ ಆಸ್ಪತ್ರೆಗೆ ಓಡಿದೆ. ಟಾಮ್ ಅತ್ಯಂತ ಗಂಭೀರವಾಗಿ ಗಾಯಗೊಂಡು ತೀವ್ರನಿಗಾ ಘಟಕದಲ್ಲಿದ್ದ. ಅವನ ದೇಹದ ತುಂಬಾ ಕೊಳವೆಗಳು. ತಂತಿಗಳು ಅವನು ಕೋಮದಲ್ಲಿದ್ದ ಅವನ ತಲೆಗೆ ತೀವ್ರವಾದ ಪೆಟ್ಟಾಗಿತ್ತು. ದವಡೆಗಳು ಮರಿದಿದ್ದವು. ದವಡೆಗಳಿಗೆಲ್ಲ ತಂತಿ ಹಾಕಿ ಕಟ್ಟಿದ್ದರಿಂದ ಬಾಯಿ ತೆರೆಯಲೂ ಆಗುತ್ತಿರಲಿಲ್ಲ. ಅವನು ಬದುಕಿರಲು ಬೇಕಾದ ಜೀವರಸವನ್ನು ರಕ್ತನಾಳಕ್ಕೇ ನೇರವಾಗಿ ಕೊಡುತ್ತಿದ್ದರು. ಶಸ್ತ್ರಕ್ರಿಯೆ ಮಾಡದಿದ್ದರೆ ಅವನು ಸಾಯಬಹುದು ಎಂದರು. ಶಸ್ತ್ರಕ್ರಿಯೆ ಮಾಡುವ ಮುನ್ನ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಲು ಹೇಳಿದರು. ಟಾಮನನ್ನು ನೋಡಲು ದಿನವೂ ಆಸ್ಪತ್ರೆಗೆ ಹೋಗುತ್ತಿದ್ದೆ. ಅವನ ಪಕ್ಕ ಗಂಟೆಗಟ್ಟಲೆ ಕುಳಿತಿರುತ್ತಿದ್ದೆ. ಅನೇಕ ವಾರಗಳ ನಂತರ ಟಾಮನಿಗೆ ಪ್ರಜ್ಞೆ ಮರಳಿತು. ಕಣ್ಣು ತೆರೆದ ನನ್ನತ್ತ ನೋಡಿದ. ಬದುಕಿನಲ್ಲಿ ಭರವಸೆ ಮರಳಿದಂತಾಯಿತು, ಆದರೆ ಟಾಮ್ ನನ್ನನ್ನು ಗುರುತಿಸಲಿಲ್ಲ. ಟಾಮನಿಗೆ ನಾನ್ಯಾರು, ತಾನ್ಯಾರು, ತಾನೆಲ್ಲಿದ್ದೇನೆ, ತನಗೇನಾಗಿತ್ತು ಎಂಬುದ್ಯಾವದೂ ನೆನಪಿರಲಿಲ್ಲ. ಅವನಿಂದ ಯಾವುದೇ ಪ್ರತಿಕ್ರಿಯೆಯೂ ಇರಲಿಲ್ಲ. ನನ್ನ ಟಾಮನಲ್ಲಿ ಇಷ್ಟೇನಾ ಉಳಿದಿರುವುದು?

ಅವನ ಮೆದುಳಿಗೆ ತೀವ್ರವಾದ ಹಾನಿಯಾಗಿದೆ ಎಂದು ವೈದ್ಯರು ಹೇಳಿದರು. ಅವನು ಸಂಪೂರ್ಣವಾಗಿ ಚೇತರಿಸಿಕೊಳ್ಳುವುದು ಅಸಾಧ್ಯ, ನೆನಪು ಮರಳುವುದೂ ಅನುಮಾನ ಎಂದರು. ದೀರ್ಘಕಾಲದ ಆಸ್ಪತ್ರೆವಸದ ನಂತರ ಟಾಮ್ ಬಂದ, ಅವನನ್ನು ಮನೆಯಲ್ಲಿಟ್ಟುಕೊಂಡು ನೋಡಿಕೊಳ್ಳುವುದು

ಕಷ್ಟವಾದರಿಂದ ಅವನಿಗೆ ಯಾವುದಾದರೂ ನರ್ಸಿಂಗ್ ಹೋಮಿಗೆ ಖಾಯಮ್ಮಾಗಿ ಸೇರಿಸುವದು ಒಳ್ಳೆಯದು ಎಂದು ಎಲ್ಲರೂ ಹೇಳಿದರು. ನಾನು ಬಿಲ್ಕುಲ್ ಸಾಧ್ಯವಿಲ್ಲ ಎಂದೆ, ಅವನನ್ನು ನರ್ಸಿಂಗ್ ಹೋಮಿಗೆ ಸೇರಿಸಿದರೆ ಅವನ ಸ್ಮರಣ ಶಕ್ತಿ ಮರಳಿ ಬರುವುದೆಂಬ ಖಾತ್ರಿಯೇನೂ ಇಲ್ಲ. ಆದ್ದರಿಂದ ಅವನನ್ನು ಮನೆಗೇ ಕರೆದೊಯ್ದೆ, ಮನೆಯಲ್ಲಿದ್ದರೆ ಏನಾದರೂ ಪ್ರತಿಕ್ರಿಯೆ ಬರಬಹುದು ಅಥವಾ ಏನನ್ನಾದರೂ ಗುರುತಿಸಬಹುದು ಎಂಬ ಆಸೆ. ಅವನು ತನ್ನ ಮನೆ, ಕಾರು, ಕುಟುಂಬ, ಯಾವುದನ್ನೂ ಗುರುತಿಸಲಿಲ್ಲ.

ಆಸ್ಪತ್ರೆಯಿಂದ ಮನೆ ತಲುಪುಷ್ಟರಲ್ಲಿ ಸಾಕಷ್ಟು ಬಳಲಿದ್ದ, ಆದ್ದರಿಂದ ಅವನನ್ನು ಕರೆದೊಯ್ದು ನೇರವಾಗಿ ಹಾಸಿಗೆಯ ಮೇಲೆ ಮಲಗಿಸಿದೆ. ಅವನ ಪಕ್ಕ ಕುಳಿತು ತಲೆಯನ್ನು ಮೃದುವಾಗಿ ತಟ್ಟುತ್ತ. ಅವನ ಮುಂಗೈಗಳನ್ನು ಹಿಡಿದುಕೊಂಡು ಪ್ರೀತಿಯಿಂದ ಮಾತನಾಡಿಸತೊಡಗಿದ. ಅವನು ಅಲ್ಲಿ ಹಾಸಿಗೆಯ ಮೇಲೆ ಸುಮ್ಮನೇ ಮಲಗಿರುತ್ತಿದ್ದ. ದೃಷ್ಟಿ ಶೂನ್ಯದತ್ತ ನೆಟ್ಟಿತ್ತು. ನನ್ನ ತಲೆಯಲ್ಲೋ ಎಲ್ಲ ಹಳೆಯ ನೆನಪುಗಳು. ಕಣ್ಣಲ್ಲಿ ಧಾರಕಾರವಾಗಿ ನೀರು ಸುರಿಯುತ್ತಿತ್ತು. ಸುಂದರನಾದ ಗಂಭೀರ ಸ್ವಭಾವದ, ಎಲ್ಲರನ್ನೂ ಪ್ರೀತಿಯಿಂದ ನೋಡಿಕೊಳ್ಳುವ ಟಾಮ್ ಏನೂ ಪ್ರತಿಕ್ರಯೆಯೇ ಇಲ್ಲದ ಮಲಗಿದ್ದ. ಸದಾ ಚಟುವಟಿಕೆಯ, ಪ್ರತಿಭಾವಂತ ಟಾಮ್ ತನ್ನ ಕುಟುಂಬದ ಬಗ್ಗೆ ಏನೆಲ್ಲ ಕನಸುಗಳನ್ನಿಟ್ಟುಕೊಂಡಿದ್ದ, ತನ್ನ ಕುಟುಂಬವನ್ನು ಎಷ್ಟೊಂದು ಪ್ರೀತಿಸುತ್ತಿದ್ದ, 'ಟಾಮ್, ಟಾಮ್, ನನಗೋಸ್ಕರ ಮೊದಲಿನಂತಾಗು,' ಎಂದು ಗೋಗರೆದೆ

ಟಾಮನನ್ನು ನೋಡಿಕೊಳ್ಳುವುದು ಸುಲಭದ ಕೆಲಸವೇನೂ ಆಗಿರಲಿಲ್ಲ. ಅವನ ಎಲ್ಲ ಕೆಲಸಗಳನ್ನೂ ನಾನೇ ಮಾಡಬೇಕಿತ್ತು. ತನ್ನ ಬಟ್ಟೆಯನ್ನು ತಾನೇ ತೊಡಲೂ ಆಗುತ್ತಿರಲಿಲ್ಲ. ಶೇವ್ ಮಾಡಿಕೊಳ್ಳಲೂ ಆಗುತ್ತಿರಲಿಲ್ಲ. ಬರವಣಿಗೆ ನೆನಪಿರಲಿಲ್ಲ. ಮೆದುಳಿಗೆ ಆದ ಪೆಟ್ಟಿನಿಂದಾಗಿ ಅವನ ವ್ಯಕ್ತಿತ್ವವೇ ಬದಲಾಗಿಬಿಟ್ಟಿತ್ತು. ಅವನ ಬದುಕಿನಲ್ಲಿ ಆ ಶೂನ್ಯ ಸ್ಥಿತಿಗೆ ಹೊಂದಿಕೊಳ್ಳುವುದು ನನಗೆ ಅತೀ ಕಷ್ಟದ ಕೆಲಸವಾಗಿತ್ತು. ನಾನೇ ಗಂಡನ ಜೊತೆಗಲ್ಲ, ಏನೂ ಅರಿಯದ ಒಂದು ಹಸುಗೂಸಿನೊಂದಿಗೆ ಬದುಕುತ್ತಿದ್ದೆ. ಟಾಮ್ ಮೊದಲಿನಂತಾಗುವುದು ಸಾಧ್ಯವೇ ಇಲ್ಲ. ಇಂದಿನಿಂದ ನಾನೇ ಎಲ್ಲ ; ಜವಾಬ್ದಾರಿ ವಹಿಸಿಕೊಳ್ಳಬೇಕು. ಎಲ್ಲವನ್ನೂ ಯೋಚಿಸಿ ನಿರ್ಧರಿಸಬೇಕು, ನಾನು ಅತ್ಯಂತ ತಾಳ್ಮೆಯಿಂದ ನಡೆದುಕೊಳ್ಳಬೇಕು. ಟಾಮನನ್ನು ಮದುವೆಯಾಗುವಾಗ ಅವನ ಎಲ್ಲ ಒಳ್ಳೆಯದು ಮತ್ತು ಕೆಟ್ಟದ್ದರಲ್ಲೂ ಅವನ ಜೊತೆಗೂಡಿ ನಡೆಯುವುದಾಗಿ ಹೇಳಿದ್ದೆ. ಇದುವರೆಗಿನದು ಒಳ್ಳೆಯ ಬದುಕು. ಮುಂದಿನದು ಕಷ್ಟದ ಬದುಕು. ಅದುವರೆಗಿನ ಬದುಕನ್ನು

ಸ್ವೀಕರಿಸಿದಷ್ಟೇ ಸಮಾಧಾನದಿಂದ ಇದನ್ನೂ ಒಪ್ಪಿಕೊಳ್ಳಬೇಕು ಎಂದು ನಿರ್ಧರಿಸಿದೆ.

ಐದು ವರ್ಷದ ನಂತರ ಟಾಮನಿಗೆ ನೆನಪು ನಿಧಾನವಾಗಿ ಸ್ವಲ್ಪವೇ ಮರಳಿತು. ಅವನಿಗೆ ನನ್ನೆಲ್ಲ ಪ್ರೀತಿಯನ್ನು ಧಾರೆಯೆರೆದೆ. ದಿನವೂ ಛಾಯಚಿತ್ರಗಳನ್ನೂ ಮತ್ತು ಪರಿಚಿತವಾಗಿದ್ದ ವಸ್ತುಗಳನ್ನು ತೋರಿಸುತ್ತಲೇ ಇರುತ್ತಿದ್ದೆ. ಅವನು ಕೆಲಸಕ್ಕೆ ಮರಳಿ ಹೋಗುವ ಸ್ಥಿತಿಯಲ್ಲಿರಲಿಲ್ಲ, ಆದರೆ ತನ್ನ ಕೆಲಸಗಳನ್ನು ತಾನೇ ಮಾಡಿಕೊಳ್ಳುವಂತಾದ.

ಅವನು ತನ್ನ ಮೊಮ್ಮಕ್ಕಳೊಡನೆ ಆಟವಾಡುವುದನ್ನು ತುಂಬಾ ಇಷ್ಟಪಡುತ್ತಿದ್ದ. ಎಮಾ ಮತ್ತು ಜುಡ್ ಇಬ್ಬರೂ ಶಾಲೆಯ ರಜಾ ದಿನಗಳನ್ನು ನಮ್ಮೊಡನೆಯೇ ಕಳೆಯುತ್ತಿದ್ದರು. ಕೆಲವೇ ದಿನಗಳಲ್ಲಿ ಕ್ಯಾರಲ್ಲಳಿಗೂ ಮಗುವಾಯಿತು. ಪುಟ್ಟ ರುಬಿಯೂ ಜೊತೆಗೆ ಸೇರಿಕೊಂಡಿತು. ಅವರೆಲ್ಲರೊಡನೆ ಟಾಮ್ ಮಕ್ಕಳಂತೆಯೇ ಖುಷಿಯಿಂದ ಆಡುತ್ತ ಕಾಲ ಕಳೆಯುತ್ತಿದ್ದ. ಒಮ್ಮೆ ಎಮಾಳಿಗೆ 'ಅಪಘಾತವಾಗುವುದಕ್ಕೂ ಮೊದಲಿನ ಅಜ್ಜನನ್ನು ನೀನು ನೋಡಬೇಕಿತ್ತು,' ಎಂದೆ. ತಕ್ಷಣವೇ ಅವಳು 'ಅಜ್ಜ ಈಗ ಹೇಗಿದ್ಧಾರೋ ಹಾಗೇ ನನಗಿಷ್ಟ. ಅಜ್ಜ ಅದ್ಭುತ ವ್ಯಕ್ತಿ' ಎಂದಳು.

ಟಾಮನಿಗೆ ಇಪ್ಪತ್ತು ವರ್ಷ ಆರೈಕೆ ಮಾಡಿ ಪ್ರೀತಿಯಿಂದ ನೋಡಿಕೊಂಡೆ. ಅವನು ಕ್ಯಾನ್ಸರಿನಿಂದ 1995ರಲ್ಲಿ ತೀರಿಕೊಂಡ. ಮೆ 10ರಂದು ಬೆಳಗಿನ ಜಾವ ಒಂದೂಕಾಲು ಗಂಟೆಗೆ' ಆಸ್ಪತ್ರೆಯವರು ಅಯಲೀನಳಿಗೆ ಫೋನ್ ಮಾಡಿ ಟಾಮ್ ತೀರಿಕೊಂಡ ವಿಚಾರವನ್ನು ಅವಳು ನನಗೆ ತಿಳಿಸಲಿ ಎಂದು ಹೇಳಿದರಂತೆ.

ಅವಳ ಮನೆ ನಮ್ಮ ಮನೆಯ ಹತ್ತಿರದಲ್ಲಿಯೇ ಇತ್ತು. ರಾತ್ರಿ ಕಾರಿನಲ್ಲಿ ಬರುವಾಗ ಇದ್ದಕ್ಕಿದ್ದಂತೆ ಅವಳಿಗೆ ತನ್ನ ಮುಖದಲ್ಲಿ ನಗುವರಳಿದೆ ಎನ್ನಿಸಿಬಿಟ್ಟಿತಂತೆ. ತನ್ನ ತಂದೆಯೇ ನಗುತ್ತ ಹೋದಂತೆಯೂ ಅನ್ನಿಸಿತಂತೆ. ಅವಳ ಪ್ರಕಾರ ಟಾಮ್ ಸವನ್ನು ಸಂತೋಶದಿಂದಲೇ ಸ್ವೀಕರಿಸಿದ್ದ ಆದ್ದರಿಂದಲೇ ತನಗೆ ಆ ರೀತಿಯ ಅನುಭವವಾಯಿತು ಎಂದುಕೊಂಡಳು ಅವಳು. ಟಾಮ್ ಕೊನೆಯ ದಿನಗಳಲ್ಲಿ. ಅನುಭವಿಸಿದ ಕಷ್ಟಗಳನ್ನು ಕಂಡಾಗ ಸಾವೇ ಅವನಿಗೆ ಸುಖಕರವಾಗಿತ್ತು ಎನ್ನಿಸುತ್ತದೆ.

ಟಾಮ್ ರಾತ್ರಿ ಮಲಗುವ ಮುನ್ನ ತಮ್ಮ ಹಣೆಯ ಮೇಲೆತನ್ನ ಹೆಬ್ಬೆರಳಿನಿಂದ ಶಿಲುಬೆಯ ಗುರುತನ್ನು ಮಾಡಿ ಮುತ್ತುಕೊಟ್ಟು ಹೋಗುತ್ತಿದ್ದನು ಅಯಲೀನ್, ಕ್ಯಾರಲ್ ಮತ್ತು ಮಕ್ಕಳು ಎಮ, ಜುಡ್ ಮತ್ತು ರುಬಿ ಸದಾ

ನೆನಪಿಸಿಕೊಳ್ಳುತ್ತಿರುತ್ತಾರೆ. ಟಾಮನು ತೀರಿಕೊಳ್ಳುವ ಹಿಂದಿನ ರಾತ್ರಿ ಜುಡ್ ಕೂಡ ಅದೇ ರೀತಿ ತನ್ನಜ್ಜನ ಹಣೆಯ ಮೇಲೆ ಶಿಲುಬೆಯ ಗುರುತನ್ನು ಮಾಡಿ ಬಂದಿದ್ದಳು ಎಂದು ಅಯಲೀನ್ ಹೇಳುತ್ತಿದ್ದಳು.

ಅಂತಿಮ ಕ್ರಿಯೆಗಳ ಸಂದರ್ಭದಲ್ಲಿ ಚರ್ಚಿನ ಆರ್ಗನ್ ವಾದಕ ಮೈಕೇಲ್ ವಿಲಿಯಮ್ಸ್, ಟಾಮನು ಸೌತ್ ಪೆಸಿಫಿಕ್ ನಲ್ಲಿ ಬಹುವಾಗಿ ಮೆಚ್ಚಿಕೊಂಡಿದ್ದ 'ವಸಂತಕಾಲದ ಮೊದಲು' ಎಂಬ ಹಾಡನ್ನು ನುಡಿಸಿದ. ಅಯಲೀನ್ ಮತ್ತು ಕ್ಯಾರಲ್ ಅದನ್ನು ಕೇಳಿ ಅಳತೊಡಗಿದರು, ಆದರೆ ಸಂಗೀತ ಮತ್ತು ನಾಟಕಗಳಲ್ಲಿ ಬಹುವಾಗಿ ತೊಡಗಿಕೊಂಡಿದ್ದ ಟಾಮನ ಮನೋಭವಕ್ಕೆ ಸೂಕ್ತವಾದ ವಿದಾಯಗೀತೆಯದು. ಬಲೀಪೀಠದ ಮೇಲೆ ಪ್ರೀತಿಯ ಕ್ಲಾರಿಯನೆಟ್ ವಾದ್ಯವನ್ನು ಇಟ್ಟಿದ್ದೆವು. ಕಾಕತಾಳೀಯ ಎಂಬಂತೆ ಮೋಡಗಳ ಮರೆಯಿಂದ ಹೊಂಬಣ್ಣದ ಕಿರಣವೊಂದು ಕಿಟಕಿಯಿಂದ ತೂರಿ ಬಂದು ಸರಿಯಾಗಿ ಕ್ಲಾರಿಯನೆಟ್ ಮೇಲೇ ಬಿದ್ದಿತ್ತು. ಎಲ್ಲರೂ ಅ ದೃಶ್ಯವನ್ನು ನೋಡಿ ಭಾವುಕರಾದರು. ಅಂತಿಮ ಕ್ರಿಯೆಗಳು ಸುಗಮವಾಗಿ ನಡೆದವು. ಆ ನಂತರ ನಮ್ಮ ಕುಟುಂಬದ ಎಲ್ಲರೂ ಮತ್ತು ಸ್ನೇಹಿತರು ನಮ್ಮ ಮನೆಗೆ ಬಂದು ಹೋದರು.

**ಲೇಖಕರ ಪರಿಚಯ :**

ಯಾನ್ ರಫ್-ಓ'ಹರ್ನ್ ಜಪಾನೀಯರು 1942ರಲ್ಲಿ ದಾಳಿ ಮಾಡಿ ಜಾವಾ ದ್ವೀಪವನ್ನು ವಶಪಡಿಸಿಕೊಂಡಾಗ ಇಂಡೊನೀಸಿಯಾದಲ್ಲಿನ ಡಚ್ ವಸಾಹತಿನಲ್ಲಿ ಅರಳಿದ್ದ ಯಾನ್ ರಫ್-ಓ'ಹರ್ನಳ ಬಾಲ್ಯದ ಸರಳವಾದ ಸಹಜ ಸುಂದರ ಕನಸುಗಳು ಕಮರಿಹೋದವು. ಅವಳ ತಾಯಿ ಮತ್ತು ಇಬ್ಬರು ತಂಗಿಯರೊಡನೆ ಅವಳನ್ನೂ ಅಂಬರವಾ ಸೆರೆಮನೆ ಶಿಬಿರದಲ್ಲಿ ಬಂದಿಯಾಗಿಟ್ಟರು. ಫೆಬ್ರವರಿ 1944ರಲ್ಲಿ, ಆಗಷ್ಟೆ ಇಪ್ಪತ್ತೊಂದು ವರ್ಷ ತುಂಬಿದ ಸುಂದರ ತರುಣೀ, ಯಾಳನಳನ್ನು ಶಿಬಿರದಿಂದ ಬಲಾತ್ಕಾರವಾಗಿ ಕರೆದೊಯ್ದು ಜಪಾನ್ ಸೈನ್ಯಕ್ಕೆಂದೇ ಮೀಸಲಾಗಿದ್ದ ವೇಶ್ಯಾ ಗೃಹದಲ್ಲಿ ಲೈಂಗಿಕ ಗುಲಾಮಗಿರಿಗೆ ತಳ್ಳಿದರು.

ತಾನು ಅನುಭವಿಸಿದ ಸಂಕಟ, ನೋವು ಅವಮಾನಗಳನ್ನು ಸಾರ್ವಜನಿಕರೆದುರು ಹೇಳುವ ಮುನ್ನ ಅವಳು ದಶಕಗಳು ಗತಿಸಿದರೂ ನೋವಿನ ತೀವ್ರತೆ ತಗ್ಗಿರದ ಅವಮಾನಕವಾದ, ನಾಚಿಕೆಗೇಡಿನ ಆ ಎಲ್ಲ ಘಟನೆಗಳನ್ನೂ ಮಕ್ಕಳು, ಮೊಮ್ಮಕ್ಕಳೊಡನೆ ಹಂಚಿಕೊಳ್ಳಲೇಬೇಕಿತ್ತು. ಆದರೆ

ಅವರೆದುರು ಕುಳಿತು ಹೇಳುವುದಾದರೂ ಹೇಗೆ? ಬರವಣಿಗೆಯ ಮೂಲಕ ಹಂಚಿಕೊಳ್ಳುವುದು ಸೂಕ್ತ ಎನ್ನಿಸಿತು.

ಹಾಗೆ ಹೊರಬಂದ ಅವಳ ಆತ್ಮಚರಿತ್ರೆ '50 ಇಯರ್ಸ್ ಆಫ್ ಸೈಲೆನ್ಸ್' ಈಗಾಲೇ ಜಪಾನ್ ಮತ್ತು ಇಂಡನೇಸಿಯಾ ಭಾಷೆಗಳಿಗೆ ಅನುವಾದವಾಗಿದೆ. ಆದೇ ಶೀರ್ಷಿಕೆಯೊಡನೆ ಸಿದ್ಧವಾದ ಅವಳ ಬದುಕಿನ ಕುರಿತ ಸಾಕ್ಷ್ಯಚಿತ್ರಕ್ಕೆ ಇದುವರೆಗೆ ಅನೇಕ ಪ್ರಶಸ್ತಿಗಳೂ ದೊರೆತಿವೆ. ಯಾನಳ ಜೀವನವು ಅವಳ ಅಂತಃಸತ್ವ ಮತ್ತು ದೃಢವಾದ ನಂಬಿಕೆಗಳ ಯಶೋಗಾಥೆಯೂ ಹೌದು.

**ಅನುವಾದ : ಅರುಣ್**

ಶಿವಮೊಗ್ಗ ಜಿಲ್ಲೆಯ ಸೊರಬದಲ್ಲಿ ಆರಂಭದ ವಿಧ್ಯಾಭ್ಯಾಸದ ನಂತರ ಸಾಗರದಲ್ಲಿನ ಲಾಲ್ ಬಹದೂರ್ ವಿಜ್ಞಾನ, ಕಲಾ ಮತ್ತು ಸೊಲಬಣ್ಣ ಶೆಟ್ಟಿ ವಾಣಿಜ್ಯ ಕಾಲೇಜಿನಲ್ಲಿ ವಿಜ್ಞಾನ ಪದವಿ. ಕೆಲವು ಕಾಲ ರೈಲ್ವೇಯಲ್ಲಿ ಸಹಾಯಕ ಸ್ಟೇಷನ್ ಮಾಸ್ಟರ್ ಕೆಲಸ. ಮನಸ್ಸಿಗೆ ಒಗ್ಗದ ಆ ಕೆಲಸ ಬಿಟ್ಟು ಪತ್ರಿಕೋದ್ಯಮದತ್ತ ಹೊರಳಿದರು. ತೀರ್ಥಹಳ್ಳಿಯ 'ಛಲಗಾರ' ಪತ್ರಿಕೆಯ ಮೂಲಕ ಪತ್ರಿಕೋದ್ಯಮಕ್ಕೆ ಪ್ರವೇಶ. ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯಲ್ಲಿ ಶಿವಮೊಗ್ಗ ಜಿಲ್ಲಾ ವರದಿಗಾರನಾಗಿ 1980ರಲ್ಲಿ ಸೇರಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿ ಅದೇ ಪತ್ರಿಕೆ ಕರ್ನಾಟಕ ಸ್ಥಾನಿಕ ಸಂಪಾದಕನಾಗಿ ಕೆಲಸ ಮಾಡಿ 2012ರಲ್ಲಿ ನವೃತ್ತನಾಗಿ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಕರ್ನಾಟಕ ವಿವಿಧ ಪತ್ರಿಕೆಗಳಲ್ಲಿ ಸಣ್ಣ ಕತೆಗಳು ಪ್ರಕಟವಾಗಿವೆ. 'ಅರೆ ಶತಮಾನದ ಮೌನ' ಪ್ರಕಟವಾಗುತ್ತಿರುವ ಮೊದಲ ಅನುವಾದಿತ ಕೃತಿ.

## 4.4 ಓದು ಪಠ್ಯ: ಪೈಪೋಟಿಗೆ ಸಜ್ಜಾಗುತ್ತಿರುವ ದೇಶ

**–ಎ.ಪಿ.ಜೆ ಅಬ್ದುಲ್ ಕಲಾಂ**

ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಪೈಪೋಟಿಯೇ ಇಂಧನ. ಪೈಪೋಟಿಯು ಜ್ಞಾನದಿಂದ ಶಕ್ತಿಯನ್ನು ಹೊಂದುವುದು ಜ್ಞಾನದ ಮುನ್ನಡೆ. ಮುನ್ನಡೆ ತಂತ್ರಜ್ಞಾನದಿಂದ ಹಾಗೂ ಆವಿಷ್ಕಾರಗಳಿಂದ.

ಭಾರತದ ಜನಸಂಖ್ಯೆಯಲ್ಲಿ ಬಹುಪಾಲು ಜನರು ಹಳ್ಳಿಗಳಲ್ಲಿ ಬದುಕುತ್ತಾರೆ. ನಮ್ಮ ವಿಜ್ಞಾನಿಗಳ ಮುಂದೆ ಇರುವುದನ್ನು ಅದೇ ದೊಡ್ಡ ಸವಾಲು: ತಂತ್ರಜ್ಞಾನದ ಫಲಿತಾಂಶಗಳನ್ನು ಹಳ್ಳಿಗಳಲ್ಲಿ ಜೀವನ ನಡೆಸುತ್ತಿರುವ 75 ಕೋಟಿ ಜನರ ಬದುಕನ್ನು ಸಂಪನ್ನಗೊಳಿಸಲು ಸಾಧ್ಯವಾಗುವ ರೀತಿಯಲ್ಲಿ ತಲುಪಿಸುವುದು.

ವಿಜ್ಞಾನ ಹಾಗೂ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ಇರುವುದೇ ಯಾವುದೇ ದೇಶ ಅನಭಿವೃದ್ಧಿಯಿಂದ ಅಭಿವೃದ್ಧಿ ಹೊಂದಿದ ದೇಶ ಎಂಬ ಸ್ಥಾನಕ್ಕೆ ಮುನ್ನಡೆಯುವುದಕ್ಕೆ ಇರುವ ಮಾರ್ಗವೆಂದು ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದ ನನ್ನ 50 ವರ್ಷಗಳ ವೃತ್ತಿಜೀವನದಲ್ಲಿ ನಾನು ಕಂಡುಕೊಂಡಿದ್ದೇನೆ. ನಾವು ಗಮನಹರಿಸಬೇಕಾದ ಮೂರು ಮುಖ್ಯ ಕ್ಷೇತ್ರಗಳಿವೆ. ಒಂದನೆಯದ್ದು ನ್ಯಾನೋ ತಂತ್ರಜ್ಞಾನ, ಎರಡನೆಯದ್ದು ಇ–ಆಡಳಿತ ಹಾಗೂ ಮೂರನೆಯದ್ದು ಜೈವಿಕ–ಡೀಸೆಲ್. ಆವಿಷ್ಕಾರಕ್ಕೆ ಅನುಕೂಲಕರ ಪರಿಸರವನ್ನು ನಿರ್ಮಿಸುವುದಕ್ಕೆ ಪೂರಕವಾಗಿ ರಾಷ್ಟ್ರಪತಿ ಭವನದಿಂದಲೇ ಯಾಕೆ ಪ್ರಯತ್ನ ನಡೆಸಬಾರದೆಂದು ನಾನು ಅಲ್ಲಿಂದಲೇ ಈ ಕುರಿತು ಕೆಲಸ ಕಾರ್ಯಗಳನ್ನು ಪ್ರಾರಂಭಿಸಿದೆ.

ಸಂಕೀರ್ಣವಾದ ಹಾಗೂ ನವೀನ ಉಪಕ್ರಮಗಳಿಗೆ ಅನೇಕ ವಿಶೇಷಜ್ಞರ ಸಮ್ಮಿಳಿತ ಆತೋಚನೆಯೂ ವಿವಿಧ ಅಭಿಪ್ರಾಯಗಳ ಪರಿಗಣನೆಯೂ ಕಾರ್ಯಕ್ರಮ ಹಾಗು ಯೋಜನೆಗಳ ಕಾರ್ಯಾಚರಣೆಗೆ ಅನೇಕ ಜನರ ಕೈಜೋಡಣೆಯೂ ಬೇಕಾಗುತ್ತದೆ, ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಭವನ ಹಾಗೂ ಹೈದರಾಬಾದಿನಲ್ಲಿರುವ ರಾಷ್ಟ್ರಪತಿಗಳ ಏಕಾಂತ ಸ್ಥಳವಾದ ರಾಷ್ಟ್ರಪತಿ ನಿಲಯಂಗಳಲ್ಲಿ ಮೂರು ವಿಶಿಷ್ಟವಾದ ಘಟನಾವಳಿ ನಡೆಯಿತು. ಅವುಗಳೆಂದರೆ 1) ನ್ಯಾನೋ ತಂತ್ರಜ್ಞನದ ಸಮ್ಮೇಳನ, 2) ಇ–ಆಡಳಿತ ಸಮ್ಮೇಳನ ಹಾಗೂ 3) ಜೈವಿಕ–ಡೀಸೆಲ್ ಸಮ್ಮೇಳನ. ದೇಶದ ಭವಿಷ್ಯದ ಮೇಲೆ ಬೀರಬಹುದಾದ ಸಂಭಾವ್ಯ ಪರಿಣಾಮಗಳ ನೆಲೆಯಿಂದ ನೋಡಿದರೆ ಇವು ಮೂರೂ ಅತ್ಯಂತ ಮಹತ್ವದ ವಿಷಯಗಳೇ ಸರಿ.

ಕೃಷಿ, ಔಷಧಿ, ಬಾಹ್ಯಾಕಾಶ ಹಾಗೂ ಇಂಧನ ಕ್ಷೇತ್ರಗಳಲ್ಲಿ ನ್ಯಾನೋ

ತಂತ್ರಜ್ಞಾನವನ್ನು ಹೂಡುವ ಉದ್ದೇಶದಿಂದ ಸಂಶೋಧನೆ ಹಾಗೂ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ವಿಷಯವನ್ನು ಹಾಗೂ ಇಂಥ ಸಂಶೋಧನಗೆಗಳ ಭವಿಷ್ಯತ್ ಸ್ವರೂಪದ ಬಗ್ಗೆ ಬೆಂಗಳೂರಿನ ಜವಾಹರಲಾಲ ನೆಹರೂ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್ ಸೆಂಟರ್‌ನ ಗೌರವಾಧ್ಯಕ್ಷರಾದ ಪ್ರೊ. ಸಿ.ಎನ್.ಆರ್ ರಾವ್ ಅವರೊಂದಿಗೆ ಹಾಗೂ ಇತರೇ ದೇಶೀಯ ಹಾಗೂ ವಿದೇಶಿ ತಜ್ಞರೊಂದಿಗೆ ಬಹುಕಾಲದಿಂದ ಚರ್ಚೆ ನಡೆಸುತ್ತಿದ್ದೇನೆ. ಈ ಚರ್ಚೆಗಳ ಪರಿಣಾಮವಾಗಿ ರಾಷ್ಟ್ರಪತಿ ಭವನದಲ್ಲಿ ಒಂದು ಇಡೀ ದಿನದ ಸಮ್ಮೇಳನವನ್ನು ನಾವು ನಡೆಸಿದೆವು. ಇಲ್ಲಿ ನಡೆದ ಚರ್ಚೆ, ಸಂವಾದಗಳ ಪರಿಣಾಮವಾಗಿ ಒಂದು ಸಾವಿರ ಕೋಟಿ ರೂಪಾಯಿಗಳ ಒಂದು ಸಮನ್ವಯಿತ ಕಾರ್ಯಕ್ರಮಕ್ಕೆ ಮಂಜೂರಾತಿ ದೊರೆಯಿತು. ಈ ಕಾರ್ಯಕ್ರಮವು ಕೆಲವು ಕ್ಷೇತ್ರಗಳಲ್ಲಿ ಹೊಸ ಸಂಶೋಧನೆಗೂ ಅಭಿವೃದ್ಧಿಗೂ ದಾರಿಮಾಡಿಕೊಟ್ಟಿತು. ಬನಾರಸ್ ಹಿಂದೂ ವಿಶ್ವವಿದ್ಯಾಲಯದವರು ಒಂದು ಸರಳ ಪದ್ದತಿಯನ್ನು ರೂಪಿಸಿದ್ದು ಅದರಲ್ಲಿ ಕಾರ್ಬನಿನ ನ್ಯಾನೋ-ಟ್ಯೂಬ್ ಜಾಳಿಗೆ (ಫಿಲ್ಟರ್) ಗಳ ಮೂಲಕ ನೀರಿನಿಂದ ಸೂಕ್ಷ್ಮಾಣು ರೂಪದ ಮಾಲಿನ್ಯವನ್ನು ತೆಗೆದುಹಾಕುವುದು ಸಾಧ್ಯವಾಗಿದೆ, ಅಲ್ಲದೆ ಇಂತಹುದೇ ಉಪಕರಣದ ಮೂಲಕ ಪೆಟ್ರೋಲಿಯಂನಿಂದ ಹೈಡ್ರೋಕಾರ್ಬನ್ ಅನ್ನು ತೆಗೆಯಲೂ ಸಾಧ್ಯವಾಗಿದೆ. ಈ ಸಂಶೋಧನೆಗಳ ವಿಷಯ ತಿಳಿದು ನನಗೆ ಆನಂದವಾಯಿತು. ದೆಹಲಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹಾಗೂ ತಂತ್ರಜ್ಞರು ಖಾಸಗಿ ಕಂಪೆನಿಯಾದ ಡಾಬರ್‌ನೊಂದಿಗೆ ಸಹಭಾಗಿತ್ವ ದುರ್ಮಾಂಸ (ಗಡ್ಡೆ) ದ ಜೀವಕಣಗಳಿಗೆ ನೇರವಾಗಿ ಔಷಧಿಯನ್ನು ತಲುಪಿಸುವ ಪದ್ಧತಿಯನ್ನು ರೂಪಿಸಿದ್ದಾರೆ.

ಭಾರತವು ಮುಂದುವರಿದ ದೇಶ ಆಗುವುದಕ್ಕೆ ಹಾಗೂ ಜ್ಞಾನಾ ಧಾರಿತ ಸಮಾಜವಾಗಿ ನಾವು ವಿಕಾಸವಾಗುವುದಕ್ಕೆ ಸಮರ್ಥವೂ, ಫಲಿತಾಂಶ ನೀಡುವಂತಹುದು ಹಾಗೂ ಪಾರದರ್ಶಕವಾದ ಆಡಳಿತವು ಅತ್ಯಂತ ಅಗತ್ಯ. ರಾಜ್ಯ, ಜಿಲ್ಲೆ ಹಾಗೂ ಗ್ರಾಮಗಳಲ್ಲಿ ವಿಕೇಂದ್ರೀಕೃತ ಆಡಳಿತವುಳ್ಳ – ಆದರೆ ಸಮಗ್ರವಾಗಿ ಸಮ್ಮಿಳಿತವಾದ ಆಡಳಿತ ಪದ್ಧತಿ ಇದಕ್ಕೆ ಅಗತ್ಯ. ಇದನ್ನು ಯೋಜಿಸಿ ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳಲ್ಲದೆ ಸಾರ್ವಜಿಕ ಹಾಗೂ ಖಾಸಗಿ ಕ್ಷೇತ್ರದವರ ಸಹಕಾರ-ಸಹಭಾಗಿತ್ವ ಬೇಕಾಗುತ್ತದೆ, ಇದನ್ನು ದೃಷ್ಟಿಯಲ್ಲಿರಿಸಿಕೊಂಡು ಸಂಬಂಧಿಸಿದ ಎಲ್ಲಾ ಸಂಸ್ಥೆಗಳನ್ನು ಒಳಪಡಿಸಿಕೊಂಡು ಇ-ಆಡಳಿತದ ಕುರಿತು ರಾಷ್ಟ್ರಪತಿ ಭವನದಲ್ಲಿ ಸಮ್ಮೇಳನವೊಂದನ್ನು ಸಂಘಟಿಸಲಾಯಿತು. ಈ ವಿಷಯದಲ್ಲಿ ನಾನು ನ್ಯಾಯಾಂಗದವರ, ಲೆಕ್ಕಪತ್ರ ಪರಿಶೋಧಕರ ಹಾಗೂ ಇತರೇ ಹಲವು ಕ್ಷೇತ್ರಗಳ ಪರಿಣತರ ಸಭೆಗಳಲ್ಲಿ

ಮಾತನಾಡಿದ್ದೇನೆ. ಕಾಮನ್ ವೆಲ್ತ್ ಸಭೆಯಲ್ಲೂ ಒಂದು ನಿರೂಪಣೆ ಮಂಡಿಸಲಾಗಿತ್ತು. ಈ ಕುರಿತು ತುಂಬಾ ಮೆಚ್ಚಿಕೆಯೂ ಬಂದಿತ್ತು. ಎಲ್ಲಾ ನಾಗರಿಕರಿಗೂ ಸ್ಮಾರ್ಟ್ ಗುರುತಿನ ಕಾರ್ಡ್ ಇರುವ ಇ–ಆಡಳಿತ ಪದ್ಧತಿ ಜಾರಿಗೆ ಬಂದು ಎಲ್ಲರಿಗೂ ಸಮರ್ಪಕ, ಕ್ಷಿಪ್ರ ಸೇವೆಯ ಯುಗ ಬರಲಿ ಎಂಬುದು ನನ್ನ ಆಶಯ. ಇದರಿಂದ ಭಯೋತ್ಪಾದನೆ, ತೀವ್ರಗಾಮಿ ಚಟುವಟಿಕೆ ಇದೆಲ್ಲವನ್ನೂ ನಿಯಂತ್ರಿಸುವುದು ಸಾಧ್ಯ.

ಮುಂದಿನ ದಿನಗಳಲ್ಲಿ ಘರ್ಷಣೆಗೆ ಕಾರಣವಾಗುವ ಎರಡು ವಿಷಯಗಳೆಂದರೆ ನೀರು ಮತ್ತು ಇಂಧನ ಎಂದು ನಾನು ಭಾವಿಸಿದ್ದೇನೆ. ಒಂದು ರಾಜ್ಯಪಾಲರ ಸಮ್ಮೇಳನದಲ್ಲಿ ಮುಖ್ಯವಾಗಿ ನೀರಿನ ವಿಷಯವೇ ಚರ್ಚಿತವಾಯಿತು. ಅದರಲ್ಲಿ ಜಲಮೂಲಗಳ ನಿರ್ವಹಣೆ ಹಾಗೂ ಸಂರಕ್ಷಣೆ, ಈ ಸಂಪನ್ಮೂಲದ ಸಂರಕ್ಷಣೆ, ರಾಜ್ಯದೊಳಗೆ ಹಾಗೂ ರಾಷ್ಟ್ರಮಟ್ಟದಲ್ಲಿ ನದಿಗಳ ಸಂಪರ್ಕದ ಜಾಲವನ್ನು ರಚಿಸುವುದು ಇತ್ಯಾದಿ ಚರ್ಚೆಗೆ ಬಂದವು. ಭೂಗರ್ಭದ ಇಂಧನ ನಿಕ್ಷೇಪಗಳ ಅವಲಂಬನೆ ಕಡಿಮೆ ಮಾಡಿ ನವೀನ ಇಂಧನ ಮೂಲಗಳನ್ನು ಹುಡುಕುವ "ಇಂಧನ ಸ್ವಾತಂತ್ರ್ಯ" ವೆಂಬ ಕಲ್ಪನೆ ಬಗ್ಗೆ ನಾನು ಅನೇಕ ಕಾಲದಿಂದ ಮಾತನಾಡುತ್ತಿದ್ದೇನೆ. ಜೈವಿಕ ಇಂಧನವನ್ನು ತಯಾರಿಸುವುದೇ ಈ ನಿಟ್ಟಿನಲ್ಲಿ ನಮಗಿರುವ ಒಂದು ಮಹತ್ವದ ಕಾರ್ಯಸಾಧ್ಯ ಮಾರ್ಗ. ಇದನ್ನು ದೇಶದ ಗಮನಕ್ಕೆ ತರಲು ಹಾಗೂ ಇದರ ಎಲ್ಲಾ ಅಂಶಗಳನ್ನೂ ಸಮಗ್ರ ರೂಪದಲ್ಲಿ ಚರ್ಚಿಸಿ, ಪರಿಶೀಲಿಸಲು ನಾವು ರಾಷ್ಟ್ರಪತಿ ನಿಲಯಂನಲ್ಲಿ ಒಂದು ಸಮ್ಮೇಳನವನ್ನು ನಡೆಸಿದೆವು. ಈ ಕ್ಷೇತ್ರದಲ್ಲಿ ಅನುಭವವಿರುವ ಹಾಗೂ ಜೈವಿಕ ಇಂಧನದ ಭವಿಷ್ಯತ್ ಬಳಕೆದಾರರೂ ಆಗಿರುವ ರೈತರು ಸಹಾ ಇದರಲ್ಲಿ ಭಾಗವಹಿಸಿದ್ದರು. ಜೈವಿಕ–ಇಂಧನದ ಮೂಲವಾಗಿ ಬೆಳೆಯಬಹುದಾದ ಸಸ್ಯಗಳ ಬೀಜದ ಸ್ವರೂಪ ಹಾಗು ಗುಣಗಳು ಮತ್ತು ನೀರಿನ ಅಗತ್ಯಗಳ ಬಗ್ಗೆ ನಡೆಸಲಾದ ಸಂಶೋಧನೆಗಳ ಕುರಿತು ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಗಳು ವಿವರಣೆ ನೀಡಿದರು. ಫಲವತ್ತತೆಯಿಲ್ಲದ ಪಾಳು–ಬಂಜರು ಭೂಮಿಗಳನ್ನು ಈ ಸಸ್ಯಗಳ ಬೆಳೆಗೆ ಕೊಡುವ ಕುರಿತು ಸರಕಾರದ ಅಧಿ ಕಾರಿಗಳು ವಿವರಿಸಿದರು. ಯಂತ್ರಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಡೀಸೆಲ್ ಮತ್ತು ಜೈವಿಕ ಡೀಸೆಲ್‌ಅನ್ನು ಬೆರೆಸುವ ಬಗ್ಗೆ ಹಾಗೂ ಡೀಸೆಲ್‌ಗೆ ಬೆರೆಸುವ ಜೈವಿಕ ಡೀಸೆಲ್ ಅನುಪಾತ ಯಾವ ಮಟ್ಟಕ್ಕೆ ಬಂದರೆ ಯಂತ್ರದ ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕು ಎಂಬ ಬಗ್ಗೆ ವಾಹನ ವಿನ್ಯಾಸಕಾರರು ಮಾತನಾಡಿದರು. ವ್ಯವಹಾರ–ವಾಣಿಜ್ಯಕ್ಕೆ ಸಂಬಂಧಪಟ್ಟವರು ಜೈವಿಕ ಇಂಧನ ತಯಾರಿಗೆ ಅಗತ್ಯವುಳ್ಳ ಬಂಡವಾಳ ಹಾಗೂ ಈ ವ್ಯವಹಾರದಲ್ಲಿ ನಷ್ಟದ

ಗಡಿಯನ್ನು ಯಾವಾಗ ದಾಟಬಹುದು ಎಂಬುದನ್ನು ವಿಶ್ಲೇಷಣೆ ಮಾಡಿದರು. ಜೈವಿಕ–ಇಂಧನ ಬಳಕೆಯ ಕುರಿತಾದ ನನ್ನ ಕಲ್ಪನೆಯನ್ನು ನಾನು ಮಂಡಿಸಿದೆ. ಸಮ್ಮೇಳನದ ಕೊನೆಯಲ್ಲಿ ಕೆಲವು ಶಿಫಾರಸ್ಸುಗಳನ್ನು ತಯಾರಿಸಿ ಅವುಗಳನ್ನು ಸಂಬಂಧ ಪಟ್ಟವರಿಗೆಲ್ಲಾ ಕಳಿಸಲಾಯಿತು. ಇದೀಗ ಸರಕಾರವು ಒಂದು ಜೈವಿಕ –ಇಂಧನ ನೀತಿಯನ್ನು ರೂಪಿಸಿರುವುದು ನನಗೆ ಸಂತೋಷ ಉಂಟುಮಾಡಿದೆ.

ಈ ಮೂರು ಸಮ್ಮೇಳನಗಳಲ್ಲದೆ ರಾಷ್ಟ್ರಪತಿ ಭವನದಿಂದಲೇ ಹುಟ್ಟಿದ ಇನ್ನೊಂದು, ತಂತ್ರಜ್ಞಾನಕ್ಕೆ ಸಂಬಂಧಪಟ್ಟ, ಸಮ್ಮೇಳನವನ್ನೂ ನಡೆಸಲಾಯಿತು. 2006 ರಲ್ಲಿ ಇಸ್ರೋ ಅಧ್ಯಕ್ಷರು ಚಂದ್ರಯಾನ ಯೋಜನೆಯೂ ಸೇರಿದಂತೆ ಬಾಹ್ಯಾಕಾಶದ ತಮ್ಮ ಭವಿಷ್ಯತ್ ಯೋಜನೆಯ ಬಗ್ಗೆ ನನಗೆ ಮಾಹಿತಿ ನೀಡಿದರು. ಈ ಚಂದ್ರಯಾನ ಕಾರ್ಯಕ್ರಮವು ಇನ್ನಷ್ಟು ಬಾಹ್ಯಾಕಾಶ ಶೋಧ ಕಾರ್ಯಕ್ರಮಗಳಿಗೂ ಮಾನವಸಹಿತ ಉಪಗ್ರಹ ಉಡಾವಣಾ ಕಾರ್ಯಕ್ರಮಗಳಿಗೂ ಮೊದಲ ಹೆಜ್ಜೆ ಎಂದೇ ನಾನು ಭಾವಿಸಿದ್ದೇನೆ. ಚಂದ್ರಯಾನ ಕಾರ್ಯಕ್ರಮದಲ್ಲಿ ಬಾಹ್ಯಾಕಾಶ ಉಪಗ್ರಹವು ಚಂದ್ರನಿಗೆ ಸುತ್ತು ಹಾಕುತ್ತಾ ಚಂದ್ರನ ನೆಲದ ರಾಸಾಯನಿಕ, ಲವಣಗಳ ಹಾಗೂ ಭೌಗೋಳಿಕ ಮಾಹಿತಿಗಳನ್ನು ಕಳಿಸುವುದು ಎಂದು ಅವರು ನನಗೆ ತಿಳಿಸಿದರು. ಈ ಉಪಗ್ರಹದಲ್ಲಿ ಅನೇಕ ವೈಜ್ಞಾನಿಕ ಉಪಕರಣಗಳನ್ನು ಕಳಿಸಲಾಗುವುದು, ಅವು ಯಾವುವು ಎಂದು ಇಸ್ರೋ ಅಂತಿಮಗೊಳಿಸುತ್ತಿದೆ ಎಂದೂ ಅವರು ಹೇಳಿದರು. ಚಂದ್ರನಲ್ಲಿಗೆ ಸಂಘಟಿತ ಪ್ರಾರಂಭಿಕ ಪ್ರಯೋಗ ಉಪಕರಣಗಳ ಗುಂಪನ್ನು ಕನಿಷ್ಠ ಒಂದು ಟೆಲಿಮಿಟ್ರಿ ವಾಹಿನಿಯೊಂದಿಗೆ ಕಳಿಸಬಹುದು, ಇದರಿಂದ ಚಂದ್ರನ ಮೇಲ್ಮೈಯಲ್ಲಿನ ಮಾಹಿತಿಯನ್ನು ನೇರವಾಗಿ ಸಂಗ್ರಹಿಸಲು ಸಾಧ್ಯವಾಗುವುದು. ಟೆಲಿಮಿಟ್ರಿ ಚಾನೆಲ್‌ನಿಂದ ಅಲ್ಲಿನ ಸಾಂದ್ರತೆಯ ಅಥವಾ ಒತ್ತಡ ಇತ್ಯಾದಿ ಅಳೆಯಲು ಸಾಧ್ಯವಾಗುವುದು ಎಂದು ನಾನು ಸೂಚಿಸಿದೆ. ಈ ಉಪಕರಣಗಳನ್ನು ಕಳಿಸಲು ಅಧ್ಯಕ್ಷರು ಒಪ್ಪಿಕೊಂಡರು. ಇದರಲ್ಲಿ ಚಂದ್ರನ ಮೇಲೆ ವಾಹನವೊಂದು ಇಳಿದು ಮಾಹಿತಿ ಸಂಗ್ರಹಿಸುವ ಪ್ರಯೋಗವನ್ನೂ ಚಂದ್ರಯಾನ ಕಾರ್ಯಕ್ರಮದಲ್ಲಿ ಸೇರಿಸಲಾಯಿತು. ಈ ಚಂದ್ರ ವಾಹನವು 2008 ರ ನವೆಂಬರ್ 14 ರಂದು ಚಂದ್ರನ ಮೇಲೆ ಮೊದಲೇ ಹೊತ್ತು ಮಾಡಿದ ಸ್ಥಳದಲ್ಲೇ ನಿರಾಯಾಸವಾಗಿ ಇಳಿದದ್ದು ನನಗೆ ತುಂಬಾ ಸಂತೋಷ ಉಂಟುಮಾಡಿತು. ಇಂತಹ ಒಂದು ಅತ್ಯುತ್ತಮ ಸಾಧನೆ ಮಾಡಿದ ಇಸ್ರೋ ತಂಡಕ್ಕೆ ನಾನು ಅಭಿನಂದನೆಗಳನ್ನು ಹೇಳಿದೆ.

ಇವೆರಡು ತುಂಬಾ ತಾಂತ್ರಿಕ ಸ್ವರೂಪದ್ದಾದ ಉಪಕ್ರಮಗಳ ರಾಷ್ಟ್ರಪತಿ

ಭವನದ ಸೂಚನೆಯ ಅನುಸಾರ ಕೈಗೊಳ್ಳಲಾಯಿತು. ಇಂತಹ ಭವಿಷ್ಯತ್ ಭರವಸೆಗಳ ಕಾರ್ಯಕ್ರಮದಲ್ಲಿ ಭಾಗೀದಾರನಾಗಲು ನನಗೆ ಸಂತೋಷವಿದೆ ನಾನು 2011 ನೇ ಸಾಲಿನ ಜಾಗತಿಕ ಅನ್ವೇಷಣಾ ವರದಿಯನ್ನ ಪರಿಶೀಲಿಸುತ್ತಿದ್ದೆ. ಜಾಗತಿಕ ಅನ್ವೇಷಣಾ ಸೂಚ್ಯಂಕದ ಪ್ರಕಾರ ಸ್ವಿಟ್ಜರ್ ಲೆಂಡ್ 1, ಸ್ವೀಡನ್ 2, ಸಿಂಗಾಪುರ 3, ಹಾಂಗ್ ಕಾಂಗ್ 4 ಹಾಗೂ ಭಾರತ 62 ನೇ ಸ್ಥಾನದಲ್ಲಿತ್ತು. ಅನ್ವೇಷಣಾ ಸೂಚ್ಯಂಕಕ್ಕೂ ಸ್ಪರ್ಧಾತ್ಮಕತೆಗೂ ಸಂಬಂಧವಿದೆ. ಈಗ ಈ ಸೂಚ್ಯಂಕಕ್ಕೂ ಭಾರತದ ಸ್ಥಾನ 62 ಇದ್ದರೆ 2010–11 ರಲ್ಲಿ ಜಾಗತಿಕ ಸ್ಪರ್ಧಾತ್ಮಕತೆಯ ಸೂಚ್ಯಂಕದಲ್ಲಿ ಅದರ ಸ್ಥಾನ 56 ಇದ್ದಿತು. ಭಾರತವು 56 ನೇ ಸ್ಥಾನದಿಂದ ಮೇಲಕ್ಕೆ ಏರಿ ಮುಂದುವರಿದ ದೇಶಗಳ ಸೂಚ್ಯಂಕ ಸ್ಥಾನಗಳನ್ನು (10ರ ಒಳಗೆ) ಪಡೆಯಬೇಕಿದ್ದರೆ ನಾವು ದೇಶೀಯವಾದ ವಿನ್ಯಾಸ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು. ಈಗಿನ ಬೆಳವಣಿಗೆಯನ್ನು ಸಾಧಿಸಿರುವುದು ಬೇರೆ ಸ್ಥಳಗಳಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ಬಳಸಿಕೊಂಡು ಹಾಗೂ ಈ ತಂತ್ರಜ್ಞಾನಗಳನ್ನು ರೂಪಿಸಿರುವುದು ಹತ್ತರಿಂದ 15 ವರ್ಷಗಳ ಹಿಂದೆ ಕಂಡುಹಿಡಿಯಲಾದ ವೈಜ್ಞಾನಿಕ ಶೋಧನೆಗಳು ಹಾಗೂ ಪೇಟೆಂಟ್‌ಗಳ ಆಧಾರದಲ್ಲಿ. ಮುಂದುವರಿದ ದೇಶಗಳಲ್ಲಿ ಮಾಡಲಾದ ವೈಜ್ಞಾನಿಕ ಸಂಶೋಧನೆಗಳ ಆಧಾರದಲ್ಲಿ ರೂಪಿಸಲಾದ ತಂತ್ರಜ್ಞಾನಗಳು ಭಾರತಕ್ಕೆ ಕೊನೇ ಪಕ್ಷ ಹತ್ತು ವರ್ಷಗಳವರೆಗೆ ದೊರೆಯುವುದಿಲ್ಲ. ಆದ್ದರಿಂದ ಭಾರತದ ಜಾಗತಿಕ ಸ್ಪರ್ಧಾತ್ಮಕತೆಯನ್ನು ಅಗತ್ಯವುಳ್ಳ ಮಟ್ಟಕ್ಕೆ ಹೆಚ್ಚಿಸಲು ಸಂಶೋಧನೆಯು–ಅದೂ ಸಹ ಮೂಲ ವಿಜ್ಞಾನದಲ್ಲಿ ಅತ್ಯಗತ್ಯವಾದುದು. ಭಾರತವು ಅಗತ್ಯವುಳ್ಳ ತಂತ್ರಜ್ಞಾನವನ್ನು ತಾನೇ ರೂಪಿಸಿಕೊಂಡಂತಹ ಒಂದು ನಿದರ್ಶನವನ್ನು ನಾನು ಈ ಕೆಳಕೆ ಉಲ್ಲೇಖಿಸುತ್ತೇನೆ.

ಈಚೆಗೆ ನಾವು ಒಂದು ಮೈಲುಗಲ್ಲು ತಲುಪಿದೆವು. ಒಡೀಶಾ ತೀರದ ವೀಲರ್ ದ್ವೀಪದಲ್ಲಿ 50ಟನ್ ತೂಕದ 17.5ಮೀಟರ್ ಎತ್ತರದ ಭಾರೀ ಅಗ್ನಿ5 ಕ್ಷಿಪಣಿಯನ್ನು ಮೇಲ್ಮುಖವಾದ ಉಡಾವಣಾ ಭಂಗಿಯಲ್ಲಿ ನಿಲ್ಲಿಸುತ್ತಿದ್ದಂತೆ ಅಲ್ಲಿ ಸೇರಿದ ಹಾಗೂ ಅದಕ್ಕೆ ಸಂಬಂಧಪಟ್ಟವರೆಲ್ಲರ ಎದೆಗಳಲ್ಲೂ ಆತಂಕವೂ ನಿರೀಕ್ಷೆಗಳು ಮಡುಗಟ್ಟಿದ್ದವು. ಉಡಾವಣೆಗೆ ಮೊದಲಿನ ಪರೀಕ್ಷೆಗಳು ಪ್ರಾರಂಭವಾದವು. ಬೆಳಿಗ್ಗೆ 8.07 ಕ್ಕೆ ಕ್ಷಣಗಣನೆ (Countdown)ಗೆ ಚಾಲನೆ ನೀಡಲಾಯಿತು. ಕ್ಷಿಪಣಿಯ ಮೊದಲ ಹಂತಕ್ಕೆ ಅಗ್ನಿಸ್ಪರ್ಶವಾಗುತ್ತಲೇ ದೊಡ್ಡದಾದ ಬೆಂಕಿಯ ಉಂಡೆಯು ಜಿಗಿಯಿತು. ಅಗ್ನಿ5 ಕ್ಷಿಪಣಿಯು ತನ್ನ ಉಡಾವಣಾ ವೇದಿಕೆಯಿಂದ ಆಕಾಶಕ್ಕೆ ಜಿಗಿಯುತ್ತಿದ್ದಂತೆ ವಿಜ್ಞಾನಿಗಳು 'ಅಗ್ನಿ'ಯ ವ್ಯವಸ್ಥೆಗಳ ಸ್ಥಿತಿ ಹೇಗಿದೆಯೆಂದು ಧ್ವನಿವರ್ಧಕದಲ್ಲಿ, ಶಾಂತವಾದ ಸ್ವರದಲ್ಲಿ ಹೇಳತೊಡಗಿದರು.

ಅದರ ಸುತ್ತ ನೆರೆದಿದ್ದ ವೀಕ್ಷಕರಲ್ಲಂತೂ ಆತಂಕವು ಮನೆಮಾಡಿತ್ತು. 90 ಸೆಕೆಂಡು ಮುಗಿಯುತ್ತಲೇ ಅಗ್ನಿಯ ಮೊದಲನೇ ಹಂತವು ಉರಿದು ಪ್ರತ್ಯೇಕಗೊಂಡಿತು. ಕ್ಷಿಪಣಿಯು ಎಷ್ಟು ವೇಗದಲ್ಲಿ ಬಾಹ್ಯಾಕಾಶಕ್ಕೆ ನೆಗೆಯಬೇಕೆಂದು ನಿಗದಿ ಮಾಡಲಾಗಿತ್ತೋ ನಿಖರವಾಗಿ ಅಷ್ಟೇ ವೇಗದಲ್ಲಿ ಮೇಲಕ್ಕೆ ಪ್ರಯಾಣ ಮಾಡುತ್ತಿತ್ತು. ಅಷ್ಟರಲ್ಲಿ ಹೊಸತಾಗಿ ಸಂಯೋಜಿಸಿ ಅಳವಡಿಸಲಾದ ಎರಡನೇ ಹಂತವೂ ಉರಿದು ಕ್ಷಿಪಣಿಯಿಂದ ಪ್ರತ್ಯೇಕಗೊಂಡಿತು.

ಕೆಲವೇ ನಿಮಿಷಗಳಲ್ಲಿ ಕ್ಷಿಪಣಿಯು ಬಾಹ್ಯಾಕಾಶದಲ್ಲಿತ್ತು. ಅದು ದಕ್ಷಿಣಕ್ಕೆ ಹಾರುತ್ತ 2000 ಕಿ.ಮೀ ಪ್ರಯಾಣಿಸಿ ಭೂಮಧ್ಯರೇಖೆಯನ್ನು ದಾಟಿತು. ನಂತರ 3000 ಕಿ.ಮೀ ಪ್ರಯಾಣ ಮಾಡಿ ಮಕರ ಸಂಕ್ರಾಂತಿ ವೃತ್ತದಲ್ಲಿ ಬಾಹ್ಯಾಕಾಶದಿಂದ ಮತ್ತೆ ಭೂ ವಾತಾವರಣವನ್ನು ಪ್ರವೇಶಿಸಿ, ನಿಗದಿಯಾದಂತೆ ಆಫ್ರಿಕ ಖಂಡದ ದಕ್ಷಿಣ ತುದಿ ಹಾಗೂ ಆಸ್ಟ್ರೇಲಿಯಗಳ ನಡುವಿನ ಬಿಂದುವಿನಲ್ಲಿ ಸಮುದ್ರಕ್ಕೆ ಅಪ್ಪಳಿಸಿತು. ಉಡಾವಣೆಯ ನಂತರ ಸಮುದ್ರಕ್ಕೆ ಅಪ್ಪಳಿಸಲು ಅದು ಬರೇ 20 ನಿಮಿಷ ತೆಗೆದುಕೊಂಡಿತ್ತು. ಕ್ಷಿಪಣಿ ಸಂಚರಿಸಲು ನಿಗದಿ ಮಾಡಿದ ಮಾರ್ಗದ ಉದ್ದಕ್ಕೂ ಭಾರತದ ನೌಕಾಬಲದ ಯುದ್ಧನೌಕೆಗಳು ಅದರ ಸಂಚಾರದ ಮೇಲೆ ಕಣ್ಣಿಟ್ಟು ಗುರುತಿಸಿದವು. ಅದು ಸಮುದ್ರಕ್ಕೆ ಅಪ್ಪಳಿಸುವ ಘಟನೆಯನ್ನೂ ಗುರುತಿಸಲಾಯಿತು. ಕ್ಷಿಪಣಿಯು ಮೊದಲೇ ಗುರುತಿಸಿದ್ದ ಸ್ಥಳದ ವ್ಯಾಪ್ತಿಯಲ್ಲಿ ಸಮುದ್ರಕ್ಕೆ ಬಿದ್ದಿತ್ತು.

ಐಜಿಎಂಡಿಪಿಗೆ 1983 ರಲ್ಲಿ ಮಂಜೂರಾತಿ ದೊರೆತಿದ್ದು 400 ಕೋಟಿ ರೂಪಾಯಿ ಕೊಡಲಾಗಿತ್ತು. ನಾಲ್ಕು ಬಗೆಯ ಕ್ಷಿಪಣಿಗಳ ಅಭಿವೃದ್ಧಿ, ಉತ್ಪಾದನೆ ಹಾಗೂ ಅಳವಡಿಕೆ ಈ ಕಾರ್ಯಕ್ರಮದ ಉದ್ದೇಶ. ಇವು ಯಾವುವೆಂದರೆ ನೆಲದಿಂದ ನೆಲಮಟ್ಟಕ್ಕೆ ಹಾರಿಸುವ ಕ್ಷಿಪಣಿ (ಪೃಥ್ವಿ) : ಮಧ್ಯಮ ದೂರ ಕ್ರಮಿಸುವ, ನೆಲದಿಂದ ಆಕಾಶಕ್ಕೆ ಹಾರಿಸುವ ಕ್ಷಿಪಣಿ (ಆಕಾಶ್) ; ಅಲ್ಪ ದೂರದ, ಕ್ಷಿಪ್ರವಾಗಿ ಪ್ರತಿಕ್ರಿಯೆ ನೀಡುವ, ನೆಲದಿಂದ ಆಕಾಶಕ್ಕೆ ಹಾರುವ ಕ್ಷಿಪಣಿ (ತ್ರಿಶೂಲ್) ಹಾಗೂ ಟ್ಯಾಂಕ್‌ಗಳ ವಿರುದ್ಧ ಹಾರಿಸುವ ಕ್ಷಿಪಣಿ (ನಾಗ್). ಅಲ್ಲದೆ ಒಂದು ತಂತ್ರಜ್ಞಾನವನ್ನು ಪ್ರಸ್ತುತ ಪಡಿಸುವ (ಅಗ್ನಿ) ಕ್ಷಿಪಣಿಯನ್ನೂ ಈ ಕಾರ್ಯಕ್ರಮದಲ್ಲಿ ಸೇರಿಸಲಾಗಿತ್ತು. ಇದನ್ನು ದೂರಗಾಮಿ ಕ್ಷಿಪಣಿಯು ವಾತಾವರಣವನ್ನು ಮರುಪ್ರವೇಶಿಸುವ ತಂತ್ರಜ್ಞಾನವನ್ನೂ ಅಳವಡಿಸಲು ಉಪಯೋಗಿಸಲಾಯಿತು. ಈ ತಂತ್ರಜ್ಞಾನವನ್ನು 1989 ರಲ್ಲಿ ಮೊದಲ ಬಾರಿಗೆ ಓಡಿಶಾದ ಕರಾವಳಿಯಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತು. ಆ ನಂತರ ಕಳೆದ ಎರಡು ದಶಕಗಳಲ್ಲಿ ಅಗ್ನಿ 1, ಅಗ್ನಿ 2, ಅಗ್ನಿ 3, ಹಾಗೂ ಅಗ್ನಿ 4 ಕ್ಷಿಪಣಿಗಳನ್ನು ಪ್ರದರ್ಶಿಸಲಾಯಿತು.

ಇವುಗಳಲ್ಲಿ ಒಂದರ ನಂತರ ಒಂದರಂತೆ ಅವುಗಳು ಸಂಚರಿಸುವ ದೂರವನ್ನು ಹೆಚ್ಚಿಸಲಾಯಿತು. ಕೊನೆಯಲ್ಲಿ ಐದು ಸಾವಿರ ಕಿಲೋಮೀಟರು ವ್ಯಾಪ್ತಿಯುಳ್ಳ ಅಗ್ನಿ 5 ಕ್ಷಿಪಣಿಯನ್ನು ಡಿ.ಆರ್.ಡಿ.ಓ ಸಂಸ್ಥೆಯ ನಮ್ಮ ವಿಜ್ಞಾನಿಗಳು ಯಶಸ್ವಿಯಾಗಿ ತಯಾರಿಸಿದ್ದಾರೆ. ಈ ಕ್ಷಿಪಣಿಗಳೆಲ್ಲವೂ ಎಂಟಿಸಿಆರ್ (ಮಿಸೈಲ್ ಟೆಕ್ನಾಲಜಿ ಕಂಟ್ರೋಲ್ ರೆಜೀಮ್) ವರ್ಗಕ್ಕೂ ಇತರೇ ಕೆಲವು ನಿಷೇಧಗಳಿಗೂ ಒಳಪಡುತ್ತದೆ. ಆದ್ದರಿಂದ ಈ ಕ್ಷಿಪಣಿಗಳನ್ನು ಯಾರಾದರೂ ಕೊಳ್ಳುವುದಾಗಲಿ, ಅವುಗಳ ತಂತ್ರಜ್ಞಾನವನ್ನು ಸಹಾ ದುಡ್ಡು ಕೊಟ್ಟು ಪಡೆಯುವುದಾಗಲಿ ಅಸಾಧ್ಯ. ಇದರ ತಂತ್ರಜ್ಞಾನವನ್ನು ಕಷ್ಟಪಟ್ಟು, ನಿರಂತರವಾದ ಸಂಶೋಧನೆ ಹಾಗೂ ಅಭಿವೃದ್ಧಿಯ ಮಾರ್ಗದ ಮೂಲಕ ಪಡೆಯಬೇಕಿದೆ.

ಆದ್ದರಿಂದ ಈ ಕ್ಷಿಪಣಿಯನ್ನು ನಾವು ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಿದ್ದೇವೆ ಎಂಬುದರ ಅರ್ಥ ಹಾಗೂ ಮಹತ್ವವೆಂದರೆ ಒಂದು ಅತ್ಯಂತ ಮಹತ್ವವಾದ ತಂತ್ರಜ್ಞಾನ ಕ್ಷೇತ್ರದಲ್ಲಿ ನಾವು ಸ್ವಾವಲಂಬನೆ ಸಾಧಿಸಿದ್ದೇವೆ ಎಂದೇ ಆಗಿದೆ. ಇದರಿಂದ ಭಾರತವು ಸ್ವತಂತ್ರವಾದ ವಿದೇಶಾಂಗ ನೀತಿಯನ್ನು ಅನುಸರಿಸಲು ಶಕ್ತವಾಗಿದೆ ಎಂದು ಅರ್ಥ.

ನನ್ನ ಸ್ನೇಹಿತ ಡಾ.ವಿ.ಕೆ ಸಾರಸ್ವತ್ ಹಾಗೂ ಅವರ ತಂಡದವರು ಅಗ್ನಿ 5ರ ಯಶಸ್ವಿ ಉಡಾವಣೆಯ ವಿವರಗಳನ್ನು ನನಗೆ ನೀಡಿದರು.

ನಾನು ಸ್ವಲ್ಪ ಚರಿತ್ರೆಯನ್ನು ಹೇಳುತ್ತೇನೆ. ಇದರಲ್ಲಿ ಒಂದು ಮಾತುಕತೆ 1984ರಲ್ಲಿಯೂ, ಇನ್ನೊಂದು 1991 ರಲ್ಲಿಯೂ ನಡೆಯಿತು. ಆಗ ನಾನು ಹೈದರಾಬಾದಿನಲ್ಲಿ ಡಿಆರ್‌ಡಿಎಲ್‌ನ ನಿರ್ದೇಶಕನಾಗಿದ್ದೆ. ಐಜಿಎಂಡಿಪಿಗೆ 1983ರಲ್ಲಿ ತಮ್ಮ ಸಂಪುಟದ ಒಪ್ಪಿಗೆ ನೀಡಿದ ಪ್ರಧಾನಿ ಇಂದಿರಾ ಗಾಂಧಿಯವರು ಒಂದು ವರ್ಷದ ನಂತರ ಈ ಕಾರ್ಯಕ್ರಮದ ಪ್ರಗತಿ ವೀಕ್ಷಣೆ ಮಾಡಲು ಬಂದರು. ನಾವು ಕಾರ್ಯಕ್ರಮದ ಪ್ರಗತಿಯ ಕುರಿತು ನಿರೂಪಣೆಯನ್ನು ಮಂಡಿಸುತ್ತಿದ್ದೆವು. ಇಂದಿರಾ ಗಾಂಧಿಯವರು ಗೋಡೆಯಲ್ಲಿ ನೇತು ಹಾಕಿದ ಪ್ರಪಂಚದ ನಕಾಶೆಯೊಂದನ್ನು ಗಮನಿಸಿದರು. ಅವರು ನಿರೂಪಣೆಯನ್ನು ನಿಲ್ಲಿಸುವಂತೆ ಹೇಳಿ ಎದ್ದು ಆ ನಕಾಶೆಯ ಬಳಿ ಹೋಗಿ "ಕಲಾಂ ಇಲ್ಲಿ ನೋಡಿ. ಇಲ್ಲಿ ತೋರಿಸಿರುವ ದೂರವನ್ನು ನೋಡಿ. ಯಾವುದೇ ಸನ್ನಿವೇಶ ಬಂದರೂ ಎದುರಿಸಲು ಆ ಸ್ಥಳದ ವರೆಗೆ ಹಾರಿಸುವ 5000 ಕಿ.ಮೀ. ಸಂಚಾರ ಸಾಮರ್ಥ್ಯದ ಕ್ಷಿಪಣಿಯನ್ನು ನೀವು ಯಾವಾಗ ತಯಾರಿಸುವಿರಿ?" ಎಂದು ಅವರು ಕೇಳಿದರು. ಭಾರತದ ಗಡಿಯ ಅಂಚಿನಿಂದ 5000 ಕಿ.ಮೀ ದೂರದಲ್ಲಿರುವ ಒಂದು ಸ್ಥಳವನ್ನು ಅವರು

ಬೆರಳಿನಿಂದ ತೋರಿಸಿದ್ದರು. ಕೊನೆಗೂ ನಮ್ಮ ಡಿಆರ್‌ಡಿಓ ವಿಜ್ಞಾನಿಗಳು, ಅಂದು ಇಂದಿರಾ ಗಾಂಧಿಯಂತಹ ರಾಜಕೀಯ ಮುತ್ಸದ್ದಿ ಬೆಟ್ಟುಮಾಡಿ ತೋರಿಸಿದಂತಹ ಕಾರ್ಯವನ್ನು ಇಂದು ಸಾಧಿಸಿದ್ದಾರೆ.

ಆನಂತರ ಪ್ರಥ್ವಿ ಕ್ಷಿಪಣಿಯನ್ನು ಯಶಸ್ವಿಯಾಗಿ ಕಾರ್ಯಾಚರಣೆ ನಡೆಸಿದ ಸಂದರ್ಭದಲ್ಲಿ ಭೂಸೇನೆಯು ಒಂದು ಮಹತ್ವದ ಕೋರಿಕೆಯನ್ನು ಸಲ್ಲಿಸಿತು. ಈ ಕ್ಷಿಪಣಿಯ ಪ್ರಯೋಗದಲ್ಲಿ ಬರಬಹುದಾದ "ವೃತ್ತೀಯ ದೋಷ ಸಾಧ್ಯತೆ" (ಸರ್ಕ್ಯುಲರ್ ಎರರ್ ಪ್ರೊಬೆಬಿಲಿಟಿ – ಸಿಇಪಿ) ಯನ್ನು ಭೂಮಿಯ ಮೇಲೆ ಪ್ರಯೋಗಿಸಿ ಖಚಿತ ಪಡಿಸುವಂತೆ ಅದು ಕೇಳಿತು. ನಮ್ಮ ಮರುಭೂಮಿಯಲ್ಲಿನ ಪರೀಕ್ಷಾತಾಣದಲ್ಲಿ ಇವನ್ನು ಪರೀಕ್ಷಿಸುವ ನಮ್ಮ ಪ್ರಯತ್ನಗಳು ಭದ್ರತೆಯ ಹಾಗೂ ಭೂರಾಜ್ಯ ಸಂಬಂಧಿ ಸಮಸ್ಯೆಗಳಿಂದಾಗಿ ಫಲ ನೀಡಲಿಲ್ಲ. ಈ ಸಮಸ್ಯೆಯನ್ನು ನಿವಾರಿಸಲು ನಾವು ಪೂರ್ವ ಕರಾವಳಿಯಲ್ಲಿ ಯಾವುದಾದರೊಂದು ಜನ ವಸತಿಯಿಲ್ಲದ ದ್ವೀಪಕ್ಕಾಗಿ ತಪಾಸಣೆ ನಡೆಸಿದ್ದವು. ನೌಕಾ ಸೇನೆಯು ನಮಗೆ ಒದಗಿಸಿದ ಸಾಗರದ ನಕಾಶೆಯಲ್ಲಿ ಒರಿಸ್ಸಾ ಕರಾವಳಿಯ ಧರ್ಮ ಎಂಬಲ್ಲಿಗೆ ಎದುರಾಗಿ ಸಾಗರದಲ್ಲಿ ಕೆಲವು ದ್ವೀಪಗಳು ಇರುವುದನ್ನು ನೋಡಿದೆವು. ನಮ್ಮ ಪರೀಕ್ಷಾ ಸೌಲಭ್ಯಗಳ ತಂಡದ ಸದಸ್ಯರಾದ ಎಸ್.ಕೆ. ಸಲ್ವಾನ್ ಹಾಗೂ ಡಾ.ವಿ.ಕೆ. ಸಾರಸ್ವತ್ ಅವರು ಈ ದ್ವೀಪಗಳನ್ನು ನೋಡಲು ಧರ್ಮಾದಿಂದ ಒಂದು ದೋಣಿಯನ್ನು ಬಾಡಿಗೆಗೆ ಪಡೆದು ಸಮುದ್ರಕ್ಕೆ ಹೋದರು. ನಕಾಶೆಯಲ್ಲಿ ಈ ದ್ವೀಪಗಳನ್ನು "ಲಾಂಗ್ ವೀಲರ್", "ಕೊಕನಟ್ ವೀಲರ್" ಹಾಗೂ "ಸ್ಮಾಲ್ ವೀಲರ್" ಎಂದು ಗುರುತಿಸಲಾಗಿತ್ತು. ತಂಡದ ಬಳಿ ದಿಕ್ಕನ್ನು ತೋರಿಸುವ "ದಿಕ್ಸೂಚಿ" ಉಪಕರಣವಿದ್ದಿತು. ಆದರೂ ಅವರಿಗೆ ದಿಕ್ಕು ತಪ್ಪಿ ಹೋಯಿತು. ದ್ವೀಪಗಳನ್ನು ನೋಡಲು ಅವರಿಂದಾಗಲಿಲ್ಲ. ಹೀಗೆ ಅವರು ದಿಕ್ಕು ತಪ್ಪಿ ಅಲೆದಾಡುತ್ತಿದ್ದಾಗ ಕೆಲವು ಮೀನುಗಾರರನ್ನು ಕಂಡರು. ಅವರೊಡನೆ ವಿಚಾರಿಸಿದಾಗ ತಮಗೆ ವೀಲರ್ ದ್ವೀಪ ತಿಳಿಯದೆಂದೂ "ಚಂದ್ರಚೂಡ್" ಎಂಬ ಇನ್ನೊಂದು ದ್ವೀಪವಿದೆಯೆಂದೂ ಹೇಳಿದರು. ತಾವು ಹುಡುಕುತ್ತಿರುವ ದ್ವೀಪ ಇದೇ ಇರಬಹುದೆಂದು ಭಾವಿಸಿದ ತಂಡ ಮೀನುಗಾರರ ನೆರವಿನಿಂದ ಚಂದ್ರಚೂಡ್ ದ್ವೀಪ ತಲುಪಿತು. ಅದು 'ಸ್ಮಾಲ್ ವೀಲರ್' ದ್ವೀಪವೆಂದು ಆಮೇಲೆ ದೃಢಪಟ್ಟಿತು. ಆ ದ್ವೀಪವು ಸಾಕಷ್ಟು ದೊಡ್ಡದಾಗಿದ್ದು ಕ್ಷಿಪಣಿ ಪ್ರಯೋಗಕ್ಕೆ ಸೂಕ್ತವಾಗಿತ್ತು.

ದ್ವೀಪವನ್ನು ಪಡೆಯಬೇಕಿದ್ದರೆ ನಾವು ಓಡಿಶಾ ಅಧಿಕಾರಶಾಹಿಯ ಮೂಲಕ ಹೋಗಬೇಕಿತ್ತು. ಈ ವಿಷಯದಲ್ಲಿ ಮುಖ್ಯಮಂತ್ರಿಯೇ ತೀರ್ಮಾನ

ಕೈಗೊಳ್ಳಬೇಕೆಂಬ ಸ್ಥಿತಿ ನಿರ್ಮಾಣವಾಯಿತು (1993ರಲ್ಲಿ). ಆ ಕಾಲದಲ್ಲಿ ಒಬ್ಬ ಪ್ರಬಲ ರಾಷ್ಟ್ರೀಯ ನಾಯಕರಾಗಿದ್ದ ಬಿಜು ಪಟ್ನಾಯಕ್ ಅವರು ಓಡಿಶಾ ಮುಖ್ಯಮಂತ್ರಿ ಆಗಿದ್ದರು. ಮುಖ್ಯಮಂತ್ರಿಯವರ ಕಚೇರಿಯ ಮೂಲಗಳ ಪ್ರಕಾರ ಕೆಲವಾರು ಕಾರಣಗಳಿಗಾಗಿ ಆ ದ್ವೀಪಗಳನ್ನು ಕೊಡುವ ಹಾಗಿರಲಿಲ್ಲ. ನಾವು ದ್ವೀಪಗಳನ್ನು ಕೇಳಲು ಮುಖ್ಯಮಂತ್ರಿಗಳ ಒಂದು ಭೇಟಿ ಕೋರಿದೆವು. ನಾವು ಅವರ ಕಚೇರಿಗೆ ಹೋದಾಗ ನಮ್ಮ ಕೋರಿಕೆಯ ಕಡತ ಅವರ ಮುಂದೆ ಇತ್ತು. ನಮ್ಮನ್ನು ಬರಮಾಡಿಕೊಂಡ ಪಟ್ನಾಯಕ್ "ಕಲಾಂ, ಆ ಐದೂ ದ್ವೀಪಗಳನ್ನು ನಾನು ನಿಮಗೆ (ಡಿಆರ್‌ಡಿಒ) ಶುಲ್ಕ ರಹಿತವಾಗಿ ಕೊಡುತ್ತೇನೆ. ಆದರೆ ನನಗೆ ನೀವು ಒಂದು ಭಾಷೆ ಕೊಟ್ಟರೆ ಮಾತ್ರ ನಾನು ಕಡತಕ್ಕೆ ಸಹಿ ಮಾಡುತ್ತೇನೆ" ಎಂದರು. ನಂತರ ನನ್ನ ಕೈ ಹಿಡಿದು "ನೀವು ಬಲು ದೂರದ ಅಪಾಯವನ್ನು ಸಹಾ ಎದುರಿಸುವಂತಹ ಕ್ಷಿಪಣಿಯನ್ನು ಮಾಡಬೇಕು!" ನಾನು "ಸರ್, ಖಂಡಿತವಾಗಿ ನಾವು ಅದಕ್ಕಾಗಿ ಕೆಲಸಮಾಡುತ್ತೇವೆ" ಎಂದು ಉತ್ತರಿಸಿದೆ. ಈ ವಿಷಯವನ್ನು ನಾನು ಕೂಡಲೇ ರಕ್ಷಣಾ ಸಚಿವರಿಗೆ ತಿಳಿಸಿದೆ. ಮುಖ್ಯಮಂತ್ರಿಗಳು ಕಡತಕ್ಕೆ ಸಹಿ ಮಾಡಿದರು. ನಮಗೆ ಸ್ಮಾಲ್ ವೀಲರ್ ಐಲೆಂಡ್ ಎಂಬ ಹೆಸರಿನ ದ್ವೀಪ ಸಿಕ್ಕಿತು.

ಓದುಗರೇ, ನಿಮಗೆಲ್ಲಾ ಗೊತ್ತಿರುವಂತೆ ಇಸ್ರೋ ಸಂಸ್ಥೆಯು 2021 ರ ಏಪ್ರಿಲ್ 26 ರಂದು ಭಾರತದ ಮೊತ್ತ ಮೊದಲ ರೇಡಾರ್ ಇಮೇಜಿಂಗ್ ಸೆಟಲೈಟ್ (ರೇಡಾರ್ ತಂತ್ರಜ್ಞಾನ ಮೂಲಕ ಚಿತ್ರ ಹಿಡಿಯುವ ಉಪಗ್ರಹ –ಆರ್‌ಐಎಸ್‌ಎಟಿ – 1) ಅನ್ನು ಯಶಸ್ವಿಯಾಗಿ ಉಡಾಯಿಸಿದೆ. ಇದನ್ನು ಪೋಲಾರ್ ಸೆಟಲೈಟ್ ಲಾಂಚ್ ವೆಹಿಕಲ್ (ಧ್ರುವೀಯ ಉಪಗ್ರಹ ಉಡಾವಣಾ ವಾಹನ – ಪಿಎಸ್‌ಎಲ್‌ವಿ–ಸಿ 19) ಮೂಲಕ ಉಡಾಯಿಸಲಾಯಿತು. ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಇದನ್ನು ಹಾರಿಸಲಾಯಿತು. ಉಪಗ್ರಹವನ್ನು ಬಾಹ್ಯಾಕಾಶದಲ್ಲಿ ಭೂಮಿಯ ಸುತ್ತ ತಿರುಗುವ ಕಕ್ಷೆಯಲ್ಲಿ ಕೂರಿಸಿದ ನಂತರ ಅದರ ಸೌರಫಲಕಗಳು, ಆಂಟೆನಾ ಫಲಕಗಳು ಹಾಗೂ ಸಿ–ಬ್ಯಾಂಡ್ ಸಿಂಥೆಟಿಕ್ ಅಪರ್ಚರ್ ರೇಡಾರ್ ಅನ್ನೂ ಚಾಲೂ ಮಾಡಲಾಯಿತು. ನಂತರ ಉಪಗ್ರಹವನ್ನು ಸೂರ್ಯನಿಗೆ ಅನುವರ್ತಿಯಾಗಿರುವ ಕಕ್ಷಾಪಥದಲ್ಲಿ, ಸುಮಾರು ಆರು ಬಾರಿ ಕಕ್ಷಾ ಪಥವನ್ನು ಹೆಚ್ಚಿಸುವ ಕಾರ್ಯಾಚರಣೆಗಳನ್ನು ಮಾಡುವ ಮೂಲಕ ನಿಲ್ಲಿಸಲಾಯಿತು. ಇದರ ಪರಿಣಾಮವಾಗಿ ಉಪಗ್ರಹವು ಗಂಗೋತ್ರಿಯಿಂದ ಹಾಗೂ ಭೋಪಾಲ ಹಾಗು ಉತ್ತರ ಕರ್ನಾಟಕದ ಕೆಲವು ಬಾಗಗಳ ಅತ್ಯಧಿಕ ಗುಣಮಟ್ಟದ ಚಿತ್ರಗಳನ್ನು 2012 ರ ಮೇ 1 ರಂದು ಕಳಿಸಿತು. ಈ ಕಾರ್ಯಕ್ರಮವು ಕೆಲವು

ಮಹತ್ವದ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡಿದೆ. ಅವುಗಳಲ್ಲಿ ಕೆಲವನ್ನು ನಾನು ಇಲ್ಲಿ ಹೇಳುತ್ತೇನೆ.

ಆಪ್ಟಿಕಲ್ ರಿಮೋಟ್ ಸೆನ್ಸಿಂಗ್ ಉಪಗ್ರಹಕ್ಕೆ ಬದಲಾಗಿ ಆರ್ಐಎಸ್ಎಟಿ–1 ಉಪಗ್ರಹದಲ್ಲಿ ಇರುವ ಸಿಂಥೆಟಿಕ್ ಅಪರ್ಚರ್ ರೇಡಾರ್ ಭೂಮಿಯ ಚಿತ್ರವನ್ನು ಹಿಡಿಯಲು ತನ್ನದೇ ರೇಡಾರ್ ಸಂಕೇತಗಳನ್ನು ಕಳಿಸುತ್ತದೆ. ಈ ಸಂಕೇತಗಳು ಮೋಡಗಳನ್ನು ತೂರಿಕೊಂಡು ಚಲಿಸುತ್ತವೆ. ಮತ್ತು ಇವು ಸೂರ್ಯನ ಬೆಳಕು ಇಲ್ಲದಾಗಲೂ ಚಲಿಸುತ್ತವೆಯಾದ್ದರಿಂದ ಭೂಮಿಯ ಮೇಲಿನ ಚಿತ್ರವನ್ನು ಮೋಡಗಳು ಇದ್ದಾಗಲೂ, ಬಿಸಿಲು ಇಲ್ಲದಾಗಲೂ ತೆಗೆಯಬಲ್ಲದು. ಆರ್ಐ ಎಸ್ಎಟಿ–1 ಬಹು ಮಾರ್ಗಗಳಿಂದ ಹಾಗೂ ಧ್ರುವೀಕರಣಗಳಿಂದ ಚಿತ್ರಗಳನ್ನು ತೆಗೆಯಬಲ್ಲದು. ಈ ಚಿತ್ರಗಳು ಒಂದರಿಂದ ಐವತ್ತು ಮೀಟರುಗಳ ವಿವರಗಳನ್ನು ನೀಡುವುದಲ್ಲದೆ 10 ಕಿ.ಮೀ.ನಿಂದ 223 ಕಿ.ಮೀ ಗಳ ವರೆಗಿನ ಅಗಲದ ಪ್ರದೇಶದ ಚಿತ್ರಗಳನ್ನೂ ಒದಗಿಸಬಲ್ಲದು. ಇದರಿಂದಾಗಿ ಈ ಉಪಗ್ರಹ ಮುಂಗಾರು ಬೆಳೆ ಸಂದರ್ಭದಲ್ಲಿ ಭತ್ತದ ಬೆಳೆ ನಾಟಿ ಅಥವಾ ಪೈರು ಬೆಳೆದ ಪ್ರದೇಶ, ಮಳೆಗಾಲದಲ್ಲಿ ಪ್ರವಾಹಪೀಡಿತ ಪ್ರದೇಶ ಮುಂತಾದವರನ್ನು ತೋರಿಸಿಬಲ್ಲದು. ಬೆಳೆಗೆ ಸಂಬಂಧಿಸಿದಂತೆ ಗುರುತಿಸುವುದು, ವರ್ಗೀಕರಿಸುವುದು ಹಾಗೂ ಎಕರೆವಾರು ಮಾಹಿತಿಯನ್ನೂ ಒದಗಿಸುವುದು. ಇದರಿಂದ ಈ ಬೆಳೆ ಸಂಬಂಧಿ ಯೋಜನೆಗಳಿಗೆ, ಪ್ರವಾಹ ಚಂಡಮಾರುತ ಭೂಕಂಪ ಇತ್ಯಾದಿ ನೈಸರ್ಗಿಕ ದುರಂತಗಳ ಸಂದರ್ಭಗಳಲ್ಲಿ ಪರಿಹಾರ ಕಾರ್ಯಕ್ಕೆ ಸಹಾಯವಾಗುವುದು. ಇದಲ್ಲದೆ ಈ ಕಾರ್ಯಾಚರಣೆಯಿಂದ ಇನ್ನೂ ಅನೇಕ ಕ್ಷೇತ್ರಗಳಿಗೆ ತುಂಬಾ ಪ್ರಯೋಜನೆಗಳಿವೆ.

ನಮ್ಮ ಆತ್ಮವಿಶ್ವಾಸದ ಸ್ವರೂಪ ಎಂತಹುದು ಹಾಗೂ ನಮ್ಮ ಬಾಹ್ಯಾಕಾಶ ಸಂಶೋಧನಾ ಕಾರ್ಯಕ್ರಮದ ವ್ಯಾಪ್ತಿ ಏನು ಎಂಬುದರ ಒಂದು ಚಿತ್ರಣವನ್ನು ಕೊಡಲು ಇದನ್ನು ಹೇಳಿದೆ. ನಾನು ಹೇಳಬಹುದಾದ ಇತರ ಅನೇಕ ಯಶೋಗಾಥೆಗಳಿವೆ, ಉದಾಹರಣೆಗೆ ಲಘು ಯುದ್ಧ ವಿಮಾನ (ಎಲ್‌ಸಿಎ) ನೌಕಾ ಆವೃತ್ತಿಯನ್ನು ಬೆಂಗಳೂರಿನಲ್ಲಿ ಯಶಸ್ವಿಯಾಗಿ ಪರೀಕ್ಷಾ ಹಾರಾಟ ನಡೆಸಲಾಯಿತು. ಆ ದಿನ ಆಕಾಶವು ಭಾಗಶಃ ಮೋಡದಿಂದ ಕವಿದಿದ್ದರೂ ಪರೀಕ್ಷೆಯನ್ನು ಯಾಶಸ್ವಿಯಾಗಿ ನಡೆಸಲಾಯಿತು ಎಂಬುದು ಒಂದು ಸಾಧನೆಯೇ ಸರಿ. ಲಘುಯುದ್ಧ ವಿಮಾನ ನೌಕಾಸೇನಾ ಆವೃತ್ತಿಯ ಮೊತ್ತಮೊದಲ ಪರೀಕ್ಷಾ ಹಾರಾಟದೊಂದಿಗೆ ಭಾರತವು ಹೀಗೆ ವಿಮಾನ ಸೇರಿದಂತಾಗಿದೆ. ಈ ರೀತಿಯ ವಿಮಾನಗಳು ಯುದ್ಧ ವಿಮಾನಗಳ ನಾಲ್ಕನೇ ಪೀಳಿಗೆಗೆ ಸೇರಿದ್ದು ತಂತ್ರಜ್ಞಾನದ ಪರಿಭಾಷೆಯಲ್ಲಿ "ಸ್ಕೀ ಟೇಕಾಫ್ ಬಟ್ ಅರೆಸ್ಟೆಡ್ ರಿಕವರಿ"

(ಎಸ್ಟಿಒಬಿಎಆರ್) ವಿಮಾನಗಳು ಅನ್ನುವರು. ಇದನ್ನು ಸಂಕ್ಷಿಪ್ತ ಏರುವಿಕೆ ಹಾಗೂ ಇಳಿತಗಳ ವಿಮಾನ ಅನ್ನಬಹುದು.ಈ ವಿಮಾನದ ಸಂಪೂರ್ಣ ವಿನ್ಯಾಸ, ನಿರ್ಮಾಣ ಹಾಗೂ ಪರೀಕ್ಷೆಗಳನ್ನು ಭಾರತದ ವಿಜ್ಞಾನಿಗಳೇ ಸ್ವಂತ ಪರಿಶ್ರಮದಿಂದ ನಡೆಸಿದ್ದಾರೆ. ಲಘು ಯುದ್ಧ ವಿಮಾನದ ನೌಕಾ ಆವೃತ್ತಿಯು ನಮ್ಮ ನೌಕಾಬಲಕ್ಕೆ 'ಶಕ್ತಿ ವರ್ಧಕ' (ಫೋರ್ಸ್ ಮಲ್ಟಿಪ್ಲಯರ್) ವನ್ನು ನೀಡುವ ದೇಶೀಯ ಅಸ್ತ್ರವೊಂದನ್ನು ಮೊದಲ ಬಾರಿಗೆ ಒದಗಿಸಿದೆ. ಇದ–ರಿಂದ ನೌಕಾಸೇನೆಯ ಯುದ್ಧ ಸಾಮರ್ಥ್ಯವು ಬಹುಪಟ್ಟು ಜಾಸ್ತಿಯಾಗುವುದು ಹಾಗೂ ವಿಜಯ ಸಾಧ್ಯತೆಯನ್ನು ಅನೇಕಪಟ್ಟು ಜಾಸ್ತಿ ಮಾಡವವು. ಈ ಸಾಧನೆ ಹಿಮದೆ ಅನೇಕ, ವಿನ್ಯಾಸಕ್ಕೆ ಸಂಬಂಧಿಸಿದ ಸವಾಲುಗಳನ್ನು ಎದುರಿಸಿ ಗೆದ್ದ ಗಾಥೆಗಳ ಒಂದು ಸರಣಿಯೇ ಇದೆ.

ಮಾಹಿತಿ ತಂತ್ರಜ್ಞಾನವೂ ಸಂಪರ್ಕ ತಂತ್ರಜ್ಞಾನವೂ ಈಗ ಎರಡು ಪ್ರತ್ಯೇಕ ವಿಷಯಗಳಾಗಿ ಉಳಿಯದೇ ಎರಡೂ ಪರಸ್ಪರ ಮಿಳಿತಗೊಂಡು ಮಾಹಿತಿ ಹಾಗೂ ಸಂಪರ್ಕ ತಂತ್ರಜ್ಞಾನ ಎಂಬ ಒಂದೇ ಜ್ಞಾನ ಶಾಖೆಯಾಗಿ ರೂಪುಗೊಂಡಿದೆ. ಮಾಹಿತಿ ತಂತ್ರಜ್ಞಾನವೂ ಜೈವಿಕ ತಂತ್ರಜ್ಞಾನದೊಡನೆ ಮಿಳಿತಗೊಂಡು ಜೈವಿಕ ಮಾಹಿತಿ ತಂತ್ರಜ್ಞಾನವೂ ಜೈವಿಕ ತಂತ್ರಜ್ಞಾನದೊಡನೆ ಮಿಳಿತಗೊಂಡು ಜೈವಿಕ ಮಾಹಿತಿ ತಂತ್ರಜ್ಞಾನ (ಬಯೋ–ಇನ್‌ಫಾರ್ಮೆಟಿಕ್ಸ್) ಆಗಿದೆ. ವಿದ್ಯುತ್‌ಕಾಂತ ವಿಸರಣ ತಂತ್ರಜ್ಞಾನವು (ಫೋಟಾನಿಕ್ಸ್) ಪ್ರಯೋಗ ಶಾಲೆಗಳನ್ನೂ ಮೀರಿ ಬೆಳೆದು ಕ್ಲಾಸಿಕಲ್ ಇಲೆಕ್ಟ್ರಾನಿಕ್ಸ್ ಹಾಗೂ ಮೈಕ್ರೋ ಇಲೆಕ್ಟ್ರಾನಿಕ್ಸ್ ಜತೆಗೆ ಬೆರೆತು ಗ್ರಾಹಕರಿಗೆ ಅತಿ ವೇಗದ ಕಾರ್ಯಾಚರಣೆ ನಡೆಸುವ ಅನೇಕ ತರದ ಉಪಕರಣಗಳನ್ನು ನೀಡುತ್ತಿವೆ. ಪಾರದರ್ಶಕವಾದ ಪಾಲಿಮರ್‌ನಲ್ಲಿ ಬಳಸವು ಬದಲಾವಣೆಗೆ ಲಗ್ಗುವ ಹಾಗೂ ಮುರಿತಕ್ಕೆ ಒಳಗಾಗದ ಫಿಲ್ಮ್‌ಗಳು ಬಂದಿದ್ದು ಮನರಂಜನೆಯ ಹಾಗೂ ಮಾಧ್ಯಮಗಳ ಹೊಸ ಸಾಧ್ಯತೆಗಳ ಸಂಕೇತಗಳಾಗಿ ಮೂಡಿವೆ. ಈಗ ನ್ಯಾನೋ ತಂತ್ರಜ್ಞಾನದ ಯುಗ ಪ್ರಾರಂಭವಾಗಿದೆ. ಅದು ಭವಿಷ್ಯದ ತಂತ್ರಜ್ಞಾನ ರಂಗವಾಗಿದೆ. ಅದು ಮೈಕ್ರೋ ಇಲೆಕ್ಟ್ರಾನಿಕ್ಸ್ ಅನ್ನೂ ಇತರ ಅನೇಕ ವಸ್ತು, ವಿಷಯಗಳನ್ನೂ ಮೂಲೆಗೆ ತಳ್ಳಲಿದ್ದು ವೈದ್ಯಕ, ಇಲೆಕ್ಟ್ರಾನಿಕ್ಸ್ ಹಾಗೂ ಭೌತವಿಜ್ಞಾನ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೇ ಮಾಡಲಿದೆ.

ನ್ಯಾನೋ ತಂತ್ರಜ್ಞಾನವೂ ಮಾಹಿತಿ ಸಂಪರ್ಕ ತಂತ್ರಜ್ಞಾನವು ಪರಸ್ಪರ ಸೇರಿದಾಗ ಸಂಯೋಜಿತ ಸಿಲಿಕಾನ್ ಇಲೆಕ್ಟ್ರಾನಿಕ್ಸ್ ಹಾಗೂ ಫೋಟಾನಿಕ್ಸ್‌ಗಳ ಜನನವಾಗುತ್ತದೆ; ಇದರಿಂದ ಭೌತಿಕ ವಸ್ತುಗಳ ಸಂಯೋಗವಾಗುತ್ತದೆ ಎಂದು ಹೇಳಬಹುದು. ಸಂಯೋಜಿತ ಭೌತವಸ್ತುಗಳೂ ಜೈವಿಕ ತಂತ್ರಜ್ಞಾನವೂ

ಸೇರಿದಾಗ"ಇಂಟೆಲಿಜೆಂಟ್ ಬಯೋ-ಸೈನ್ಸ್" ಅಂದರೆ "ಬುದ್ಧಿವಂತ ಜೈವಿಕ ವಿಜ್ಞಾನ"ವೆಂಬ ಹೊಸ ಜ್ಞಾನ ಶಾಖೆ ಉದಯಿಸುವುದು. ಅದು ರೋಗ ರಹಿತ ಸಮಾಜ ಮೂಡುವುದಕ್ಕೂ ಮಾನವನ ಆಯುಸ್ಸು ಹಾಗೂ ಸಾಮರ್ಥ್ಯ ವೃದ್ಧಿಗೂ ಕಾರಣವಾಗುವುದು.

ವಿಜ್ಞಾನದ ಶಾಖೆಗಳ ಸಮ್ಮಿಳನವು ಪರಸ್ಪರ ಕೊಡು-ಕೊಳ್ಳುವಂತಹುದು. ನಾನು ಒಂದು ಉದಾಹರಣೆ ಕೊಡುತ್ತೇನೆ. ನಾನು ಈಚೆಗೆ ಅಮೇರಿಕದಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯಕ್ಕೆ ಭೇಟಿ ಕೊಟ್ಟಿದ್ದೆ. ಅಲ್ಲಿ ಹಾರ್ವರ್ಡ್ ಸ್ಕೂಲ್ ಆಫ್ ಇಂಜಿನಿಯರಿಂಗ್ ಹಾಗೂ ಅಪ್ಲೈಡ್ ಸೈನ್ಸಸ್‌ನ ಅನೇಕ ಗಣ್ಯ ಪ್ರೊಫೆಸರುಗಳ ಪ್ರಯೋಗ ಶಾಲೆಗಳಿಗೆ ಭೇಟಿ ಕೊಟ್ಟಿದ್ದೆ. ನಿರ್ದಿಷ್ಟವಾಗಿ ಗುರುತಿಸಿದ ಒಂದೇ ಒಂದು ಜೀವಕಣಕ್ಕೆ ದ್ರವ್ಯವನ್ನು ಸೇರಿಸಬಲ್ಲಂತಹ ನ್ಯಾನೋ ಸೂಜಿಗಳನ್ನು ನಾನು ಇಲ್ಲಿ ನೋಡಿದೆ. ಪ್ರೊ. ಹಾಂಕುನ್ ಪಾರ್ಕ್ ಅವರು ತಾವು ಸಂಶೋಧಿಸಿ, ಅಭಿವೃದ್ಧಿಪಡಿಸಿದ ಈ ಸೂಜಿಗಳನ್ನು ನನಗೆ ತೋರಿಸಿದರು. ಇದು ನ್ಯಾನೋ ಪಾರ್ಟಿಕಲ್ ವಿಜ್ಞಾನವು ಜೈವಿಕ ವಿಜ್ಞಾನದ ರೂಪುರೇಷೆಯನ್ನು ಬದಲಾಯಿಸುತ್ತಿರುವುದಕ್ಕೆ ಒಂದು ನಿದರ್ಶನವಾಗಿದೆ. ಇನ್ನೊಂದೆಡೆ ಜೈವಿಕ-ವಿಜ್ಞಾನವು ನ್ಯಾನೋ ಮೆಟೀರಿಯಲ್ ವಿಜ್ಞಾನದ ಮೇಲೆ ಪ್ರಭಾವ ಬೀರುತ್ತಿರುವುದಕ್ಕೆ ಉದಾಹರಣೆಯಾಗಿ ತಮ್ಮ ಸಂಶೋಧನೆಯನ್ನು ಪ್ರೊ, ವಿನೋದ್ ಮನೋಹರನ್ ಅವರು ನನಗೆ ತೋರಿಸಿದರು. ಕೆಲವು ಬಿಡಿಬಿಡಿ ವಸ್ತುಗಳು ಸ್ವತಃ ತಾವೇ ಸೇರಿಕೊಂಡು ಹೊಸವಸ್ತುವನ್ನು ರೂಪಿಸುವಂತಹ ವಸ್ತುಗಳನ್ನು ತಯಾರಿಸಲು ಅವರು ಡಿಎನ್‌ಎ ಗಳನ್ನು ಉಪಯೋಗಿಸುತ್ತಿದ್ದಾರೆ. ಒಂದು ನಿರ್ದಿಷ್ಟ ಜಾತಿಯ ಡಿಎನ್‌ಎ ಅನ್ನು ಅಣುವಿನ ಹಂತದಲ್ಲಿ ಒಂದು ವಸ್ತುವಿಗೆ ಸೇರಿಸಿದಾಗ ಅದು ಒಂದು ಪೂರ್ವನಿರ್ಧರಿತ ನಡವಳಿಕೆಯನ್ನು ಅಥವಾ ಸ್ವಭಾವವನ್ನು ತೋರಿಸಬಲ್ಲದು. ಅಲ್ಲದೆ ತಾನಾಗಿಯೇ ವಿವಿಧ ಘಟಕಗಳನ್ನು ಸೇರಿಸಿಕೊಂಡು ತಾನೇ ಒಂದು ವಸ್ತು ಆಗಿ ರೂಪುಗೊಳ್ಳಬಲ್ಲದು. ಈ ಸಂಶೋಧನೆಯ ಬಾಹ್ಯಾಕಾಶದಲ್ಲಿ ಮುಂದೊಂದು ದಿನ ರಚನೆ ಆಗಬಹುದಾದ ಮಾನವ ವಸತಿ ಬಡಾವಣೆಗಳಲ್ಲಿ ಉಪಕರಣಗಳನ್ನು ಮಾನವ ಹಸ್ತಕ್ಷೇಪವಿಲ್ಲದೆ ತಾನೇ ನಿರ್ಮಿಸಿಕೊಳ್ಳಬೇಕಾದ ಸವಾಲಿಗೆ ಮನುಷ್ಯನ ಉತ್ತರವೂ ಆಗಿ ಪರಿಣಮಿಸಬಹುದು. ಈ ರೀತಿಯ ಕಲ್ಪನೆಯನ್ನು ಮೊದಲ ಬಾರಿಗೆ ಮಂಡಿಸಿದವರು ಡಾ. ಕೆ.ಎರಿಕ್ ಡೆಕ್ಸಲರ್ ಆಗಿದ್ದಾರೆ. ಹೀಗೆ ಒಂದೇ ಕಟ್ಟಡದ ಒಳಗೆ ಎರಡು ವಿಜ್ಞಾನ ಶಾಖೆಗಳು ಪರಸ್ಪರ ಭವಿಷ್ಯವನ್ನು ರೂಪಿಸುವ ಅನ್ವೇಷಣೆಯಲ್ಲಿ ನಿರತವಾದುದನ್ನು ನಾನು ಕಂಡೆ. ಪರಸ್ಪರರಿಗೆ ಕೊಡುವ ಹಾಗು ಕೊಳ್ಳುವ ವಿಜ್ಞಾನ ಶಾಖೆಗಳ ಈ ವಿದ್ಯಮಾನವು

ನಮ್ಮ ಭವಿಷ್ಯವನ್ನು ರೂಪಿಸಲಿದೆ. ಇದಕ್ಕೆ ನಮ್ಮ ಉದ್ಯಮ ರಂಗವು ಸಿದ್ಧವಾಗಿರಬೇಕಾಗುತ್ತದೆ. ವಿವಿಧ ತಂತ್ರಜ್ಞಾನಗಳ ನಡುವಣ ಅಡ್ಡ ಗೋಡೆಗಳು ಸಂಶೋಧನೆಗೆ ಹಾಗೂ ಆವಿಷ್ಕಾರಗಳಿಗೆ ಆಡಚಣೆ ಉಂಟುಮಾಡುತ್ತಿದ್ದು ಅವುಗಳನ್ನು ಕೆಡವಿ ಹಾಕಬೇಕಾಗಿದೆ.

ಇಂದು ವಿಶ್ವಾದ್ಯಂತ ತಂತ್ರಜ್ಞಾನದ ದೃಷ್ಟಿಯಿಂದ ಬಲು ಶ್ರೇಷ್ಠವಾದ ಸುಸ್ಥಿರ ವ್ಯವಸ್ಥೆಯತ್ತ ಬೇಡಿಕೆ ಕೇಳಿಬರುತ್ತಿದೆ. 21 ನೇ ಶತಮಾನದ ಜ್ಞಾನಾಧಾರಿತ ಸಮಾಜದ ಹೊಸ ಸ್ವರೂಪ ಇದೇ ಆಗಿದೆ. –ಇಲ್ಲಿ ವಿಜ್ಞಾನ–ತಂತ್ರಜ್ಞಾನ ಹಾಗೂ ಪರಿಸರಗಳು ಕೂಡಿ ಕೆಲಸ ಮಾಡಬೇಕಿದೆ. ಈ ಕಾರಣದಿಂದ ನಮ್ಮ ಮುಂದೆ ಇರುವ ಹೊಸ ಯುಗವು ಜೈವಿಕ–ನ್ಯಾನೋ–ಮಾಹಿತಿ–ಪರಿಸರಗಳು ಸೇರಿ ಆದ ನಾಲ್ಕು ಆಯಾಮಗಳ ಪ್ರಪಂಚವಾಗುತ್ತದೆ. ಇದು ಬಲು ಉತ್ತೇಜಕ ಸನ್ನಿವೇಶವನ್ನು ತೆರೆಯಲಿದೆ.

ನಾನು ನಿಮ್ಮಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ನಿಮ್ಮನ್ನು ಜನರು ಯಾತಕ್ಕಾಗಿ ನೆನಪಿಡಬೇಕು ಎಂಬುದು ನಿಮ್ಮ ಬಯಕೆ? ಅದನ್ನು ನೀವು ಬರೆದಿಡಿ. ಅದು ಸಮಾಜಕ್ಕೆ ಒಂದು ಮಹತ್ವದ ಕೊಡುಗೆಯಾಗಿರಬಹುದು, ಒಂದು ಸಂಶೋಧನೆಯೋ ಆವಿಷ್ಕಾರವೋ ಆಗಿರಬಹುದು. ಅಥವಾ ರಾಷ್ಟ್ರವು ಸದಾ ನೆನಪಿಡುವಂತಹ, ಸಮಾಜದಲ್ಲಿ ನೀವು ತರಲು ಬಯಸುವ ಒಂದು ಬದಲಾವಣೆಯೂ ಆಗಬಹುದು.

**ಲೇಖಕರ ಪರಿಚಯ :**

ಡಾ.ಅಬ್ದುಲ್ ಕಲಾಂ: ಭಾರತದ ಹನ್ನೊಂದನ್ನೇ ರಾಷ್ಟ್ರಪತಿಗಳಾಗಿದ್ದ ಡಾ. ಅಬ್ದುಲ್ ಕಲಾಂರವರು, ಮೂಲತಃ ವೈಮಾನಿಕ ಇಂಜಿಯರ್ ಹಾಗೂ ಭಾರತೀಯ ಅಂತರಿಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದರು. ರಾಷ್ಟ್ರಪತಿಗಳಾಗುವ ಮುನ್ನ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ಹಾಗೂ ಇಸ್ರೋ ಸಂಸ್ಥೆಯಲ್ಲಿ ವೈಮಾನಿಕ ಇಂಜಿನಿಯರ್ ಆಗಿದ್ದರು. ಭಾರತದಲ್ಲಿ ಕ್ಷಿಪಣಿ ಹಾಗೂ ರಾಕೆಟ್ ತಂತ್ರಜ್ಞಾನ ತಯಾರಿದ್ದರಿಂದ ಇವರನ್ನು 'ಅಣುಬಾಂಬ್ ಹಾಗೂ ಕ್ಷಿಪಣಿಗಳ ಜನಕ' ಎಂದು ಕರೆಯುತ್ತಾರೆ. ಇವರ ಕಾರ್ಯಸಾಧನೆಯನ್ನು ಮೆಚ್ಚಿ 1997 ರಲ್ಲಿ 'ಭಾರತರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಸಾಮಾನ್ಯ ಜನರ ಬಗ್ಗೆಯೂ ಕಾಳಜಿಯನ್ನು ಒಳಗೊಂಡಿರುವ ಇವರ ಆಲೋಚನೆಗಳು ಸ್ತುತ್ಯಾರ್ಹವಾಗಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಇವರು ಅನೇಕ ಉಪನ್ಯಾಸಗಳನ್ನು ನಿಡುತ್ತಿದ್ದು, ಇವರ ಕೃತಿಗಳು : ಡೆವಲಪ್‌ಮೆಂಟ್ಸ್

ಇನ್ ಫ್ಲುಯಿಡ್ ಮೆಕಾನಿಕ್ಸ್ ಅಂಡ್ ಸ್ಪೇಸ್ ಟೆಕ್ನಾಲಜಿ, ವಿಂಗ್ಸ್ ಆಫ್ ಫೈರ್, ಇಂಡಿಯಾ 2020 ಇಗ್ನೈಟೆಡ್ ಮೈಂಡ್ಸ್, ಎನ್ವಿಶನಿಂಗ್ ಅನ್ ಎಂಪವರ್ಡ್ ನೇಷನ್, ಮೈ ಜರ್ನಿ, ದಿ ಲೈಫ್ ಟ್ರೀ ಹಾಗೂ ಚಿಲ್ಡ್ರನ್ ಆಸ್ಕ್ ಕಲಾಂ. ಈ ಕೃತಿಗಳು ಅನೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. ಈ ಲೇಖನವನ್ನು ಜಿ.ಕೆ.ಮಧ್ಯಸ್ಥರವರು ಕನ್ನಡಕ್ಕೆ ಅನುವಾದಿಸಿದ್ದು, 'ಟರ್ನಿಂಗ್ ಪಾಯಿಂಟ್ಸ್" ಕೃತಿಯಿಂದ ಆಯ್ದುಕೊಳ್ಳಲಾಗಿದೆ.